ಶುಕ್ರವಾರ, ಜನವರಿ 23, 2026| ₹ 7.00
prajavani.net prajavani
www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಶ್ರಾವಣಿ ಶ್ರೇಷ್ಠ ಅಥ್ಲೀಟ್

ದಕ್ಷಿಣ ಕನ್ನಡದ ಶ್ರಾವಣಿ ಭಾಟೆ ಅವರು ತುಮಕೂರಿನಲ್ಲಿ ಗುರುವಾರ ಮುಕ್ತಾಯವಾದ ರಾಜ್ಯ ಒಲಿಂಪಿಕ್ಸ್ ಕ್ರೀಡಾಕೂಟದ ಮಹಿಳೆಯರ ವಿಭಾಗದಲ್ಲಿ ಶ್ರೇಷ್ಠ ಅಥ್ಲೀಟ್ ಆಗಿ ಹೊರಹೊಮ್ಮಿದರು

ನೃತ್ಯ ಅಭ್ಯಾಸ

ಬೆಂಗಳೂರಿನ ಮಾಣೆಕ್ ಷಾ ಪರೇಡ್ ಮೈದಾನದಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕಾಗಿ ವಿದ್ಯಾರ್ಥಿನಿಯೊಬ್ಬರು ನೃತ್ಯ ಅಭ್ಯಾಸ ನಡೆಸಿದರು

ಸುಳ್ಳು ಮಾಹಿತಿ: ತನಿಖೆ ಹಾದಿ ತಪ್ಪಿಸಿದ ಬೈರತಿ

ರೌಡಿ ಶೀಟರ್ ಬಿಕ್ಲು ಶಿವ ಹತ್ಯೆ ಪ್ರಕರಣ: ಹೈಕೋರ್ಟ್‌ನಲ್ಲಿ ಮುಂದುವರಿದ ಪ್ರಾಸಿಕ್ಯೂಷನ್ ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೌಡಿ ಶೀಟರ್ ಬಿಕ್ಲು ಶಿವು ಅಲಿಯಾಸ್ ಶಿವಕುಮಾರ್ ಕೊಲೆ ಪ್ರಕರಣದಲ್ಲಿ ಐದನೇ ಆರೋಪಿಯಾಗಿರುವ ಬಿಜೆಪಿ ಶಾಸಕ ಬೈರತಿ ಬಸವರಾಜ ಅವರು ತನಿಖೆಗೆ ಸಹಕರಿಸಿಲ್ಲ. ಸುಳ್ಳು ಮಾಹಿತಿ ನೀಡುವ ಮೂಲಕ ತನಿಖೆಯ ಹಾದಿ ತಪ್ಪಿಸಿದ್ದಾರೆ' ಎಂದು ರಾಜ್ಯ ಸರ್ಕಾರ, ಹೈಕೋರ್ಟ್‌ಗೆ ಅರುಹಿದೆ.

ನಿರೀಕ್ಷಣಾ ಜಾಮೀನು ಕೋರಿ ಬಸವರಾಜ ಅವರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಐಡಿ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್, 'ಶಿವು ವಿರುದ್ಧ ಮೂರು ಪ್ರಕರಣಗಳನ್ನು ದಾಖಲಿಸುವಲ್ಲಿ ಬಸವರಾಜ ಪ್ರಮುಖ ಪಾತ್ರ ನಿರ್ವಹಿಸಿದ್ದಾರೆ. ಭೂ ವ್ಯಾಜ್ಯಕ್ಕೆ ಸಂಬಂಧಿಸಿದಂತೆ ಬಿಕ್ಲು ಶಿವು ಕೊಲೆ ಮಾಡಲಾಗಿದೆ. 1ನೇ ಆರೋಪಿ ಜಗದೀಶ್ ಮತ್ತು 20ನೇ ಆರೋಪಿ ಅಜಿತ್‌ಗೆ ಬೈರತಿ ಬಸವರಾಜ ಫೋನ್ ಸಂಭಾಷಣೆ ನಡೆಸಿದ್ದಾರೆ. ಈ ನಿಟ್ಟಿನಲ್ಲಿ ಸಿಡಿಆರ್ ದಾಖಲೆಗಳಿವೆ' ಎಂದರು.

'ಪ್ರಯಾಗರಾಜ್‌ನಲ್ಲಿ 2025ರ ಫೆಬ್ರುವರಿಯಲ್ಲಿ ನಡೆದ ಮಹಾ ಕುಂಭಮೇಳಕ್ಕೆ ಜಗದೀಶ್ ಮತ್ತು ಬೈರತಿ ಬಸವರಾಜ ಅವರು ಒಂದೇ ಪಿಎನ್‌ಆರ್ (ಪ್ಯಾಸೆಂಜರ್ ನೇಮ್ ರೆಕಾರ್ಡ್) ನಂಬರ್‌ನಲ್ಲಿ ಪ್ರಯಾಣ ಮಾಡಿದ್ದಾರೆ. ಆರೋಪಿಗಳು ಒಂದೇ ಸ್ಥಳದಲ್ಲಿದ್ದ ಬಗ್ಗೆ ಜಿಯೋಗ್ರಾಫಿಕಲ್ ಮ್ಯಾಪಿಂಗ್ ಇದೆ' ಎಂದು ಈ ಕುರಿತ ವಿವರಗಳನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

'ಜಗದೀಶ್ ಜನ್ಮದಿನದ ವೇಳೆ ಒಟ್ಟಿಗೆ ಫೋಟೊ ತೆಗೆಸಿಕೊಂಡಿದ್ದಾರೆ. ಈ ಬಗ್ಗೆ ವಿವರಣೆ ಕೇಳಿದಾಗ, ಜಗದೀಶ್ ಮತ್ತು ಅಜಿತ್ ಯಾರೆಂಬುದೇ ಗೊತ್ತಿಲ್ಲ. ಅವರು ಕ್ಷೇತ್ರದ ಕಾರ್ಯಕರ್ತರು. ಟಿವಿಯಲ್ಲಿ ನೋಡಿದಾಗಲೇ ನನಗೆ ಅವರ ಬಗ್ಗೆ ತಿಳಿದುಬಂತು ಎಂಬ ಕ್ಲುಪ್ತ ಉತ್ತರ ನೀಡಿದ್ದಾರೆ' ಎಂದು ವಿವರಿಸಿದರು.

'ಹೀಗಾಗಿ, ಬೈರತಿ ಬಸವರಾಜ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸುವ ಅಗತ್ಯವಿದ್ದು, ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಬಾರದು' ಎಂದು ಕೋರಿದರು. ಸುದೀರ್ಘ ವಾದ ಆಲಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 27ಕ್ಕೆ ಮುಂದೂಡಿತು.

ಮಕ್ಕಳ ಭಿಕ್ಷಾಟನೆ: ನೋಡಲ್ ಅಧಿಕಾರಿ ನೇಮಕಕ್ಕೆ ನಿರ್ದೇಶನ

ಬೆಂಗಳೂರು: 'ಮಕ್ಕಳ ಭಿಕ್ಷಾಟನೆ ತಡೆದು ಅವರ ಪುನರ್ವಸತಿಗೆ ಸಮಗ್ರ ಕ್ರಿಯಾ ಯೋಜನೆ ರೂಪಿಸಲು ಸಂಬಂಧಿಸಿದ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸುವ ನಿಟ್ಟಿನಲ್ಲಿ ನೋಡಲ್ ಅಧಿಕಾರಿಯೊಬ್ಬರನ್ನು ನೇಮಕ ಮಾಡಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ಭಿಕ್ಷಾಟನೆಯಲ್ಲಿ ತೊಡಗಿರುವ ಮಕ್ಕಳನ್ನು ಗುರುತಿಸಿ, ಅವರನ್ನು ಸಮಾಜದ ಮುಖ್ಯವಾಹಿನಿಗೆ ತರಲು ಸರ್ಕಾರಕ್ಕೆ ನಿರ್ದೇಶಿಸಬೇಕು' ಎಂದು ಕೋರಿ, 'ಲೆಟ್ಸ್ ಕಿಟ್ ಫೌಂಡೇಷನ್' ವ್ಯವಸ್ಥಾಪಕ ಟ್ರಸ್ಟಿ ಲಕ್ಷ್ಮಿ ಹೊಳ್ಳ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ಭಿಕ್ಷುಕರ ಸೆಸ್ ಸಂಗ್ರಹಣೆಗೆ ಸಂಬಂಧಿಸಿದಂತೆ ಗ್ರೇಟರ್ ಬೆಂಗಳೂರು ಪ್ರಾಧಿಕಾರದ (ಜಿಬಿಎ) ಮುಖ್ಯ ಲೆಕ್ಕಾಧಿಕಾರಿಯವರ ಪ್ರಮಾಣ ಪತ್ರವನ್ನು ನ್ಯಾಯಪೀಠಕ್ಕೆ ಸಲ್ಲಿಸಿದರು.

'ಜಿಬಿಎ ವ್ಯಾಪ್ತಿಯಲ್ಲಿ 2024-25ರಲ್ಲಿ ₹86.26 ಕೋಟಿ ಭಿಕ್ಷುಕರ ಸೆಸ್ ಸಂಗ್ರಹ ಮಾಡಲಾಗಿದೆ. ಅದರಲ್ಲಿ ₹10.32 ಕೋಟಿ ಮೊತ್ತವನ್ನು ಕೇಂದ್ರ ಪರಿಹಾರ ಸಮಿತಿಗೆ ಪಾವತಿಸಲಾಗಿದೆ. ಪ್ರಸಕ್ತ ಸಾಲಿನಲ್ಲಿ ಈತನಕ ₹73.12 ಕೋಟಿ ಸಂಗ್ರಹಿಸಲಾಗಿದೆ' ಎಂದರು.

ಕಾನೂನು ಸೇವೆಗಳ ಪ್ರಾಧಿಕಾರದ ಪರ ಹೈಕೋರ್ಟ್ ವಕೀಲೆ ಮೈತ್ರೇಯಿ ಕೃಷ್ಣನ್, 'ರಾಜ್ಯದ ನಗರ ಸ್ಥಳೀಯ ಸಂಸ್ಥೆಗಳಿಂದ ಸಂಗ್ರಹಿಸಲಾದ ₹40.88 ಕೋಟಿ ಸೆಸ್ ಅನ್ನು ಪೌರಾಡಳಿತ, ಪಂಚಾಯಿತಿಗಳಲ್ಲಿ ಸಂಗ್ರಹಿಸಲಾದ ಸೆಸ್ ಬಗ್ಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಮಾಹಿತಿ ಬರಬೇಕಿದೆ' ಎಂದು ನ್ಯಾಯಪೀಠದ ಗಮನಕ್ಕೆ ತಂದರು.

ವಾದ-ಪ್ರತಿವಾದ ಆಲಿಸಿದ ನ್ಯಾಯಪೀಠ, 'ಮಕ್ಕಳ ಭಿಕ್ಷಾಟನೆ ನಿರ್ಮೂಲನೆ ಮತ್ತು ಅವರ ಪುನರ್ವಸತಿಗೆ 6 ವಾರಗಳಲ್ಲಿ ಸಮಗ್ರ ಕ್ರಿಯಾ ಯೋಜನೆ ರೂಪಿಸಬೇಕು' ಎಂದು ಸರ್ಕಾರಕ್ಕೆ ತಾಕೀತು ಮಾಡಿ ವಿಚಾರಣೆಯನ್ನು ಏಪ್ರಿಲ್ 1ಕ್ಕೆ ಮುಂದೂಡಿತು. ಅರ್ಜಿದಾರರ ಪರ ಪದಾಂಕಿತ ಹಿರಿಯ ವಕೀಲ ಪುತ್ತಿಗೆ ರಮೇಶ್ ವಾದ ಮಂಡಿಸಿದರು.

ಮುಂಬೈ ಮಹಿಳೆ ಶಾಸಕ ನಾಗೇಂದ್ರ ಪತ್ನಿ..!

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದಲ್ಲಿನ ಬಹುಕೋಟಿ ರೂಪಾಯಿ ದುರ್ಬಳಕೆ ಆರೋಪ ಪ್ರಕರಣಕ್ಕೆ ಸಂಬಂಧಿಸಿದಂತೆ ತನಿಖೆ ನಡೆಸುವಾಗ ಅಕ್ರಮ ಹಣ ವರ್ಗಾವಣೆಯ ಇನ್ನೆರಡು ಹಗರಣ ಪತ್ತೆಯಾಗಿದ್ದು, ಅವುಗಳಲ್ಲಿ ಮುಂಬೈನ ಮಹಿಳೆಯೊಬ್ಬರು ತನ್ನ ಗಂಡನ ಹೆಸರು ಬಿ.ನಾಗೇಂದ್ರ ಎಂದು ದಾಖಲೆಗಳಲ್ಲಿ ನಮೂದಿಸಿಕೊಂಡಿದ್ದಾರೆ' ಎಂದು ಸಿಬಿಐ ಹೈಕೋರ್ಟ್‌ಗೆ ಅರುಹಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ನಿರೀಕ್ಷಣಾ ಜಾಮೀನು ಮಂಜೂರು ಮಾಡಿರುವ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯದ ಆದೇಶವನ್ನು ಪ್ರಶ್ನಿಸಿ ಸಿಬಿಐ ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸಿಬಿಐ ಪರ ವಾದ ಮಂಡಿಸಿದ ಪಿ.ಪ್ರಸನ್ನ ಕುಮಾರ್ 'ಪರಿಶಿಷ್ಟ ಜಾತಿ ಕಲ್ಯಾಣ ಇಲಾಖೆ ಖಾತೆಯಿಂದ ನೆಕ್ಕಂಟಿ ನಾಗರಾಜ್ ಆಪ್ತರಿಗೆ ಒಟ್ಟು ₹2.17 ಕೋಟಿ ಸಂದಾಯವಾಗಿದೆ ಮತ್ತು ಕರ್ನಾಟಕ ಜರ್ಮನ್ ಟೆಕ್ನಿಕಲ್ ಟ್ರೈನಿಂಗ್ ಇನ್‌ಸ್ಟಿಟ್ಯೂಟ್‌ನ ಕೇಂದ್ರದಿಂದ ನೆಕ್ಕಂಟಿ ಅವರಿಗೆ ₹95 ಲಕ್ಷ ಪಾವತಿಯಾಗಿದೆ. ಈ ಹಣ ಮುಂಬೈ ಮಹಿಳೆಯರಿಗೆ ತಲುಪಿದ್ದು ಇಬ್ಬರೂ ಒಟ್ಟು ₹95 ಲಕ್ಷ ಮೊತ್ತದ ಬಂಗಾರ ಖರೀದಿಸಿದ್ದಾರೆ. ಅವರಲ್ಲಿನ ಒಬ್ಬ ಮಹಿಳೆ ತನ್ನ ಮನೆಯ ಬಾಡಿಗೆ ಕರಾರು ಪತ್ರದಲ್ಲಿ, ತಾನು ಬಿ.ನಾಗೇಂದ್ರ ಅವರ ಪತ್ನಿ ಎಂದು ಕಾಣಿಸಿಕೊಂಡಿದ್ದಾರೆ' ಎಂದು ವಿವರಿಸಿದರು.

'ಹೀಗಾಗಿ, ನೆಕ್ಕಂಟಿ ನಾಗರಾಜ್ ಅವರ ಕಸ್ಟೋಡಿಯಲ್ ವಿಚಾರಣೆ ಅಗತ್ಯವಿದೆ' ಎಂದು ಪ್ರತಿಪಾದಿಸಿದರು. ವಾದ ಆಲಿಸಿದ ನ್ಯಾಯಪೀಠ, ನಾಗೇಂದ್ರ ಅವರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 29ಕ್ಕೆ ಮುಂದೂಡಿತು.

ಸುದ್ದಿ 2 ನಿಮಿಷ

ಮರೀಗೌಡ ಆಸ್ತಿ ಮುಟ್ಟುಗೋಲು

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರವು (ಮುಡಾ) ಅಕ್ರಮವಾಗಿ ನಿವೇಶನಗಳನ್ನು ಹಂಚಿಕೆ ಮಾಡಿದ್ದ ಪ್ರಕರಣದಲ್ಲಿ, ಪ್ರಾಧಿಕಾರದ ಹಿಂದಿನ ಅಧ್ಯಕ್ಷರಾಗಿದ್ದ ಕೆ.ಮರೀಗೌಡ ಅವರ ₹20.85ಕೋಟಿ ಮೌಲ್ಯದ 10 ಸ್ವತ್ತುಗಳನ್ನು ಜಾರಿ ನಿರ್ದೇಶನಾಲಯವು ಮುಟ್ಟುಗೋಲು ಹಾಕಿಕೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿ ಪಾರ್ವತಿ ಯವರು ಕಳೆದುಕೊಂಡ ಭೂಮಿಗೆ ಪರಿಹಾರಾತ್ಮಕವಾಗಿ 14 ನಿವೇಶನಗಳನ್ನು ನೀಡಿದ್ದ ಪ್ರಕರಣದ ತನಿಖೆ ಆರಂಭಿಸಿದ್ದ ಇ.ಡಿ, 1,000ಕ್ಕೂ ಹೆಚ್ಚು ನಿವೇಶನಗಳನ್ನು ಅಕ್ರಮವಾಗಿ ಹಂಚಿಕೆ ಮಾಡಿರುವುದನ್ನು ಪತ್ತೆ ಮಾಡಿತ್ತು. ಈ ಅಕ್ರಮಗಳು ನಡೆದಿದ್ದ ಅವಧಿಯಲ್ಲಿ ಜಿ.ಟಿ.ದಿನೇಶ್‌ಕುಮಾರ್ ಅವರು ಮುಡಾ ಆಯುಕ್ತರಾಗಿದ್ದರು ಎಂದು ಜಾರಿ ನಿರ್ದೇಶನಾಲಯವು (ಇ.ಡಿ) ತಿಳಿಸಿದೆ.

ಈ ಪ್ರಕರಣ ದಾಖಲಾದ ಸಂದರ್ಭದಲ್ಲಿ ಮರೀಗೌಡ ಅವರು ಮುಡಾ ಅಧ್ಯಕ್ಷರಾಗಿದ್ದರು. ತನಿಖೆ ತೀವ್ರಗೊಂಡ ಬೆನ್ನಲ್ಲೇ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಿದ್ದರು.

'ಮುಡಾವು ದಶಕಗಳ ಹಿಂದೆ ಸ್ವಾಧೀನಪಡಿಸಿಕೊಂಡಿದ್ದ ಜಮೀನಿಗೆ ಪರಿಹಾರ ನೀಡದಿದ್ದ ಮತ್ತು ಪರಿಹಾರದ ನಿವೇಶನಗಳು ಹಂಚಿಕೆ ಆಗದೇ ಇರುವ ಪ್ರಕರಣಗಳನ್ನೇ ಅಕ್ರಮಕ್ಕೆ ಆಯ್ಕೆ ಮಾಡಿಕೊಳ್ಳಲಾಗುತ್ತಿತ್ತು. ರಿಯಲ್ ಎಸ್ಟೇಟ್ ಉದ್ಯಮಿಗಳು ಮೂಲ ಮಾಲೀಕರಿಂದ ಜಿಪಿಎ ಮಾಡಿಸಿಕೊಂಡು, ಮುಡಾಕ್ಕೆ ಪರಿಹಾರ ಅರ್ಜಿ ಸಲ್ಲಿಸುತ್ತಿದ್ದರು. ಮುಡಾವು ಅದಕ್ಕೆ ನಿವೇಶನಗಳನ್ನು ಹಂಚಿಕೆ ಮಾಡುತ್ತಿತ್ತು. ಮರೀಗೌಡ ಅವರು ಸಹ ದಿನೇಶ್‌ಕುಮಾರ್ ಅವರ ಅವಧಿಯಲ್ಲಿ ಈ ರೀತಿ ಹಲವು ನಿವೇಶನಗಳನ್ನು ಪಡೆದುಕೊಂಡಿದ್ದರು. ಅವುಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗಿದೆ' ಎಂದು ಇ.ಡಿ ವಿವರಿಸಿದೆ.

ಏನೆಲ್ಲಾ ಮುಟ್ಟುಗೋಲು: ಮರೀಗೌಡ ಮತ್ತು ಕುಟುಂಬದವರ ಹೆಸರಿನಲ್ಲಿನ ಆರು ನಿವೇಶನ, ಮೈಸೂರಿನ ವಿವಿಧೆಡೆ ಇರುವ ಮೂರು ಕೃಷಿ ಜಮೀನು, ಮೈಸೂರು ನಗರದಲ್ಲಿನ ಒಂದು ವಾಣಿಜ್ಯ ಸಂಕೀರ್ಣ

'ಚಿಕಿತ್ಸಾ ವೆಚ್ಚ: 60 ವರ್ಷ ತುಂಬಿದ ಪತ್ರಕರ್ತರಿಗೆ ಶೇ 75ರಷ್ಟು ರಿಯಾಯಿತಿ'

ಬೆಂಗಳೂರು: '60 ವರ್ಷ ಮೇಲ್ಪಟ್ಟ ಎಲ್ಲ ಪತ್ರಕರ್ತರಿಗೆ ವೈದ್ಯಕೀಯ ಶಿಕ್ಷಣ ಇಲಾಖೆಯಡಿಯ ಆಸ್ಪತ್ರೆಗಳಲ್ಲಿ ವೈದ್ಯಕೀಯ ಚಿಕಿತ್ಸಾ ವೆಚ್ಚದಲ್ಲಿ ಶೇಕಡ 75ರಷ್ಟು ರಿಯಾಯಿತಿ ನೀಡಲಾಗುವುದು' ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ. ಶರಣಪ್ರಕಾಶ ಆರ್. ಪಾಟೀಲ ಹೇಳಿದರು.

ವೈದ್ಯಕೀಯ ಶಿಕ್ಷಣ ಇಲಾಖೆ, ಜಯದೇವ ಹೃದ್ರೋಗ ವಿಜ್ಞಾನ ಮತ್ತು ಸಂಶೋಧನಾ ಸಂಸ್ಥೆ, ಹಿರಿಯ ಪತ್ರಕರ್ತರ ವೇದಿಕೆ ಸಂಯುಕ್ತಾಶ್ರಯದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ವೇದಿಕೆಯ ಸದಸ್ಯರಿಗೆ ಗುರುತಿನ ಚೀಟಿ ವಿತರಿಸಿ ಅವರು ಮಾತನಾಡಿದರು.

'ಸಮಾಜವನ್ನು ತಿದ್ದಿ ತೀಡುವ ಪತ್ರಕರ್ತರಾಗಿ ಸೇವೆ ಸಲ್ಲಿಸಿರುವರಿಗೆ ವಿಶೇಷ ಸೌಲಭ್ಯ ಒದಗಿಸಲು ನಮ್ಮ ಇಲಾಖೆ ಮುಂದಾಗಿದೆ. ಮುಖ್ಯಮಂತ್ರಿಯವರ ಜೊತೆ ಸಮಾಲೋಚಿಸಿ ಮುಂದಿನ ದಿನಗಳಲ್ಲಿ ಶೇ 25ರಷ್ಟು ಹಣಕ್ಕೂ ರಿಯಾಯಿತಿ ನೀಡುವ ಬಗ್ಗೆ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಭರವಸೆ ನೀಡಿದರು.

'ನಿವೃತ್ತರಾದವರಿಗೆ ಗೌರವಯುತ ಜೀವನ ನಡೆಸಲು ಅನುವು ಮಾಡಿಕೊಡುವುದಕ್ಕೆ ನಾವು ಬದ್ಧರಾಗಿದ್ದೇವೆ. ಸಮಾಜಕ್ಕೆ ಕೊಡುಗೆ ನೀಡಿ ವೃತ್ತಿಯಿಂದ ನಿವೃತ್ತರಾಗಿರುವ ಪತ್ರಕರ್ತರಿಗೆ ಪಿಂಚಣಿ ಸೌಲಭ್ಯ ನೀಡುತ್ತಿದ್ದು, ಅದರ ನಿಯಮಗಳನ್ನು ಸರಳಗೊಳಿಸಲು ಕ್ರಮ ಕೈಗೊಳ್ಳಲಾಗುವುದು' ಎಂದರು.

'ನಿವೃತ್ತ ಪತ್ರಕರ್ತರಿಗೂ ಯಶಸ್ವಿನಿ ಯೋಜನೆಯಡಿ ಸೌಲಭ್ಯಗಳನ್ನು ಪಡೆಯಲು ಅವಕಾಶ ಕಲ್ಪಿಸುವ ಬಗ್ಗೆ ಅಧಿಕಾರಿಗಳೊಂದಿಗೆ ಚರ್ಚಿಸಿ ನಿರ್ಧಾರ ಕೈಗೊಳ್ಳಲಾಗುವುದು. ಸಂವಿಧಾನದ ನಾಲ್ಕನೇ ಅಂಗವಾಗಿರುವ ಮಾಧ್ಯಮದ ಪ್ರತಿನಿಧಿಗಳಿಗೆ ಉತ್ತಮ ಆರೋಗ್ಯ ಸೌಲಭ್ಯ ಒದಗಿಸುವುದು ನಮ್ಮ ಮುಖ್ಯ ಉದ್ದೇಶವಾಗಿದೆ. ಈ ನಿಟ್ಟಿನಲ್ಲಿ ಜಯದೇವ ಹೃದ್ರೋಗ ಸಂಸ್ಥೆಯ ವತಿಯಿಂದ ಗುರುತಿನ ಚೀಟಿ ವಿತರಿಸಲಾಗುತ್ತಿದೆ' ಎಂದು ತಿಳಿಸಿದರು.

ಜಯನಗರ ಶಾಸಕ ಸಿ.ಕೆ. ರಾಮಮೂರ್ತಿ, ಜಯದೇವ ಸಂಸ್ಥೆಯ ನಿರ್ದೇಶಕ ಡಾ.ಬಿ.ದಿನೇಶ್, ಹಿರಿಯ ಪತ್ರಕರ್ತರ ವೇದಿಕೆ ಅಧ್ಯಕ್ಷ ಆರ್. ಪಿ. ಸಾಂಬ ಸದಾಶಿವರೆಡ್ಡಿ, ಎಂ.ಎ. ಪೊನ್ನಪ್ಪ, ವೆಂಕಟೇಶ್ ಪ್ರಸಾದ್ ಹಾಜರಿದ್ದರು.

ಚಿಟಿಕೆ ಸುದ್ದಿ

ಉಚಿತ ತರಬೇತಿ ನಾಳೆ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್‌ನ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಸಂಸ್ಥೆಯು ಇದೇ 24ರಂದು ಬೆಳಿಗ್ಗೆ 11.30ಕ್ಕೆ ಆರ್‌ಆರ್‌ಬಿ (ಪಿಒ) ಮುಖ್ಯ ಪರೀಕ್ಷೆಯಲ್ಲಿ ಉತ್ತೀರ್ಣರಾದ ಅಭ್ಯರ್ಥಿಗಳಿಗೆ ಉಚಿತ ತರಬೇತಿ ಮಾರ್ಗದರ್ಶನ ಹಮ್ಮಿಕೊಂಡಿದೆ.

ಅಭ್ಯರ್ಥಿಗಳಿಗೆ ಉಚಿತವಾಗಿ ಮೌಖಿಕ ಪರೀಕ್ಷೆಯ ಮಾರ್ಗದರ್ಶನ, ತರಬೇತಿ ನೀಡಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಇದೇ 23ರೊಳಗೆ ಹೆಸರು ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 76250 00990, 99019 11410.

'ರಥಸಪ್ತಮಿ' ಇದೇ 25ಕ್ಕೆ

ಬೆಂಗಳೂರು: ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ಜ.25ರಂದು (ಭಾನುವಾರ) ನಗರದ ವಿವಿಧೆಡೆ 'ರಥಸಪ್ತಮಿ' ಕಾರ್ಯಕ್ರಮ ಹಮ್ಮಿಕೊಂಡಿದೆ.

ಬೆಳಿಗ್ಗೆ 4 ಗಂಟೆಯ ಬ್ರಾಹ್ಮಿ ಮುಹೂರ್ತದಲ್ಲಿ ಸೂರ್ಯ ಹೋಮ, ಬೆಳಿಗ್ಗೆ 5.30ರಿಂದ 108 ಅಗ್ನಿಹೋತ್ರ ಹಾಗೂ 108 ಸೂರ್ಯ ನಮಸ್ಕಾರ ಸಮರ್ಪಣೆ ಸಮಾರಂಭ ನಡೆಯಲಿದ್ದು, ಆಸಕ್ತರು ಭಾಗವಹಿಸಬಹುದು ಎಂದು ಸಮಿತಿಯ ಬೆಂಗಳೂರು ನಗರದ ಸಂಚಾಲಕ ಹನುಮಂತಣ್ಣ ತಿಳಿಸಿದ್ದಾರೆ.

ರಥಸಪ್ತಮಿ ನಡೆಯುವ ಸ್ಥಳಗಳು: ಕೆ. ಆರ್. ಪುರದ ರಾಜೀವ್‌ಗಾಂಧಿ ಕ್ರೀಡಾಂಗಣ, ವಿದ್ಯಾರಣ್ಯಪುರದ ಎನ್‌ಟಿಐ ಆಟದ ಮೈದಾನ, ಮಹಾಲಕ್ಷ್ಮಿಪುರದ ರಾಣಿ ಅಬ್ಬಕ್ಕ ಆಟದ ಮೈದಾನ, ಬೇಗೂರು ಪ್ರೌಢಶಾಲಾ ಮೈದಾನ ಹಾಗೂ ಬನಶಂಕರಿಯ ಶಂಕರ್‌ನಾಗ್ ಆಟದ ಮೈದಾನ.

ಮಾಹಿತಿಗೆ: 94485 82066

'ಕ್ಷಮೆಯಾಚನೆಗೆ ಆಗ್ರಹ'

ಬೆಂಗಳೂರು: 'ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ ಅವರ ವಿರುದ್ಧ ಲಕ್ಷ್ಮೀನಾರಾಯಣ ಎಂಬುವವರು ಸಾಕ್ಷ್ಯರಹಿತ ಪ್ರಕರಣ ದಾಖಲಿಸಿರುವುದು ಖಂಡನೀಯ. ದೂರುದಾರ ಲಕ್ಷ್ಮೀನಾರಾಯಣ ಅವರು ಕೂಡಲೇ ಕ್ಷಮೆಯಾಚಿಸಬೇಕು' ಎಂದು ಆರ್.ಬಿ. ತಿಮ್ಮಾಪುರ ಅಭಿಮಾನಿ ಬಳಗ ತಿಳಿಸಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಬಳಗದ ಸದಸ್ಯರಾದ ಮಾ.ನ. ಗುರುದತ್, ಎಲ್. ಲೋಕೇಶ್, 'ಈ ಪ್ರಕರಣದಲ್ಲಿ ಆರ್.ಬಿ. ತಿಮ್ಮಾಪುರ ಅವರ ಪುತ್ರ ಲಂಚದ ಪಡೆದುಕೊಂಡಿದ್ದಾರೆ ಎಂಬ ಆರೋಪದ ಮೇಲೆ ದೂರು ನೀಡಲಾಗಿದ್ದು, ಅದನ್ನು ಹಿಂಪಡೆದುಕೊಳ್ಳಬೇಕು' ಎಂದು ಆಗ್ರಹಿಸಿದರು.

ಕಾರ್ಯಾಗಾರ ಫೆಬ್ರುವರಿ 25ಕ್ಕೆ

ಬೆಂಗಳೂರು: ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಕೇಂದ್ರ ಸಂಘದಿಂದ ಫೆ. 25ರಂದು ಕಬ್ಬನ್ ಉದ್ಯಾನದ ಸರ್ಕಾರಿ ನೌಕರರ ಭವನದಲ್ಲಿ ನಿವೃತ್ತ ನೌಕರರು ಹಾಗೂ ಹಿರಿಯ ನಾಗರಿಕರ ಸಮಸ್ಯೆಗಳಿಗೆ ಸಂಬಂಧಪಟ್ಟ ಕಾರ್ಯಾಗಾರ ಹಮ್ಮಿಕೊಂಡಿದೆ.

ಬೆಂಗಳೂರು ನಗರದಲ್ಲಿ ವಾಸಿಸುವ 75 ವರ್ಷಕ್ಕೂ ಮೇಲ್ಪಟ್ಟ ಸರ್ಕಾರಿ ನಿವೃತ್ತ ನೌಕರರಿಗೆ ಹಾಗೂ ಅವರ ಕುಟುಂಬ ಪಿಂಚಣಿದಾರರಿಗೆ ಅಭಿನಂದನೆ ಸಲ್ಲಿಸುವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಅರ್ಹರು ಫೆ. 15ರೊಳಗೆ ಸಂಬಂಧಪಟ್ಟ ದಾಖಲೆಗಳನ್ನು ಸಂಘಕ್ಕೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ಮಾಹಿತಿಗೆ: 88617 29232.

'ಅನುದಾನ ದುರ್ಬಳಕೆಯಾದರೆ ಕ್ರಮ'

ನಿಜಶರಣ ಅಂಬಿಗರ ಚೌಡಯ್ಯ ಜಯಂತಿ: ಸಚಿವ ಶಿವರಾಜ ತಂಗಡಗಿ ಎಚ್ಚರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯ, ಜಿಲ್ಲೆ ಹಾಗೂ ತಾಲ್ಲೂಕು ಮಟ್ಟದಲ್ಲಿ ಮಹಾಪುರುಷರ ಜಯಂತಿ ಆಚರಿಸಲು ಸರ್ಕಾರ ನೀಡುತ್ತಿರುವ ಅನುದಾನ ದುರುಪಯೋಗಪಡಿಸಿಕೊಂಡರೆ ಅಂತಹವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು' ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಎಚ್ಚರಿಕೆ ನೀಡಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಬುಧವಾರ ಇಲ್ಲಿ ಆಯೋಜಿಸಿದ್ದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿ ಕಾರ್ಯಕ್ರಮದಲ್ಲಿ ಅನುದಾನ ದುರುಪಯೋಗ ಕುರಿತು ಅಂಬಿಗರ ಚೌಡಯ್ಯ ಪೀಠದ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಅವರು ಪ್ರಸ್ತಾಪಿಸಿದರು. ಇದಕ್ಕೆ ಭಾಷಣದ ವೇಳೆ ಸಚಿವರು ಪ್ರತಿಕ್ರಿಯಿಸಿದರು.

'ವಿವಿಧ ಸಮುದಾಯಗಳ ಮಹಾಪುರುಷರಿಗೆ ಗೌರವ ಸೂಚಿಸಬೇಕು. ಅವರ ವಿಚಾರಗಳನ್ನು ಜನರಿಗೆ ಮುಟ್ಟಿಸಬೇಕು ಎಂದು ನಮ್ಮ ಸರ್ಕಾರ ಜಯಂತಿಯನ್ನು ಆಚರಿಸುತ್ತಿದೆ. 2014ರಲ್ಲಿ ಅಂಬಿಗರ ಚೌಡಯ್ಯ ಜಯಂತಿ ಆರಂಭಿಸಲಾಗಿದೆ. ಇದಕ್ಕಾಗಿ ಮೂರು ಹಂತಗಳಲ್ಲಿ ಅನುದಾನ ನೀಡುತ್ತಿದ್ದು, ಇದನ್ನು ಸರಿಯಾಗಿ ಬಳಕೆ ಮಾಡಿಕೊಳ್ಳಬೇಕು' ಎಂದರು.

'ರಾಜ್ಯದ ಇತಿಹಾಸದಲ್ಲೇ ಯಾವುದೇ ಸರ್ಕಾರ ನಿಗಮಗಳಿಗೆ ಹೆಚ್ಚಿನ ಅನುದಾನ ನೀಡಿಲ್ಲ. ಕಾಂಗ್ರೆಸ್ ಸರ್ಕಾರ ₹1,500 ಕೋಟಿಯನ್ನು ನಿಗಮಗಳಿಗೆ ನೀಡಿ ಆಯಾ ಸಮುದಾಯಗಳ ಅಭಿವೃದ್ಧಿಗೆ ಒತ್ತು ನೀಡಿದೆ. ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮಕ್ಕೂ ₹23.73 ಕೋಟಿ ಅನುದಾನ ಒದಗಿಸಿದ್ದೇವೆ. ಅಂಬಿಗರ ಚೌಡಯ್ಯ ಅವರ ಮೂರ್ತಿ ನಿರ್ಮಿಸುವ ಬೇಡಿಕೆಯಿದ್ದು, ಆದಷ್ಟು ಬೇಗನೇ ಈಡೇರಿಸಲಾಗುವುದು' ಎಂದು ತಿಳಿಸಿದರು.

ಸಾನಿಧ್ಯ ವಹಿಸಿದ್ದ ಅಂಬಿಗರ ಚೌಡಯ್ಯ ಪೀಠದ ಶಾಂತ ಭೀಷ್ಮ ಚೌಡಯ್ಯ ಸ್ವಾಮೀಜಿ ಮಾತನಾಡಿ, 'ನಿಜ ಶರಣ ಎನ್ನುವ ಬಿರುದನ್ನು ಪಡೆದ ಮೊದಲ ದಾರ್ಶನಿಕರು ಚೌಡಯ್ಯನವರು. ಜಾತಿ ತಾರತಮ್ಯ ವಿರೋಧಿಸಿ ಹೋರಾಟ ರೂಪದಲ್ಲಿ ವಚನಗಳನ್ನು ರಚಿಸಿದವರು. ಅವರ 330 ವಚನಗಳು ದೊರೆತಿದ್ದು, ಇನ್ನಷ್ಟು ಸಂಗ್ರಹಿಸಲಾಗುತ್ತಿದೆ ಎಂದರು.

ದಾವಣಗೆರೆಯ ಪ್ರಾಧ್ಯಾಪಕ ಎಚ್.ಸ್ವಾಮಿ ಉಪನ್ಯಾಸ ನೀಡಿದರು. ಮೀನುಗಾರಿಕಾ ಅಭಿವೃದ್ಧಿ ನಿಗಮದ ಅಧ್ಯಕ್ಷೆ ಮಾಲಾ ನಾರಾಯಣರಾವ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಜೆ.ಮಂಜುನಾಥ್, ನಿರ್ದೇಶಕಿ ಕೆ.ಎಂ.ಗಾಯತ್ರಿ ಉಪಸ್ಥಿತರಿದ್ದರು.

ನಗರದಲ್ಲಿ ಬುಧವಾರ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಆಯೋಜಿಸಿದ್ದ ನಿಜಶರಣ ಅಂಬಿಗರ ಚೌಡಯ್ಯ ಜಯಂತಿಯಲ್ಲಿ ಸಚಿವ ಶಿವರಾಜ ಎಸ್. ತಂಗಡಗಿ ಶ್ರೀ ಕೃಷ್ಣ ಮತ್ತು ಅಂಬಿಗ ಚೌಡಯ್ಯ ಅವರ ವೇಷಭೂಷಣ ಧರಿಸಿ ಬಂದಿದ್ದ ಪುಟಾಣಿಗಳಾದ ಹೊಸಪೇಟೆಯ ನಯನಿಕ ಗೌಡ ಜಿ. ಮತ್ತು ಕೆ.ಆರ್. ವೈಷ್ಣವಿ ಅವರೊಂದಿಗೆ ಮಾತುಕತೆ ನಡೆಸಿದರು. ಇಲಾಖೆ ನಿರ್ದೇಶಕಿ ಕೆ.ಎಂ ಗಾಯತ್ರಿ, ಕಾರ್ಯದರ್ಶಿ ಜೆ. ಮಂಜುನಾಥ ಮತ್ತು ನಿಜಶರಣ ಅಂಬಿಗ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರ ಉಪಸ್ಥಿತರಿದ್ದರು –ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಮಹಾಪುರುಷರ ವಿಚಾರ ಜನರಿಗೆ ತಲುಪಿಸಲು ಜಯಂತಿ ಆಚರಣೆ
- ಮೂರು ಹಂತಗಳಲ್ಲಿ ನೀಡುವ ಅನುದಾನ ಸರಿಯಾಗಿ ಬಳಕೆ ಮಾಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮೂಲಕ ಸಾಕಷ್ಟು ಚಟುವಟಿಕೆಗಳು ನಡೆಯುತ್ತಿವೆ. ಆದರೆ, ನನಗೆ ನಿದ್ರೆ ಮಾಡಲು ಬಿಡದ ಇಲಾಖೆ ಇದು

ಶಿವರಾಜ ತಂಗಡಗಿ, ಸಚಿವ

ಹೆಚ್ಚಿನ ಅನುದಾನ ಕೊಡಿ

ನಿಜಶರಣ ಅಂಬಿಗರ ಚೌಡಯ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷ ಬಾಬುರಾವ್ ಚಿಂಚನಸೂರು, ಕರ್ನಾಟಕ ರೇಷ್ಮೆ ಮಾರುಕಟ್ಟೆ ಮಂಡಳಿ ಅಧ್ಯಕ್ಷ ಗಂಗಾಧರ್ ಮಾತನಾಡಿ, 'ರಾಜ್ಯದಲ್ಲಿ ಅಂಬಿಗ ಸಮುದಾಯದವರೇ 25 ಲಕ್ಷದಷ್ಟಿದ್ದಾರೆ. ಸಮುದಾಯದ ನಿಗಮಕ್ಕೆ ಹೆಚ್ಚಿನ ಅನುದಾನವನ್ನು ಒದಗಿಸಬೇಕು. ಇದರಿಂದ ಸ್ವ ಉದ್ಯೋಗ ಕಂಡುಕೊಳ್ಳಲು ದಾರಿಯಾಗಲಿದೆ' ಎಂದು ಹೇಳಿದರು.

ಸ್ಪರ್ಶ್ ಆಸ್ಪತ್ರೆಯಲ್ಲಿ ಅಸ್ಥಿಮಜ್ಜೆ ಕಸಿ ಘಟಕಕ್ಕೆ ಚಾಲನೆ

ಬೆಂಗಳೂರು: ನಗರದ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗಳ ಸಮೂಹವಾಗಿರುವ ಸ್ಪರ್ಶ್ ಆಸ್ಪತ್ರೆಯು ಹೆಣ್ಣೂರಿನ ಘಟಕದಲ್ಲಿ ಅಸ್ಥಿಮಜ್ಜೆ ಕಸಿ ಕೇಂದ್ರವನ್ನು ಆರಂಭಿಸುವ ಮೂಲಕ ಮತ್ತೊಂದು ಮೈಲಿಗಲ್ಲು ಸಾಧಿಸಿದೆ.

ಗುರುವಾರ ಅಸ್ಥಿಮಜ್ಜೆ ಕಸಿ ಘಟಕಕ್ಕೆ ಚಾಲನೆ ನೀಡಿ ಮಾತನಾಡಿದ ಸ್ಪರ್ಶ್ ಆಸ್ಪತ್ರೆ ಸಮೂಹಗಳ ಅಧ್ಯಕ್ಷ ಡಾ.ಶರಣ್ ಶಿವರಾಜ್ ಪಾಟೀಲ್, 'ಪ್ರತಿಯೊಬ್ಬರಿಗೂ ಮರುಜೀವ ಪಡೆಯಲು ಎರಡನೇ ಅವಕಾಶದ ಅರ್ಹತೆ ಇದೆ. ಸ್ಪರ್ಶ್ ಆಸ್ಪತ್ರೆಯ ಅಸ್ಥಿಮಜ್ಜೆ ಕಸಿ ಘಟಕವು ರಕ್ತ ಕ್ಯಾನ್ಸರ್‌ನ ಅತ್ಯಂತ ಗಂಭೀರ ಪರಿಸ್ಥಿತಿಗೆ ಒಳಗಾದ ರೋಗಿಗಳಿಗೆ ಭರವಸೆಯಾಗಿದೆ' ಎಂದರು.

ಅಸ್ಥಿಮಜ್ಜೆ ಕಸಿ ಘಟಕವನ್ನು ಕ್ಯಾನ್ಸರ್‌ನ ಎಲ್ಲ ಹಂತದ ಚಿಕಿತ್ಸೆಗಳಿಗೆ ಸಜ್ಜುಗೊಳಿಸಲಾಗಿದೆ. ಆರಂಭಿಕ ಹಂತದಲ್ಲೇ ರೋಗವನ್ನು ನಿಖರವಾಗಿ ಪತ್ತೆಹಚ್ಚಿ ಸುಧಾರಿತ ಆರೋಗ್ಯ ಸೇವೆಗಳೊಂದಿಗೆ ಗುಣಪಡಿಸಲಾಗುತ್ತದೆ. ದೀರ್ಘ ಕಾಲದವರೆಗೆ ಬದುಕುವ ಅವಕಾಶವನ್ನು ಕಲ್ಪಿಸಿಕೊಡಲಿದೆ ಎಂದು ಅವರು ಹೇಳಿದರು.

ನೂತನ ಘಟಕ ಆರಂಭಿಸುವ ಮೂಲಕ ಸ್ಪರ್ಶ್ ಆಸ್ಪತ್ರೆ ಸಮೂಹವು ಅತ್ಯಾಧುನಿಕ ಚಿಕಿತ್ಸಾ ಸೌಲಭ್ಯಗಳ ಸಾಮರ್ಥ್ಯ ಹೊಂದಿದ್ದು ಕ್ಯಾನ್ಸರ್ ರೋಗಿಗಳಿಗೆ ಗುಣಮಟ್ಟದ ಚಿಕಿತ್ಸೆ ನೀಡಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.

ಸ್ಪರ್ಶ್ ಆಸ್ಪತ್ರೆ ಸಮೂಹದ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಜಸ್‌ದೀಪ್ ಸಿಂಗ್ ಉಪಸ್ಥಿತರಿದ್ದರು.

ಆಸ್ಕರ್: 'ಹೋಮ್‌ಬೌಂಡ್' ಹೊರಕ್ಕೆ

ನವದೆಹಲಿ (ಪಿಟಿಐ): ಕರಣ್ ಜೋಹರ್ ಮತ್ತು ಅದಾರ್ ಪೂನಾವಾಲಾ ನಿರ್ಮಿಸಿರುವ 'ಹೋಮ್‌ಬೌಂಡ್' ಹಿಂದಿ ಭಾಷಾ ಚಲನಚಿತ್ರವು ಈ ವರ್ಷದ ಆಸ್ಕರ್ ಪ್ರಶಸ್ತಿಯ 'ಅತ್ಯುತ್ತಮ ಅಂತರರಾಷ್ಟ್ರೀಯ ಚಲನಚಿತ್ರ ವಿಭಾಗ'ದಲ್ಲಿ ನಾಮ ನಿರ್ದೇಶನ ಪಡೆಯುವಲ್ಲಿ ವಿಫಲವಾಗಿದೆ.

ಲಾಸ್ ಏಂಜಲೀಸ್‌ನಲ್ಲಿ ಗುರುವಾರ ನಡೆದ 98ನೇ ಅಕಾಡೆಮಿ ಪ್ರಶಸ್ತಿಗಳ ನಾಮ ನಿರ್ದೇಶನಗಳನ್ನು 'ಅಕಾಡೆಮಿ ಆಫ್ ಮೋಷನ್ ಪಿಕ್ಚರ್ ಆರ್ಟ್ಸ್ ಅಂಡ್ ಸೈನ್ಸಸ್' ಪ್ರಕಟಿಸಿತು.

ಭಾರತದ 'ಹೋಮ್‌ಬೌಂಡ್' ಚಿತ್ರವು 15 ಚಿತ್ರಗಳ ಕಿರುಪಟ್ಟಿಯಲ್ಲಿ ಸ್ಥಾನ ಪಡೆದಿತ್ತು. ಆದರೆ ಅಂತಿಮ ಐದರಲ್ಲಿ ಸ್ಥಾನ ಪಡೆಯುವಲ್ಲಿ ಅದು ವಿಫಲವಾಯಿತು.

ಪತ್ರಕರ್ತ ಬಶಾರತ್ ಪೀರ್ ಅವರ 'ಟೇಕಿಂಗ್ ಅಮೃತ್ ಹೋಮ್' ಎಂಬ ಶೀರ್ಷಿಕೆಯ ಲೇಖನದಿಂದ ಪ್ರೇರಿತವಾದ ಈ ಸಿನಿಮಾದಲ್ಲಿ ಇಶಾನ್ ಖಟ್ಟರ್, ವಿಶಾಲ್ ಜೇತ್ವಾ ಮತ್ತು ಜಾನ್ವಿ ಕಪೂರ್ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಮುಸ್ಲಿಂ ಮತ್ತು ದಲಿತ ವ್ಯಕ್ತಿಯ ನಡುವಿನ ಬಾಲ್ಯದ ಸ್ನೇಹದ ಕಥಾವಸ್ತುವಿನ ಸಿನಿಮಾ ಇದು.

₹10 ಕೋಟಿ ಕೊಟ್ಟು ವಾಪಸ್ ಪಡೆದ ರಾಜ್ಯ

• ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): 'ತುಂಗಭದ್ರಾ ಅಣೆಕಟ್ಟೆಯ ಎಲ್ಲ 33 ಕ್ರೆಸ್ಟ್ ಗೇಟ್‌ಗಳನ್ನು ಬದಲಿಸಿ ಹೊಸ ಗೇಟ್ ಅಳವಡಿಸುವ ಕೆಲಸ ಈಗ ನಡೆಯುತ್ತಿದೆ. ಆದರೆ, ಹಣ ಕೊಡದೇ ಕರ್ನಾಟಕ ಸರ್ಕಾರ ಸತಾಯಿಸುತ್ತಿದೆ. ಇದರಿಂದ ಕೆಲಸ ನಿಧಾನ ವಾಗಬಹುದು ಅಥವಾ ಸ್ಥಗಿತವೂ ಆಗಬಹುದು' ಎಂದು ಗೇಟ್ ತಜ್ಞ ಕನ್ನಯ್ಯ ನಾಯ್ಡು ಹೇಳಿದರು.

ಎರಡು ದಿನಗಳ ಹಿಂದೆ ಅಣೆಕಟ್ಟೆಗೆ ಭೇಟಿ ನೀಡಿ ಕಾಮಗಾರಿ ಪರಿಶೀಲಿಸಿದ್ದ ಅವರು ಗುರುವಾರ 'ಪ್ರಜಾವಾಣಿ' ಜತೆಗೆ ಮಾತನಾಡಿ, 'ಕರ್ನಾಟಕ ಸರ್ಕಾರ ಆರಂಭಿಕ ಕಂತಿನ ರೂಪದಲ್ಲಿ ₹10 ಕೋಟಿ ಮಂಜೂರು ಮಾಡಿದ್ದನ್ನು ವಾಪಸ್ ಪಡೆದಿದೆ. ಬುಕ್ ಅಡ್ಜಸ್ಟ್‌ಮೆಂಟ್ ಎಂದು ಹೇಳಿ ಹಣ ಕೊಡದೆ ಸತಾಯಿಸುತ್ತಿದೆ ಎಂದು ಗುತ್ತಿಗೆದಾರರು ನನ್ನಲ್ಲಿ ದೂರಿ ದ್ದಾರೆ. ತಕ್ಷಣ ಹಣ ತರಿಸಿ ಎಂದು ನಾನು ಮುನಿರಾಬಾದ್‌ನ ಕರ್ನಾಟಕ ನೀರಾವರಿ ನಿಗಮದ ಮುಖ್ಯ ಎಂಜಿನಿಯರ್ ಅವರಿಗೆ ಸೂಚಿಸಿದ್ದೇನೆ' ಎಂದರು.

'ಗೇಟ್ ಅಳವಡಿಕೆ ಕಾಮಗಾರಿಗಳೆಲ್ಲ ಸಮರ್ಪಕವಾಗಿ ನಡೆ ಯುತ್ತಿವೆ. ಅಳವಡಿಕೆಯಾದ ಗೇಟ್ ಮೇಲಕ್ಕೆ ಎತ್ತುವ ಪ್ರಯೋಗವನ್ನೂ ಗಮನಿಸಿದ್ದೇನೆ, ಸಮಾಧಾನವಾಗಿದೆ. ಎಲ್ಲ ಗೇಟ್‌ಗಳಿಗೂ ಹೊಸ ಚೈನ್‌ಲಿಂಕ್ ಅಳವಡಿಕೆ ಆಗಲಿದೆ' ಎಂದು ತಿಳಿಸಿದರು.

ಗೇಟ್ ಅಳವಡಿಕೆಯ ಟೆಂಡರ್ ಮೊತ್ತ ₹54 ಕೋಟಿ. ಆಂಧ್ರ ಸರ್ಕಾರ ₹35 ಕೋಟಿ ಕೊಟ್ಟಿದೆ, ಮಿಕ್ಕಿದ್ದನ್ನು ರಾಜ್ಯ ಸರ್ಕಾರ ಕೊಡಬೇಕು. ವಿಳಂಬವಾದರೆ ಜೂನ್‌ಗೆ ಕೆಲಸ ಮುಗಿಯಲ್ಲ

ಕನ್ನಯ್ಯ ನಾಯ್ಡು, ಕ್ರೆಸ್ಟ್‌ಗೇಟ್ ತಜ್ಞ

₹10 ಕೋಟಿ ವಾಪಸ್ ಪಡೆದ ಬಗ್ಗೆ ಖಚಿತವಾಗಿ ಮಾಹಿತಿ ಗೊತ್ತಿಲ್ಲ. ಮಾಹಿತಿ ಪಡೆದು ತಿಳಿಸುವೆ

ಲಕ್ಷ್ಮಣ ನಾಯಕ, ಮುಖ್ಯ ಎಂಜಿನಿಯರ್, ನೀರಾವರಿ ಕೇಂದ್ರ ವಲಯ, ಮುನಿರಾಬಾದ್

ಬಾರದ ಹಣ: ಗೊತ್ತಾದದ್ದು ಹೇಗೆ?

'ತಿಂಗಳಿಗೆ ಕೇವಲ ನಾಲ್ಕು ಗೇಟ್‌ನಂತೆ ಕೂರಿಸುತ್ತ ಹೋದರೆ ಜೂನ್‌ಗೆ ಕೆಲಸ ಮುಗಿಯದು. ಸದ್ಯ ಎರಡು ತಂಡಗಳು ಕೆಲಸ ಮಾಡುತ್ತಿವೆ. ಇದನ್ನು ಮೂರು ಅಥವಾ ನಾಲ್ಕು ತಂಡಗಳಾಗಿ ವಿಸ್ತರಿಸಿ ಎಂದು ನಾನು ಸಲಹೆ ನೀಡಿದಾಗ ಗುತ್ತಿಗೆ ದಾರರು ಹಣದ ಕೊರತೆಯನ್ನು ನನ್ನ ಮುಂದಿಟ್ಟರು. ನಾನು ತಕ್ಷಣ ನೀರಾವರಿ ನಿಗಮದ ಮುಖ್ಯ ಎಂಜಿನಿಯರ್ ಅವರಲ್ಲಿ ವಿಚಾರಿಸಿದೆ. ಆಗ ಅವರು ಕರ್ನಾಟಕ ಸರ್ಕಾರ ಕೊಟ್ಟ ಹಣವನ್ನು ವಾಪಸ್ ಪಡೆದಿರುವುದಾಗಿ ತಿಳಿಸಿದರು. ಹೀಗಾಗಿ ಈಗ ಈ ವಿಷಯ ನನ್ನ ಗಮನಕ್ಕೆ ಬಂತು' ಎಂದು ಕನ್ನಯ್ಯ ನಾಯ್ಡು ಹೇಳಿದರು.

ಕರ್ನಾಟಕದ ಕೃಷಿಯಿಂದ ಕೈಗಾರಿಕೆವರೆಗಿನ ಸಾಧನೆಯ ಬಿಂಬಿಸುವಿಕೆ

'ಭಾರತ ಪರ್ವ'ದಲ್ಲಿ ರಾಜ್ಯದ ಸ್ತಬ್ಧಚಿತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಕೃಷಿಯಿಂದ ಕೈಗಾರಿಕೆವರೆಗಿನ ಸಾಧನೆಯನ್ನು ಸಂಕೇತಿಸುವ ರೀತಿಯಲ್ಲಿ 'ಸಿರಿಧಾನ್ಯದಿಂದ ಮೈಕ್ರೋಚಿಪ್ ವರೆಗೆ' (ಮಿಲ್ಲೆಟ್ ಟು ಮೈಕ್ರೋಚಿಪ್) ಎಂಬ ಸ್ತಬ್ಧಚಿತ್ರವನ್ನು ಗಣರಾಜ್ಯೋತ್ಸವದ ಅಂಗವಾಗಿ ಇದೇ 26ರಂದು ಕೆಂಪು ಕೋಟೆಯಲ್ಲಿ ಆಯೋಜಿಸುವ 'ಭಾರತ ಪರ್ವ' ದಲ್ಲಿ ರಾಜ್ಯ ಸರ್ಕಾರ ಪ್ರದರ್ಶಿಸಲಿದೆ.

'ಕೃಷಿ, ಶಿಕ್ಷಣ, ವಿಜ್ಞಾನ, ಉನ್ನತ ತಂತ್ರಜ್ಞಾನ ಹಾಗೂ ಮೈಕ್ರೋಚಿಪ್‌ಗಳ ತಯಾರಿಕೆಯಲ್ಲಿ ಸಾಧಿಸಿರುವ ಸಮತೋಲಿತ ಪ್ರಗತಿಯನ್ನು ಸ್ತಬ್ಧಚಿತ್ರದಲ್ಲಿ ತೋರಿಸಲಾಗಿದೆ' ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ಎಂ. ನಿಂಬಾಳ್ಕರ್ ಗುರುವಾರ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಸ್ತಬ್ಧಚಿತ್ರಕ್ಕಾಗಿ ಇಲಾಖೆಯು ಕಿತ್ತೂರು ರಾಣಿ ಚೆನ್ನಮ್ಮ ಮತ್ತು ರಾಣಿ ಅಬ್ಬಕ್ಕದೇವಿ, ಕರ್ನಾಟಕ ಪುಷ್ಪ ವೈಭವ, ಹಲಗಲಿ ಬೇಡರು, 'ಸಿರಿಧಾನ್ಯದಿಂದ ಮೈಕ್ರೋಚಿಪ್ ವರೆಗೆ' ಎಂಬ ನಾಲ್ಕು ವಿಷಯಗಳನ್ನು ಆಯ್ಕೆ ಮಾಡಿ ಕಳುಹಿಸಿತ್ತು. ಮೊದಲ ಸಭೆಯಲ್ಲಿಯೇ 'ಸಿರಿಧಾನ್ಯದಿಂದ ಮೈಕ್ರೋಚಿಪ್ ವರೆಗೆ' ಎಂಬ ವಿಷಯವನ್ನು ಪರಿಣತರ ಸಮಿತಿ ಅಂತಿಮಗೊಳಿಸಿತ್ತು. ಅದಕ್ಕನುಗುಣವಾಗಿ ಮಣ್ಣಿನಲ್ಲಿ ಸಿರಿಧಾನ್ಯಗಳನ್ನು ಬೆಳೆಸಿದ ದೇಶೀಯ ಜ್ಞಾನದಿಂದ ಮೈಕ್ರೋಚಿಪ್‌ಗಳನ್ನು ತಯಾರಿಸುವ ಸೂಕ್ಷ್ಮವನ್ನು ಈ ಸ್ತಬ್ಧಚಿತ್ರ ಮನಮುಟ್ಟುವಂತೆ ಕಟ್ಟಿಕೊಡುತ್ತದೆ ಎಂದರು.

ಸ್ತಬ್ಧಚಿತ್ರದಲ್ಲಿ ಏನಿರಲಿದೆ: ಸ್ತಬ್ಧಚಿತ್ರದ ಮುಂಭಾಗದಲ್ಲಿ ಉದಯಿಸುತ್ತಿರುವ ಸೂರ್ಯ ನಿರಂತರ ಪ್ರಗತಿ ಮತ್ತು ಚಲನಶೀಲತೆಯ ಸಂಕೇತವಾಗಿ ಹೊಳೆಯುತ್ತಿದೆ. ದೊಡ್ಡ ಮಡಿಕೆಗಳಲ್ಲಿ ಪ್ರದರ್ಶಿಸಲಾದ ವಿವಿಧ ಸಿರಿಧಾನ್ಯಗಳು ಕೃಷಿ ಸಮೃದ್ಧಿಯನ್ನು ತೋರಿಸುತ್ತವೆ. ಬೆಳೆದ ಫಸಲನ್ನು ಎತ್ತಿಹಿಡಿದಿರುವ ರೈತ, ಆತನ ಪತ್ನಿ ಹಾಗೂ ಉಲ್ಲಾಸದಿಂದ ಕಾಣಿಸುತ್ತಿರುವ ಮಕ್ಕಳು ಗ್ರಾಮೀಣ ಶಕ್ತಿಯ ಜೀವಂತ ಚಿತ್ರಣವಾಗಿದ್ದಾರೆ.

ಇಕ್ಕೆಲಗಳಲ್ಲಿ ಬಾಹ್ಯಾಕಾಶ ಕ್ಷೇತ್ರವನ್ನು ಪ್ರತಿನಿಧಿಸುವ ರಾಕೆಟ್ ಮತ್ತು ವಿಜ್ಞಾನಿ, ಟೆಲಿಮೆಡಿಸಿನ್ ಮೂಲಕ ಮಾರ್ಗದರ್ಶನ ನೀಡುತ್ತಿರುವ ವೈದ್ಯೆ ಹಾಗೂ ಕೃಷಿಭೂಮಿಯಲ್ಲಿ ಡ್ರೋನ್ ಬಳಸುತ್ತಿರುವ ಮಹಿಳೆಯು ವಿಜ್ಞಾನ, ಆರೋಗ್ಯ ಮತ್ತು ಆಧುನಿಕ ಕೃಷಿಯ ಸಮನ್ವಯವನ್ನು ತೋರಿಸುತ್ತಾರೆ. ಕೈಗಾರಿಕಾ ವಲಯವನ್ನು ಪ್ರತಿನಿಧಿಸುವಂತೆ ಯಂತ್ರೋಪಕರಣಗಳೊಂದಿಗೆ ಕಾರ್ಯನಿರ್ವಹಿಸುತ್ತಿರುವ ಕಾರ್ಮಿಕರು ತಯಾರಿಕಾ ಶಕ್ತಿಗೆ ಸಾಕ್ಷಿಯಾಗಿದ್ದಾರೆ ಎಂದು ನಿಂಬಾಳ್ಕರ್ ತಿಳಿಸಿದರು.

'ಇಡೀ ಸ್ತಬ್ಧಚಿತ್ರದ ಆಕರ್ಷಣೆಯ ಕೇಂದ್ರಬಿಂದುವಾಗಿ ಕೊನೆಯಲ್ಲಿ ಮಿನುಗುತ್ತಿರುವ ಮೈಕ್ರೋಚಿಪ್ ಹಾಗೂ ಬಂಗಾರದ ಬಣ್ಣದ ಸರ್ಕಿಟ್‌ಗಳ ಮಧ್ಯೆ ರೋಬೋಟ್‌ನ ಮುಖವನ್ನು ಸಾಂಕೇತಿಕವಾಗಿ ಚಿತ್ರಿಸಲಾಗಿದೆ. ಇದು ಪರಂಪರೆಯಿಂದ ಪ್ರಗತಿಯತ್ತ, ಮಣ್ಣಿನಿಂದ ಯಂತ್ರಗಳತ್ತ ಸಾಗುತ್ತಿರುವ ಕರ್ನಾಟಕದ ಆತ್ಮನಿರ್ಭರ ಪಯಣದ ಸಾರವಾಗಿದೆ ಎಂದರು.

ರಾಜ್ಯದ ಸ್ತಬ್ಧಚಿತ್ರ

ಇನ್‌ಕ್ಯುಬೇಷನ್ ಸೆಂಟರ್‌ಗೆ ಚಾಲನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತದ ನವೋದ್ಯಮಗಳು ಜಾಗತಿಕ ಸವಾಲುಗಳನ್ನು ಎದುರಿಸುವ ಶಕ್ತಿಯನ್ನು ಹೊಂದಿವೆ' ಎಂದು ಉಪ ರಾಷ್ಟ್ರಪತಿ ಸಿ.ಪಿ.ರಾಧಾಕೃಷ್ಣನ್ ಹೇಳಿದರು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಒಂದಾದ ಸಿಎಂಆರ್ ತಾಂತ್ರಿಕ ಮಹಾವಿದ್ಯಾಲಯ 25 ವರ್ಷಗಳನ್ನು ಪೂರೈಸಿರುವ ಹಿನ್ನೆಲೆಯಲ್ಲಿ ಬುಧವಾರ ಆಯೋಜಿಸಿದ್ದ 'ರಜತ ಮಹೋತ್ಸವ'ದಲ್ಲಿ ಇನ್‌ಕ್ಯುಬೇಷನ್ ಸೆಂಟರ್ ಮತ್ತು ಸಿಲ್ವರ್ ಜುಬಿಲಿ ಆಡಿಟೋರಿಯಂಗೆ ಚಾಲನೆ ನೀಡಿ ಅವರು ಮಾತನಾಡಿದರು.

'ಕಾಲೇಜುಗಳು ಕೇವಲ ಕಲಿಕಾ ಕೇಂದ್ರಗಳಲ್ಲ, ಅವು ನಾವೀನ್ಯಗಳ ಪ್ರಯೋಗಾಲಯಗಳಾಗಬೇಕು. ವಿದ್ಯಾರ್ಥಿಗಳಲ್ಲಿ ರೂಪುಗೊಳ್ಳುವ ಜವಾಬ್ದಾರಿಯುತ ನಾಯಕತ್ವ ಅವರ ಯಶಸ್ಸಿನ ಗುಟ್ಟು' ಎಂದು ಹೇಳಿದರು.

'ಹವಾಮಾನ ಬದಲಾವಣೆ ಮತ್ತು ಎಐ ನೈತಿಕ ಬಳಕೆಯಂತಹ ಸವಾಲುಗಳನ್ನು ಎದುರಿಸುವಲ್ಲಿ ಭಾರತೀಯ ನವೋದ್ಯಮಗಳು ಜಾಗತಿಕ ನಾಯಕರಾಗಿ ಹೊರಹೊಮ್ಮಲಿವೆ. 2047ರ ವೇಳೆಗೆ ದೇಶ 'ವಿಕಸಿತ ಭಾರತ'ವಾಗುವ ಗುರಿ ಹೊಂದಿದೆ. ಯುವಶಕ್ತಿಯು ಈ ಕನಸನ್ನು ನನಸಾಗಿಸುವಲ್ಲಿ ಪ್ರಮುಖ ಪಾತ್ರ ವಹಿಸಲಿದೆ' ಎಂದು ಆಶಯ ವ್ಯಕ್ತಪಡಿಸಿದರು.

ರಾಜ್ಯಪಾಲ ಥಾವರ ಚಂದ್ ಗೆಹಲೋತ್ ಮಾತನಾಡಿ, 'ಶಿಕ್ಷಣ ಕ್ಷೇತ್ರದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಈ ನಿಟ್ಟಿನಲ್ಲಿ ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳ ಪಾತ್ರ ಪ್ರಮುಖವಾದದ್ದು. ಇಂದಿನ ಜಗತ್ತನ್ನು ಕೃತಕ ಬುದ್ಧಿಮತ್ತೆ, ಡೇಟಾ ಸೈನ್ಸ್ ಪರಿವರ್ತಿಸುತ್ತಿವೆ' ಎಂದರು.

ಸಿಎಂಆರ್ ಸಮೂಹ ಶಿಕ್ಷಣ ಸಂಸ್ಥೆಗಳು ಮತ್ತು ಸಿಎಂಆರ್ ವಿಶ್ವವಿದ್ಯಾಲಯದ ಅಧ್ಯಕ್ಷ ಕೆ.ಸಿ.ರಾಮಮೂರ್ತಿ, ಎನ್‌ಪಿಎಸ್ ಸಮೂಹ ಸಂಸ್ಥೆಗಳು, ಎನ್‌ಎಎಫ್‌ಎಲ್ ಮತ್ತು ಟಿಐಎಸ್‌ಬಿ ಅಧ್ಯಕ್ಷ ಕೆ.ಪಿ.ಗೋಪಾಲಕೃಷ್ಣ ಅವರು ಪಾಲ್ಗೊಂಡಿದ್ದರು.

ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಸಿಎಂಆರ್ ಐಟಿಯಲ್ಲಿ ವ್ಯಾಸಂಗ ಮಾಡಿ ದೇಶ-ವಿದೇಶಗಳಲ್ಲಿ ನವೋದ್ಯಮಿಗಳಾಗಿ ಸಾಧನೆ ಮಾಡಿರುವ ಹಳೆಯ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು.

ಸಿಎಂಆರ್ ವಿಶ್ವವಿದ್ಯಾಲಯದ ಕುಲಾಧಿಪತಿ ಡಾ. ಸಬಿತಾ ರಾಮಮೂರ್ತಿ ಅವರು 'ಮಾದಕ ದ್ರವ್ಯ ವ್ಯಸನಗಳನ್ನು ತ್ಯಜಿಸುವ ಜಾಗೃತಿ ಅಭಿಯಾನ'ದ ಪ್ರಮಾಣ ವಚನ ಬೋಧಿಸಿದರು.

ಸಿಎಂಆರ್ ಜ್ಞಾನಧಾರ ಟ್ರಸ್ಟ್ ಕಾರ್ಯದರ್ಶಿ ಕೆ.ಸಿ.ಜಗನ್ನಾಥ್ ರೆಡ್ಡಿ, ಸಿಇಒ ಹಾಗೂ ಸಮಕುಲಪತಿ ಜಯದೀಪ್ ಕೆ.ಆರ್.ರೆಡ್ಡಿ, ಏಕ್ಯಾ ಸಮೂಹ ಶಾಲೆಗಳ ಸಂಸ್ಥಾಪಕಿ ತ್ರಿಸ್ತಾ ರಾಮಮೂರ್ತಿ, ಪ್ರಾಂಶುಪಾಲ ಸಂಜಯ್ ಜೈನ್ ಹಾಗೂ ಉಪ ಪ್ರಾಂಶುಪಾಲ ಬಿ. ನರಸಿಂಹ ಮೂರ್ತಿ ಉಪಸ್ಥಿತರಿದ್ದರು.

ಸಿಎಂಆರ್ ಶಿಕ್ಷಣ ಸಂಸ್ಥೆ

ಸಿಎಂಆರ್ ಇನ್‌ಕ್ಯುಬೇಷನ್ ಸೆಂಟರ್‌ಗೆ ಸಿ.ಪಿ.ರಾಧಾಕೃಷ್ಣನ್ ಚಾಲನೆ ನೀಡಿದರು. ಸಬಿತಾ ರಾಮಮೂರ್ತಿ, ಸಿ.ಕೆ. ರಾಮಮೂರ್ತಿ, ಥಾವರಚಂದ್ ಗೆಹಲೋತ್ ಉಪಸ್ಥಿತರಿದ್ದರು

ಶುಕ್ರವಾರ, ಜನವರಿ 23, 2026| ₹ 7.00
prajavani.net prajavani
www.prajavani.net

ಪ್ರಜಾ ವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಎಂಟರಘಟ್ಟಕ್ಕೆ ಸಿಂಧು

ಭಾರತದ ಪಿ.ವಿ.ಸಿಂಧು ಅವರು ಗುರುವಾರ ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು

ಶಸ್ತ್ರಾಸ್ತ್ರ ಪ್ರದರ್ಶನ

ಅಗರ್ತಲಾದಲ್ಲಿ ನಡೆದ ಸೇನಾ ಶಸ್ತ್ರಾಸ್ತ್ರಗಳ ಪ್ರದರ್ಶನದಲ್ಲಿ ವಿದ್ಯಾರ್ಥಿಯೊಬ್ಬ ಉಪಕರಣವನ್ನು ಕುತೂಹಲದಿಂದ ವೀಕ್ಷಿಸಿದ ಕ್ಷಣ

ಶ್ರೀ ನರೇಂದ್ರಮೋದಿ
ಸನ್ಮಾನ್ಯ ಪ್ರಧಾನಮಂತ್ರಿಗಳು

ಸತ್ಯಮೇವ ಜಯತೆ

ವಸತಿ ಇಲಾಖೆ
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪಮುಖ್ಯಮಂತ್ರಿಗಳು

ವಸತಿರಹಿತರ ಕನಸಿನ ಸೂರಿಗೆ ಆಸರೆಯ ಬೆಳಕಾದ ಗ್ಯಾರಂಟಿ ಸರ್ಕಾರ

ವಸತಿ ರಹಿತರೆಲ್ಲರೂ ತಲೆಯ ಮೇಲೊಂದು ಸ್ವಂತ ಸೂರು ಹೊಂದಿ ನೆಮ್ಮದಿಯ ಜೀವನ ಸಾಗಿಸುವಂತಾಗಲು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯು ನಿರಂತರವಾಗಿ ಶ್ರಮಿಸುತ್ತಿದೆ. ರಾಜ್ಯಾದ್ಯಂತ ನಗರ, ಪಟ್ಟಣ ಪ್ರದೇಶ ವ್ಯಾಪ್ತಿಯಲ್ಲಿ ಜನವಸತಿಗೆ ಸೂಕ್ತವಾದ ವಿಶಾಲ ಜಾಗಗಳಲ್ಲಿ ವಸತಿ ಸಮುಚ್ಚಯ ನಿರ್ಮಿಸಿ ಅರ್ಹ ಫಲಾನುಭವಿಗಳಿಗೆ ಹಂಚಿಕೆ ಮಾಡಿ, ಅವರ ಕನಸನ್ನು ನನಸಾಗಿಸುತ್ತಿದೆ.

ಮಾನ್ಯ ವಸತಿ ಸಚಿವರಾದ **ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್‌ರವರು** ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿಯ ಮಾನ್ಯ ಅಧ್ಯಕ್ಷರಾದ **ಶ್ರೀ ಪ್ರಸಾದ್ ಅಬ್ಬಯ್ಯ** ಅವರೊಂದಿಗೆ ಹುಬ್ಬಳ್ಳಿಯಲ್ಲಿ ನಿರ್ಮಾಣಗೊಂಡಿರುವ ಮನೆಗಳ ಪರಿವೀಕ್ಷಣೆ

ಸನ್ಮಾನ್ಯ ಮುಖ್ಯಮಂತ್ರಿಯವರ ವಿಶೇಷ ಅನುದಾನದಲ್ಲಿ ಪೂರ್ಣಗೊಂಡಿರುವ ಪ್ರಧಾನಮಂತ್ರಿ ಆವಾಸ್ ಯೋಜನೆಯಡಿಯಲ್ಲಿ ಮಂಡಳಿ ವತಿಯಿಂದ ರಾಜ್ಯಾದ್ಯಂತ ನಿರ್ಮಾಣಗೊಳ್ಳುತ್ತಿರುವ 180253 ಮನೆಗಳ ಪೈಕಿ 2ನೇ ಹಂತದ

42345 ಮನೆಗಳ ಲೋಕಾರ್ಪಣೆ

ಹಾಗೂ

ಮಂಡಳಿಯ ಸುವರ್ಣ ಮಹೋತ್ಸವದ ಅಂಗವಾಗಿ

ಮನೆ ಹಂಚಿಕೆ ಪತ್ರ / ಹಕ್ಕುಪತ್ರಗಳ ವಿತರಣಾ ಸಮಾರಂಭ

ದಿನಾಂಕ: 24.01.2026, ಶನಿವಾರ
ಸಮಯ: ಬೆಳಿಗ್ಗೆ 11:00 ಗಂಟೆಗೆ
ಸ್ಥಳ: ಮಂಟೂರು ರಸ್ತೆ, ಹುಬ್ಬಳ್ಳಿ.

ಶ್ರೀ ಸಿದ್ದರಾಮಯ್ಯ

ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ, ಇವರು ಉದ್ಘಾಟನೆ ಮತ್ತು ಲೋಕಾರ್ಪಣೆ ಮಾಡಲಿದ್ದಾರೆ.

ಘನ ಉಪಸ್ಥಿತಿ

ಶ್ರೀ ಪ್ರಲ್ಹಾದ ಜೋಷಿ
ಮಾನ್ಯ ಕೇಂದ್ರ ಗ್ರಾಹಕ ವ್ಯವಹಾರಗಳು, ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಹೊಸ ಹಾಗೂ ನವೀಕರಿಸಬಹುದಾದ ಇಂಧನ ಸಚಿವರು, ಭಾರತ ಸರ್ಕಾರ

ಡಾ॥ ಮಲ್ಲಿಕಾರ್ಜುನ್ ಖರ್ಗೆ
ಮಾನ್ಯ ವಿರೋಧ ಪಕ್ಷದ ನಾಯಕರು, ರಾಜ್ಯಸಭೆ

ಶ್ರೀ ರಾಹುಲ್ ಗಾಂಧಿ
ಮಾನ್ಯ ವಿರೋಧ ಪಕ್ಷದ ನಾಯಕರು, ಲೋಕಸಭೆ

ಮನೆ ಹಂಚಿಕಾತಿ / ಹಕ್ಕುಪತ್ರಗಳ ವಿತರಣೆ

ಶ್ರೀ ಡಿ.ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಭಾರಿ ಮತ್ತು ಮಧ್ಯಮ ನೀರಾವರಿ ಹಾಗೂ ಬೆಂಗಳೂರು ನಗರಾಭಿವೃದ್ಧಿ ಸಚಿವರು, ಕರ್ನಾಟಕ ಸರ್ಕಾರ

ಉಪಸ್ಥಿತಿ

ಶ್ರೀ ಬಸವರಾಜ ಹೊರಟ್ಟಿ
ಮಾನ್ಯ ಸಭಾಪತಿಗಳು
ಕರ್ನಾಟಕ ವಿಧಾನ ಪರಿಷತ್

ಅಧ್ಯಕ್ಷತೆ

ಶ್ರೀ ಬಿ.ಝಡ್. ಜಮೀರ್ ಅಹಮದ್ ಖಾನ್
ಮಾನ್ಯ ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಹಾಗೂ ವಿಜಯನಗರ ಹಾಗೂ ಬಳ್ಳಾರಿ ಜಿಲ್ಲಾ ಉಸ್ತುವಾರಿ ಸಚಿವರು, ಕರ್ನಾಟಕ ಸರ್ಕಾರ

ಮುಖ್ಯ ಅತಿಥಿಗಳು

ಶ್ರೀ ಸಂತೋಷ ಎಸ್. ಲಾಡ್
ಮಾನ್ಯ ಕಾರ್ಮಿಕ ಸಚಿವರು ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರು ಕರ್ನಾಟಕ ಸರ್ಕಾರ

ಶ್ರೀ ಆರ್. ಅಶೋಕ
ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನಸಭೆ

ಶ್ರೀ ಛಲವಾದಿ ಟಿ. ನಾರಾಯಣಸ್ವಾಮಿ
ಮಾನ್ಯ ವಿರೋಧ ಪಕ್ಷದ ನಾಯಕರು ಕರ್ನಾಟಕ ವಿಧಾನ ಪರಿಷತ್

ಶ್ರೀ ಸಲೀಂ ಅಹ್ಮದ್
ಸರ್ಕಾರದ ಮಾನ್ಯ ಮುಖ್ಯ ಸಚೇತಕರು ಕರ್ನಾಟಕ ವಿಧಾನ ಪರಿಷತ್

ಪ್ರಾಸ್ತಾವಿಕ ನುಡಿ ಮತ್ತು ಮಂಡಳಿಯ ಸುವರ್ಣ ಮಹೋತ್ಸವದ ಅಂಗವಾಗಿ ಸ್ಮರಣಿಕೆ ವಿತರಣೆ

ಶ್ರೀ ಪ್ರಸಾದ್ ಅಬ್ಬಯ್ಯ
ಮಾನ್ಯ ಅಧ್ಯಕ್ಷರು, ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಹಾಗೂ ಶಾಸಕರು, ಹುಬ್ಬಳ್ಳಿ-ಧಾರವಾಡ ಪೂರ್ವ ವಿಧಾನಸಭಾ ಕ್ಷೇತ್ರ

ಸೌಜನ್ಯದ ಉಪಸ್ಥಿತಿ

ಡಾ. ಶಾಲಿನಿ ರಜನೀಶ್, ಭಾಆಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ

ರಾಜ್ಯದ ಎಲ್ಲಾ ಮಾನ್ಯ ಸಚಿವರುಗಳು, ಮಾನ್ಯ ಸಂಸದರು (ಲೋಕಸಭೆ/ರಾಜ್ಯಸಭೆ), ಮಾನ್ಯ ಶಾಸಕರು (ವಿಧಾನಸಭೆ/ವಿಧಾನಪರಿಷತ್), ಎಲ್ಲಾ ಆಯೋಗ / ನಿಗಮ ಮಂಡಳಿಗಳ ಅಧ್ಯಕ್ಷರುಗಳು, ಉಪಾಧ್ಯಕ್ಷರು ಮತ್ತು ಸದಸ್ಯರು ಹಾಗೂ ಸ್ಥಳೀಯ ಸಂಸ್ಥೆಗಳ ಚುನಾಯಿತ ಜನಪ್ರತಿನಿಧಿಗಳು ಈ ಸಮಾರಂಭದಲ್ಲಿ ಉಪಸ್ಥಿತರಿರುವರು.

ಸರ್ವರಿಗೂ ಆದರದ ಸುಸ್ವಾಗತ

ಮೋಹನ್ ರಾಜ್. ಕೆ.ಪಿ., ಭಾ.ಆ.ಸೇ.
ಸರ್ಕಾರದ ಕಾರ್ಯದರ್ಶಿಗಳು,
ವಸತಿ ಇಲಾಖೆ

ಪರಶುರಾಮ್ ಶಿನ್ನಾಳ್ಕರ್, ಕ.ಆ.ಸೇ. (ಸೂಪರ್‌ಟೈಮ್ ಸ್ಕೇಲ್)
ವ್ಯವಸ್ಥಾಪಕ ನಿರ್ದೇಶಕರು
ರಾಜೀವ್ ಗಾಂಧಿ ವಸತಿ ನಿಗಮ ನಿ., ಬೆಂಗಳೂರು

ರಾಘವೇಂದ್ರ. ಟಿ., ಕ.ಆ.ಸೇ. (ಸೂಪರ್‌ಟೈಮ್ ಸ್ಕೇಲ್)
ಆಯುಕ್ತರು,
ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ, ಬೆಂಗಳೂರು

ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ನಂ. 55, ಅಭಯ ಕಾಂಪ್ಲೆಕ್ಸ್, ರಿಸಲ್ದಾರ್ ರಸ್ತೆ, ಶೇಷಾದ್ರಿಪುರಂ, ಬೆಂಗಳೂರು – 560 020

ಕೇಂದ್ರದ ದಮನಕಾರಿ ನೀತಿ: ಪ್ರಗತಿಗೆ ಅಡ್ಡಿ

ರಾಜ್ಯಕ್ಕೆ ₹1.25 ಲಕ್ಷ ಕೋಟಿ ನಷ್ಟ ● ಕರ್ನಾಟಕಕ್ಕೆ ಘೋರ ಅನ್ಯಾಯ ● ರಾಜ್ಯಪಾಲರ ಲಿಖಿತ ಭಾಷಣದಲ್ಲಿ ಟೀಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರ್ಥಿಕ ಮತ್ತು ನೀತಿಯ ವಿಚಾರಗಳಲ್ಲಿ ದಮನಕಾರಿ ಪರಿಸ್ಥಿತಿಯನ್ನು ಕರ್ನಾಟಕ ಎದುರಿಸುತ್ತಿದೆ. ರಾಜ್ಯವನ್ನು ಆರ್ಥಿಕವಾಗಿ ದಮನಿಸಿದರೆ ಅದರ ಪರಿಣಾಮ ಇಡೀ ದೇಶದ ಮೇಲೆ ಆಗುತ್ತದೆ. ಇದನ್ನು ಒಕ್ಕೂಟ (ಕೇಂದ್ರ) ಸರ್ಕಾರ ಗಂಭೀರವಾಗಿ ಪರಿಗಣಿಸಬೇಕು' ಎಂದು ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ, ರಾಜ್ಯಪಾಲರ ಭಾಷಣದ ಮೂಲಕ ಆಗ್ರಹಿಸಿದೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಭಾಷಣ ಪ್ರತಿಯಲ್ಲಿನ ಕೇವಲ ಎರಡು ಸಾಲುಗಳನ್ನು ಓದಿ ತೆರಳಿದರು. ಆ ಬಳಿಕ, ವಿಧಾನಸಭಾ ಕಾರ್ಯದರ್ಶಿ ಎಂ.ಕೆ.ವಿಶಾಲಾಕ್ಷಿ ಅವರು ಭಾಷಣದ ಪ್ರತಿಯನ್ನು ಸದನದಲ್ಲಿ ಮಂಡಿಸಿದರು.

ಭಾಷಣದ ಮುಖ್ಯಾಂಶಗಳು: ತೆರಿಗೆ ಪಾಲು, ಕೇಂದ್ರ ಪುರಸ್ಕೃತ ಯೋಜನೆಗಳು, ಕೇಂದ್ರದ ಯೋಜನೆ ಗಳು, ವಿಶೇಷ ಯೋಜನೆಗಳು ಮುಂತಾದವುಗಳಲ್ಲಿ ಕರ್ನಾಟಕ ಅನ್ಯಾಯಗಳಿಗೆ ತುತ್ತಾಗಿದೆ. ದೇಶದ ಆರ್ಥಿಕತೆಯಲ್ಲಿ ರಾಜ್ಯ ಚಾಲಕ ಸ್ಥಾನದಲ್ಲಿದೆ. 15ನೇ ಹಣಕಾಸು ಆಯೋಗದ ಅವಧಿಯಲ್ಲಿ ಸುಮಾರು ₹1.25 ಲಕ್ಷ ಕೋಟಿಗಳಷ್ಟು ಬೃಹತ್ ಪ್ರಮಾಣದ ಸಂಪನ್ಮೂಲಗಳು ರಾಜ್ಯಕ್ಕೆ ಸಿಗದೆ ವಂಚನೆಯಾಗಿದೆ.

ನರೇಗಾ ಯೋಜನೆ ಕಾಯ್ದೆಯನ್ನು ಕೇಂದ್ರ ಸರ್ಕಾರ ರದ್ದುಗೊಳಿಸಿದೆ. ಆ ಮೂಲಕ ಗ್ರಾಮೀಣ ಪ್ರದೇಶದ ಕೂಲಿ ಕಾರ್ಮಿಕರು, ಸಣ್ಣ ರೈತರ, ಮಹಿಳೆಯರ ಉದ್ಯೋಗದ ಮತ್ತು ನಿರುದ್ಯೋಗದ ಭತ್ಯೆ ಹಕ್ಕನ್ನು ಕಸಿದುಕೊಂಡಿದೆ. ಗ್ರಾಮೀಣ ಭಾರತದ ಅಭಿವೃದ್ಧಿ ಪರ್ವದ ಬೃಹತ್ ಅಧ್ಯಾಯವಾಗಿದ್ದ ನರೇಗಾ ಕಾಯ್ದೆಯ ರದ್ದತಿ ಮೂಲಕ ಗ್ರಾಮೀಣ ಬದುಕನ್ನು ದುರ್ಬಲಗೊಳಿಸಲಾಗಿದೆ.

ನರೇಗಾ ಯೋಜನೆಯಡಿ ರಾಜ್ಯವು ಕಳೆದ 20 ವರ್ಷಗಳಲ್ಲಿ 76.89 ಲಕ್ಷ ಕಾಮಗಾರಿಗಳನ್ನು ₹61.03 ಸಾವಿರ ಕೋಟಿ ವೆಚ್ಚದಲ್ಲಿ ಕೈಗೊಂಡಿದೆ. 182.5 ಕೋಟಿ ಮಾನವ ದಿನಗಳಷ್ಟು ಉದ್ಯೋಗವನ್ನು ಸೃಜಿಸಿದೆ. ನರೇಗಾ ಕಾಯ್ದೆಯು ಖಾತ್ರಿ ಮಾಡಿದ್ದ ಉದ್ಯೋಗದ ಖಾತ್ರಿಯನ್ನು ಹೊಸ ವಿಬಿ ಗ್ರಾಮ್ ಜಿ (ವಿಬಿ ಜಿ ರಾಮ್ ಜಿ) ಕಾಯ್ದೆಯು ಕಿತ್ತುಕೊಂಡಿದೆ. ಯಾವುದೇ ಪಂಚಾಯಿತಿಯಲ್ಲಿ ಉದ್ಯೋಗ ನೀಡಬೇಕೆಂದು ಅರ್ಜಿ ಹಾಕಿದ ಪ್ರತಿಯೊಬ್ಬರಿಗೂ ಉದ್ಯೋಗ ನೀಡಬೇಕು ಎಂದು ನರೇಗಾ ಕಾಯ್ದೆ ಹೇಳಿದೆ. ಬೇಡಿಕೆ ಆಧರಿಸಿ ಉದ್ಯೋಗ ನೀಡಬೇಕೆಂಬ ತತ್ವವನ್ನು ಧ್ವಂಸ ಮಾಡಿ ಪೂರೈಕೆ ಆಧಾರಿತ ಯೋಜನೆ ಮಾಡಲಾಗಿದೆ.

ಗ್ರಾಮಸಭೆಗಳಿಗಿದ್ದ ಅಧಿಕಾರವನ್ನು ಕೇಂದ್ರ ಸರ್ಕಾರದ ಮಾನದಂಡಗಳ ಮೂಲಕ ಸಂಪೂರ್ಣವಾಗಿ ನಿರ್ಬಂಧಿಸಲಾಗಿದೆ. ಕೇಂದ್ರದ ಈ ಕ್ರಮಗಳು ರಾಷ್ಟ್ರದ ಹಿತಾಸಕ್ತಿಯನ್ನು ವಿನಾಶದ ಅಂಚಿಗೆ ದೂಡುವ ಪ್ರಗತಿ ವಿರೋಧಿ ಕ್ರಮವಾಗಿದೆ. ಹೊಸ ಕಾಯ್ದೆಯು ಉದ್ಯೋಗ ಅರಸಿ ದೊಡ್ಡ ಪಟ್ಟಣಗಳಿಗೆ ಗುಳೆ ಹೋಗುವ ಅಥವಾ ವಲಸೆ ಹೋಗುವ ವ್ಯವಸ್ಥೆಯನ್ನು ಪುನರ್ ಸ್ಥಾಪಿಸುತ್ತದೆ. ಆದ್ದರಿಂದ ಇದನ್ನು ಪ್ರಬಲವಾಗಿ ವಿರೋಧಿಸುತ್ತೇವೆ.

ಹೊಸ ಕಾಯ್ದೆ ಜಾರಿಗೊಳಿಸುವಾಗ ರಾಜ್ಯಗಳ ಅಭಿಪ್ರಾಯ ಪಡೆಯಬೇಕಾಗಿತ್ತು. ಕೇಂದ್ರ ಪುರಸ್ಕೃತ ಯೋಜನೆಗಳಲ್ಲಿ ರಾಜ್ಯಗಳ ಪಾಲು ಇರುತ್ತದೆ. ಹೀಗಿರುವಾಗ ರಾಜ್ಯಗಳನ್ನು ಸಂಪರ್ಕಿಸದೇ ಜಾರಿಗೊಳಿಸಿರುವುದು ಸಂವಿಧಾನ ಬಾಹಿರ ನಡೆ.

ಕಾರ್ಮಿಕ ಕೇಂದ್ರಿತ ಹಕ್ಕುಗಳನ್ನು ಮೊಟಕುಗೊಳಿಸಿ, ಅವರನ್ನು ಗುತ್ತಿಗೆದಾರರ ಅಧೀನಕ್ಕೆ ನೀಡಲಾಗುತ್ತಿದೆ. ಬೆಲೆ ಏರಿಕೆ, ಹಣದುಬ್ಬರಗಳನ್ನು ಆಧರಿಸಿ ಕೂಲಿಯನ್ನು ಪರಿಷ್ಕರಿಸುತ್ತಿದ್ದ ಅವಕಾಶಗಳೂ ಹೊಸ ಕಾಯ್ದೆಯಲ್ಲಿ ಕ್ಷೀಣಿಸಿವೆ. ಇದರಿಂದ ಬಡ ಕೂಲಿಕಾರರಿಗೆ ಸಾಮಾಜಿಕ ಭದ್ರತೆ ಇಲ್ಲವಾಗಿದೆ.

ಯೋಜನೆಯಿಂದ ಮಹಾತ್ಮ ಗಾಂಧಿಯವರ ಹೆಸರು ತೆಗೆಯಲಾಗಿದೆ. ರಾಜ್ಯ ಸರ್ಕಾರ ಶೇ 40ರಷ್ಟು ಅನುದಾನ ನೀಡದಿದ್ದರೆ, ಕೇಂದ್ರವೂ ಅನುದಾನ ನೀಡುವುದಿಲ್ಲ. ಇದರಿಂದ ಯೋಜನೆಯು ನಿಧಾನವಾಗಿ ಅವಸಾನದ ಹಾದಿ ಹಿಡಿಯುತ್ತದೆ. ಆದ್ದರಿಂದ ಕೇಂದ್ರ ಸರ್ಕಾರ ತಂದಿರುವ ಈ ಕಾನೂನನ್ನು ತಕ್ಷಣ ರದ್ದುಪಡಿಸಿ, ನರೇಗಾ ಯೋಜನೆಯನ್ನು ಮರು ಸ್ಥಾಪಿಸಬೇಕು.

ಕ್ರಾಂತಿಕಾರಿ ಬದಲಾವಣೆ ತಂದ ಗ್ಯಾರಂಟಿ

ಗ್ರಾಹಕ ಬೆಲೆ ಸೂಚ್ಯಂಕದ ಪ್ರಕಾರ ದೇಶದ ಬಹುತೇಕ ರಾಜ್ಯಗಳ ಜನರ ಖರೀದಿ ಶಕ್ತಿಯು ನಿರೀಕ್ಷಿತ ಮಟ್ಟದಲ್ಲಿ ಇಲ್ಲ. ಆದರೆ, ಕರ್ನಾಟಕದ ಜನರ ಖರೀದಿ ಶಕ್ತಿಯು ನಿಗದಿತ ಆರ್ಥಿಕ ಮಾನದಂಡಗಳಿಗೆ ಅನುಗುಣವಾಗಿದೆ ಎಂದು ರಾಜ್ಯಪಾಲರ ಭಾಷಣದಲ್ಲಿ ಉಲ್ಲೇಖಿಸಲಾಗಿದೆ.

ಯೂನಿವರ್ಸಲ್ ಬೇಸಿಕ್ ಇನ್‌ಕಂ ಎಂಬ ತತ್ವವನ್ನಾಧರಿಸಿ ಕ್ರಾಂತಿಕಾರಕ ಮಾದರಿಯಲ್ಲಿ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳೇ ಕಾರಣ. ಅಲ್ಲದೇ, ರಾಜ್ಯದಲ್ಲಿ ಆಹಾರ ಭದ್ರತೆ, ಬಡತನ ನಿರ್ಮೂಲನೆ ಮತ್ತು ಮಹಿಳಾ ಸಬಲೀಕರಣದಲ್ಲಿ ಕ್ರಾಂತಿಕಾರಿ ಬದಲಾವಣೆಗಳಾಗಿರುವುದನ್ನು ದೃಢಪಡಿಸಿವೆ. ಜನರು ಗ್ಯಾರಂಟಿ ಯೋಜನೆಗಳ ಮೂಲಕ ಪಡೆಯುವ ಹಣವನ್ನು ಪೌಷ್ಟಿಕ ಆಹಾರ ಔಷಧಗಳು ಮತ್ತು ಮಕ್ಕಳ ಶಿಕ್ಷಣಕ್ಕಾಗಿ ವಿನಿಯೋಗಿಸುತ್ತಿದ್ದಾರೆ.

ಬ್ಯಾಂಕ್ ಖಾತೆಗಳಿಗೆ ಸರ್ಕಾರದಿಂದ ನಗದು ವರ್ಗಾವಣೆ ಪಡೆದ ಕುಟುಂಬಗಳ ಪ್ರಮಾಣ 2022ರಲ್ಲಿ ಶೇ 9.3ರಷ್ಟಿದ್ದದ್ದು 2024ರ ವೇಳೆಗೆ ಶೇ 72.7ಕ್ಕೆ ಏರಿಕೆಯಾಗಿದೆ. ಇದು ಗ್ಯಾರಂಟಿ ಯೋಜನೆಗಳ ಸಾರ್ಥಕತೆಗೆ ಸಾಕ್ಷಿ.

'ಶಕ್ತಿ' ಯೋಜನೆಯು ಮಹಿಳೆಯ ಬದುಕಿನಲ್ಲಿ ಅಪಾರ ಚೈತನ್ಯ ತಂದಿದೆ. ಅಜೀಂ ಪ್ರೇಮ್‌ಜಿ ವಿಶ್ವವಿದ್ಯಾಲಯದ ಅಧ್ಯಯನದಂತೆ ಬೆಂಗಳೂರಿನ ಪ್ರಮುಖ ವಾಣಿಜ್ಯ ಪ್ರದೇಶಗಳೂ ಸೇರಿದಂತೆ ಅನೇಕ ಮಾರ್ಗಗಳಲ್ಲಿ ಪ್ರಯಾಣಿಸುವ ಮಹಿಳೆಯರ ಸಂಖ್ಯೆ ಪುರುಷರಿಗಿಂತ ಹೆಚ್ಚಾಗಿದ್ದು, ಇದು ನಗರದ ಚಲನಶೀಲತೆಯಲ್ಲಿ ಆದ ಪ್ರಮುಖ ಬದಲಾವಣೆ.

ಗ್ಯಾರಂಟಿ ಯೋಜನೆಗಳಿಂದ ಆದ ಉಳಿತಾಯದ ಹಣದಲ್ಲಿ ಬೇಳೆ ಕಾಳು, ತರಕಾರಿ, ಹಣ್ಣು, ಮೊಟ್ಟೆ ಮತ್ತು ಮಾಂಸ ಮುಂತಾದ ಗುಣಮಟ್ಟದ ಆಹಾರ ಪದಾರ್ಥಗಳನ್ನು ಖರೀದಿಸುತ್ತಿದ್ದಾರೆ.

ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಭಾಷಣ ಮಾಡಿದರು. ವಿಧಾನಸಭಾಧ್ಯಕ್ಷ ಯು.ಟಿ. ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಉಪಸ್ಥಿತರಿದ್ದರು

ಭಾಷಣದ ಸಾರ

- ಅಭಿವೃದ್ಧಿ, ಸಾಮಾಜಿಕ ನ್ಯಾಯ, ಹಣಕಾಸಿನ ಶಿಸ್ತು, ಪ್ರಾದೇಶಿಕ ನ್ಯಾಯ, ಜನಸ್ನೇಹಿ ಆಡಳಿತ, ಕಾನೂನು–ಸುವ್ಯವಸ್ಥೆ ಮುಂತಾದವುಗಳಲ್ಲಿ ಅಭೂತಪೂರ್ವ ಸಾಧನೆಗಳನ್ನು ಮಾಡುತ್ತಿದೆ. ಸರ್ಕಾರದ ಅಧೀನದ ಸಂಸ್ಥೆಗಳ ಕಾರ್ಯವೈಖರಿ, ಪೊಲೀಸ್, ನ್ಯಾಯ ವ್ಯವಸ್ಥೆ ಮುಂತಾದವುಗಳಲ್ಲಿ ಕರ್ನಾಟಕವು ಇಂದು ದೇಶದಲ್ಲಿ ಹಲವು ಮಾದರಿಗಳನ್ನು ಸೃಷ್ಟಿಸಿದೆ
- ಬೆಂಗಳೂರು ಮೆಟ್ರೊ ಹಂತ–3ರ 44.65 ಕಿ.ಮೀ ಯೋಜನೆಗೆ ಅನುಮೋದನೆ ಸಿಕ್ಕಿದೆ. ಇದರ ಅಂದಾಜು ವೆಚ್ಚ ₹15,611 ಕೋಟಿ. ಈ ಯೋಜನೆಯ ಭಾಗವಾಗಿ ಹೊಸಹಳ್ಳಿಯಿಂದ ಕಡಬಗೆರೆವರೆಗಿನ ಕಾರಿಡಾರ್‌ನಲ್ಲಿ ₹9,700 ಕೋಟಿ ವೆಚ್ಚದಲ್ಲಿ ದೇಶದ ಮೊದಲ ರಸ್ತೆ ಮತ್ತು ಮೆಟ್ರೊ ಒಳಗೊಂಡಿರುವ ಡಬಲ್ ಡೆಕರ್ ಯೋಜನೆಗೆ ಅನುಮೋದನೆ ನೀಡಲಾಗಿದೆ. ಸರ್ಜಾಪುರದಿಂದ ಹೆಬ್ಬಾಳದವರೆಗಿನ 36.59 ಕಿ.ಮೀ ಉದ್ದದ ಮೆಟ್ರೊ–3 ಎ ಯೋಜನೆಯ ವಿಸ್ತೃತ ಯೋಜನಾ ವರದಿ ಅನುಮೋದಿಸಿ ಕೇಂದ್ರಕ್ಕೆ ಸಲ್ಲಿಸಲಾಗಿದೆ
- ಪರಿಶಿಷ್ಟ ಜಾತಿಗಳ ಒಳಮೀಸಲಾತಿ ವಿಷಯವನ್ನು ಬಗೆಹರಿಸಲಾಗಿದೆ. ರಾಜ್ಯದ ಜನರ ಜಾತಿವಾರು ಸಮೀಕ್ಷೆ ನಡೆಸಿ ಅವರ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಾನಮಾನಗಳ ಸ್ಥಿತಿಗಳನ್ನು ಅಧ್ಯಯನ ಮಾಡಿ ನೀಡಿದ ವರದಿಯ ಆಧಾರದ ಮೇಲೆ ದಮನಿತ ಸಮುದಾಯಗಳ ಕಲ್ಯಾಣಗಳಿಗೆ ಬೇಕಾದ ಕ್ರಮಗಳನ್ನು ಕೈಗೊಂಡಿದೆ
- 2025–26ನೇ ಸಾಲಿನಲ್ಲಿ ಎಸ್‌ಸಿಎಸ್‌ಪಿ–ಟಿಎಸ್‌ಪಿ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾರ್ಯಕ್ರಮಗಳಿಗಾಗಿ ಒಟ್ಟು ₹42,018 ಕೋಟಿ ಅನುದಾನ ಒದಗಿಸಲಾಗಿದೆ

ಸಂವಿಧಾನವನ್ನು ಉಲ್ಲಂಘಿಸಿದ ರಾಜ್ಯಪಾಲರು: ಸಿದ್ದರಾಮಯ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಂವಿಧಾನ ವಿಧಿ 176 ಮತ್ತು 163ರಂತೆ ಸರ್ಕಾರ ಸಿದ್ಧಪಡಿಸಿರುವ ಭಾಷಣವನ್ನು ರಾಜ್ಯಪಾಲರು ಓದಲೇಬೇಕೆಂಬ ನಿಯಮವಿದೆ. ರಾಜ್ಯಪಾಲರು ಸಿದ್ಧಪಡಿಸಿದ ಭಾಷಣವನ್ನು ಓದುವಂತಿಲ್ಲ. ಹಾಗಿದ್ದರೂ ರಾಜ್ಯಪಾಲರು ಭಾಷಣ ಓದದೇ ಸಂವಿಧಾನವನ್ನು ಉಲ್ಲಂಘಿಸಿದ್ದಾರೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಸರ್ಕಾರ ಸಿದ್ಧಪಡಿಸಿರುವ ಭಾಷಣದ ಪ್ರತಿಯನ್ನು ಎಲ್ಲ ಶಾಸಕರು, ಪರಿಷತ್ ಸದಸ್ಯರಿಗೆ ವಿತರಿಸಲಾಗಿದೆ. ಈ ವಿಚಾರದ ಬಗ್ಗೆ ಸುಪ್ರೀಂ ಕೋರ್ಟ್‌ನಲ್ಲಿ ಮೊಕದ್ದಮೆ ಹೂಡುವ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲಾಗುವುದು' ಎಂದರು.

'ನರೇಗಾ ಕಾಯ್ದೆಯನ್ನು ರದ್ದುಪಡಿಸಿ, ವಿಬಿ ಜಿ ರಾಮ್ ಜಿ ಎಂಬ ಕಾಯ್ದೆಯನ್ನು ಕೇಂದ್ರ ಸರ್ಕಾರ ಹೊಸದಾಗಿ ರಚಿಸಿದೆ. ಆಡಳಿತ ಪಕ್ಷವಾಗಿ ಈ ಕಾಯ್ದೆಗೆ ನಮ್ಮ ವಿರೋಧವಿದ್ದು, ಈ ಕುರಿತ ವಿಚಾರಗಳನ್ನು ರಾಜ್ಯಪಾಲರ ಭಾಷಣದಲ್ಲಿ ಸೇರಿಸಲಾಗಿತ್ತು. ಆದರೆ, ವಿರೋಧ ಪಕ್ಷದವರು ಹೊಸ ಕಾಯ್ದೆಯನ್ನು ಉದ್ದೇಶಪೂರ್ವಕವಾಗಿ ಸಮರ್ಥಿಸಿಕೊಳ್ಳುತ್ತಿದ್ದಾರೆ' ಎಂದರು.

'ಹೊಸ ಕಾಯ್ದೆ ವಿರುದ್ಧ ನಮ್ಮ ಪಕ್ಷ, ಸರ್ಕಾರ ಇಡೀ ರಾಜ್ಯದಲ್ಲಿ ಹೋರಾಟ ಹಮ್ಮಿಕೊಂಡಿದೆ. ನರೇಗಾ ಕಾಯ್ದೆಯನ್ನು ಮರು ಸ್ಥಾಪಿಸುವುದು ಮತ್ತು ಹೊಸ ಕಾಯ್ದೆಯನ್ನು ರದ್ದುಗೊಳಿಸಬೇಕೆಂಬುದೇ ನಮ್ಮ ಉದ್ದೇಶ. ನಮ್ಮ ಪಕ್ಷ ಮತ್ತು ಸರ್ಕಾರದಲ್ಲಿ ಈ ಬಗ್ಗೆ ನಿರ್ಣಯ ಕೈಗೊಳ್ಳಲಾಗಿದೆ. ರಾಜ್ಯಪಾಲರು ಕೇಂದ್ರ ಸರ್ಕಾರದ ಕೈಗೊಂಬೆಯಂತೆ ವರ್ತಿಸಿದ್ದಾರೆ. ಕೇಂದ್ರ ಸರ್ಕಾರ ತನ್ನ ತಪ್ಪು ಮರೆಮಾಚಲು ರಾಜ್ಯಪಾಲರ ಕೈಯಲ್ಲಿ ಬೇರೆ ಭಾಷಣವನ್ನು ಓದಿಸಿದ್ದಾರೆ. ಇದು ಸಂವಿಧಾನ ಬಾಹಿರ ಕೃತ್ಯ. ರಾಜ್ಯಪಾಲರು ತಮ್ಮ ಕರ್ತವ್ಯವನ್ನು ಪಾಲಿಸಿಲ್ಲ' ಎಂದರು.

'ಗೂಂಡಾ ವರ್ತನೆ ವಿರುದ್ಧ ಕ್ರಮ ಕೈಗೊಳ್ಳಿ'

ಬೆಂಗಳೂರು: 'ವಿಧಾನಮಂಡಲದ ಇತಿಹಾಸದಲ್ಲಿಯೇ ಗುರುವಾರ (ಜ.22) ಅತ್ಯಂತ ಕರಾಳ ದಿನ. ಸದನದ ಗೌರವಕ್ಕೆ ಚ್ಯುತಿ ತರುವ ರೀತಿಯಲ್ಲಿ ಗೂಂಡಾ ವರ್ತನೆ ತೋರಿದ ಕಾಂಗ್ರೆಸ್ ಶಾಸಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸಭಾಧ್ಯಕ್ಷ ಯು.ಟಿ. ಖಾದರ್‌ಗೆ ಪತ್ರ ಬರೆದಿದ್ದೇನೆ' ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

'ರಾಜ್ಯಪಾಲರು ಭಾಷಣ ಮಂಡಿಸಿದ ನಂತರ ರಾಷ್ಟ್ರಗೀತೆಯನ್ನೂ ನುಡಿಸಲಿಲ್ಲ. ಅಲ್ಲದೆ, ಅವರನ್ನು ಗೌರವಯುತವಾಗಿ ಬೀಳ್ಕೊಡಲೂ ಇಲ್ಲ. ಇದು ಸಂವಿಧಾನ, ರಾಜ್ಯಪಾಲರ ಹುದ್ದೆ, ರಾಷ್ಟ್ರಗೀತೆಗೆ ಮಾಡಿರುವ ಘೋರ ಅಪಮಾನ' ಎಂದರು.

'ಕಾನೂನು ಸಚಿವ ಎಚ್.ಕೆ. ಪಾಟೀಲರು ಈ ಕೆಟ್ಟ ಸಂಪ್ರದಾಯಕ್ಕೆ ಮೇಲ್ಪಂಕ್ತಿ ಹಾಕಿಕೊಟ್ಟಿರುವುದು ನಿಜಕ್ಕೂ ನಾಚಿಕೆಗೇಡು. ಪಾಟೀಲರಿಗೆ ಆ ಸ್ಥಾನದಲ್ಲಿ ಒಂದು ಕ್ಷಣವೂ ಮುಂದುವರಿಯುವ ಅರ್ಹತೆ ಇಲ್ಲ' ಎಂದರು.

'ರಾಜ್ಯಪಾಲರು ತಮ್ಮ ಭಾಷಣವನ್ನು ಪೂರ್ತಿ ಓದದೆ ಕೇವಲ ಸಾಂಕೇತಿಕವಾಗಿ ಮಂಡಿಸಿ ಹೊರಟಿರುವುದು ಇದೇ ಮೊದಲಲ್ಲ. ರಾಜ್ಯಪಾಲರುಗಳಾಗಿದ್ದ ಖುರ್ಷಿದ್ ಆಲಂ ಖಾನ್ ಮತ್ತು ಎಚ್.ಆರ್. ಭಾರದ್ವಾಜ್ ಅವರೂ ಈ ರೀತಿ ಮಾಡಿರುವ ಉದಾಹರಣೆಗಳಿವೆ. ಅವರ ಭಾಷಣದ ನಂತರ ರಾಷ್ಟ್ರಗೀತೆ ಹಾಡಿ ಗೌರವಯುತವಾಗಿ ಬೀಳ್ಕೊಡಲಾಗಿತ್ತು' ಎಂದರು.

'ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರ ದುರ್ನಡತೆ ಕಾಂಗ್ರೆಸ್ ಪಕ್ಷದ ಸಂಸ್ಕೃತಿಗೆ ಕನ್ನಡಿ ಹಿಡಿದಂತಿತ್ತು' ಎಂದರು.

ನೀಲಿಚಿತ್ರ ವೀಕ್ಷಿಸಿದ ಬಿಜೆಪಿಯಿಂದ ಪಾಠ ಕಲಿಯಬೇಕಿಲ್ಲ: ಹರಿಪ್ರಸಾದ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸದನದಲ್ಲಿ ನೀಲಿ ಚಿತ್ರ ವೀಕ್ಷಿಸಿದ, ಬಟ್ಟೆ ಹರಿದುಕೊಂಡು ಕೈ ಕೈ ಮಿಲಾಯಿಸಿಕೊಂಡ ಮತ್ತು ಗೂಂಡಾಗಳಂತೆ ವರ್ತಿಸಿದ ಬಿಜೆಪಿಯವರಿಂದ ನಾವು ಪಾಠ ಕಲಿಯಬೇಕೆ' ಎಂದು ವಿಧಾನ ಪರಿಷತ್ತಿನ ಕಾಂಗ್ರೆಸ್ ಸದಸ್ಯ ಬಿ.ಕೆ.ಹರಿಪ್ರಸಾದ್ ಪ್ರಶ್ನಿಸಿದ್ದಾರೆ.

ವಿಧಾನ ಮಂಡಲದ ಜಂಟಿ ಅಧಿವೇಶನದಲ್ಲಿ ತಮ್ಮ ಭಾಷಣ ಮೊಟಕುಗೊಳಿಸಿ ರಾಜ್ಯಪಾಲರು ಹೊರನಡೆದ ನಂತರ ಬಿ.ಕೆ.ಹರಿಪ್ರಸಾದ್ ಅವರು ಸುದ್ದಿಗಾರರ ಜತೆ ಮಾತನಾಡಿದ್ದರು. 'ನೀವು ಭಾಷಣ ಮಾಡಲೇಬೇಕು ಎಂದು ನಾನು ರಾಜ್ಯಪಾಲರನ್ನು ಒತ್ತಾಯಿಸುತ್ತಿದ್ದ ವೇಳೆ ಕೆಲ ಕಿಡಿಗೇಡಿಗಳು ನನ್ನ ಬಟ್ಟೆ ಹರಿದಿದ್ದಾರೆ' ಎಂದು ಆರೋಪಿಸಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಬಿಜೆಪಿ ಶಾಸಕರು, 'ಹರಿಪ್ರಸಾದ್ ಗೂಂಡಾರೀತಿ ವರ್ತಿಸಿದ್ದಾರೆ. 'ಆ ದಿನಗಳು' ಅವರಿಗೆ ನೆನಪಾಗಿರಬೇಕು' ಎಂದು ಕಿಚಾಯಿಸಿದ್ದರು. ಇದಕ್ಕೆ 'ಎಕ್ಸ್‌'ನಲ್ಲಿ ತಿರುಗೇಟು ನೀಡಿರುವ ಹರಿಪ್ರಸಾದ್, 'ಸದನದ ಶಿಸ್ತು, ಘನತೆ ಮತ್ತು ಗೌರವದ ಬಗ್ಗೆ ಮಾತನಾಡಲು ಬಿಜೆಪಿಯವರಿಗೆ ಕಿಂಚಿತ್ತಾದರೂ ನೈತಿಕತೆ ಇದೆಯೇ' ಎಂದು ಪ್ರಶ್ನಿಸಿದ್ದಾರೆ.

'ರಾಜ್ಯದ ಜ್ವಲಂತ ಸಮಸ್ಯೆಗಳ ಬಗ್ಗೆ ಚರ್ಚೆ ನಡೆಸುವ ಸದನದಲ್ಲೇ ನೀಲಿ ಚಿತ್ರಗಳನ್ನು ವೀಕ್ಷಿಸಿ, ದೇಶದ ಜನರೆದುರು ರಾಜ್ಯದ ಮಾನ ಕಳೆದವರು ಯಾವ ಪಕ್ಷದವರು? ಸಭಾಪತಿಯವರ ಮುಖದ ಮೇಲೆ ಕಾಗದ ಪತ್ರಗಳನ್ನು ಹರಿದು ಬಿಸಾಕಿ ಅವಮಾನ ಮಾಡಿ ಸದನದಿಂದಲೇ ಉಚ್ಚಾಟಿತರಾದವರು ಯಾವ ಪಕ್ಷದವರು? ಇಂತಹ ಶಿಸ್ತು, ಸಂಸ್ಕಾರ, ಗೌರವ, ಘನತೆ ತಂದುಕೊಟ್ಟಿರುವ ಎಲ್ಲರೂ ನಮ್ಮ ಪಕ್ಷದವರೇ ಎಂದು ಎದೆ ತಟ್ಟಿ ಹೇಳುವ ಧೈರ್ಯ ಬಿಜೆಪಿಯವರಿಗೆ ಇದೆಯಾ' ಎಂದು ಸವಾಲು ಹಾಕಿದ್ದಾರೆ.

'ರಾಜ್ಯಪಾಲರು ರಾಜ್ಯದ ತೆರಿಗೆ ಹಣದಿಂದ ಅಧಿಕಾರ ಅನುಭವಿಸುತ್ತಿದ್ದಾರೆಯೇ ಹೊರತು, 'ನಾಗಪುರ'ದಲ್ಲಿನ ನೋಂದಣಿಯೇ ಆಗದ ಸಂಘಟನೆಗೆ ಬರುವ ಬಿಟ್ಟಿ ಹಣದಿಂದ ಅಲ್ಲ. ರಾಜ್ಯಪಾಲರ ಹುದ್ದೆಯನ್ನು ದುರುಪಯೋಗ ಪಡಿಸಿಕೊಂಡು, ರಾಜ್ಯ ರಾಜಕಾರಣದಲ್ಲೇ ಅತ್ಯಂತ ಕರಾಳ ದಿನ ಸೃಷ್ಟಿಸಿದ ಬಿಜೆಪಿ ನಾಯಕರಿಗೆ ಸಂವಿಧಾನದ ಮೌಲ್ಯಗಳ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ' ಎಂದಿದ್ದಾರೆ.

ಬಿಜೆಪಿಯಿಂದ ನೈತಿಕತೆ ಕಲಿಯುವ ದಾರಿದ್ರ್ಯ ನಮಗೆ ಬಂದಿಲ್ಲ. ರಾಜ್ಯಪಾಲರು ಸಂವಿಧಾನ ವಿರೋಧಿ ನಡೆಯನ್ನು ತೋರಿದರೆ, ನಾವು ಅದನ್ನು ಪ್ರತಿಭಟಿಸದೆ ಇರುವುದಿಲ್ಲ

ಬಿ.ಕೆ.ಹರಿಪ್ರಸಾದ್, ವಿಧಾನ ಪರಿಷತ್ತಿನಲ್ಲಿ ಕಾಂಗ್ರೆಸ್ ಸದಸ್ಯ

ಸರ್ಕಾರಿ ವೈದ್ಯರ ಅರ್ಜಿ: ಸರ್ಕಾರಕ್ಕೆ ನೋಟಿಸ್

ಬೆಂಗಳೂರು: ಸರ್ಕಾರಿ ಕೋಟಾದಡಿ 2024–25ನೇ ಸಾಲಿನಲ್ಲಿ ಎಂಬಿಬಿಎಸ್ ಪೂರ್ಣಗೊಳಿಸಿ ಗ್ರಾಮೀಣ ಭಾಗದ ಸರ್ಕಾರಿ ಆಸ್ಪತ್ರೆಗಳಲ್ಲಿ ಒಂದು ವರ್ಷದ ಕಡ್ಡಾಯ ಸೇವೆಗೆ ನಿಯೋಜನೆಗೊಂಡ ವೈದ್ಯರ ಪ್ರತಿ ತಿಂಗಳ ವೇತನ ಕಡಿತಗೊಳಿಸಿರುವುದನ್ನು ಪ್ರಶ್ನಿಸಲಾದ ಅರ್ಜಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರಕ್ಕೆ ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಉತ್ತರ ಕನ್ನಡ ಜಿಲ್ಲೆ ಮುಂಡಗೋಡ ತಾಲ್ಲೂಕು ಆಸ್ಪತ್ರೆಯಲ್ಲಿ ಸೇವೆ ಸಲ್ಲಿಸುತ್ತಿರುವ ಡಾ.ಶಶಿಕುಮಾರ್ ಶಿವರಾಮ್ ರಾಠೋಡ್ ಸೇರಿದಂತೆ ರಾಜ್ಯದ ವಿವಿಧ ಸರ್ಕಾರಿ ಆಸ್ಪತ್ರೆಗಳಲ್ಲಿ ಕಿರಿಯ ವೈದ್ಯರಾಗಿ ಸೇವೆ ಸಲ್ಲಿಸುತ್ತಿರುವ ಒಟ್ಟು 38 ಎಂಬಿಬಿಎಸ್ ಪದವೀಧರರು ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ಕೆಲ ಕಾಲ ಅರ್ಜಿದಾರರ ಪರ ವಾದ ಆಲಿಸಿದ ನ್ಯಾಯಪೀಠ, ಆರೋಗ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ ಮತ್ತು ಆಯುಕ್ತರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ನಾಲ್ಕು ವಾರಗಳಲ್ಲಿ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ವಿಚಾರಣೆ ಮುಂದೂಡಿತು.

ವಿಧಾನಸಭೆ: ಕಾಂಗ್ರೆಸ್– ಬಿಜೆಪಿ ವಾಕ್ಸಮರ

ರಾಜ್ಯಪಾಲರ ಭಾಷಣಕ್ಕೆ ಅಡ್ಡಿಪಡಿಸಿದರೆಂದು ಆರೋಪಿಸಿ ವಿರೋಧ ಪಕ್ಷದ ನಾಯಕ ಆರ್.ಅಶೋಕ ಮತ್ತು ಬಿಜೆಪಿಯ ವಿ.ಸುನಿಲ್‌ಕುಮಾರ್ ಅವರು ಕಾನೂನು ಸಚಿವ ಎಚ್.ಕೆ.ಪಾಟೀಲ ವಿರುದ್ಧ ಸಭಾಧ್ಯಕ್ಷ ಯು.ಟಿ.ಖಾದರ್ ಅವರಿಗೆ ನೋಟಿಸ್ ನೀಡಿದರೆ, ರಾಜ್ಯಪಾಲರು ರಾಷ್ಟ್ರಗೀತೆ ಮೊಳಗಿದಾಗ ನಿಲ್ಲದೇ, ಅಗೌರವ ತೋರಿ ಹೊರ ನಡೆದರು ಎಂದು ಎಚ್.ಕೆ.ಪಾಟೀಲ ಅವರು ರಾಜ್ಯಪಾಲರ ವಿರುದ್ಧ ಆರೋಪ ಮಾಡಿದರು. ಇದು ಆಡಳಿತ ಮತ್ತು ವಿರೋಧ ಪಕ್ಷಗಳ ಮಧ್ಯೆ ಭಾರಿ ವಾಕ್ಸಮರಕ್ಕೆ ಕಾರಣವಾಯಿತು. ರಾಜ್ಯಪಾಲರನ್ನು ಬೀಳ್ಕೊಟ್ಟ ಬಳಿಕ ಸದನ ಮತ್ತೆ ಸೇರಿತು. ಇತ್ತೀಚೆಗೆ ನಿಧನರಾದವರಿಗೆ ಸಂತಾಪ ಸೂಚನೆ ಬಳಿಕ ನಡೆದ ಚರ್ಚೆಯ ವೇಳೆ, ಕಲಾಪ ಗದ್ದಲದ ಗೂಡಾಯಿತು

'ಓಡಿ ಹೋದ ರಾಜ್ಯಪಾಲರು'



ಸದನದಲ್ಲಿ ರಾಷ್ಟ್ರಗೀತೆ ಮೊಳಗುವಾಗ ರಾಜ್ಯಪಾಲರು ನಿಲ್ಲದೇ ಓಡಿ ಹೋದರು. ಈ ಮೂಲಕ ಅವರು ರಾಷ್ಟ್ರಗೀತೆಗೆ ಅಪಮಾನ ಮಾಡಿದ್ದಾರೆ. ಅವರು ಕನ್ನಡ ನಾಡಿನ ಜನರಲ್ಲಿ ಕ್ಷಮೆ ಕೇಳಬೇಕು. ಸಂವಿಧಾನ ಕಾಪಾಡಬೇಕಾದವರಿಂದಲೇ ಅಗೌರವ ಆಗಿದೆ. ಸಚಿವ ಸಂಪುಟವು ಒಪ್ಪಿ ಕಳುಹಿಸಿದ ಭಾಷಣವನ್ನು ಓದದೇ ಇರುವುದು ಮತ್ತು ಅರ್ಧಕ್ಕೆ ಮೊಟಕುಗೊಳಿಸಿದ್ದು ಚುನಾಯಿತ ಸರ್ಕಾರಕ್ಕೆ ಮಾಡಿದ ಅಪಮಾನ.

ಎಚ್.ಕೆ.ಪಾಟೀಲ, ಕಾನೂನು ಸಚಿವ

'ಸದನ ಬುಲ್ಡೋಜ್ ಮಾಡಲು ಬಿಡಲ್ಲ'

ನೀವು (ಸಭಾಧ್ಯಕ್ಷರು) ಸದನವನ್ನು ಬುಲ್ಡೋಜ್ ಮಾಡಿಕೊಂಡು ಹೋಗಲು ಆಗಲ್ಲ. ನೋಟಿಸ್ ನೀಡಿರುವ ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ಅವಕಾಶ ನೀಡದೇ ಕಾನೂನು ಸಚಿವರಿಗೆ ಹೇಗೆ ಅವಕಾಶ ನೀಡಿದಿರಿ? ಕಾನೂನು ಸಚಿವರು ಸದನದ ನಿಯಮ ಉಲ್ಲಂಘಿಸಿ ರಾಜ್ಯಪಾಲರು ಮಾತನಾಡುವಾಗ ಅಡ್ಡಿಪಡಿಸಿದ್ದಾರೆ. ಇದು ಗಂಭೀರ ಲೋಪ. ಹುಬ್ಬಳ್ಳಿಯಲ್ಲಿ ರಾಷ್ಟ್ರಧ್ವಜ ಹಾರಿಸಲು ಬಿಡದ ಕಾಂಗ್ರೆಸ್‌ನವರಿಂದ ನಾವು ಪಾಠ ಹೇಳಿಸಿಕೊಳ್ಳಬೇಕಿಲ್ಲ. ವಿಧಾನಸೌಧದಲ್ಲಿ ಪಾಕಿಸ್ತಾನ್ ಜಿಂದಾಬಾದ್ ಎಂದು ಹೇಳಿದವರ ವಿರುದ್ಧ ಕ್ರಮ ತೆಗೆದುಕೊಳ್ಳದ ಕಾಂಗ್ರೆಸ್ ಸರ್ಕಾರಕ್ಕೆ ನಾಚಿಕೆ ಆಗಬೇಕು.

ವಿ. ಸುನಿಲ್ ಕುಮಾರ್, ಬಿಜೆಪಿ ಸದಸ್ಯ

'ಕನ್ನಡ ವಿರೋಧಿ ರಾಜ್ಯಪಾಲ'

ರಾಷ್ಟ್ರಗೀತೆಗೂ ಕಾಯದೇ ಎದ್ದು ಹೊರಟ ರಾಜ್ಯಪಾಲರು ಶಿಷ್ಟಾಚಾರ ಬದಿಗೊತ್ತಿ ರಾಷ್ಟ್ರಗೀತೆಯನ್ನು ಅವಮಾನಿಸಿದ್ದಾರೆ. ಈ ಮೂಲಕ ಬಿಜೆಪಿ ರಾಷ್ಟ್ರಗೀತೆಯ ವಿರೋಧಿ, ಸಂವಿಧಾನ ವಿರೋಧಿ, ಕನ್ನಡಿಗರ ವಿರೋಧಿ ಎನ್ನುವುದು ಜಗಜ್ಜಾಹೀರಾಗಿದೆ. ಅಸಡ್ಡೆಯಿಂದ ಕೂಡಿದ ನಾಲ್ಕು ಸಾಲಿನ ಮಾತು, ಸರ್ಕಾರದ ಭಾಷಣದ ತಿರಸ್ಕಾರವು ಸಂವಿಧಾನದ ಆಶಯಗಳ ಉಲ್ಲಂಘನೆ. ಆರ್‌ಎಸ್‌ಎಸ್ ಕಚೇರಿಯಲ್ಲಿ ರಾಷ್ಟ್ರಧ್ವಜ ಹಾರಿಸುತ್ತಾರೆಯೇ?

ಪ್ರಿಯಾಂಕ್ ಖರ್ಗೆ, ಸಚಿವ

'ರೂಲಿಂಗ್ ನೀಡುತ್ತೇನೆ'

ಸಂತಾಪ ಸೂಚನೆಗೂ ಮುನ್ನ ಕಾನೂನು ಸಚಿವರು ಮಾತನಾಡುತ್ತೇನೆ ಎಂದರು. ನಿಮಗೂ ಮಾತನಾಡಲು ಅವಕಾಶ ನೀಡುತ್ತೇನೆ. ನಾನು ತಾರತಮ್ಯ ಮಾಡುತ್ತಿಲ್ಲ. ರಾಜ್ಯಪಾಲರ ವಿಚಾರವನ್ನು ಸಚಿವರು ಹೇಳಿದ್ದಾರೆ, ಸಚಿವರು ರಾಜ್ಯಪಾಲರಿಗೆ ಅಡ್ಡಿಪಡಿಸಿದರು ಮತ್ತು ಶಾಸಕರು ರಾಜ್ಯಪಾಲರನ್ನು ಅಡ್ಡಗಟ್ಟಿ ಧಿಕ್ಕಾರ ಕೂಗಿದ್ದಾರೆ ಎಂದು ನೀವು ಹೇಳಿದ್ದೀರಿ. ಈ ಬಗ್ಗೆ ನಾನು ರೂಲಿಂಗ್ ನೀಡುತ್ತೇನೆ

ಯು.ಟಿ. ಖಾದರ್, ಸಭಾಧ್ಯಕ್ಷ

'ಅಗೌರವ ತೋರಿದವರಿಗೆ ಏನು ಶಿಕ್ಷೆ'

ಎಚ್.ಕೆ.ಪಾಟೀಲ ಅವರು ರಾಜ್ಯಪಾಲರ ಭಾಷಣಕ್ಕೆ ಅಡ್ಡಿ ಮಾಡಿ ಅಗೌರವ ತೋರಿದ್ದಾರೆ. ಈ ಸಂಬಂಧ ವಿಷಯ ಪ್ರಸ್ತಾಪಕ್ಕೆ ನಿಮಗೆ (ಸಭಾಧ್ಯಕ್ಷ) ನೋಟಿಸ್ ನೀಡಿದ್ದೇನೆ. ನೀವು ಸಂತಾಪ ಸೂಚನೆ ಕೈಗೆತ್ತಿಕೊಂಡಿದ್ದೀರಿ. ಆಗ ಪಾಟೀಲರು ಮಧ್ಯ ಪ್ರವೇಶಿಸಿ ರಾಜ್ಯಪಾಲರ ಕುರಿತು ಮಾತನಾಡಿದ್ದು ಸರಿಯಲ್ಲ. ನೀವು ಅವಕಾಶ ನೀಡಬಾರದಿತ್ತು. ಅವರು ಅಪರಾಧ ಮಾಡಿದ್ದಾರೆ. ನಿಯಮ ಉಲ್ಲಂಘಿಸಿದವರಿಗೇ ಅವಕಾಶ ನೀಡಿದ್ದೀರಿ. ಅವರಿಗೆ ಯಾವ ವಿಶೇಷ ಅಧಿಕಾರ ಇದೆ? ವಿರೋಧ ಪಕ್ಷದ ನಾಯಕರಿಗೆ ಮಾತನಾಡಲು ನೀವು ಬಿಟ್ಟಿಲ್ಲ? ನೀವು (ಸಭಾಧ್ಯಕ್ಷ) ತಾರತಮ್ಯ ಮಾಡುತ್ತಿದ್ದೀರಿ. ಈ ಸದನದಲ್ಲಿ ಎಲ್ಲರೂ ಒಂದೇ, ಎಲ್ಲರೂ ಶಾಸಕರೇ. ರಾಜ್ಯಪಾಲರು ಹೊರಗೆ ಹೋಗು ವಾಗ ಕಾಂಗ್ರೆಸ್ ಶಾಸಕರು ಅವರನ್ನು ಅಡ್ಡಗಟ್ಟಿ, ಧಿಕ್ಕಾರ ಕೂಗಿದ್ದಕ್ಕೆ ವಿಡಿಯೊ ಪುರಾವೆಗಳಿವೆ. ರಾಜ್ಯಪಾಲರ ವಿರುದ್ಧ ಅಸಭ್ಯವಾಗಿ ನಡೆದುಕೊಂಡವರಿಗೆ ಯಾವ ಶಿಕ್ಷೆ ನೀಡುತ್ತೀರಿ?

ಆರ್. ಅಶೋಕ, ವಿರೋಧ ಪಕ್ಷದ ನಾಯಕ

ರಾಜ್ಯಪಾಲರ ನಡೆ: ಹೊರಗೂ ಜಟಾಪಟಿ

ರಾಜ್ಯ ಸಚಿವ ಸಂಪುಟವು ಸಿದ್ಧಪಡಿಸಿಕೊಟ್ಟ ಭಾಷಣದ ಮೊದಲ ಮತ್ತು ಕೊನೆಯ ಕೆಲ ವಾಕ್ಯಗಳನ್ನಷ್ಟೇ ಓದಿ, ವಿಧಾನ ಮಂಡಲದ ಜಂಟಿ ಅಧಿವೇಶನದಿಂದ ಹೊರನಡೆದ ರಾಜ್ಯಪಾಲರ ನಡೆಯನ್ನು ಆಡಳಿತಾರೂಢ ಕಾಂಗ್ರೆಸ್ ಟೀಕಿಸಿದ್ದರೆ, ವಿರೋಧ ಪಕ್ಷಗಳು ಸಮರ್ಥಿಸಿಕೊಂಡಿವೆ

'ಸಿ.ಎಂ ರಾಜೀನಾಮೆ ನೀಡಲಿ'

'ರಾಜ್ಯಪಾಲರಿಗೆ ಸದನದೊಳಗೆ ಘೇರಾವ್ ಮಾಡುವ ಮೂಲಕ ಕಾಂಗ್ರೆಸ್ ಸದಸ್ಯರು ಗೂಂಡಾಗಿರಿ ಮಾಡಿದ್ದಾರೆ. ರಾಜ್ಯಪಾಲರನ್ನು ಅಡ್ಡಗಟ್ಟಿ, ಬೆದರಿಕೆ ಹಾಕಿದ್ದಾರೆ. ಇದರ ಹೊಣೆ ಹೊತ್ತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜೀನಾಮೆ ನೀಡಬೇಕು' ಎಂದು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ ಆಗ್ರಹಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಕಾಂಗ್ರೆಸ್‌ನ ಗೂಂಡಾಗಿರಿ ಈವರೆಗೆ ರಸ್ತೆಗಳಿಗೆ ಸೀಮಿತವಾಗಿತ್ತು. ಈಗ ಅದು ಸದನವನ್ನೂ ಪ್ರವೇಶಿಸಿದೆ. ಇದಕ್ಕೆ ಕಾರಣರಾದ ಎಲ್ಲ ಸದಸ್ಯರನ್ನು ಅಮಾನತು ಮಾಡಬೇಕು' ಎಂದು ಒತ್ತಾಯಿಸಿದರು.

ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್.ರವಿಕುಮಾರ್, 'ವಿಬಿ ಜಿ ರಾಮ್ ಜಿ ಯೋಜನೆ ಬಗ್ಗೆ ಕಾಂಗ್ರೆಸ್ ಸರ್ಕಾರ ಸುಳ್ಳುಗಳನ್ನು ಸೇರಿಸಿ ಭಾಷಣವನ್ನು ಸಿದ್ಧಪಡಿಸಿತ್ತು. ಹೀಗಾಗಿಯೇ ರಾಜ್ಯಪಾಲರು ಅದನ್ನು ಓದಿಲ್ಲ. ಅವರು ಸಂವಿಧಾನ ಬದ್ಧವಾಗಿ ನಡೆದುಕೊಂಡಿದ್ದಾರೆ' ಎಂದರು.

ವಿಧಾನ ಪರಿಷತ್ತಿನ ಬಿಜೆಪಿ ಸದಸ್ಯ ಸಿ.ಟಿ.ರವಿ, 'ರಾಜ್ಯಪಾಲರು ಭಾಷಣ ಮಾಡುವಾಗ ಮತ್ತು ಅವರು ಹೊರಹೋಗುವಾಗ ಅಗೌರವ ತೋರಲಾಗಿದೆ. ಇದು ಸಂವಿಧಾನಬಾಹಿರ. ರಾಜ್ಯಪಾಲರಿಗೆ ಅಡ್ಡಿಪಡಿಸಿದ ಸದಸ್ಯರನ್ನು ಅಮಾನತು ಮಾಡಲು ಅವಕಾಶವಿದ್ದು, ಈ ಸಂಬಂಧ ಸದನದಲ್ಲಿ ನಿರ್ಣಯ ಮಂಡಿಸುತ್ತೇವೆ' ಎಂದು ತಿಳಿಸಿದರು.

'ಬಿಜೆಪಿ ಏಜೆಂಟರಂತೆ ವರ್ತನೆ'

'ಕೇಂದ್ರದ ಜನವಿರೋಧಿ ಯೋಜನೆಗಳನ್ನು ಅಧಿವೇಶನದಲ್ಲಿ ಚರ್ಚಿಸುವುದು ಒಕ್ಕೂಟ ವ್ಯವಸ್ಥೆಯ ಭಾಗವಾಗಿ ರಾಜ್ಯ ಸರ್ಕಾರದ ಹಕ್ಕು ಮತ್ತು ಜವಾಬ್ದಾರಿ. ಅದನ್ನು ಮರೆತು, ರಾಜ್ಯಪಾಲರು ಬಿಜೆಪಿ ಏಜೆಂಟರಂತೆ ವರ್ತಿಸಿದ್ದು ಖಂಡನೀಯ' ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ.ಮಹದೇವಪ್ಪ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ರಾಜ್ಯಪಾಲರು ಯಾವುದೇ ಪಕ್ಷದ ಸದಸ್ಯರಲ್ಲ. ಅವರು ರಾಜ್ಯದ ಕಾರ್ಯಾಂಗದ ನಾಮಮಾತ್ರ ಮುಖ್ಯಸ್ಥರು. ರಾಜ್ಯದ ಜನರ ಹಿತಾಸಕ್ತಿ ಕಾಪಾಡುವ ಹೊಣೆ ಅವರದ್ದು. ಸರ್ಕಾರ ಬರೆದುಕೊಟ್ಟ ಭಾಷಣ ಓದುವುದು ಅವರ ಸಂವಿಧಾನಬದ್ಧ ಜವಾಬ್ದಾರಿ ಆಗಿದೆಯೇ ಹೊರತು, ಅವರು ಸರ್ಕಾರಕ್ಕೆ ಮಾಡುವ ಉಪಕಾರವಲ್ಲ' ಎಂದು ಹೇಳಿದರು.

'ವಿಧಾನ ಮಂಡಲದ ಸದನವನ್ನು ಉದ್ದೇಶಿಸಿ ರಾಜ್ಯಪಾಲರು ಮಾಡುವ ಭಾಷಣವನ್ನು ರಾಜ್ಯ ಸಚಿವ ಸಂಪುಟ ಒದಗಿಸುತ್ತದೆ. ಕೇಂದ್ರ ಸರ್ಕಾರದ ವಿರುದ್ಧ ದನಿ ಎತ್ತಲಾಗಿದೆ ಎಂಬ ಕಾರಣಕ್ಕಾಗಿ ರಾಜ್ಯಪಾಲರು ಆ ಭಾಷಣವನ್ನು ನಿರಾಕರಿಸಿ ಹೊರ ನಡೆದಿರುವುದು ಪ್ರಜಾಪ್ರಭುತ್ವಕ್ಕೆ ಮತ್ತು ಸರ್ಕಾರಕ್ಕೆ ಉದ್ದೇಶಪೂರ್ವಕವಾಗಿ ಮಾಡಿದ ಅವಮಾನ' ಎಂದು ಪ್ರತಿಪಾದಿಸಿದರು.

'ಪ್ರಜಾಪ್ರಭುತ್ವ ವಿರೋಧಿ ನಡೆ'



ಶಿರಸಿ: 'ರಾಜ್ಯ ವಿಧಾನಮಂಡಲದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣದ ವೇಳೆ ಆಡಳಿತಾರೂಢ ಕಾಂಗ್ರೆಸ್ ಸದಸ್ಯರು ನಡೆದುಕೊಂಡ ರೀತಿ ಪ್ರಜಾಪ್ರಭುತ್ವ ವಿರೋಧಿಯಾಗಿದೆ. ಈ ವರ್ತನೆಯೂ ಸದನದ ಇತಿಹಾಸದಲ್ಲಿ ಕಪ್ಪು ಚುಕ್ಕೆಯಾಗಿ ಉಳಿಯಲಿದೆ' ಎಂದು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಖಂಡಿಸಿದ್ದಾರೆ.

'ಪ್ರಜಾಪ್ರಭುತ್ವದ ಮೌಲ್ಯಗಳನ್ನು ಗಾಳಿಗೆ ತೂರಿ ದರ್ಪ ಪ್ರದರ್ಶಿಸುತ್ತಿರುವ ಕಾಂಗ್ರೆಸ್ ಸರ್ಕಾರವು, ಅರಾಜಕ ಆಡಳಿತ ನಡೆಸುತ್ತಿದೆ ಎಂಬುದಕ್ಕೆ ಈ ಘಟನೆಯೇ ಸಾಕ್ಷಿಯಾಗಿದೆ. ಸಾಂವಿಧಾನಿಕ ಹುದ್ದೆಯಲ್ಲಿರುವ ರಾಜ್ಯಪಾಲರಿಗೆ ಅಗೌರವ ತೋರುವುದು ಅಕ್ಷಮ್ಯ ಅಪರಾಧವಾಗಿದೆ. ರಾಜ್ಯಪಾಲರಿಗೆ ಅವಮಾನಿಸಿದ ಸಚಿವರು ಮತ್ತು ಶಾಸಕರನ್ನು ಈ ಕೂಡಲೇ ಅಮಾನತು ಮಾಡಬೇಕು. ಸದನದ ಘನತೆ, ಸಂಪ್ರದಾಯವನ್ನು ಎತ್ತಿ ಹಿಡಿಯಬೇಕು' ಎಂದು ಒತ್ತಾಯಿಸಿದ್ದಾರೆ.

ಅಸಂವಿಧಾನಿಕ ನಡೆ: ಸಿಪಿಎಂ

'ರಾಜ್ಯಪಾಲರು ಜಂಟಿ ಅಧಿವೇಶನದಲ್ಲಿ ಸರ್ಕಾರದ ಭಾಷಣವನ್ನು ಓದದೆ, ನಿರ್ಗಮಿಸಿರುವುದು ಅಸಾಂವಿಧಾನಿಕ ಮತ್ತು ಪ್ರಜಾ ಪ್ರಭುತ್ವ ವಿರೋಧಿ ನಡೆ' ಎಂದು ಸಿಪಿಎಂನ ಕರ್ನಾಟಕ ರಾಜ್ಯ ಸಮಿತಿ ಕಾರ್ಯದರ್ಶಿ ಪ್ರಕಾಶ್ ಕೆ. ಖಂಡಿಸಿದ್ದಾರೆ.

'ರಾಜ್ಯಪಾಲರು ರಾಜ್ಯ ಸರ್ಕಾರವನ್ನು ಪ್ರತಿನಿಧಿಸಬೇಕೇ ಹೊರತು, ಪ್ರಜಾಸತ್ತಾತ್ಮಕವಾಗಿ ಆಯ್ಕೆಯಾದ ಸಚಿವ ಸಂಪುಟದ ಮೇಲಿನ ಮಹಾ ಮುಖ್ಯಮಂತ್ರಿ ಅಲ್ಲ. ಪ್ರಧಾನಿ ನರೇಂದ್ರ ಮೋದಿ ಅವರ ನೇತೃತ್ವದ ಸರ್ಕಾರ ಬಂದ ಮೇಲೆ ರಾಜ್ಯಪಾಲರ ಕಚೇರಿಯನ್ನು ದುರುಪಯೋಗ ಮಾಡಿಕೊಂಡು, ರಾಜ್ಯ ಸರ್ಕಾರಗಳ ಅಧಿಕಾರವನ್ನು ಮೊಟಕುಗೊಳಿಸುತ್ತಿದೆ. ಇದನ್ನು ಜನರು ತಡೆಯಬೇಕಾಗಿದೆ' ಎಂದು ಅವರು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಕಾಂಗ್ರೆಸ್ ಅಕ್ರಮಗಳ ಕಾರಣಕ್ಕೆ ಯೋಜನೆ ಬದಲು: ಚೌಹಾಣ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನರೇಗಾ ಯೋಜನೆ ಹೆಸರಿನಲ್ಲಿ ಕರ್ನಾಟಕದಲ್ಲಿ ನೂರಾರು ಕೋಟಿ ಅಕ್ರಮ ನಡೆದಿದೆ. ಕಾಂಗ್ರೆಸ್ ಸರ್ಕಾರ ಇರುವೆಡೆಯಲ್ಲೆಲ್ಲಾ ಅಕ್ರಮ ಪತ್ತೆಯಾಗಿದೆ. ಹೀಗಾಗಿಯೇ ಈ ಯೋಜನೆಯನ್ನು ಬದಲಿಸಲಾಗಿದೆ' ಎಂದು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಹೇಳಿದರು.

ವಿಬಿ–ಜಿ ರಾಮ್ ಜಿ ಕುರಿತು ಪಕ್ಷದ ನಾಯಕರಿಗೆ ಅರಿವು ಮೂಡಿಸುವ ಉದ್ದೇಶದಿಂದ ಇಲ್ಲಿ ಗುರುವಾರ ಆಯೋಜಿಸಿದ್ದ ಕಾರ್ಯಾಗಾರದ ಬಳಿಕ ಅವರು ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

'ನರೇಗಾ ಯೋಜನೆ ಅಡಿ ಹೆಚ್ಚು ಜನರಿಗೆ ಉದ್ಯೋಗ ನೀಡಿದ್ದು ಮತ್ತು ಹೆಚ್ಚು ಅನುದಾನ ಬಿಡುಗಡೆ ಮಾಡಿದ್ದು ನಮ್ಮ ಸರ್ಕಾರ. ಆದರೆ ಇದನ್ನು ಮರೆಮಾಚುತ್ತಿರುವ ಕಾಂಗ್ರೆಸ್, ನರೇಗಾ ಯೋಜನೆಯ ರಕ್ಷಕನಂತೆ ತನ್ನನ್ನು ಬಿಂಬಿಸಿಕೊಳ್ಳುತ್ತಿದೆ' ಎಂದು ಆರೋಪಿಸಿದರು.

'2006–07ರಿಂದ 2013–14ರವರೆಗೆ ಯುಪಿಎ ಸರ್ಕಾರವು ನರೇಗಾ ಯೋಜನೆ ಮೂಲಕ ಕರ್ನಾಟಕದಲ್ಲಿ 58.46 ಕೋಟಿ ಮಾನವ ದಿನಗಳಷ್ಟು ಕೆಲಸ ಸೃಷ್ಟಿಸಿತ್ತು ಮತ್ತು ₹8,739.32 ಕೋಟಿ ಅನುದಾನ ಬಿಡುಗಡೆ ಮಾಡಿತ್ತು. ನಮ್ಮ ಸರ್ಕಾರವು 2014–15ರಿಂದ 2025–26ರಲ್ಲಿ ಈವರೆಗೆ ಒಟ್ಟು 127.52 ಕೋಟಿ ಮಾನವ ದಿನಗಳಷ್ಟು ಕೆಲಸ ಸೃಷ್ಟಿಸಿದ್ದು, ₹48,549.82 ಕೋಟಿ ಬಿಡುಗಡೆ ಮಾಡಿದೆ' ಎಂದರು.

'ಯಾದಗಿರಿ ಜಿಲ್ಲೆಯ ಗ್ರಾಮವೊಂದರಲ್ಲಿ ಪುರುಷರು ಸೀರೆಯುಟ್ಟು, ಮಹಿಳೆಯರಂತೆ ಬಿಂಬಿಸಿಕೊಂಡು ನರೇಗಾದ ಅಡಿ ಕೂಲಿ ಪಡೆದುಕೊಂಡಿದ್ದರು. ಇದು ಅಂತರರಾಷ್ಟ್ರೀಯ ಮಟ್ಟದಲ್ಲಿ ದೊಡ್ಡ ಸುದ್ದಿಯಾಗಿತ್ತು. ಇಂತಹ ನೂರಾರು ಅಕ್ರಮಗಳು ಸೋಷಿಯಲ್ ಆಡಿಟ್ ಮೂಲಕ ಪತ್ತೆಯಾಗಿದ್ದವು. ಅಕ್ರಮದ ಮೊತ್ತದಲ್ಲಿ ₹107.78 ಕೋಟಿ ವಸೂಲಿ ಮಾಡುವಂತೆ ಸೂಚಿಸಿದ್ದರೂ, ಒಂದು ರೂಪಾಯಿಯೂ ವಸೂಲಾಗಲಿಲ್ಲ' ಎಂದರು.

'ಮಹಾಲೇಖಪಾಲರ ವರದಿಯಲ್ಲಿ ₹24.12 ಕೋಟಿ ವಸೂಲಿಗೆ ಶಿಫಾರಸು ಮಾಡಲಾಗಿತ್ತು. ಆದರೆ, ರಾಜ್ಯ ಸರ್ಕಾರ ವಸೂಲಿ ಮಾಡಿದ್ದು ₹2.47 ಕೋಟಿ ಮಾತ್ರ. ಕಲಬುರಗಿ ಜಿಲ್ಲೆಯಲ್ಲಿ ನಡೆದ ಕಾಮಗಾರಿಗಳ ಬಗ್ಗೆ ದೂರು ಬಂದಿತ್ತು. ಕೇಂದ್ರ ಸಚಿವಾಲಯದ ಸಿಬ್ಬಂದಿ ಪರಿಶೀಲನೆ ನಡೆಸಿದಾಗ, ಹಲವು ಅಕ್ರಮಗಳು ಗೊತ್ತಾದವು. ಒಂದೇ ಕೆರೆಯ ಹೂಳನ್ನು ಹಲವು ಬಾರಿ ತೆಗೆಯಲಾಗಿದೆ ಎಂದು ಬಿಲ್ ಸೃಷ್ಟಿಸಲಾಗಿತ್ತು. ಕೆಲವೇ ಕುಟುಂಬಗಳಿಗೆ ಆ ಹಣ ಜಮೆಯಾಗಿತ್ತು. ಶಾಲೆಯೊಂದರ ಶೌಚಾಲಯ ನಿರ್ಮಿಸಿದ ಬಿಲ್ ಸೃಷ್ಟಿಸಿ, ಕಾಂಪೌಂಡ್ ಕಟ್ಟಲಾಗಿತ್ತು' ಎಂದು ವಿವರಿಸಿದರು.

'ನರೇಗಾದಲ್ಲಿ ಅಕ್ರಮ ನಡೆಯುತ್ತಿದೆ ಎಂದು ಮನಮೋಹನ್ ಸಿಂಗ್ ಅವರು ತಾವು ಪ್ರಧಾನಿಯಾಗಿದ್ದಾಗ 2011ರಲ್ಲೇ ಹೇಳಿದ್ದರು. ನಕಲಿ ಜಾಬ್‌ಕಾರ್ಡ್‌ಗಳನ್ನು ಸೃಷ್ಟಿಸಲಾಗುತ್ತಿದೆ ಎಂಬುದನ್ನು ಸೋನಿಯಾ ಗಾಂಧಿ ಅವರೂ ಹೇಳಿದ್ದರು. ಈ ಯೋಜನೆಯ ನಿಯಮಗಳಲ್ಲಿ ಇದ್ದ ಲೋಪಗಳನ್ನು ಪರಿಗಣಿಸಿ, ಕೂಲಂಕಷವಾಗಿ ಪರಿಶೀಲನೆ ನಡೆಸಿಯೇ ನರೇಂದ್ರ ಮೋದಿ ಅವರ ಸರ್ಕಾರ ಈ ಕ್ರಮ ತೆಗೆದುಕೊಂಡಿದೆ' ಎಂದು ಹೇಳಿದರು.

ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಸುದ್ದಿಗೋಷ್ಠಿಯಲ್ಲಿ ಇದ್ದರು.

ನರೇಗಾದಲ್ಲಿನ ಅಕ್ರಮಗಳ ಕುರಿತ ಸತ್ಯಗಳನ್ನು ಮುಚ್ಚಿಟ್ಟು, ಸುಳ್ಳುಗಳೇ ತುಂಬಿರುವ ಭಾಷಣವನ್ನು ರಾಜ್ಯಪಾಲರಿಗೆ ನೀಡಲಾಗಿತ್ತು. ಪ್ರಜಾಸತ್ತಾತ್ಮಕ ಮೌಲ್ಯ ಕೊಲ್ಲಲಾಯಿತು

ಶಿವರಾಜ್ ಸಿಂಗ್ ಚೌಹಾಣ್, ಕೇಂದ್ರ ಕೃಷಿ ಸಚಿವ

prajavani.net prajavani
ಶುಕ್ರವಾರ, ಜನವರಿ 23, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 23 | ಪುಟ 16
www.prajavani.net

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 82,307 | ನಿಫ್ಟಿ 25,289 | $/₹ 91.58 | ಚಿನ್ನ (Std. 10g) ₹1,58,950 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹3,27,000 (ಬೆಂಗಳೂರು)

ನಿಯಮ ಮೀರಿದರೆ ಡಿಎಲ್ ಅಮಾನತು

ನವದೆಹಲಿ: ಕೇಂದ್ರ ಸರ್ಕಾರವು ಮೋಟಾರು ವಾಹನಗಳ ನಿಯಮವನ್ನು ಕಠಿಣಗೊಳಿಸಿದೆ. ವರ್ಷದಲ್ಲಿ 5 ಅಥವಾ ಐದಕ್ಕಿಂತ ಹೆಚ್ಚು ಬಾರಿ ಸಂಚಾರ ನಿಯಮ ಉಲ್ಲಂಘಿಸಿದರೆ ಚಾಲನಾ ಪರವಾನಗಿ ಅಮಾನತುಗೊಳ್ಳಲಿದೆ.

ವಿವರ 11

ರಾಜೀವ್ ಗೌಡ ಪ್ರಕರಣ ತನಿಖೆಗೆ ಅರ್ಹ

ಬೆಂಗಳೂರು: 'ಶಿಡ್ಲಘಟ್ಟ ನಗರಸಭೆಯ ಪೌರಾಯುಕ್ತೆ ಅಮೃತಾ ಗೌಡ ಅವರನ್ನು ಸ್ಥಳೀಯ ಕಾಂಗ್ರೆಸ್ ಮುಖಂಡ ಬಿ.ವಿ. ರಾಜೀವ್ ಗೌಡ ನಿಂದಿಸಿರುವ ಪ್ರಕರಣ ತನಿಖೆಗೆ ಅರ್ಹವಾಗಿದೆ' ಎಂದು ಹೈಕೋರ್ಟ್ ಹೇಳಿದೆ.

ವಿವರ 7

ಚಿನಕುರುಳಿ ಪ್ರಕಾಶ್ ಶೆಟ್ಟಿ

ರಾಜ್ಯಪಾಲರ ನಡೆ: ಕೋಲಾಹಲಕ್ಕೆ ಎಡೆ

ಸಾಂವಿಧಾನಿಕ ಮುಖ್ಯಸ್ಥರಿಗೆ ಧಿಕ್ಕಾರ ಕೂಗಿದ ಕಾಂಗ್ರೆಸ್ ಸದಸ್ಯರು
• ಗೆಹಲೋತ್ ಬೆಂಬಲಕ್ಕೆ ನಿಂತ ಬಿಜೆಪಿ ಸದಸ್ಯರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ ಕುರಿತು ಆಕ್ಷೇಪಾರ್ಹ ಸಾಲುಗಳಿವೆ ಎಂಬ ಕಾರಣ ಮುಂದಿಟ್ಟು ಪೂರ್ಣ ಭಾಷಣ ಓದದ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರ ನಡೆಯ ವಿರುದ್ಧ ಸಿಡಿದ ಕಾಂಗ್ರೆಸ್ ಸದಸ್ಯರು ಅವರ ವಿರುದ್ಧ ಸದನದಲ್ಲೇ ಧಿಕ್ಕಾರ ಕೂಗಿದರು. ರಾಜ್ಯಪಾಲರ ಧೋರಣೆಯನ್ನು ಬಿಜೆಪಿ ಸದಸ್ಯರು ಬಲವಾಗಿ ಸಮರ್ಥಿಸಿಕೊಂಡರು.

ವರ್ಷದ ಆರಂಭದಲ್ಲಿ ನಡೆಯುವ ಜಂಟಿ ಅಧಿವೇಶನವನ್ನು ಉದ್ದೇಶಿಸಿ ರಾಜ್ಯಪಾಲರು ಭಾಷಣ ಮಾಡುವುದು ರೂಢಿ. ಮೊದಲ ದಿನವೇ ಸದನ ಕೋಲಾಹಲಕ್ಕೆ ಸಾಕ್ಷಿಯಾಯಿತು.

ಭಾಷಣ ಮಾಡಲು ಮೊದಲು ನಿರಾಕರಿಸಿದ್ದ ರಾಜ್ಯಪಾಲರು, ನಿಗದಿತ ಸಮಯಕ್ಕೆ ವಿಧಾನಸೌಧಕ್ಕೆ ಆಗಮಿಸಿದರು. ಸರ್ಕಾರ ಸಿದ್ಧಪಡಿಸಿದ್ದ ಭಾಷಣದಲ್ಲಿದ್ದ ಮೊದಲ ಹಾಗೂ ಕೊನೆಯ ಎರಡು ಸಾಲುಗಳನ್ನು 37 ಸೆಕೆಂಡ್‌ನಲ್ಲಿ ಓದಿ ಮುಗಿಸಿದ ಗೆಹಲೋತ್ ಅವರು ಸಭಾಧ್ಯಕ್ಷರ ಪೀಠದಿಂದ ಇಳಿದು, ಹೊರ ನಡೆಯಲು ಅನುವಾದರು. ಇದರಿಂದ ಸಿಟ್ಟಿಗೆದ್ದ ಕಾಂಗ್ರೆಸ್ ಸದಸ್ಯರು ಅವರನ್ನು ಅಡ್ಡಗಟ್ಟಿ, ಪೂರ್ಣ ಭಾಷಣ ಮಾಡುವಂತೆ ಒತ್ತಡ ಹೇರಲು ಯತ್ನಿಸಿದರು.

7

> **ಸಂಪುಟ ಸಿದ್ಧಪಡಿಸಿದ ಭಾಷಣವನ್ನು ಓದದೇ, ಸಂವಿಧಾನದ ವಿಧಿಗಳನ್ನು ರಾಜ್ಯಪಾಲರು ಉಲ್ಲಂಘಿಸಿದ್ದಾರೆ. ಇದು ಜನಪ್ರತಿನಿಧಿಗಳ ಸಭೆಗೆ ಮಾಡಿದ ಅವಮಾನ**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

> **ರಾಜ್ಯಪಾಲರು ತಮ್ಮ ಭಾಷಣವನ್ನು ಮಂಡಿಸುವ ಮೂಲಕ ಸಾಂವಿಧಾನಿಕ ಕರ್ತವ್ಯವನ್ನು ಪಾಲಿಸಿದ್ದಾರೆ. ಕಾಂಗ್ರೆಸ್ ಶಾಸಕರು ಬೀದಿ ರೌಡಿಗಳಂತೆ ವರ್ತಿಸಿದ್ದಾರೆ**
> **ಆರ್. ಅಶೋಕ,** ವಿರೋಧ ಪಕ್ಷದ ನಾಯಕ

ರಾಜ್ಯಪಾಲರು ಓದಿದ್ದೇನು?

'ಸಭಾಪತಿಯವರೆ, ಸಭಾಧ್ಯಕ್ಷರೆ, ಮುಖ್ಯಮಂತ್ರಿಗಳೆ. . . ಪ್ರತಿಪಕ್ಷದ ನಾಯಕರೇ. . . ಸದಸ್ಯರೇ ಜಂಟಿ ಅಧಿವೇಶನಕ್ಕೆ ಎಲ್ಲರಿಗೂ ಸ್ವಾಗತ'.

'ಎಲ್ಲರಿಗೂ ನಮಸ್ಕಾರ (ಕನ್ನಡದಲ್ಲಿ)... ಕರ್ನಾಟಕ ವಿಧಾನಮಂಡಲದ ಜಂಟಿ ಅಧಿವೇಶನದ ಮತ್ತೊಂದು ಭಾಷಣ ಓದಲು ಹರ್ಷವಾಗುತ್ತದೆ...'

'ರಾಜ್ಯದ ಆರ್ಥಿಕ, ಸಾಮಾಜಿಕ, ಬೌದ್ಧಿಕ ವಿಕಾಸವನ್ನು ನನ್ನ ಸರ್ಕಾರ ಎರಡು ಪಟ್ಟು ಹೆಚ್ಚಿಸಲು ಕಟಿಬದ್ಧವಾಗಿದೆ. ಜೈ ಹಿಂದ್, ಜೈ ಕರ್ನಾಟಕ'

ರಾಷ್ಟ್ರಗೀತೆಗೆ 'ಅವಮಾನ': ಚರ್ಚೆ

ರಾಜ್ಯಪಾಲರು ರಾಷ್ಟ್ರ ಗೀತೆಗೆ 'ಅವಮಾನ' ಮಾಡಿದ್ದಾರೆ ಎಂಬ ಬಗ್ಗೆ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆದಿದೆ. ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್‌.ಕೆ. ಪಾಟೀಲ್ ಅವರು ರಾಜ್ಯಪಾಲರಿಂದ ರಾಷ್ಟ್ರ ಗೀತೆಗೆ 'ಅವಮಾನ' ಆಗಿದೆ ಎಂದು ವಿಷಯವನ್ನು ಸದನದಲ್ಲಿ ಎತ್ತಿದ್ದರು. 'ಮುಂದೆ ಕೈಗೊಳ್ಳಬೇಕಾದ ಕ್ರಮದ ಬಗ್ಗೆ ನಿರ್ಧರಿಸುವ ಮೊದಲು ಸಭಾಧ್ಯಕ್ಷರ ರೂಲಿಂಗ್‌ಗೆ ನಾವು ಕಾಯುತ್ತೇವೆ. ಈ ವಿಷಯ ಹೇಗೆ ಬಗೆಹರಿಯುತ್ತದೆ ಎಂದು ನೋಡೋಣ' ಎಂದು ಸಚಿವರೊಬ್ಬರು ತಿಳಿಸಿದ್ದಾರೆ.

ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ನಿರ್ಗಮಿಸುತ್ತಿದ್ದಂತೆಯೇ ವಿಧಾನಪರಿಷತ್ ಕಾಂಗ್ರೆಸ್ ಸದಸ್ಯರಾದ ಎಸ್‌. ರವಿ, ಬಿ.ಕೆ. ಹರಿಪ್ರಸಾದ್ ಸೇರಿದಂತೆ ಕೆಲವು ಶಾಸಕರು ತಡೆಯಲು ಮುಂದಾದರು

ಸದನ ಜಟಾಪಟಿ

'ಕೇಂದ್ರ ವಿರುದ್ಧ ವಿನಾ ಕಾರಣ ದ್ವೇಷ ಕಾರುವ, ರಾಜಕೀಯ ಮಾಡುವ ಉದ್ದೇಶದ ಭಾಷಣವನ್ನು ಓದದೇ ನಿರ್ಗಮಿಸಿದ್ದು ಸರಿಯಾದ ಕ್ರಮ' ಎಂದು ವಿರೋಧ ಪಕ್ಷದ ನಾಯಕ ಆರ್‌.ಅಶೋಕ ಹೇಳಿದರು. ಬಿಜೆಪಿ ಸದಸ್ಯರು ರಾಜ್ಯಪಾಲರಿಗೆ ಜೈಕಾರ ಹಾಕಿ, ಕಾಂಗ್ರೆಸ್ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಲಾರಂಭಿಸಿದರು. ಆಗ ವಿರೋಧ ಪಕ್ಷಗಳ ಸದಸ್ಯರತ್ತ ಕೈಮುಗಿದು ರಾಜ್ಯಪಾಲರು ಹೊರ ನಡೆದರು.

ಹೊರ ನಡೆಯುತ್ತಿದ್ದ ರಾಜ್ಯಪಾಲರನ್ನು ಹಿಂಬಾಲಿಸಿದ ಕಾಂಗ್ರೆಸ್‌ನ ಎಚ್‌.ಸಿ. ಬಾಲಕೃಷ್ಣ, ಶರತ್ ಬಚ್ಚೇಗೌಡ, ಪ್ರದೀಪ್ ಈಶ್ವರ್ ಮತ್ತಿತರರು ಅಡ್ಡ ಹಾಕಿದರೆ, ವಿಧಾನಪರಿಷತ್ ಸದಸ್ಯ ಎಸ್‌.ರವಿ ಮತ್ತು ಇತರರು ಹಿಂದಿನಿಂದ ರಾಜ್ಯಪಾಲರಿಗೆ ಧಿಕ್ಕಾರ ಕೂಗುತ್ತಾ ನಡೆದರು. ಬಾಗಿಲಿನ ಬಳಿ ವಿಧಾನಪರಿಷತ್ ಸದಸ್ಯ ಬಿ.ಕೆ.ಹರಿಪ್ರಸಾದ್ ಅವರು ರಾಜ್ಯಪಾಲರಿಗೆ ಅಡ್ಡ ನಿಂತು ವಾಗ್ವಾದಕ್ಕೆ ಮುಂದಾದಾಗ ಮಾರ್ಷಲ್‌ಗಳು ಅವರನ್ನು ಬದಿಗೆ ತಳ್ಳಿ ರಾಜ್ಯಪಾಲರಿಗೆ ದಾರಿ ಮಾಡಿಕೊಟ್ಟರು.

ಈ ತಳ್ಳಾಟ–ನೂಕಾಟದಲ್ಲೂ ರಾಜ್ಯಪಾಲರು ಎಲ್ಲರಿಗೂ ನಮಸ್ಕರಿಸುತ್ತಲೇ ಮುಂದೆ ನಡೆದರು. ಶಿಷ್ಟಾಚಾರದಂತೆ ರಾಜ್ಯಪಾಲರ ಅಕ್ಕಪಕ್ಕದಲ್ಲಿ ಸಭಾಧ್ಯಕ್ಷ ಯು.ಟಿ.ಖಾದರ್ ಮತ್ತು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮಾರ್ಷಲ್‌ಗಳು ಜಾಗ ಮಾಡಿಕೊಟ್ಟರು. ಅವರ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾನೂನು ಸಚಿವ ಎಚ್‌.ಕೆ.ಪಾಟೀಲ ಅವರು ಏದುಸಿರು ಬಿಡುತ್ತಾ ಸಾಗಿದರು. ವಿಧಾನಸೌಧದ ಮೆಟ್ಟಿಲುವರೆಗೆ ಹೋಗಿ ರಾಜ್ಯಪಾಲರನ್ನು ಬೀಳ್ಕೊಟ್ಟರು.

ವಯೋಮಿತಿ 5 ವರ್ಷ ಸಡಿಲಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಸರ್ಕಾರದ ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳ ಭರ್ತಿಗೆ 2027ರ ಡಿ. 31ರವರೆಗೆ ಹೊರಡಿಸುವ ಅಧಿಸೂಚನೆಗಳಲ್ಲಿ ಎಲ್ಲ ಪ್ರವರ್ಗಗಳ ಅಭ್ಯರ್ಥಿಗಳಿಗೆ ಗರಿಷ್ಠ ವಯೋಮಿತಿಯನ್ನು ಐದು ವರ್ಷಗಳಿಗೆ ಸಡಿಲಿಸಲು ರಾಜ್ಯ ಸರ್ಕಾರ ನಿರ್ಧರಿಸಿದೆ.

'ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಮಂಡಿಸಿದ ಈ ಪ್ರಸ್ತಾವಕ್ಕೆ ಗುರುವಾರ ನಡೆದ ಸಚಿವ ಸಂಪುಟ ಸಭೆ ಅನುಮೋದನೆ ನೀಡಿದೆ' ಎಂದು ಮೂಲಗಳು ತಿಳಿಸಿವೆ.

'ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಜಾರಿಯೂ ಸೇರಿದಂತೆ ನಾನಾ ಕಾರಣಗಳಿಂದ ವಿವಿಧ ಹುದ್ದೆಗಳ ನೇಮಕಾತಿ ವಿಳಂಬವಾಗುತ್ತಿದೆ. ಸರ್ಕಾರಿ ಹುದ್ದೆಯ ನಿರೀಕ್ಷೆಯಲ್ಲಿರುವ ಅಭ್ಯರ್ಥಿಗಳಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ' ಎಂದು ಮೂಲಗಳು ಹೇಳಿವೆ.

22 ಮಠಗಳಿಗೆ ಭೂಮಿ: ಬೆಂಗಳೂರು ಉತ್ತರ ತಾಲ್ಲೂಕಿನ ದಾಸನಪುರ ಹೋಬಳಿಯ ರಾವುತ್ತನಹಳ್ಳಿ ಗ್ರಾಮದಲ್ಲಿ ದಲಿತ ಹಾಗೂ ಹಿಂದುಳಿದ ವರ್ಗಗಳ 22 ಮಠಗಳಿಗೆ ಭೂಮಿ ಮಂಜೂರು ಮಾಡಲು ಕೂಡಾ ಸಂಪುಟ ಒಪ್ಪಿಗೆ ನೀಡಿದೆ.

ರಾಷ್ಟ್ರೀಯ ಸಾಫ್ಟ್‌ವೇರ್ ಮತ್ತು ಸೇವಾ ಸಂಸ್ಥೆಯ ಒಕ್ಕೂಟದ (ನಾಸ್ಕಾಂ) ಸಹಭಾಗಿತ್ವದಲ್ಲಿ ಬೆಂಗಳೂರಿನ ಎಚ್‌ಎಸ್‌ಆರ್ ಲೇಔಟ್‌ನಲ್ಲಿರುವ ಕಿಯೋನಿಕ್ಸ್ ತಾಣದಲ್ಲಿ ನಾಲ್ಕು ವರ್ಷಗಳಲ್ಲಿ ಒಟ್ಟು ₹20 ಕೋಟಿ ವೆಚ್ಚದಲ್ಲಿ ಕೃತಕ ಬುದ್ಧಿಮತ್ತೆ ಶ್ರೇಷ್ಠತಾ ಕೇಂದ್ರ ಸ್ಥಾಪನೆಗೆ ಅನುಮೋದನೆ ನೀಡಲಾಗಿದೆ.

: @myneelkanth | : www.myneelkanth.com

ರಿಚ್‌ಮಂಡ್ ರೋಡ್: 080 2227 8846 | ಹೆಚ್‌ಆರ್‌ಬಿಆರ್ ಲೇಔಟ್: 080 6907 8000 | ಎಚ್‌ಎಸ್‌ಆರ್ ಲೇಔಟ್: 080 4696 3800

ಹವಾಮಾನ ಮುನ್ಸೂಚನೆ: ನಗರದಲ್ಲಿ ಮಂಜು ಮುಸುಕಿದ ವಾತಾವರಣ ಇರಲಿದೆ.

ಮಲೆ ಮಹದೇಶ್ವರ ಬೆಟ್ಟ: ಚಿರತೆ ಸೆರೆ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಮಲೆ ಮಹದೇಶ್ವರ ಬೆಟ್ಟದ ತಾಳುಬೆಟ್ಟದ ಸಮೀಪ ಬುಧವಾರ ಭಕ್ತರೊಬ್ಬರನ್ನು ಕೊಂದಿದ್ದ ಚಿರತೆಯನ್ನು ಗುರುವಾರ ರಾತ್ರಿ ಸೆರೆ ಹಿಡಿಯಲಾಗಿದೆ ಎಂದು ಅರಣ್ಯ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

2ರಿಂದ 3 ವರ್ಷ ಪ್ರಾಯದ ಗಂಡು ಚಿರತೆಗೆ ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಗಿದೆ.

ಬುಧವಾರ ಬೆಟ್ಟಕ್ಕೆ ಪಾದಯಾತ್ರೆಯಲ್ಲಿ ತೆರಳುತ್ತಿದ್ದ ಮಂಡ್ಯ ಜಿಲ್ಲೆಯ ಚೀರನಹಳ್ಳಿ ಗ್ರಾಮದ ಪ್ರವೀಣ್ ಮೇಲೆ ಚಿರತೆ ದಾಳಿ ನಡೆಸಿತ್ತು. ಇದರಿಂದಾಗಿ, ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ಆರಂಭಿಸಿ ಎರಡು ಬೋನುಗಳನ್ನು ಇರಿಸಿದ್ದರು. 50ಕ್ಕೂ ಹೆಚ್ಚು ಸಿಬ್ಬಂದಿ ಭಾಗವಹಿಸಿದ್ದರು. ಚಿರತೆ ಕಾರ್ಯಾಚರಣೆ ಪಡೆ ಹಾಗೂ ತಜ್ಞ ವೈದ್ಯಾಧಿಕಾರಿಗಳು ಸಹ ಇದ್ದರು.

ರಂಗಸ್ವಾಮಿ ಒಡ್ಡು ಬಳಿ ಚಿರತೆಯ ಚಲನವಲನಗಳು ಡ್ರೋನ್ ಕ್ಯಾಮೆರಾದಲ್ಲಿ ಪತ್ತೆಯಾದ ನಂತರ ಅರಿವಳಿಕೆ ಚುಚ್ಚುಮದ್ದು ನೀಡಿ ಸೆರೆಹಿಡಿದಿದ್ದಾರೆ.

ಸ್ವಾಮೀಜಿಯಿಂದ ಸುಲಿಗೆ: ಬಂಧನ

ಬೆದರಿಕೆ ಹಾಕಿ ₹4.50 ಲಕ್ಷ ಪಡೆದುಕೊಂಡಿದ್ದ ಆರೋಪಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಸ್ವಾಮೀಜಿ ಬಳಿ ಅವಲತ್ತುಕೊಂಡಿದ್ದ ಯುವತಿ
- ಪದೇ ಪದೇ ಕರೆ ಮಾಡಿ ಬೆದರಿಕೆ
- ಬೇಸತ್ತು ದೂರು ದಾಖಲಿಸಿದ್ದ ಸ್ವಾಮೀಜಿ

ಬೆಂಗಳೂರು: ತುಮಕೂರು ಜಿಲ್ಲೆಯ ತಿಪಟೂರು ಬಳಿಯ ಮಠವೊಂದರ ಸ್ವಾಮೀಜಿಗೆ ಬೆದರಿಕೆ ಹಾಕಿ ₹4.50 ಲಕ್ಷ ಸುಲಿಗೆ ಮಾಡಿದ್ದ ಯುವತಿಯನ್ನು ಸಿಸಿಬಿ ಪೊಲೀಸರು ಗುರುವಾರ ಬಂಧಿಸಿದ್ದಾರೆ.

ಚಿಕ್ಕಮಗಳೂರಿನ ಸ್ಫೂರ್ತಿ ಬಂಧಿತ ಯುವತಿ.

ಸ್ವಾಮೀಜಿಯ ದೂರು ಆಧರಿಸಿ ಸ್ಫೂರ್ತಿ ಹಾಗೂ ಆಕೆಯ ಸಹಚರರ ವಿರುದ್ಧ ಬೆದರಿಕೆ ಮತ್ತು ಅಪರಾಧ ಸಂಚು ಆರೋಪದಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸಲಾಗಿತ್ತು ಎಂದು ಸಿಸಿಬಿ ಪೊಲೀಸರು ತಿಳಿಸಿದ್ದಾರೆ.

‘ಸ್ಫೂರ್ತಿ ಎಂಬುವವರು ನಾಲ್ಕು ತಿಂಗಳ ಹಿಂದೆ ಕರೆ ಮಾಡಿದ್ದರು. ತಿಪಟೂರಿನ ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡಿ ಬೆಂಗಳೂರಿನಲ್ಲಿ ನೆಲಸಿರುವ ತನಗೆ ಉದ್ಯೋಗವಿಲ್ಲ. ಹೀಗಾಗಿ, ಜೀವನ ನಿರ್ವಹಣೆಗೆ ಕಷ್ಟವಾಗಿದೆ ಎಂದು ಅಲವತ್ತುಕೊಂಡಿದ್ದರು. ಬಳಿಕ, ಹಲವು ಬಾರಿ ಕರೆ ಮಾಡಿ ₹4.50 ಲಕ್ಷ ಕೊಡಬೇಕು. ಇಲ್ಲದಿದ್ದರೆ ಮಠಕ್ಕೆ ಬಂದು ಮರ್ಯಾದೆ ತೆಗೆದು, ಸಮಾಜದಲ್ಲಿ ತಲೆ ಎತ್ತದಂತೆ ಮಾಡುತ್ತೇನೆ. ಜೀವಂತವಾಗಿ ಬಿಡುವುದಿಲ್ಲ ಎಂದು ಬೆದರಿಕೆ ಹಾಕಿ ಹಂತ ಹಂತವಾಗಿ ₹4.50 ಲಕ್ಷ ಸುಲಿಗೆ ಮಾಡಿದ್ದರು’ ಎಂದು ಸ್ವಾಮೀಜಿ ಅವರು ದೂರಿನಲ್ಲಿ ಉಲ್ಲೇಖಿಸಿದ್ದರು.

ಸ್ಫೂರ್ತಿ

₹1 ಕೋಟಿಗೆ ಬೇಡಿಕೆ: ‘ಹಣ ಕೊಟ್ಟ ನಂತರವೂ ಸ್ಫೂರ್ತಿ ತನ್ನ ಸಹಚರರ ಜತೆಗೆ ಸೇರಿಕೊಂಡು ಸಂಚು ರೂಪಿಸಿ, ಕಳೆದೊಂದು ತಿಂಗಳಿಂದ ಪದೇ ಪದೇ ಕರೆ ಮಾಡಿ ₹1 ಕೋಟಿ ಕೊಡುವಂತೆ ಬೆದರಿಸುತ್ತಿದ್ದರು. ಮಾಧ್ಯಮದವರಿಗೆ ತಿಳಿಸಿ, ಸುಳ್ಳು ಸುದ್ದಿಗಳನ್ನು ಬಿತ್ತರಿಸಿ ಘನತೆಗೆ ಧಕ್ಕೆ ತರುವುದಾಗಿ ಹೆದರಿಸಿದ್ದರು’ ಎಂದು ಅವರು ದೂರಿನಲ್ಲಿ ಉಲ್ಲೇಖಿಸಿದ್ದರು.

‘ಸ್ಫೂರ್ತಿ ಅವರು ಪದೇ ಪದೇ ಕರೆ ಮಾಡಿ ಮಾನಸಿಕವಾಗಿ ಕಿರುಕುಳ ನೀಡುತ್ತಿದ್ದಾರೆ. ಸಹಚರರ ಮೂಲಕವೂ ಕರೆ ಮಾಡಿಸಿ ಬೆದರಿಕೆ ಹಾಕಿಸುತ್ತಿದ್ದಾರೆ. ನನ್ನ ಆರೋಗ್ಯ ಹದಗೆಟ್ಟಿದೆ. ಹೀಗಾಗಿ, ಸ್ಫೂರ್ತಿ ಮತ್ತು ಸಹಚರರ ವಿರುದ್ಧ ಕಾನೂನು ಕ್ರಮ ಜರುಗಿಸಿ, ನಮಗೆ ರಕ್ಷಣೆ ನೀಡಬೇಕು’ ಎಂದು ದೂರಿನಲ್ಲಿ ಕೋರಿದ್ದರು.

ಸದ್ಯ ಬ್ಲ್ಯಾಕ್‌ಮೇಲ್ ಪ್ರಕರಣದ ಹಿನ್ನೆಲೆಯಲ್ಲಿ ಸ್ವಾಮೀಜಿ ಕೋರ್ಟ್ ಮೊರೆಹೋಗಿದ್ದು, ತಮಗೆ ಸಂಬಂಧಿಸಿದ ಯಾವುದೇ ಫೋಟೊಗಳು ಹಾಗೂ ವಿಡಿಯೊಗಳನ್ನು ಪ್ರಸಾರ ಮಾಡದಂತೆ ತಡೆಯಾಜ್ಞೆ ಪಡೆದಿದ್ದಾರೆ ಎಂದು ಮೂಲಗಳು ಹೇಳಿವೆ.

ಹಿಂದೆಯೂ ಬಂದಿತ್ತು ಬೆದರಿಕೆ

ಮಹಿಳೆಯೊಬ್ಬರು ಬೆದರಿಕೆ ಹಾಕಿ, ₹6 ಕೋಟಿಗೆ ಬೇಡಿಕೆ ಇಟ್ಟಿದ್ದಾರೆ ಎಂದು ಇದೇ ಸ್ವಾಮೀಜಿ 2024ರ ಸೆಪ್ಟೆಂಬರ್‌ನಲ್ಲೂ ಸಿಸಿಬಿ ಠಾಣೆಗೆ ದೂರು ನೀಡಿದ್ದರು. ಆಗ ಪ್ರಕರಣ ದಾಖಲಿಸಿಕೊಂಡಿದ್ದ ಸಿಸಿಬಿ ಠಾಣೆಯ ಪೊಲೀಸರು, ಗಗನ್, ಸೂರ್ಯನಾರಾಯಣ್, ವಿದ್ಯಾ ಎಂಬುವವರನ್ನು ಬಂಧಿಸಿದ್ದರು ಎಂಬುದು ಗೊತ್ತಾಗಿದೆ.

ಡ್ರಗ್ಸ್ ಪೆಡ್ಲಿಂಗ್: ಹೊರ ರಾಜ್ಯದ ವ್ಯಕ್ತಿ ಸೇರಿ ಮೂವರ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ಹೊರ ರಾಜ್ಯದ ವ್ಯಕ್ತಿ ಸೇರಿ ಮೂವರನ್ನು ಜ್ಞಾನಭಾರತಿ ಹಾಗೂ ಕೊತ್ತನೂರು ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹4.90 ಲಕ್ಷ ಮೌಲ್ಯದ ವಿವಿಧ ಮಾದರಿಯ ಮಾದಕ ವಸ್ತುಗಳನ್ನು ಜಪ್ತಿ ಮಾಡಿದ್ದಾರೆ.

ಖಚಿತ ಮಾಹಿತಿ ಆಧರಿಸಿ ಜ್ಞಾನಭಾರತಿ ಠಾಣೆಯ ಪೊಲೀಸರು, ಕೆಂಗೇರಿ 100 ಅಡಿ ರಸ್ತೆಯ ಉಲ್ಲಾಳ ಕೆರೆಯ ಪಕ್ಕದ ಬಸ್ ನಿಲ್ದಾಣದ ಬಳಿ ಕಾರ್ಯಾಚರಣೆ ನಡೆಸಿ, ಹೊರ ರಾಜ್ಯದ ವ್ಯಕ್ತಿಯನ್ನು ಬಂಧಿಸಿದ್ದಾರೆ. ಆತನಿಂದ 11 ಗ್ರಾಂ ಅಫೀಮ್ ಜಪ್ತಿ ಮಾಡಲಾಯಿತು ಎಂದು ಪೊಲೀಸರು ಹೇಳಿದರು.

ಕೊತ್ತನೂರು ಠಾಣೆಯ ಪೊಲೀಸರ ಕಾರ್ಯಾಚರಣೆ: ನಾಗೇನಹಳ್ಳಿಯ ವುಡ್ ಡಿಪೊ ಬಳಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಇಬ್ಬರನ್ನು ಬಂಧಿಸಿದ್ದಾರೆ. ನಾಲ್ಕು ಕೆ.ಜಿ ಗಾಂಜಾ ಹಾಗೂ 24 ಗ್ರಾಂ ಎಂಡಿಎಂಎ ಜಪ್ತಿ ಮಾಡಿದ್ದಾರೆ.

ಕ್ಲಾಸಿಫೈಡ್ಸ್
ADMISSION CORNER

BMS Educational Trust
BMS ACADEMY FOR PROFESSIONAL COURSES In Association with Sri Chaitanya ACADEMY
Coaching Classes for JEE, NEET & KCET with PUC/10+2
JEE (Advance + Mains)
NEET (Medical Aspirants)
KCET (Engineering Aspirants)
FEATURES
-PUC Classes @ BMSCW (PU) Campus
-Experience Faculties for PUC & JEE / NEET / KCET
-Daily Practice Papers (DDPs) & Regular Assignments
-Weekly Tests & Monthly Grand Tests with Detailed Analysis
Contact us at:
BMS Academy for Professional Courses
BMS College of Engineering Campus,
Bull Temple Rd, Basavanagudi, Bengaluru-19
89717 36008 | 90365 10011
bmsiasacademy@gmail.com www.bmsacademy.org.in
LIMITED SEATS - ENROLL NOW! Your success is our commitment.

ಅಪಘಾತ: ಲಾರಿ ಚಾಲಕ ಸ್ಥಳದಲ್ಲೇ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತಲಘಟ್ಟಪುರ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ 2 ಲಾರಿಗಳ ನಡುವೆ ಬುಧವಾರ ರಾತ್ರಿ ಸಂಭವಿಸಿದ್ದ ಅಪಘಾತದಲ್ಲಿ ಹಿಂಬದಿಯ ಲಾರಿ ಚಾಲಕ ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ಅಜ್ಜಯ್ಯ(25) ಮೃತಪಟ್ಟ ಲಾರಿ ಚಾಲಕ. ಠಾಣಾ ವ್ಯಾಪ್ತಿಯ ನೈಸ್ ರಸ್ತೆಯಲ್ಲಿ ಬುಧವಾರ ರಾತ್ರಿ 10.30ರ ಸುಮಾರಿಗೆ ಅಪಘಾತ ಸಂಭವಿಸಿತ್ತು.

ನೈಸ್ ರಸ್ತೆಯಲ್ಲಿ ಮುಂದೆ ಸಾಗುತ್ತಿದ್ದ ಲಾರಿಗೆ ಹಿಂದಿನಿಂದ ವೇಗವಾಗಿ ಬಂದ ಲಾರಿಯೊಂದು ಡಿಕ್ಕಿ ಹೊಡೆದು ಅಪಘಾತವಾಗಿದೆ. ಹಿಂಬದಿಯಲ್ಲಿ ಸಾಗುತ್ತಿದ್ದ ಲಾರಿಯನ್ನು ಅಜ್ಜಯ್ಯ ಅವರು ಚಾಲನೆ ಮಾಡುತ್ತಿದ್ದರು. ಅಜ್ಜಯ್ಯ ಅವರು ಅತಿ ವೇಗವಾಗಿ ಚಾಲನೆ ಮಾಡಿಕೊಂಡು ಹೋಗಿ, ಮುಂದಿನ ಲಾರಿಗೆ ಡಿಕ್ಕಿ ಹೊಡೆದಿದ್ದಾರೆ. ಡಿಕ್ಕಿಯ ರಭಸಕ್ಕೆ ಗಂಭೀರವಾಗಿ ಗಾಯಗೊಂಡಿದ್ದ ಅವರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

ತಲಘಟ್ಟಪುರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಟಿ.ಸಿ ಪಾಳ್ಯದ ಸಿಗ್ನಲ್ ಬಳಿಯ ಶೋರೂಂನಲ್ಲಿ ಅವಘಡ

43 ದ್ವಿಚಕ್ರ ವಾಹನಗಳು ಬೆಂಕಿಗೆ ಆಹುತಿ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ದ್ವಿಚಕ್ರ ವಾಹನ ಶೋರೂಂ ಹಾಗೂ ಸರ್ವಿಸ್ ಸೆಂಟರ್‌ನಲ್ಲಿ ಬುಧವಾರ ರಾತ್ರಿ ಅಗ್ನಿ ಅವಘಡ ಸಂಭವಿಸಿ, 43 ಬೈಕ್‌ಗಳು ಸುಟ್ಟು ಭಸ್ಮವಾಗಿವೆ. ಅಲ್ಲದೇ ಕಂಪ್ಯೂಟರ್, ಟೇಬಲ್, ಬ್ಯಾಟರಿ, ದಾಖಲೆಗಳು, ಪ್ರಿಂಟರ್, ಲ್ಯಾಪ್‌ಟಾಪ್ ಹಾಗೂ ಬೈಕ್ ರಿಪೇರಿ ಉಪಕರಣಗಳು ಭಸ್ಮವಾಗಿವೆ. ಅಪಾರ ಪ್ರಮಾಣದಲ್ಲಿ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

ಟಿ.ಸಿ ಪಾಳ್ಯ ಸಿಗ್ನಲ್ ಬಳಿ ಇರುವ ಬಜಾಜ್ ಕಂಪನಿಯ ಪ್ರವೀಣ್ ಮೋಟಾರ್ಸ್ ದ್ವಿಚಕ್ರ ವಾಹನ ಶೋರೂಂ ಹಾಗೂ ಸರ್ವಿಸ್ ಸೆಂಟರ್‌ನಲ್ಲಿ ಬುಧವಾರ ರಾತ್ರಿ 10.30ರ ಸುಮಾರಿನಲ್ಲಿ ಏಕಾಏಕಿ ಬೆಂಕಿ ಕಾಣಿಸಿಕೊಂಡಿತ್ತು. ಬುಧವಾರ ರಾತ್ರಿ ಸಿಬ್ಬಂದಿ, ಶೋರೂಂ ಬಂದ್ ಮಾಡಿ ಮನೆಗೆ ತೆರಳಿದ್ದರು. ರಸ್ತೆಯಲ್ಲಿ ಸಾಗುವವರು ಶೋರೂಂನಲ್ಲಿ ಹೊಗೆ ಬರುತ್ತಿರುವುದನ್ನು ಗಮನಿಸಿ, ಅಗ್ನಿಶಾಮಕ ದಳದ ಸಿಬ್ಬಂದಿಗೆ ಮಾಹಿತಿ ನೀಡಿದ್ದರು. ಅವರು ಸ್ಥಳಕ್ಕೆ ಬಂದು ಕಾರ್ಯಾಚರಣೆ ನಡೆಸಿ ಬೆಂಕಿ ನಂದಿಸಿದರು. ಅಷ್ಟರಲ್ಲಿ ಬಹುತೇಕ ಉಪಕರಣಗಳು ಹಾಗೂ ದ್ವಿಚಕ್ರ ವಾಹನಗಳು ಭಸ್ಮವಾಗಿದ್ದವು.

ಬೆಂಕಿ ಅವಘಡದಲ್ಲಿ ಭಸ್ಮವಾಗಿರುವ ದ್ವಿಚಕ್ರ ವಾಹನ

ಶೋರೂಂ ಬಂದ್ ಆಗಿದ್ದರಿಂದ ಯಾವುದೇ ಪ್ರಾಣಹಾನಿ ಸಂಭವಿಸಿಲ್ಲ. ಪ್ರವೀಣ್ ಕುಮಾರ್ ಎಂಬುವವರಿಗೆ ಸೇರಿದ ಶೋರೂಂನಲ್ಲಿ 13 ಹೊಸ ಬೈಕ್ ಹಾಗೂ 30 ಸರ್ವಿಸ್ ಬೈಕ್‌ಗಳು ಸುಟ್ಟುಹೋಗಿವೆ.

ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಸಂಭವಿಸಿರಬಹುದು ಎಂದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಕೆ.ಆರ್. ಪುರ ಠಾಣೆಯ ಪೊಲೀಸರು ಸ್ಥಳಕ್ಕೆ ಬಂದು ಪರಿಶೀಲನೆ ನಡೆಸಿದ್ದಾರೆ. ಪರಿಶೀಲನಾ ಕಾರ್ಯ ಪೂರ್ಣವಾದ ಮೇಲೆಯೇ ಘಟನೆಗೆ ಕಾರಣ ಏನು ಎಂಬುದು ಪತ್ತೆ ಆಗಲಿದೆ ಎಂದು ಮೂಲಗಳು ತಿಳಿಸಿವೆ.

ಮುನ್ನೆಚ್ಚರಿಕೆ ತೆಗೆದುಕೊಳ್ಳದ ಮಾಲೀಕರು: 2024ರ ನವೆಂಬರ್‌ನಲ್ಲಿ ರಾಜಾಜಿನಗರದ ರಾಜ್‌ಕುಮಾರ್ ರಸ್ತೆಯಲ್ಲಿರುವ ಮೈ ಇ.ವಿ(ಎಲೆಕ್ಟ್ರಿಕ್) ಸ್ಕೂಟರ್ ಶೋರೂಂನಲ್ಲಿ ಬೆಂಕಿ ಅವಘಡ ಸಂಭವಿಸಿತ್ತು. ಶೋರೂಂನಲ್ಲಿ ಕೆಲಸ ಮಾಡುತ್ತಿದ್ದ ಯುವತಿ ಸಜೀವ ದಹನ ಆಗಿದ್ದರು. 2025ರ ಜನವರಿಯಲ್ಲಿ ಮಹದೇವಪುರ ಪೊಲೀಸ್ ಠಾಣೆ ವ್ಯಾಪ್ತಿಯ ಬಿ.ನಾರಾಯಣಪುರದ ಗೋವಿಂದಪ್ಪ ಕಾಂಪ್ಲೆಕ್ಸ್ ಬಳಿಯ ಯಮಹಾ ಬೈಕ್ ಶೋರೂಂನಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಅವಘಡ ಸಂಭವಿಸಿ, 52 ದ್ವಿಚಕ್ರ ವಾಹನಗಳು ಸುಟ್ಟು ಹೋಗಿದ್ದವು.

2025ರ ಜನವರಿ 17ರಂದು ರಾಜ್‌ಕುಮಾರ್ ರಸ್ತೆಯಲ್ಲಿಯೇ ಇರುವ ಒಕಿನೋವಾ ಎಲೆಕ್ಟ್ರಿಕ್ ಸ್ಕೂಟರ್‌ಗಳಿದ್ದ(ಇ.ವಿ) ಶೋರೂಂನಲ್ಲೂ ಇಂತಹದ್ದೇ ಅವಘಡ ಸಂಭವಿಸಿ 19 ಸ್ಕೂಟರ್‌ಗಳು ಭಸ್ಮವಾಗಿದ್ದವು.

ಶೋರೂಂಗಳಲ್ಲಿ ಮುನ್ನೆಚ್ಚರಿಕಾ ಕ್ರಮ ತೆಗೆದುಕೊಳ್ಳುತ್ತಿಲ್ಲ. ಮಾರ್ಗಸೂಚಿ ಪಾಲಿಸುವಂತೆ ಹಿಂದೆಯೇ ಸೂಚನೆ ನೀಡಲಾಗಿತ್ತು. ಮತ್ತೊಮ್ಮೆ ಆದೇಶ ಹೊರಡಿಸಲಾಗುವುದು ಎಂದು ಅಗ್ನಿಶಾಮಕ ದಳದ ಮೂಲಗಳು ತಿಳಿಸಿವೆ.

ವಿದೇಶಿ ಮಹಿಳೆಗೆ ಲೈಂಗಿಕ ಕಿರುಕುಳ: ವಿಮಾನ ನಿಲ್ದಾಣದ ಸಿಬ್ಬಂದಿ ಬಂಧನ

ಪ್ರಜಾವಾಣಿ ವಾರ್ತೆ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಕೊರಿಯಾ ಮಹಿಳೆಯೊಬ್ಬರಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪದ ಮೇಲೆ ವಿಮಾಣ ನಿಲ್ದಾಣದ ಸಿಬ್ಬಂದಿಯನ್ನು ಪೊಲೀಸರು ಬಂಧಿಸಿದ್ದಾರೆ.


ಅಫಾನ್ ಅಹಮ್ಮದ್

ಮೊಹಮ್ಮದ್ ಅಫಾನ್ ಅಹಮ್ಮದ್ (25) ಬಂಧಿತ. ಈತ ವಿಮಾನ ನಿಲ್ದಾಣದ ಗ್ರೌಂಡ್ ಸ್ಟಾಫ್ ವಿಭಾಗದ ಖಾಸಗಿ ವಿಮಾನಯಾನ ಸಂಸ್ಥೆಯ ಗುತ್ತಿಗೆ ನೌಕರ.

ಬೆಂಗಳೂರಿನಿಂದ ಸೋಮವಾರ (ಜ.19) ಕೊರಿಯಾಗೆ ತೆರಳಲು ಟರ್ಮಿನಲ್-2ಕ್ಕೆ ಬಂದಿದ್ದ ಕೊರಿಯಾದ ಮಹಿಳೆ ಇಮಿಗ್ರೇಷನ್ ತಪಾಸಣೆ ಮುಗಿಸಿ ವಿಮಾನ ಹತ್ತಲು ಹೊರಟಾಗ ಈ ಘಟನೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮಹಿಳೆಯನ್ನು ಅಡ್ಡಗಟ್ಟಿದ ಆರೋಪಿ, ‘ನಿಮ್ಮ ಲಗೇಜ್‌ನಲ್ಲಿ ಸಮಸ್ಯೆ ಇದೆ. ಬೀಪ್ ಸೌಂಡ್ ಬರ್ತಾ ಇದೆ’ ಎಂದು ಮರು ತಪಾಸಣೆ ನೆಪದಲ್ಲಿ ಪುರುಷರ ಶೌಚಾಲಯದ ಸಮೀಪ ಕರೆದೊಯ್ದಿದ್ದಾನೆ. ಸೂಟ್‌ಕೇಸ್ ಬದಲು ತಪಾಸಣೆ ನೆಪದಲ್ಲಿ ಮಹಿಳೆಯ ಖಾಸಗಿ ಅಂಗಗಳನ್ನು ಹಲವಾರು ಬಾರಿ ಸ್ಪರ್ಶಿಸಿದ್ದಾನೆ. ಕೊನೆಗೆ ಗಟ್ಟಿಯಾಗಿ ತಬ್ಬಿಕೊಂಡಿದ್ದಾನೆ. ಇದಕ್ಕೆ ವಿದೇಶಿ ಮಹಿಳೆ ಬಲವಾಗಿ ಪ್ರತಿರೋಧ ಒಡ್ಡಿದಾಗ ‘ಥ್ಯಾಂಕ್ಸ್’ ಎಂದು ಹೇಳಿ ಸ್ಥಳದಿಂದ ಕಾಲ್ಕಿತ್ತಿದ್ದಾನೆ’ ಎಂದು ದೂರಿನಲ್ಲಿ ಉಲ್ಲೇಖಿಸಲಾಗಿದೆ.

ತಕ್ಷಣ ಮಹಿಳೆ ವಿಮಾನ ನಿಲ್ದಾಣದ ಭದ್ರತಾ ಸಿಬ್ಬಂದಿಗೆ ವಿಷಯ ತಿಳಿಸಿದ್ದಾರೆ. ಅವರ ಸಲಹೆ ಮೇರೆಗೆ ವಿಮಾನ ನಿಲ್ದಾಣದ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿ ಅಫಾನ್ ಅಹಮ್ಮದ್‌ನನ್ನು ಬಂಧಿಸಿದ್ದಾರೆ. ಘಟನೆ ಕುರಿತು ತನಿಖೆ ನಡೆಯುತ್ತಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಅನಧಿಕೃತ ಕಟ್ಟಡ ತೆರವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪೂರ್ವ ನಗರ ಪಾಲಿಕೆಯ ವೈಟ್‌ಫೀಲ್ಡ್ ಉಪ ವಿಭಾಗ ವ್ಯಾಪ್ತಿಯ ನಲ್ಲೂರಹಳ್ಳಿ, ವಿಕ್ಟೋರಿಯಾ ವ್ಯೂ ಬಡಾವಣೆಯಲ್ಲಿ ನಕ್ಷೆ ಮಂಜೂರಾತಿ ಪಡೆಯದೇ ಅನಧಿಕೃತವಾಗಿ ನಿರ್ಮಿಸಿದ್ದ ಕಟ್ಟಡವನ್ನು ತೆರವುಗೊಳಿಸಲಾಯಿತು ಎಂದು ಆಯುಕ್ತ ಡಿ.ಎಸ್.ರಮೇಶ್ ಅವರು ತಿಳಿಸಿದರು.

ನಕ್ಷೆ ಮಂಜೂರಾತಿ ಪಡೆಯದೇ ನಿಯಮಗಳನ್ನು ಉಲ್ಲಂಘಿಸಿ ನಿರ್ಮಿಸಲಾಗಿದ್ದ 6 ಮಹಡಿ ಕಟ್ಟಡದ ತೆರವು ಕಾರ್ಯಾಚರಣೆಯನ್ನು ಮಹದೇವಪುರ ವಲಯದ ಜಂಟಿ ಆಯುಕ್ತರಾದ ಕೆ. ದಾಕ್ಷಾಯಿಣಿ ಅವರ ನೇತೃತ್ವದಲ್ಲಿ ಗುರುವಾರ ನಡೆಸಲಾಯಿತು.

ಶ್ರೀಕಾಂತ್ ರೆಡ್ಡಿ ಅವರಿಗೆ ಸೇರಿದ ನಿವೇಶನದಲ್ಲಿ 6 ಮಹಡಿಗಳ ಕಟ್ಟಡವನ್ನು ಅನಧಿಕೃತವಾಗಿ ನಿರ್ಮಿಸಲಾಗುತ್ತಿತ್ತು. ನಕ್ಷೆ ಮಂಜೂರಾತಿ ಪಡೆಯದೇ ನಿಯಮಾವಳಿಗಳನ್ನು ಉಲ್ಲಂಘಿಸಿ ಕಟ್ಟಡ ನಿರ್ಮಿಸಿರುವುದು ದೃಢಪಟ್ಟಿತ್ತು. ಮಾಲೀಕರಿಗೆ ನೋಟಿಸ್ ಜಾರಿಗೊಳಿಸಿದ ಬಳಿಕ ನೈಸರ್ಗಿಕ ನ್ಯಾಯದಡಿ ಸಾಕಷ್ಟು ಕಾಲಾವಕಾಶ ನೀಡಿದರೂ ತೆರವುಗೊಳಿಸಲಿಲ್ಲ. ಹೀಗಾಗಿ ಪಾಲಿಕೆ ವತಿಯಿಂದ ತೆರವು ಕಾರ್ಯಾಚರಣೆ ನಡೆಯಿತು ಎಂದು ಮಾಹಿತಿ ನೀಡಿದರು.

ಅಕ್ರಮ ಕಟ್ಟಡಗಳು ಸಾರ್ವಜನಿಕ ಸುರಕ್ಷತೆ ಮತ್ತು ಯೋಜಿತ ನಗರ ಅಭಿವೃದ್ಧಿಗೆ ಗಂಭೀರ ಅಪಾಯವನ್ನುಂಟು ಮಾಡುತ್ತವೆ. ಈ ಹಿನ್ನೆಲೆಯಲ್ಲಿ ಬೆಂಗಳೂರು ಪೂರ್ವ ನಗರ ಪಾಲಿಕೆ, ಕಟ್ಟಡ ನಿಯಮ ಉಲ್ಲಂಘನೆಗಳ ವಿರುದ್ಧ ಶೂನ್ಯ ಸಹಿಷ್ಣುತೆ ನೀತಿ ಅನುಸರಿಸುತ್ತಿದ್ದು, ಮುಂದೆಯೂ ಇಂತಹ ಅಕ್ರಮ ನಿರ್ಮಾಣಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಮುಂದುವರಿಯಲಿದೆ ಎಂದು ಆಯುಕ್ತರು ತಿಳಿಸಿದರು.

ನಲ್ಲೂರಹಳ್ಳಿ, ವಿಕ್ಟೋರಿಯಾ ವ್ಯೂ ಬಡಾವಣೆಯಲ್ಲಿ ನಕ್ಷೆ ಮಂಜೂರಾತಿ ಪಡೆಯದೆ ನಿರ್ಮಿಸಿದ್ದ ಕಟ್ಟಡವನ್ನು ನಗರ ಪಾಲಿಕೆ ಸಿಬ್ಬಂದಿ ತೆರವುಗೊಳಿಸಿದರು

ಕಟ್ಟಡ ನಿರ್ಮಾಣಕ್ಕೆ ಮೊದಲು ಅಗತ್ಯ ಅನುಮೋದನೆಗಳನ್ನು ಪಡೆದು, ಅನುಮೋದಿತ ನಕ್ಷೆ ಮತ್ತು ನಿಯಮಾವಳಿಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ನಾಗರಿಕರು, ಕಟ್ಟಡ ಮಾಲೀಕರು ಹಾಗೂ ಬಿಲ್ಡರ್‌ಗಳಲ್ಲಿ ಮನವಿ ಮಾಡಲಾಗಿದೆ. ನಿಯಮ ಉಲ್ಲಂಘನೆ ಕಂಡುಬಂದಲ್ಲಿ ಕಾನೂನು ಕ್ರಮ ಅನಿವಾರ್ಯವಾಗುತ್ತದೆ ಎಂದು ಎಚ್ಚರಿಕೆ ನೀಡಿದರು.

ಸಲಹೆಗೆ ಆಹ್ವಾನ

ಬೆಂಗಳೂರು ಉತ್ತರ ನಗರ ಪಾಲಿಕೆಯ 2026-27ನೇ ಸಾಲಿನ ಬಜೆಟ್‌ಗೆ ನಾಗರಿಕರು, ಸಂಘ ಸಂಸ್ಥೆಗಳು, ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಹಾಗೂ ಎನ್‌ಜಿಒಗಳು ಸಲಹೆಗಳನ್ನು ನೀಡಬಹುದು ಎಂದು ಆಯುಕ್ತ ಪೊಮ್ಮಲ ಸುನೀಲ್ ಕುಮಾರ್ ತಿಳಿಸಿದರು.

ಮೂಲ ಸೌಕರ್ಯ ಅಭಿವೃದ್ಧಿ, ಸಾರ್ವಜನಿಕ ಆರೋಗ್ಯ ಮತ್ತು ಸುರಕ್ಷತೆ, ಪರಿಸರ ಸಂರಕ್ಷಣೆ, ಸಾಮಾಜಿಕ ಕಲ್ಯಾಣ ಹಾಗೂ ಪಾರದರ್ಶಕ ಆಡಳಿತ, ಸಾರ್ವಜನಿಕರ ಅಗತ್ಯಗಳಿಗೆ ಸ್ಪಂದಿಸುವ ಯೋಜನೆಗಳಿಗೆ ಆದ್ಯತೆ ನೀಡುವುದು ನಗರ ಪಾಲಿಕೆಯ ಮೂಲ ಧ್ಯೇಯ. ಈ ಹಿನ್ನೆಲೆಯಲ್ಲಿ ನಾಗರಿಕರು ಸಲಹೆಗಳನ್ನು ನೀಡಬಯಸಿದಲ್ಲಿ ಉಪ ನಿಯಂತ್ರಕರು (ಹಣಕಾಸು), ಬೆಂಗಳೂರು ಉತ್ತರ ನಗರ ಪಾಲಿಕೆ ಕಟ್ಟಡ, ಅಮೃತಹಳ್ಳಿ ಮುಖ್ಯರಸ್ತೆ, ಬ್ಯಾಟರಾಯನಪುರ, ಬೆಂಗಳೂರು -92 ಇಲ್ಲಿಗೆ ಸಲ್ಲಿಸಬಹುದು ಅಥವಾ ಇ-ಮೇಲ್ dcfbncc@gmail.com ಮೂಲಕ ಜ.29ರೊಳಗೆ ಸಲ್ಲಿಸಬಹುದು ಎಂದರು.

ಚಾಲಕರ ದಿನ: ಏರ್‌ಫ್ರೆಶ್‌ನರ್ ವಿತರಣೆ

ಬೆಂಗಳೂರು: ರಾಷ್ಟ್ರೀಯ ಚಾಲಕರ ದಿನದ ಪ್ರಯುಕ್ತ ಸೈಕಲ್ ಅಗರಬತ್ತಿ ಸಂಸ್ಥೆಯು ಚಾಲಕರಿಗೆ ಗುರುವಾರ ‘ವೈಬ್ ಪವರ್ ಬ್ಯಾಗ್’ ಏರ್ ಫ್ರೆಶ್‌ನರ್‌ಗಳನ್ನು ವಿತರಿಸಿತು.

ಓಲಾ ಕ್ಯಾಬ್ಸ್, ಇಂಡಿಯನ್ ಫೆಡರೇಶನ್ ಆಫ್ ಆ್ಯಪ್ ಬೇಸ್ಡ್ ಟ್ರಾನ್ಸ್‌ಪೋರ್ಟ್ ವರ್ಕರ್ಸ್, ವಿಆರ್‌ಎಲ್ ಟ್ರಾವೆಲ್ಸ್, ಕೆಎಸ್‌ಆರ್‌ಟಿಸಿ, ಮಹಾರಾಷ್ಟ್ರ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ ಮತ್ತು ದೆಹಲಿ ಸಾರಿಗೆ ಸಂಸ್ಥೆಗಳ ಸಹಭಾಗಿತ್ವದಲ್ಲಿ ದೇಶದ 10 ನಗರಗಳಲ್ಲಿ ಈ ಕಾರ್ಯಕ್ರಮ ಹಮ್ಮಿಕೊಳ್ಳುವ ಮೂಲಕ ಚಾಲಕರಿಗೆ ಕೃತಜ್ಞತೆ ಸಲ್ಲಿಸಲಾಗಿದೆ ಎಂದು ಸೈಕಲ್ ಪ್ಯೂರ್ ಅಗರಬತ್ತಿಯ ವ್ಯವಸ್ಥಾಪಕ ನಿರ್ದೇಶಕ ಅರ್ಜುನ್ ರಂಗಾ ತಿಳಿಸಿದರು.

ಐಎಫ್‌ಎಟಿ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪ್ರಶಾಂತ್ ಭಾಗೇಶ್ ಸಾವರ್ಡೇಕರ್, ವಿಆರ್‌ಎಲ್ ಟ್ರಾವೆಲ್ಸ್ ಲಾಜಿಸ್ಟಿಕ್ಸ್ ವಿಭಾಗದ ಉಪಾಧ್ಯಕ್ಷ ಅಶೋಕ್, ವಿವಿಧ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು.

ರಾಜ್ಯದ ಬಹುತೇಕ ಕಡೆ ಕೆಜಿ ಮಾಂಸ ₹300 ರಿಂದ ₹ 340 ದರಕ್ಕೆ ಮಾರಾಟ

ಬ್ರಾಯ್ಲರ್ ಕೋಳಿ ಕೊರತೆ: ಮಾಂಸದ ದರ ಏರಿಕೆ

• ಗೋವರ್ಧನ ಎಸ್.ಎನ್.

ಮುಖ್ಯಾಂಶಗಳು
- ಕೋಳಿಗಳ ಉತ್ಪಾದನಾ ವೆಚ್ಚ ಏರಿಕೆ
- ಬೇಡಿಕೆ ಹೆಚ್ಚಾದರೂ ಸಿಗದ ಕೋಳಿ
- ಬೇಸಿಗೆ ವೇಳೆ ಮಾಂಸದ ದರ ಇಳಿಕೆ ಸಾಧ್ಯತೆ

ಹುಬ್ಬಳ್ಳಿ: ಚಳಿಗಾಲದಲ್ಲಿ ಬ್ರಾಯ್ಲರ್ ಕೋಳಿ ಮಾಂಸಕ್ಕೆ ಬೇಡಿಕೆ ಹೆಚ್ಚಿದ್ದರೂ ನಿರೀಕ್ಷಿತ ಮಟ್ಟದಲ್ಲಿ ಕೋಳಿಗಳ ಪೂರೈಕೆ ಆಗುತ್ತಿಲ್ಲ. ಹವಾಮಾನ ವೈಪರೀತ್ಯ ಸೇರಿ ಬೇರೆ ಬೇರೆ ಕಾರಣಗಳಿಂದ ಕೋಳಿ ಉತ್ಪಾದಕ ಕಂಪನಿಗಳಲ್ಲಿ ಅಗತ್ಯ ಪ್ರಮಾಣದಲ್ಲಿ ಕೋಳಿಗಳೂ ಇಲ್ಲ. ಪರಿಣಾಮವಾಗಿ ಕೋಳಿ ಮಾಂಸದ ದರ ದುಬಾರಿಯಾಗಿದೆ.

ಡಿಸೆಂಬರ್‌ನಲ್ಲಿ ಬ್ರಾಯ್ಲರ್ ಕೋಳಿ ಮಾಂಸದ ದರ ₹240 ಇತ್ತು. ಸದ್ಯ, ರಾಜ್ಯದ ಬಹುತೇಕ ಕಡೆ ಒಂದು ಕೆ.ಜಿ ಕೋಳಿ ಮಾಂಸದ ದರ ₹300ರಿಂದ ₹340 ಇದೆ. ನಾಟಿ ಕೋಳಿ ದರ ಕೆ.ಜಿ.ಗೆ ₹400ರ ಸಮೀಪಲ್ಲಿದ್ದರೆ, ಕುರಿ–ಮೇಕೆ ಮಾಂಸದ ದರ ₹700ರಿಂದ ₹800ರ ಆಸುಪಾಸಿನಲ್ಲಿದೆ. ಇದೀಗ ಬ್ರಾಯ್ಲರ್ ಕೋಳಿ ಮಾಂಸ ದರವೂ ಏರಿಕೆಯಾಗಿದೆ.

‘ಡಿಸೆಂಬರ್ ಕೊನೆಯಲ್ಲಿ ಮತ್ತು ಜನವರಿ ಮೊದಲ ವಾರದಲ್ಲಿ ಮೊಟ್ಟೆಗಳನ್ನು ಕೋಳಿಮರಿಗಳನ್ನಾಗಿಸುವ ಪ್ರಕ್ರಿಯೆ ನಡೆಯುತ್ತದೆ. ಅವುಗಳ ಬೆಳವಣಿಗೆ ಆಗುವವರೆಗೆ ಕೊರತೆ ಆಗಲಿದೆ. ಬೇಸಿಗೆ ವೇಳೆಗೆ ಮಾಂಸ ಸೇವನೆ ಪ್ರಮಾಣ ಕಡಿಮೆ ಆಗುತ್ತದೆ. ಆಗ, ಕೋಳಿ ಮಾಂಸದ ದರ ಕಡಿಮೆ ಆಗುತ್ತದೆ’ ಎಂದು ಧಾರವಾಡ ಕರ್ನಾಟಕ ಸಹಕಾರ ಕುಕ್ಕುಟ ಮಹಾಮಂಡಳದ ಸಹಾಯಕ ನಿರ್ದೇಶಕ ಡಾ. ಮಹೇಶ ಕುರಿಯವರ ‘ಪ್ರಜಾವಾಣಿ’ಗೆ ತಿಳಿಸಿದರು.

‘ಶೀತ ವಾತಾವರಣದಲ್ಲಿ ಕೋಳಿ ಮರಿಗಳು ಅಷ್ಟಾಗಿ ಬೆಳವಣಿಗೆ ಆಗುವುದಿಲ್ಲ. ಕೋಳಿಗಳ ಉತ್ಪಾದನಾ ವೆಚ್ಚ ಏರಿಕೆ ಆಗಿರುವುದರಿಂದ ಕೋಳಿ ಮಾರಾಟಗಾರರು ಸಗಟು ದರ ಹೆಚ್ಚಿಸಿದ್ದಾರೆ. ಒಮ್ಮೆಲೇ 500 ಕೋಳಿಗಳನ್ನು ಕೇಳಿದರೆ, 200ರಿಂದ 250 ಕೋಳಿಗಳನ್ನು ಮಾತ್ರ ಪೂರೈಸುತ್ತಾರೆ’ ಎಂದು ಹುಬ್ಬಳ್ಳಿಯ ಚಿಕನ್ ಅಂಗಡಿಯೊಂದರ ಮಾಲೀಕ ಆನಂದ ಹೇಳಿದರು.

‘ಕೋಳಿ ಮಾಂಸದ ಅಂಗಡಿಯವರಿಗೆ ನಮ್ಮ ಕಂಪನಿಯ ಕೋಳಿಗಳನ್ನು ನಿರಂತರವಾಗಿ ಪೂರೈಸುತ್ತಿದ್ದೇವೆ. ಆದರೆ, ಕೆಲ ಕಂಪನಿಗಳಲ್ಲಿ ಕೋಳಿಗಳೇ ಇಲ್ಲ. ಬೇಡಿಕೆ ಹೆಚ್ಚಿರುವುದರಿಂದ ಕೋಳಿಗಳ ಕೊರತೆಯಾಗಿದೆ. ಇದರಿಂದ ದರ ಏರಿಕೆ ಆಗುತ್ತಿದೆ’ ಎಂದು ಬೆಳಗಾವಿ ಜಿಲ್ಲೆಯ ಚನ್ನಮ್ಮನ ಕಿತ್ತೂರಿನ ಸ್ನೇಹ ಕಂಪನಿಯ ಹನುಮಂತ ಹುಂಚೆಕಟ್ಟೆ ಹಾಗೂ ಕರ್ನಾಟಕ ಪೌಲ್ಟ್ರಿ ಫಾರಂನ ಅವೀಶ್ ತಿಳಿಸಿದರು.

> ಚಳಿಗಾಲದಲ್ಲಿ ಬ್ರಾಯ್ಲರ್ ಕೋಳಿ ದರ ದುಬಾರಿಯಾಗಿದ್ದು ಇದೇ ಮೊದಲು. ಒಂದು ಕೆ.ಜಿ ಮಾಂಸ ಖರೀದಿಸುತ್ತಿದ್ದ ಗ್ರಾಹಕರು ಈಗ ಅರ್ಧ ಕೆ.ಜಿ. ಖರೀದಿಸುತ್ತಿದ್ದಾರೆ
> **ಹರೀಶ್ ಕುಮಾರ್,** ಮ್ಯಾಕ್ಸ್‌ಫ್ರೆಶ್ ಮೀಟ್, ತುಮಕೂರು

> ಸ್ಥಳೀಯ ಮಟ್ಟದಲ್ಲಿ ಪೌಲ್ಟ್ರಿ ಫಾರ್ಮ್‌ಗಳ ಸಂಖ್ಯೆ ಕುಸಿದಿದೆ. ಹೀಗಾಗಿ ದೊಡ್ಡ ಕಂಪನಿಯವರು ಕೇಳಿದಷ್ಟೇ ದರ ಕೊಟ್ಟು, ಕೋಳಿ ಖರೀದಿಸಬೇಕಿದೆ
> **ಅಮ್ಜತ್ ಖಾನ್,** ಕೋಳಿ ಮಾಂಸ ವ್ಯಾಪಾರಿ, ಹುಬ್ಬಳ್ಳಿ

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

BUILDERS ESSENTIAL
Water Proofing
LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology-9880916988

REAL ESTATE SELLING
Flat
Banashankari
KATRIGUPPE GANAPATHI HANUMANTHA RESIDENCY 3 BHK FLATS FOR SALE Rs. 8999/ SFT Contact: 94482-58218/ 96065-03064

House
Mysore
CORNER SITE WITH OLD HOUSE (1967) MYSORE FOR TOTAL SALE. [LEASE AND JV NOT ACCEPTABLE] TOTAL AREA 1649 sqft. CALL 6363664804. NO BROKERS/ AGENTS

Sites
Multiple Locations
SADASHIVNAGAR 60*90, Dollars Colony 50*90, Judicial Layout 80*120, Arkavathi Layout 50*80, Sanjaynagar 30*45. 9538111239.

JOB OPPORTUNITIES
General
WANTED IMMEDIATELY Scorpio Driver com Office Assistant, located at Srirampuram, Bangalore. Contact: 8088384110

BUSINESS
Business Offers
Finance
MSME LOAN Available for Any Start-Ups Companies And Existing Running Companies Hotels,Shops Establishments Etc. Contact- 7204995189.

CONNECT

Yellarigu Swagatha
Namma Karigaru, Namma Parampara
Book Your Pass
2026
Karigar Bazaar
SECOND EDITION
17–26 January | 11am - 8pm
What's New This Year?
200+ master artisans from across India • Handlooms • Folk art • Jewellery • Home décor • Live craft demonstrations • Cultural evenings • Regional food
Every piece is handmade. Every story is heartfelt. Come, experience the warmth of India's crafts.
Join us to celebrate craft, culture and community — together, once again.
Jayamahal Palace Hotel,
#1, Near Cantonment Railway Station Road, Bengaluru
Entry: ₹100 | Free Parking | Pet-Friendly | Mob: +91 87883 49654

JOB OPPORTUNITIES

PERSONAL
Change of Name
I, SUNIL .R R/a. #352, 3rd Main, Sindunadi road, Brundavan Nagar, Bengaluru -560019 Have Changed My Minor Son's Name From ADVIK .S. YOGRAJ To RITHVIK .S vide Affidavit Dated 22/01/2026 before Notary Mamatha N.K Bangalore

I, CHIPPADA SUBBARAO S/O CHIPPADA SATYAM, R/O B 602, Keya Around The Life, Near Chaitanya Ananya, Seegehalli, Bangalore-560067 have changed name from CHIPPADA SUBBARAO to CHIPPAADA V V SUBBARAO FOR ALL PURPOSES

I, MADHAN V. S/o.Late Venkatesh V. R/a#65 Sri.Lakshmi Venkateshwara Nilaya Gattigerepalya Banashankari 6th Stage,6th Block Chudenapura post Bengaluru 560060 have changed my Name to MADAN V. vide affidavit dated:23.12.2025 before Notary Mohammed Hussain.K. Bangalore.

PUBLIC NOTICE
ಸಾರ್ವಜನಿಕ ಪ್ರಕಟಣೆ
ಈ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ನಮ್ಮ ಕಕ್ಷಿದಾರರು, ಇಲ್ಲಿ ಕೆಳಗೆ ಬಹು ಸ್ಪಷ್ಟವಾಗಿ ವಿವರಿಸಲಾಗಿರುವ ಮತ್ತು ಇಲ್ಲಿ ಇನ್ನುಮುಂದೆ "ಷೆಡ್ಯೂಲ್ ಪ್ರಾಪರ್ಟಿ" ಎನ್ನಲಾಗುವ ಸ್ಥಿರಾಸ್ತಿಯನ್ನು, ಅದರ ಪ್ರಸಕ್ತ ಮಾಲೀಕರಾದ ಶ್ರೀಮತಿ. ವಿಜಯಲಕ್ಷ್ಮಿ ರಾಜಗೋಪಾಲ್, ವಿಳಾಸ ನಂ. 1, ಎಸ್‌ಬಿಐ ಕಾಲೋನಿ, 7ನೇ ಬಿ ಮುಖ್ಯರಸ್ತೆ, 3ನೇ ಬ್ಲಾಕ್, ಕೋರಮಂಗಲ, 560034 (ಇಲ್ಲಿ ಇನ್ನುಮುಂದೆ "ಮಾಲೀಕರು" ಎನ್ನಲಾಗುವ) ಇವರಿಂದ ಖರೀದಿಸಲು ಉದ್ದೇಶಿಸಿರುತ್ತಾರೆ.
ಆದ್ದರಿಂದ, ಈ ಪ್ರಕಟಣೆಯ ಮೂಲಕ ಸಾಮಾನ್ಯ ಸಾರ್ವಜನಿಕರಿಗೆ ತಿಳಿಸುವುದು ಏನೆಂದರೆ, ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಅಥವಾ ಪ್ರಾಪರ್ಟಿಯ ಯಾವುದೇ ಭಾಗಕ್ಕೆ ಸಂಬಂಧಿಸಿದಂತೆ, ಯಾವುದೇ ವ್ಯಕ್ತಿ, ಸಂಸ್ಥೆ, ಕಂಪನಿ, ಸಂಘ, ಇನ್‌ಸ್ಟಿಟ್ಯೂಷನ್ (ಸಾಂಸ್ಥಿಕ ಅಥವಾ ಇನ್ನಿತರೆ) ಯಾವುದೇ ಸ್ವರೂಪದ ಕ್ಲೇಮ್‌ಗಳು ಅಥವಾ ಹಕ್ಕು, ಅಧಿಕಾರ, ಹಿತಾಸಕ್ತಿ, ಬಾಕಿ ವ್ಯಾಜ್ಯ, ಟೆನನ್ಸಿ, ಅಡಮಾನ, ಚಾರ್ಜ್, ಲೀನ್ ಅಥವಾ ಡಿಮಾಂಡ್ ಅಥವಾ ಇನ್ನಾವುದೇ ಸ್ವರೂಪದ ಹಿತಾಸಕ್ತಿಗಳಿದ್ದಲ್ಲಿ, ಅಂತಹವರು ಈ ಪ್ರಕಟಣೆಯ ದಿನಾಂಕದಿಂದ 15 (ಹದಿನೈದು) ದಿನಗಳೊಳಗೆ, ಲಿಖಿತ ರೂಪದಲ್ಲಿ ಎಲ್ಲಾ ವಿವರಗಳನ್ನು ದಾಖಲಾತಿ ಪುರಾವೆಗಳ ಸಮೇತ, ಕೆಳಕಂಡ ಸಹಿದಾರರ ಗಮನಕ್ಕೆ ತರಬೇಕು, ಇಲ್ಲವಾದಲ್ಲಿ, ಮೇಲ್ಕಂಡ ಮಾಲೀಕರು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಸ್ಪಷ್ಟ ಹಾಗೂ ಮಾರಾಟ ಮಾಡಬಲ್ಲ ಹಕ್ಕು ಹೊಂದಿರುತ್ತಾರೆ ಮತ್ತು ಸದರಿ ಷೆಡ್ಯೂಲ್ ಪ್ರಾಪರ್ಟಿಗೆ ಸಂಬಂಧಿಸಿದಂತೆ ಇನ್ನಿತರೆ ಯಾವುದೇ ವ್ಯಕ್ತಿ/ಸಂಸ್ಥೆಯ, ಯಾವುದೇ ಹಕ್ಕು, ಅಧಿಕಾರ, ಹಿತಾಸಕ್ತಿ ಅಥವಾ ಕ್ಲೇಮ್‌ಗಳು ಇರುವುದಿಲ್ಲ ಎಂದು ಪರಿಗಣಿಸಲಾಗುತ್ತದೆ; ಮತ್ತು ನಮ್ಮ ಕಕ್ಷಿದಾರರು ಸದರಿ ಷೆಡ್ಯೂಲ್ ಪ್ರಾಪರ್ಟಿ ಖರೀದಿಸುವ ತಮ್ಮ ಉದ್ದೇಶವನ್ನು ಪೂರ್ಣಗೊಳಿಸುವ ಹಾಗೂ ಸ್ವತ್ತನ್ನು ತಮ್ಮ ಸ್ವಾಧೀನತೆಗೆ ಪಡೆದುಕೊಳ್ಳಲು ಸ್ವತಂತ್ರರಾಗುತ್ತಾರೆ ಎಂದು ಭಾವಿಸಲಾಗುತ್ತದೆ. ಮೇಲೆ ತಿಳಿಸಲಾಗಿರುವ ನಿಗದಿತ ಅವಧಿಯ ನಂತರ ಸಲ್ಲಿಕೆಯಾಗುವ ಯಾವುದೇ ಆಕ್ಷೇಪಣೆಗಳನ್ನು ಮತ್ತು/ಅಥವಾ ಕ್ಲೇಮ್‌ಗಳನ್ನು ಪರಿಗಣಿಸಲಾಗುವುದಿಲ್ಲ ಮತ್ತು ಅಂತಹವುಗಳು ನಮ್ಮ ಕಕ್ಷಿದಾರರ ಮೇಲೆ ಯಾವುದೇ ನಿರ್ಬಂಧಗಳನ್ನು ರೂಪಿಸುವುದಿಲ್ಲ.
ಷೆಡ್ಯೂಲ್ ಪ್ರಾಪರ್ಟಿ
ಜಕ್ಕಸಂದ್ರ ಗ್ರಾಮ, ಕೋರಮಂಗಲ, ಬೆಂಗಳೂರು, 560034 ವಿಳಾಸದಲ್ಲಿನ ಹಿಂದಿನ ಸರ್ವೆ ನಂ. 56 ರಲ್ಲಿನ, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಆಫೀಸರ್ಸ್ ಕಾಲೋನಿ, ಕೋರಮಂಗಲ, ವಾರ್ಡ್ ನಂ. 68 ರಲ್ಲಿರುವ ಸೈಟ್ ನಂ. 1 ಮತ್ತು 2, ಇಪಿಐಡಿ ನಂ. 5239060890 ಹೊಂದಿರುವ, ಸುಮಾರು 4,000 ಚದರ ಅಡಿ ವಿಸ್ತೀರ್ಣವುಳ್ಳ ವಸತಿಯೋಗ್ಯ ಕಟ್ಟಡದ ಜೊತೆಗೆ ಸುಮಾರು 5,673 ಚದರ ಅಡಿ ವಿಸ್ತೀರ್ಣವುಳ್ಳ ಜಮೀನಿನ ಎಲ್ಲಾ ಭೂಭಾಗಗಳು ಸೇರಿರುತ್ತವೆ ಮತ್ತು ಸದರಿ ಸ್ವತ್ತಿನ ಚಕ್ಕುಬಂದಿ:– ಪೂರ್ವಕ್ಕೆ: ಸೈಟ್ ನಂ. 15 ಮತ್ತು 16; ಪಶ್ಚಿಮಕ್ಕೆ: ರಸ್ತೆ; ಉತ್ತರಕ್ಕೆ: ಸೈಟ್ ನಂ. 3; ಮತ್ತು ದಕ್ಷಿಣಕ್ಕೆ: ಸರ್ವಿಸ್ ರಸ್ತೆ.
ಮಹೇಶ್ ಮದನ್ ಭಟ್, ವಕೀಲರು, ಎಂಎಂಬಿ ಲೀಗಲ್
634, 2ನೇ ಮಹಡಿ, 5ನೇ ಕ್ರಾಸ್, 4ನೇ ಬ್ಲಾಕ್, ಕೋರಮಂಗಲ, ಬೆಂಗಳೂರು – 560034
ಫೋನ್: 91-80 -41284444 / 41285555
ಇ-ಮೇಲ್: mahesh@mmblegal.in
ಸ್ಥಳ: ಬೆಂಗಳೂರು ದಿನಾಂಕ: 23.01.2026

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

DH DECCAN HERALD
THANKSGIVING
Book your Thanksgiving Advertisement in Deccan Herald for ANNUAL FEAST OF MOTHER OF PERPETUAL HELP ON 25th January 2026
@ 2100 with GST
(Size 4cmx5cm)
For more Details Contact:
Ph :080 - 45557163 | 164 | 9731810277

ಬೆಂಗಳೂರು 2ನೇ ದಟ್ಟಣೆಯ ನಗರ

ಜಗತ್ತಿನ ನಗರಗಳ ವಾಹನ ದಟ್ಟಣೆಯ ದತ್ತಾಂಶ ಬಿಡುಗಡೆ

ಮುಖ್ಯಾಂಶಗಳು

- ವಾಹನದಟ್ಟಣೆ ಒಂದೇ ವರ್ಷದಲ್ಲಿ ಶೇ 1.7ರಷ್ಟು ಏರಿಕೆ
- ಪುಣೆಗೆ 5ನೇ, ಮುಂಬೈಗೆ 18ನೇ ಸ್ಥಾನ
- 50 ಸ್ಥಾನದೊಳಗಿರುವ ನವದೆಹಲಿ, ಕೋಲ್ಕತ್ತ, ಜೈಪುರ, ಚೆನ್ನೈ

ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಸಂಪರ್ಕಿಸುವ ಬಳ್ಳಾರಿ ರಸ್ತೆಯಲ್ಲಿ ವಾಹನ ದಟ್ಟಣೆ (ಸಾಂದರ್ಭಿಕ ಚಿತ್ರ)

ಬೆಂಗಳೂರು (ಪಿಟಿಐ): ಭಾರತದ ಐ.ಟಿ ಕೇಂದ್ರವಾದ ಬೆಂಗಳೂರು ಜಾಗತಿಕವಾಗಿ ಎರಡನೇ ಅತಿ ಹೆಚ್ಚು ವಾಹನದಟ್ಟಣೆಯ ನಗರ ಎಂದು ನೆದರ್‌ಲ್ಯಾಂಡ್‌ನ ಟಾಮ್‌ಟಾಮ್ ಸಂಸ್ಥೆ ಬಿಡುಗಡೆ ಮಾಡಿರುವ ಸಂಚಾರ ಸೂಚ್ಯಂಕದಲ್ಲಿ ಉಲ್ಲೇಖಿಸಲಾಗಿದೆ. ಮೆಕ್ಸಿಕೊ ಮೊದಲ ಸ್ಥಾನದಲ್ಲಿದೆ.

ಬೆಂಗಳೂರಿನಲ್ಲಿ ಸರಾಸರಿ ದಟ್ಟಣೆಯು ಶೇ 74.4ರಷ್ಟಿದೆ. 2024ಕ್ಕೆ ಹೋಲಿಸಿದರೆ 2025ರಲ್ಲಿ ಶೇ 1.7ರಷ್ಟು ಹೆಚ್ಚಾಗಿದೆ. ಚಾಲಕರು 15 ನಿಮಿಷಗಳಲ್ಲಿ ಸರಾಸರಿ 4.2 ಕಿ.ಮೀ. ದೂರವನ್ನಷ್ಟೇ ಕ್ರಮಿಸಲು ಸಾಧ್ಯವಾಗಿದೆ. 10 ಕಿ.ಮೀ. ಸಾಗಲು ಸರಾಸರಿ 36 ನಿಮಿಷ ಒಂಬತ್ತು ಸೆಕೆಂಡ್ಸ್ ತೆಗೆದುಕೊಂಡಿತ್ತು. ದಟ್ಟಣೆ ಸಮಯದಲ್ಲಿ ಗಂಟೆಗೆ ಸರಾಸರಿ 13.9 ಕಿ.ಮೀ.ಗೆ ಇಳಿದಿತ್ತು ಎಂದು ವರದಿ ತಿಳಿಸಿದೆ.

2025ರ ಮೇ 17ರಂದು ನಗರದಲ್ಲಿ ಪ್ರಯಾಣದ ಅನುಭವ ತುಂಬಾ ಕೆಟ್ಟದಾಗಿತ್ತು ಎಂದು ಗುರುತಿಸಲಾಗಿದೆ. ದಟ್ಟಣೆಯ ಮಟ್ಟವು ಶೇ 101ರಷ್ಟಿತ್ತು. ಆ ದಿನ ಸಂಜೆ 6ಕ್ಕೆ ದಟ್ಟಣೆ ಪ್ರಮಾಣವು ಶೇ 183ಕ್ಕೆ ಏರಿತು. 2.5 ಕಿ.ಮೀ. ಕ್ರಮಿಸಲು 15 ನಿಮಿಷ ತೆಗೆದುಕೊಂಡಿದೆ ಎಂದು ಉಲ್ಲೇಖಿಸಲಾಗಿದೆ.

ಬೆಂಗಳೂರು ಅಲ್ಲದೇ ಭಾರತದ ಆರು ನಗರಗಳು ಜಾಗತಿಕವಾಗಿ ಅಗ್ರ 35 ನಗರಗಳ ಪಟ್ಟಿಯಲ್ಲಿ ಸ್ಥಾನ ಪಡೆದಿವೆ. ಪುಣೆ ಶೇಕಡ 71.1ರಷ್ಟು ದಟ್ಟಣೆಯೊಂದಿಗೆ ಐದನೇ ಸ್ಥಾನದಲ್ಲಿದೆ. ಮುಂಬೈ ಶೇ 63.2 (18ನೇ ಸ್ಥಾನ), ನವದೆಹಲಿ ಶೇ 60.2(23ನೇ ಸ್ಥಾನ), ಕೋಲ್ಕತ್ತ ಶೇ 58.9(29ನೇ ಸ್ಥಾನ), ಜೈಪುರ ಶೇ 58.7 (30ನೇ ಸ್ಥಾನ) ಮತ್ತು ಚೆನ್ನೈ ಶೇ 58.6ರಷ್ಟು(32ನೇ ಸ್ಥಾನ) ಜನದಟ್ಟಣೆಯನ್ನು ಹೊಂದಿದೆ.

ಪ್ರಮುಖ ಹೆದ್ದಾರಿಗಳು ಸೇರಿದಂತೆ ಸಂಪೂರ್ಣ ರಸ್ತೆ ಜಾಲವನ್ನು ಒಳಗೊಂಡಂತೆ ಮಹಾನಗರ ಮತ್ತು ನಗರ ಪ್ರದೇಶಗಳಲ್ಲಿನ ಚಾಲಕರಿಂದ ದತ್ತಾಂಶವನ್ನು ಸಂಗ್ರಹಿಸಲಾಗಿದೆ ಎಂದು ಟಾಮ್‌ಟಾಮ್ ತಿಳಿಸಿದೆ.

ವಿಶ್ವದ ನಗರಗಳಲ್ಲಿ ಪ್ರಯಾಣಕ್ಕೆ ತೆಗೆದುಕೊಳ್ಳುವ ಸರಾಸರಿ ಸಮಯ ಮತ್ತು ದಟ್ಟಣೆ ಮಟ್ಟವನ್ನು ಆಧರಿಸಿ ಮೌಲ್ಯಮಾಪನ ಮಾಡಲಾಗುತ್ತದೆ.

ಆಕ್ಸಿಜನ್ ದುರಂತ ಸಂತ್ರಸ್ತರಿಗೆ ಶೀಘ್ರ ನೇಮಕಾತಿ ಪತ್ರ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: 'ಐದು ವರ್ಷಗಳ ಹಿಂದೆ ಜಿಲ್ಲಾ ಆಸ್ಪತ್ರೆಯಲ್ಲಿ ಆಮ್ಲಜನಕ ಕೊರತೆಯಿಂದ ಮೃತಪಟ್ಟವರ ಕುಟುಂಬಗಳಿಗೆ ಸರ್ಕಾರಿ ನೌಕರಿ ನೀಡಲಾಗುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಫೆಬ್ರುವರಿಯಲ್ಲಿ ನೇಮಕಾತಿ ಪತ್ರಗಳನ್ನು ವಿತರಿಸಲಿದ್ದಾರೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಇಲ್ಲಿ ಗುರುವಾರ ಮಾಧ್ಯಮ ಪ್ರತಿನಿಧಿಗಳೊಂದಿಗೆ ಮಾತನಾಡಿದ ಅವರು, 'ಗಣರಾಜ್ಯೋತ್ಸವ ದಿನವಾದ ಜ.26ರಂದು 30 ಮಂದಿಗೆ ನೇಮಕಾತಿ ಪತ್ರ ವಿತರಿಸಲು ಸಿದ್ಧತೆ ಮಾಡಿಕೊಳ್ಳಲಾಗಿತ್ತು. ಆದರೆ, ಮುಖ್ಯಮಂತ್ರಿಯವರು ಭೇಟಿ ನೀಡಿದಾಗಲೇ ವಿತರಿಸಲು ನಿರ್ಧರಿಸಲಾಗಿದೆ' ಎಂದರು.

ಸುಧಾ, ಮಯೂರ ಓದಿರಿ

ಜ.26ಕ್ಕೆ 'ನಗ್ನಸತ್ಯ' ಸಿನಿಮಾ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಮೇಶ್ ಕಾಮತ್ ನಿರ್ದೇಶನದ, ಕಿರಣ್ಮಯಿ ಕಾಮತ್ ನಿರ್ಮಾಣದ ಕೊಂಕಣಿ ಸಿನಿಮಾ 'ನಗ್ನಸತ್ಯ' ಜ.26ರಂದು ಪ್ರದರ್ಶನಗೊಳ್ಳಲಿದೆ.

'ಬೆಂಗಳೂರಿನ ಸೌತ್ ಎಂಡ್ ವೃತ್ತದ ಸಮೀಪವಿರುವ ಪೈ ವಿಸ್ತಾ ಕನ್ವೆನ್ಷನ್ ಹಾಲ್‌ನಲ್ಲಿ ಸಂಜೆ 5ರಿಂದ ಸಿನಿಮಾ ಪ್ರದರ್ಶನಗೊಳ್ಳಲಿದ್ದು, ಪ್ರವೇಶ ಉಚಿತವಾಗಿರಲಿದೆ' ಎಂದು ರಮೇಶ್ ಕಾಮತ್ ತಿಳಿಸಿದ್ದಾರೆ.

'ಇದೊಂದು ಸಾಮಾಜಿಕ ಕೌಟುಂಬಿಕ ಸಿನಿಮಾವಾಗಿದೆ. ಇದೇ ಮೊದಲ ಬಾರಿಗೆ ಮೂರು ಕೊಂಕಣಿ ಭಾಷೆಯ ವಿಧಗಳನ್ನು ಇಲ್ಲಿ ಕಾಣಬಹುದು. ಮಧ್ಯಮ ವರ್ಗಕ್ಕೆ ಸೇರಿದ ಮಹಿಳೆಯೊಬ್ಬಳು ಪ್ರಬಲ ವ್ಯಕ್ತಿಯೊಬ್ಬನಿಂದ ಮೋಸಕ್ಕೆ ಒಳಗಾಗುತ್ತಾಳೆ. ಆಕೆ ನ್ಯಾಯ ಸಿಗದೆ ಹೆಣ್ಣು ಮಗುವಿಗೆ ಜನನ ನೀಡಿ ನಿಧನ ಳಾಗುತ್ತಾಳೆ. ಪತ್ರಕರ್ತೆಯಾಗುವ ಆಕೆಯ ಮಗಳು ಇಪ್ಪತ್ತು ವರ್ಷದ ಬಳಿಕ ತಾಯಿಯ ಸಾವಿನ ಪ್ರಕರಣವನ್ನು ಭೇದಿಸಿ ತಪ್ಪಿತಸ್ಥರಿಗೆ ಶಿಕ್ಷೆ ಕೊಡಿಸುವುದೇ ಚಿತ್ರದ ಕಥಾಹಂದರ. ಸಿನಿಮಾದಲ್ಲಿ ಆದ್ಯಾ ನಾಯಕ್ ಮುಖ್ಯ ಭೂಮಿಕೆಯಲ್ಲಿದ್ದು, ಬಹುಭಾಷಾ ನಟ ಗೋಪಿನಾಥ್ ಭಟ್, ಗ್ರೀಷ್ಮಾ ಪ್ರಭು, ಕರ್ನಲ್ ಅಶೋಕ್ ಕಿಣಿ, ದಯಾನಂದ ಪೈ, ಬಿ.ವಿ.ಗಣೇಶ್ ಪ್ರಭು, ಆನಂದ್ ನಗರ್ಕರ್ ಮುಂತಾದವರು ತಾರಾಬಳಗದಲ್ಲಿದ್ದಾರೆ' ಎಂದು ರಮೇಶ್ ಕಾಮತ್ ತಿಳಿಸಿದ್ದಾರೆ.

'ಆದಿಪುರಾಣದಲ್ಲಿಯೇ ವೈಜ್ಞಾನಿಕ ಚಿಂತನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕನ್ನಡ ಸಾಹಿತ್ಯವು ಅತ್ಯಂತ ವೈಜ್ಞಾನಿಕ ಹಾಗೂ ವೈಚಾರಿಕತೆಯಿಂದ ಕೂಡಿದ್ದು, ಆದಿಕವಿ ಪಂಪನ ಮೊದಲ ಕೃತಿ 'ಆದಿಪುರಾಣ'ದಲ್ಲಿಯೇ ನಾವು ಇದನ್ನು ಕಾಣಬಹುದು' ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಹೇಳಿದರು.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸಹಯೋಗದಲ್ಲಿ ಹಮ್ಮಿಕೊಂಡಿರುವ ಎರಡು ದಿನಗಳ ವಿಜ್ಞಾನ ಸಾಹಿತ್ಯ ಹಾಗೂ ಸಂವಹನ ಶಿಬಿರದಲ್ಲಿ ಅವರು ಗುರುವಾರ ಮಾತನಾಡಿದರು.

ವಿಜ್ಞಾನ ಹಾಗೂ ತಂತ್ರಜ್ಞಾನ ಅಕಾಡೆಮಿಯ ಅಧ್ಯಕ್ಷ ರಾಜಾಸಾಬ್, ಕನ್ನಡದಲ್ಲಿ ರಚನೆಯಾದ ವಿಜ್ಞಾನ ಸಾಹಿತ್ಯದ ಪ್ರೇರಣೆ, ಕುವೆಂಪು ಮುಂತಾದವರ ಸಾಹಿತ್ಯದಲ್ಲಿನ ವಿಜ್ಞಾನದ ಎಳೆಗಳು, ವೈದ್ಯ ಸಾಹಿತ್ಯ ಮತ್ತು ವಿಜ್ಞಾನ ಸಾಹಿತ್ಯಕ್ಕೆ ಸಂದ ಪ್ರಶಸ್ತಿಗಳು ಪ್ರಮುಖ ಕೃತಿಗಳು ಹಾಗೂ ಸಾಹಿತ್ಯಕಾರರ ಕುರಿತು ಮಾತನಾಡಿದರು.

ಮನೋವೈದ್ಯ ಡಾ. ಸಿ.ಆರ್. ಚಂದ್ರಶೇಖರ್ ಅವರು ಶಿಬಿರವನ್ನು ಉದ್ಘಾಟಿಸಿದರು. ರಾಜ್ಯದ ವಿವಿಧ ಮೂಲೆಗಳಿಂದ ಸುಮಾರು 70 ಜನರು ಶಿಬಿರಕ್ಕೆ ನೋಂದಣಿ ಮಾಡಿಕೊಂಡಿದ್ದಾರೆ.

ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಸದಸ್ಯರಾದ ಡಾ. ವಸುಂಧರಾ ಭೂಪತಿ ಅವರು ಶಿಬಿರದ ನಿರ್ದೇಶಕರಾಗಿ, ಸಾಹಿತ್ಯ ಅಕಾಡೆಮಿಯ ಸದಸ್ಯರಾದ ಸುಮಾ ಸತೀಶ್, ವಿಜ್ಞಾನ ಅಕಾಡೆಮಿಯ ಸಿಇಒ ಆನಂದ್ ಅವರು ಶಿಬಿರದ ಸಂಚಾಲಕರಾಗಿದ್ದರು. 'ನಮ್ಮ ಆರೋಗ್ಯ ನಮ್ಮಿಂದಲೇ' ಎಂಬ ಕೃತಿಯನ್ನು ಈ ಸಂದರ್ಭದಲ್ಲಿ ಬಿಡುಗಡೆ ಮಾಡಲಾಯಿತು.

ವಿವಿಧ ವಿಷಯಗಳ ಕುರಿತ ಗೋಷ್ಠಿಗಳಲ್ಲಿ ಎಂ.ಎಸ್. ಆಶಾದೇವಿ, ಗುರುರಾಜ ಎಸ್. ದಾವಣಗೆರೆ, ಕೆ.ಎನ್. ಗಣೇಶಯ್ಯ ಮತ್ತು ನೇಮಿಚಂದ್ರ ಅವರು ಉಪನ್ಯಾಸ ನೀಡಿದರು.



ಗುಕೇಶ್‌ಗೆ ಜಯ, ಅರ್ಜುನ್‌ಗೆ ಹಿನ್ನಡೆ

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ವಿಶ್ವ ಚಾಂಪಿಯನ್ ಡಿ.ಗುಕೇಶ್ ಅವರು ಟಾಟಾ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಕೊನೆಗೂ ಜಯ ದಾಖಲಿಸಿದರು. ಸತತ ನಾಲ್ಕು ಡ್ರಾಗಳ ನಂತರ ಬುಧವಾರ ನಡೆದ ಐದನೇ ಸುತ್ತಿನಲ್ಲಿ ಭಾರತದ ಆಟಗಾರ, ಝೆಕ್ ರಿಪಬ್ಲಿಕ್‌ನ ಥಾಯ್ ದೈ ವಾನ್ ನೂಯೆನ್ ಅವರನ್ನು ಸೋಲಿಸಿದರು.

ಅರ್ಜುನ್ ಇರಿಗೇಶಿ ಅವರಿಗೆ ಸ್ಲೊವೇನಿಯಾದ ವ್ಲಾದಿಮಿರ್ ಫೆಡೊಸೀವ್ ಸೋಲಿನ ಆಘಾತ ನೀಡಿದರು. ಗುರುವಾರ ಟೂರ್ನಿಗೆ ವಿರಾಮದ ದಿನವಾಗಿತ್ತು.

ಪ್ರಜಾವಾಣಿ

ಬೇಕಾಗಿದ್ದಾರೆ

ಆರ್ಟಿಸ್ಟ್/ಗ್ರಾಫಿಕ್ ಡಿಸೈನರ್

■ ಅರ್ಹತೆಗಳು ■

- ಚಿತ್ರಕಲೆಯಲ್ಲಿ ಪದವಿಯನ್ನು ಪಡೆದಿರಬೇಕು
- ಗ್ರಾಫಿಕ್ ಡಿಸೈನ್‌ನಲ್ಲಿ ಕೌಶಲ ಹೊಂದಿರಬೇಕು
- ಇಲಸ್ಟ್ರೇಷನ್ ಮಾಡಿಕೊಡುವ ಸಾಮರ್ಥ್ಯ ಇರಬೇಕು
- ಇನ್‌ಡಿಸೈನ್, ಇಲಸ್ಟ್ರೇಟರ್, ಫೋಟೊಶಾಪ್‌ನಲ್ಲಿ ಕೆಲಸ ಮಾಡಲು ಬಲ್ಲವರಾಗಿರಬೇಕು
- ಪತ್ರಿಕೋದ್ಯಮದಲ್ಲಿ ಕನಿಷ್ಠ ಐದು ವರ್ಷ ಕೆಲಸ ಮಾಡಿದ ಅನುಭವ ಇರಬೇಕು
- 40 ವರ್ಷದೊಳಗಿನವರು ಆಗಿರಬೇಕು

ಈ ಮೇಲಿನ ಅರ್ಹತೆಗಳು ನಿಮಗೆ ಇದ್ದಲ್ಲಿ, ಹೆಸರು, ವಿಳಾಸ, ವಿದ್ಯಾರ್ಹತೆ ಹಾಗೂ ಅನುಭವದ ವಿವರ ಒಳಗೊಂಡ ಅರ್ಜಿಯನ್ನು ಜ. 30ರೊಳಗೆ ಈ ಕೆಳಕಂಡ ವಿಳಾಸಕ್ಕೆ ತಲುಪುವಂತೆ ಕಳಿಸಬೇಕು.

ಇ–ಮೇಲ್ ವಿಳಾಸ: careers@prajavani.co.in

ಅಂಚೆ ವಿಳಾಸ: ಮ್ಯಾನೇಜರ್ (ನೇಮಕಾತಿ)
ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ.
ನಂ 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಪದ್ಮಶ್ರೀ ಇನ್‌ಸ್ಟಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್ ಆ್ಯಂಡ್ ಸೈನ್ಸ್ ಫೋರಂನಲ್ಲಿ ಅಟಲ್ ಕಮ್ಯುನಿಟಿ ಇನ್ನೋವೇಶನ್ ಸೆಂಟರ್‌ನ ಉದ್ಘಾಟನಾ ಸಮಾರಂಭದಲ್ಲಿ ಆದಿಚುಂಚನಗಿರಿ ಮಹಾಸಂಸ್ಥಾನದ ನಿರ್ಮಲಾನಂದನಾಥ ಸ್ವಾಮೀಜಿ, ಎಐಎಂಇ ನಿರ್ದೇಶಕ ದೀಪಕ್ ಬಾಗ್ಲಾ, ಬೆಂಗಳೂರು ವಿಶ್ವವಿದ್ಯಾಲಯದ ಕುಲಪತಿ ಎಸ್‌.ಎಂ. ಜಯಕರ, ರಾಜೀವ್‌ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಬಿ.ಸಿ. ಭಗವಾನ್, ಶಾಸಕ ಡಾ.ಸಿ.ಎನ್. ಅಶ್ವತ್ಥನಾರಾಯಣ, ಟಿ.ಕೆ. ನಾರಾಯಣಪ್ಪ, ಸತೀಶ್ ಶ್ರುತಿ ಎಚ್.ಎಸ್. ಉಪಸ್ಥಿತರಿದ್ದರು

'ರಾಜಕಾರಣಕ್ಕೆ ರಾಜ್ಯಪಾಲರ ಬಳಕೆ'

ರಾಮನಗರ: 'ರಾಜ್ಯಪಾಲರನ್ನು ಸ್ವತಂತ್ರವಾಗಿ ಕೆಲಸ ಮಾಡಲು ಬಿಡದ ಕೇಂದ್ರ ಸರ್ಕಾರ, ಅವರನ್ನು ತನ್ನ ರಾಜಕಾರಣಕ್ಕೆ ಬಳಸಿಕೊಳ್ಳುತ್ತಿದೆ. ಆ ಮೂಲಕ ಪ್ರಜಾಪ್ರಭುತ್ವ ವ್ಯವಸ್ಥೆಯನ್ನು ಶಿಥಿಲಗೊಳಿಸುವ ಕೆಲಸ ಮಾಡುತ್ತಿದೆ' ಎಂದು ಜಿಲ್ಲಾ ಉಸ್ತುವಾರಿ ಸಚಿವ ರಾಮಲಿಂಗಾರೆಡ್ಡಿ ಆಕ್ರೋಶ ವ್ಯಕ್ತಪಡಿಸಿದರು.

ಬೆಂಗಳೂರಿನ ವಿಧಾನಸೌಧದಲ್ಲಿ ನಡೆದ ಜಂಟಿ ಅಧಿವೇಶನದಲ್ಲಿ ರಾಜ್ಯಪಾಲರ ಭಾಷಣ ಮೊಟಕು ಕುರಿತು ನಗರದಲ್ಲಿ ಗುರುವಾರ ಸುದ್ದಿಗಾರರ ಪ್ರಶ್ನೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದರು.

'ಸುರಕ್ಷತೆ: ಸ್ಲೀಪರ್ ಬಸ್‌ಗೆ ಮಾನದಂಡ'

ನಿಯಮ ಪಾಲಿಸಿದರೆ ಮಾತ್ರ ವಾಹನ ಸಾಮರ್ಥ್ಯ ಪ್ರಮಾಣಪತ್ರ: ಸಾರಿಗೆ ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪ್ರಯಾಣಿಕರ ಸುರಕ್ಷತಾ ಮಾನದಂಡಗಳನ್ನು ಪಾಲಿಸಿದರೆ ಮಾತ್ರ ಖಾಸಗಿ ಹವಾನಿಯಂತ್ರಿತ ಸ್ಲೀಪರ್ ಕೋಚ್ ಹಾಗೂ ಪ್ರವಾಸಿ ಬಸ್‌ಗಳಿಗೆ ವಾಹನ ಸಾಮರ್ಥ್ಯ ಪ್ರಮಾಣಪತ್ರ ನೀಡಲಾಗುತ್ತದೆ' ಎಂದು ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಅವರು ತಿಳಿಸಿದರು.

ಗ್ರೇಟರ್ ಬೆಂಗಳೂರು ಪ್ರಾಧಿಕಾರ (ಜಿಬಿಎ) ಕಚೇರಿ ಆವರಣದಲ್ಲಿ ಜೀರ್ಣೋದ್ಧಾರಗೊಂಡ ಏಳು ಸುತ್ತಿನಕೋಟೆ ಸಪ್ತಮಾತೃಕೆಯರ ಆದಿಶಕ್ತಿ ದೇವಸ್ಥಾನವನ್ನು ಗುರುವಾರ ಉದ್ಘಾಟಿಸಿ ಸುದ್ದಿಗಾರರೊಂದಿಗೆ ಅವರು ಮಾತನಾಡಿದರು.

'ರಾಜ್ಯದಲ್ಲಿ ಸಂಭವಿಸಿರುವ ಸ್ಲೀಪರ್ ಕೋಚ್ ಬಸ್‌ಗಳ ಅಗ್ನಿ ಅವಘಡಗಳ ಹಿನ್ನೆಲೆಯಲ್ಲಿ ಪ್ರಯಾಣಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಸರ್ಕಾರ ಈ ನಿರ್ಧಾರ ಕೈಗೊಂಡಿದೆ. ರಾಜ್ಯದಾದ್ಯಂತ ಸಂಚರಿಸುವ ಎಲ್ಲ ಸ್ಲೀಪರ್ ಕೋಚ್ ಹಾಗೂ ಪ್ರವಾಸಿ ಬಸ್‌ಗಳು ಕಡ್ಡಾಯವಾಗಿ ಸುರಕ್ಷತಾ ಮಾನದಂಡಗಳನ್ನು ಅನುಸರಿಸಬೇಕು' ಎಂದು ಹೇಳಿದರು.

'ಬೆಂಗಳೂರು ಸೇರಿದಂತೆ ಹಲವು ಕಡೆ ಎಸಿ ಸ್ಲೀಪರ್ ಕೋಚ್ ಬಸ್‌ಗಳಲ್ಲಿ ಬೆಂಕಿ ಕಾಣಿಸಿಕೊಳ್ಳುವ ಪ್ರಕರಣಗಳು ಹೆಚ್ಚಾಗುತ್ತಿದ್ದು, ಇದರಿಂದ ಅನೇಕ ಜೀವಗಳು ಅಪಾಯಕ್ಕೆ ಸಿಲುಕುತ್ತಿವೆ. ಹೀಗಾಗಿ, ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ಮತ್ತು ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ರೋಡ್ ಟ್ರಾನ್ಸ್‌ಪೋರ್ಟ್ ಸಂಸ್ಥೆಗಳು ಪ್ರಯಾಣಿಕರ ರಕ್ಷಣೆಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವಂತೆ ಸೂಚಿಸಿವೆ. ಅದರಂತೆ ಮಾನದಂಡಗಳನ್ನು ರಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಸಾರಿಗೆ ಇಲಾಖೆ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಬಸ್‌ಗಳ ವಿನ್ಯಾಸ, ನಿರ್ಮಾಣ ವಿಧಾನ ಹಾಗೂ ಸುರಕ್ಷತಾ ಸೌಲಭ್ಯಗಳ ಕುರಿತು ವಿವರವಾಗಿ ಚರ್ಚಿಸಲಾಗಿದೆ. ಅದರಂತೆ ಸುರಕ್ಷತಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕೆಂಬ ಆದೇಶ ಹೊರಡಿಸಲಾಗಿದೆ ಎಂದು ರಾಮಲಿಂಗಾರೆಡ್ಡಿ ತಿಳಿಸಿದರು.

ಮುಖ್ಯಾಂಶಗಳು

- ಅಗ್ನಿ ಅವಘಡ ಪ್ರಕರಣ ಹೆಚ್ಚಾದ ಕಾರಣ ಸರ್ಕಾರದಿಂದ ಕ್ರಮ
- ಎಲ್ಲ ಸ್ಲೀಪರ್ ಕೋಚ್, ಪ್ರವಾಸಿ ಬಸ್‌ಗಳಿಗೆ ನಿಯಮ ಅನ್ವಯ

ಖಾಸಗಿ ಬಸ್‌ಗಳಿಗೆ ಸುರಕ್ಷತಾ ಮಾನದಂಡಗಳು

- ಚಾಲಕನ ಆಸನದ ಹಿಂಭಾಗದಲ್ಲಿ ತುರ್ತು ನಿರ್ಗಮನ ದ್ವಾರದ ವ್ಯವಸ್ಥೆ ಇರಬೇಕು
- ಸ್ಲೀಪರ್ ಬರ್ತ್‌ಗಳಲ್ಲಿ 'ಸೈಡರ್ ಓಪನ್' (ಪರದೆಗಳನ್ನು ತೆಗೆಯುವುದು) ವ್ಯವಸ್ಥೆ ಕಡ್ಡಾಯ
- ಒಂದು ತಿಂಗಳೊಳಗೆ ಅಗ್ನಿ ಪತ್ತೆ ವ್ಯವಸ್ಥೆ ಅಳವಡಿಸಿಕೊಳ್ಳಬೇಕು
- ಕನಿಷ್ಠ 10 ಕೆ.ಜಿ ತೂಕದ ಅಗ್ನಿಶಾಮಕ ಉಪಕರಣವನ್ನು ಬಸ್‌ನಲ್ಲಿ ಇರಿಸಬೇಕು
- ಬಸ್ ಕವಚ ನಿರ್ಮಾಣ ಸಂಸ್ಥೆಯ ಮಾನ್ಯತೆ ಪರಿಶೀಲನೆಯ ನಂತರವೇ ನೋಂದಣಿ ಪ್ರಕ್ರಿಯೆ
- ಚಾಸಿಸ್‌ಗೆ ಅನಧಿಕೃತ ವಿಸ್ತರಣೆ ಮಾಡಲು ನಿರ್ಬಂಧ
- ಅನುಮೋದಿತ ಪರೀಕ್ಷಾ ಸಂಸ್ಥೆಯಿಂದ ಪ್ರಮಾಣ ಪತ್ರ ಪಡೆಯುವುದು ಕಡ್ಡಾಯ

ನಗರದಲ್ಲಿ ಇಂದು

ಏಳು ಸುತ್ತಿನಕೋಟೆ ಸಪ್ತಮಾತೃಕಾ ಸಹಿತ ಆದಿಶಕ್ತಿ ದೇವಾಲಯದ ಉದ್ಘಾಟನೆ, ದೇವತಾ ಪೂಜಾ ಕಾರ್ಯಕ್ರಮಗಳು: ಆಯೋಜನೆ: ಗ್ರೇಟರ್ ಬೆಂಗಳೂರು ಪ್ರಾಧಿಕಾರ, ಪಾಲಿಕೆಗಳ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘ, ಸ್ಥಳ: ಜಿಬಿಎ ಕೇಂದ್ರ ಕಚೇರಿ, ಬೆಳಿಗ್ಗೆ 9

ವಲ್ಲೀದೇವಸೇನಾ ಸಮೇತ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನದ ರಜತ ಬ್ರಹ್ಮ ರಥೋತ್ಸವ: ರುದ್ರಾಭಿಷೇಕ, ನಿತ್ಯಹೋಮ, ಪ್ರಕಾರೋತ್ಸವ, ಮಹಾಮಂಗಳಾರತಿ, ಆಯೋಜನೆ: ವಲ್ಲೀದೇವಸೇನಾ ಸಮೇತ ಸುಬ್ರಹ್ಮಣ್ಯೇಶ್ವರಸ್ವಾಮಿ ದೇವಸ್ಥಾನ, ಸುಬ್ರಹ್ಮಣ್ಯಪುರ, ಬೆಳಿಗ್ಗೆ 10

ಅಂಗಳದಲ್ಲಿ ತಿಂಗಳ ಪುಸ್ತಕ: ಮಹಾತ್ಮ ಗಾಂಧಿ ಅವರ 'ಆತ್ಮಕಥೆ ಅಥವಾ ನನ್ನ ಸತ್ಯಾನ್ವೇಷಣೆ' ಪುಸ್ತಕದ ಕುರಿತು: ಮೀನಾಕ್ಷಿ ಬಾಳಿ, ಉದ್ಘಾಟನೆ: ಎಚ್.ಎನ್. ಸುಬ್ರಹ್ಮಣ್ಯ, ಅಧ್ಯಕ್ಷತೆ: ಮಾನಸ, ಅತಿಥಿಗಳು: ವೈ.ಜಿ. ಮಧುಸೂದನ್, ವಿ. ವೆಂಕಟಶಿವಾರೆಡ್ಡಿ, ಬಿ.ಎಸ್. ಅರುಣ್ ಕುಮಾರ್, ತಲ್ಲಂ ಆರ್. ದ್ವಾರಕಾನಾಥ್, ವಿ. ಮಂಜುನಾಥ್, ಸುಧಾಕರ್ ಇಸ್ಸೂರಿ, ಜಿ.ಎಂ. ರವೀಂದ್ರ, ಆಯೋಜನೆ: ಕನ್ನಡ ಪುಸ್ತಕ ಪ್ರಾಧಿಕಾರ, ಸ್ಥಳ: ಡಾ.ಎಚ್.ಎನ್. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 11

ಮೀನಾಕ್ಷಿ ಬಾಳಿ

ಎಸ್.ಸಿ. ಶರ್ಮಾ ಅವರು ಬರೆದಿರುವ 'ಪ್ರೊ.ಬಿ.ಆರ್. ಶೇಷಾದ್ರಿ ಅಯ್ಯಂಗಾರ್' ಪುಸ್ತಕ ಬಿಡುಗಡೆ: ಸ್ವಾಮಿ ವೀರೇಶಾನಂದ ಸರಸ್ವತಿ, ಆಯೋಜನೆ: ಮೈಸೂರು ಎಜುಕೇಷನ್ ಸೊಸೈಟಿ, ಸ್ಥಳ: ಎಂಇಎಸ್ ಎಸಿಎಸ್ ಕಾಲೇಜು, ಮಲ್ಲೇಶ್ವರ, ಬೆಳಿಗ್ಗೆ 11

ರಾಷ್ಟ್ರೀಯ ಹೆಣ್ಣುಮಕ್ಕಳ ದಿನಾಚರಣೆ: ಅಧ್ಯಕ್ಷತೆ: ದಿನೇಶ್ ಗುಂಡೂರಾವ್, ಅತಿಥಿಗಳು: ಹರ್ಷ ಗುಪ್ತ, ಗುರುದತ್ತ ಹೆಗಡೆ, ಅವಿನಾಶ್ ಮೆನನ್ ರಾಜೇಂದ್ರನ್, ಜಗದೀಶ್ ಜಿ., ವಸಂತ್ ಕುಮಾರ್ ಕೆ., ಆಯೋಜನೆ: ಆರೋಗ್ಯ ಇಲಾಖೆ, ಸ್ಥಳ: ಆರೋಗ್ಯ ಸೌಧ, ಬೆಳಿಗ್ಗೆ 11.30

ಜನತಾ ಪಕ್ಷದ 50ನೇ ವಾರ್ಷಿಕೋತ್ಸವ: ಉದ್ಘಾಟನೆ: ಕೋಡಿಹಳ್ಳಿ ಚಂದ್ರಶೇಖರ್, ಅಧ್ಯಕ್ಷತೆ: ವಾಣಿ ಎನ್. ಶೆಟ್ಟಿ, ಅತಿಥಿಗಳು: ನಾಗೇಶ್ ಎನ್., ನಿರ್ಮಲಾ, ಆಯೋಜನೆ: ಜನತಾ ಪಕ್ಷ, ಸ್ಥಳ: ಸಾಮ್ರಾಟ್ ಹೋಟೆಲ್, ಶೇಷಾದ್ರಿಪುರ, ಬೆಳಿಗ್ಗೆ 11.30

ತೇಜಸ್ವಿ ವಿಸ್ಮಯ ವಿಷಯಾಧಾರಿತ ಫಲಪುಷ್ಪ ಪ್ರದರ್ಶನದಲ್ಲಿ ವಿವಿಧ ಸ್ಪರ್ಧೆಗಳ ಬಹುಮಾನ ವಿತರಣೆ: ಬಿ.ಎಲ್. ಶಂಕರ್, ಗಿರೀಶ್ ಆರ್., ಕಡಿದಾಳ್ ಪ್ರಕಾಶ್, ಪ್ರದೀಪ್ ಕೆಂಜಿಗೆ, ಅಧ್ಯಕ್ಷತೆ ಉದಯ್ ಬಿ. ಗರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಸ್ಥಳ: ಡಾ.ಎಂ.ಎಚ್. ಮರೀಗೌಡ ಸ್ಮಾರಕ ಭವನ, ಲಾಲ್‌ಬಾಗ್, ಮಧ್ಯಾಹ್ನ 2.30

ನೇತಾಜಿ ಸುಭಾಷ್ ಚಂದ್ರ ಬೋಸ್ ಜನ್ಮದಿನಾಚರಣೆ: ಭಾಷಣಕಾರರು: ಎ. ಮುರಿಗೆಪ್ಪ, ಕಮಲ್ ಸೇನ್, ಕೃಷ್ಣ, ಅಧ್ಯಕ್ಷತೆ: ಎಂ. ಉಮಾದೇವಿ, ಆಯೋಜನೆ: ನೇತಾಜಿ ಸುಭಾಷ್ ಸ್ಮರಣ ಸಮಿತಿ, ಸ್ಥಳ: ನೇತಾಜಿ ವೃತ್ತ, ಮತ್ತಿಕೆರೆ, ಸಂಜೆ 5

ಬೆಂಗಳೂರು ಹಬ್ಬ: ಸಂಜೆ 4ಕ್ಕೆ 'ಮಲ್ಲೇಶ್ವರ ಹೋಗೋಣ' ಐತಿಹಾಸಿಕ-ಸಾಂಸ್ಕೃತಿಕ ನಡಿಗೆ: ಸ್ಥಳ: ಸಾಗರ್ ಸಿಟಿಆರ್ ಮಲ್ಲೇಶ್ವರ, 6.30ಕ್ಕೆ ಕರ್ನಾಟಕ ಶಾಸ್ತ್ರೀಯ ಸಂಗೀತ ಗಾಯನ: ನಾಗರಾಜ್‌ರಾವ್ ಹವಾಲ್ದಾರ್, ಸ್ಥಳ: ದಿ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, 6.30ಕ್ಕೆ 'ವಾಲಿ ವಧೆ' ತಾಳಮದ್ದಳೆ ಪ್ರದರ್ಶನ, ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, 7ಕ್ಕೆ 'ಶೂರ್ಪನಖಿ-ಎ ಸರ್ಚ್' ನಾಟಕ ಪ್ರದರ್ಶನ: ಸ್ಥಳ: ಸಭಾ, ಕಾಮರಾಜ ರಸ್ತೆ, 7ಕ್ಕೆ ಸಂಗೀತ ಕಛೇರಿ: ಗಾಯನ: ತಾಜದಾರ್ ಜುನೈದ್, ಸ್ಥಳ: ಸ್ವಾತಂತ್ರ್ಯ ಉದ್ಯಾನ, 7.30ಕ್ಕೆ 'ದಿ ನೆದರ್' ನಾಟಕ ಪ್ರದರ್ಶನ: ಪ್ರಸ್ತುತಿ: ಅಸಕ್ತ ಕಲಾಮಂಚ್ ಪುಣೆ, ಸ್ಥಳ: ಪ್ರೆಸ್ಟೀಜ್ ಸೆಂಟರ್ ಫಾರ್ ಪರ್ಫಾರ್ಮಿಂಗ್ ಆರ್ಟ್ಸ್

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಭಾಗವಹಿಸುವವರು: ಕೆ.ಬಿ. ಪ್ರಸನ್ನಕುಮಾರ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಸಂಜೆ 5.45

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸುರಭಿ ಯು. ಶರ್ಮ, ಅತಿಥಿಗಳು: ಪಿ. ಪ್ರವೀಣ್ ಕುಮಾರ್, ಗೀತಾ ರಮಾನಂದ, ಎಸ್. ಮುರಳಿಧರನ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 6

ವಿಜ್ಞಾನ ಸಾಹಿತ್ಯ ಹಾಗೂ ಸಂವಹನ ಶಿಬಿರ: 'ಕೃತಕ ಬುದ್ಧಿಮತ್ತೆ ಭವಿಷ್ಯದ ವಿಜ್ಞಾನವೋ, ವಿಜ್ಞಾನದ ಭವಿಷ್ಯವೋ' ಗೋಷ್ಠಿ: ಕೊಳ್ಳೇಗಾಲ ಶರ್ಮ, 'ಕೃಷಿ-ಪರಿಸರ ಸಂವಹನ' ಗೋಷ್ಠಿ: ನೂರ್ ಸಮದ್ ಅಬ್ಬಲಗೆರೆ, 'ಪಾರಿಭಾಷಿಕ ಪದಗಳು' ಡಾ.ನಾ. ಸೋಮೇಶ್ವರ, 'ನೀವೂ ಪ್ರಯತ್ನಿಸಿ ಕೀ-ವರ್ಡ್ಸ್ ಕೊಟ್ಟರೆ ಲೇಖನ ಮಾಡುವುದು ಹೇಗೆ?' ಗೋಷ್ಠಿ: ಟಿ.ಆರ್. ಅನಂತರಾಮು, ಚಳ್ಳಕೆರೆ ಯರ್ರಿಸ್ವಾಮಿ, ಸಮಾರೋಪ ಸಮಾರಂಭ: ಅತಿಥಿಗಳು: ನೆಲ್ಲುಕುಂಟೆ ವೆಂಕಟೇಶಯ್ಯ, ಎಚ್.ಆರ್. ಸ್ವಾಮಿ, ರಾಜಾಸಾಬ್ ಎ.ಎಚ್., ಅಧ್ಯಕ್ಷತೆ: ಎಲ್. ಎನ್. ಮುಕುಂದರಾಜ್, ಆಯೋಜನೆ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ಕರ್ನಾಟಕ ಸಾಹಿತ್ಯ ಅಕಾಡೆಮಿ, ಸ್ಥಳ: ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿದ್ಯಾರಣ್ಯಪುರ, ಬೆಳಿಗ್ಗೆ 10ರಿಂದ

ಡಾ. ನಾ.ಸೋಮೇಶ್ವರ

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ.. nagaradalli_indu@prajavani.co.in

PUBLIC NOTICE

(ಭಾರತೀಯ ರಿಸರ್ವ್ ಬ್ಯಾಂಕ್ (ನಾನ್-ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನೀಸ್ – ಷೇರುಹಂಚಿಕೆ ಅಥವಾ ನಿಯಂತ್ರಣದ ಸ್ವಾಧೀನ) ನಿರ್ದೇಶನಗಳು, ದಿನಾಂಕ 28 ನವೆಂಬರ್ 2025 ರ ಪ್ಯಾರಾಗ್ರಾಫ್ 8 ಅನ್ವಯ)

ಈ ಸಾರ್ವಜನಿಕ ಸೂಚನೆಯನ್ನು Agya Technologies Private Limited ("ಕಂಪನಿ") ಮತ್ತು BrokenTusk Technologies Private Limited ("ಸ್ವಾಧೀನಗಾರ") ಒಟ್ಟಾಗಿ ಹೊರಡಿಸುತ್ತಿದ್ದು, ಇದು ಭಾರತೀಯ ರಿಸರ್ವ್ ಬ್ಯಾಂಕ್ ("RBI") ಯಿಂದ 28 ನವೆಂಬರ್ 2025 ರಂದು ಹೊರಡಿಸಲಾದ ನಾನ್-ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನೀಸ್ – ಷೇರುಹಂಚಿಕೆ ಅಥವಾ ನಿಯಂತ್ರಣದ ಸ್ವಾಧೀನ ನಿರ್ದೇಶನಗಳು ("ಸ್ವಾಧೀನ ನಿರ್ದೇಶನಗಳು") ಯ ಪ್ಯಾರಾಗ್ರಾಫ್ 8 ಅನ್ವಯವಾಗಿದೆ.

ಕಂಪನಿಯ ಹಿನ್ನೆಲೆ:

ಈ ಕಂಪನಿ ಒಂದು ಪ್ರೈವೇಟ್ ಲಿಮಿಟೆಡ್ ಕಂಪನಿಯಾಗಿದ್ದು, ಇದರ CIN – U72900KA2021PTC146931 ಆಗಿದೆ. ಕಂಪನಿಯ ನೋಂದಾಯಿತ ಕಚೇರಿ ವಿಳಾಸ: Third Floor, No. 2/1, Embassy Icon Annexe, Infantry Road, Bangalore – 560001. ಭಾರತೀಯ ರಿಸರ್ವ್ ಬ್ಯಾಂಕ್ ಕಂಪನಿಗೆ 31 ಆಗಸ್ಟ್ 2023 ರಂದು ನಾನ್-ಬ್ಯಾಂಕಿಂಗ್ ಫೈನಾನ್ಷಿಯಲ್ ಕಂಪನಿ – ಅಕೌಂಟ್ ಅಗ್ರಿಗೇಟರ್ (NBFC-AA) ಆಗಿ ಸ್ಥಾಪನೆ, ಮಾಲೀಕತ್ವ ಮತ್ತು ಕಾರ್ಯಾಚರಣೆಗೆ ಅನುಮತಿ ನೀಡಿದೆ. ಇದು ಮಾಸ್ಟರ್ ಡೈರೆಕ್ಷನ್ – Non-Banking Financial Company – Account Aggregator (Reserve Bank) Directions, ದಿನಾಂಕ 02 ಸೆಪ್ಟೆಂಬರ್ 2016, ಸಮಯಾನುಗುಣ ತಿದ್ದುಪಡಿ ಸಹಿತ, ಅನ್ವಯ ನೀಡಲಾಗಿದೆ.

ಕಂಪನಿಯು N–02.00361 ಎಂಬ ನೋಂದಣಿ ಸಂಖ್ಯೆಯನ್ನು ಹೊಂದಿದ್ದು, ಭಾರತದಲ್ಲಿ ತನ್ನ ಅಕೌಂಟ್ ಅಗ್ರಿಗೇಷನ್ ವ್ಯವಹಾರವನ್ನು 'ಖಜಣಣ ೦೦' ಬ್ರ್ಯಾಂಡ್ ಹೆಸರಿನಡಿ ನಡೆಸುತ್ತಿದೆ.

ಸ್ವಾಧೀನಗಾರರ ಹಿನ್ನೆಲೆ:

ಸ್ವಾಧೀನಗಾರರು ಒಂದು ಪ್ರೈವೇಟ್ ಲಿಮಿಟೆಡ್ ಕಂಪನಿಯಾಗಿದ್ದು, ಇದರ CIN – U74999KA2018PTC116465 ಆಗಿದೆ. ಸ್ವಾಧೀನಗಾರರ ನೋಂದಾಯಿತ ಕಚೇರಿ ವಿಳಾಸ: Third Floor, No. 2/1, Embassy Icon Annexe, Infantry Road, Bengaluru – 560001.

ಸ್ವಾಧೀನಗಾರರು Pine Labs Limited ಸಂಸ್ಥೆಯ ಸಂಪೂರ್ಣ ಮಾಲೀಕತ್ವದ ಉಪಕಂಪನಿಯಾಗಿದ್ದಾರೆ. ಇದು ಹಣಕಾಸು ತಂತ್ರಜ್ಞಾನ (FinTech) ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುತ್ತಿದ್ದು, API (Application Programming Interface) ಮೂಲಸೌಕರ್ಯಗಳ ಅಭಿವೃದ್ಧಿ ಮತ್ತು ಹಣಕಾಸು ಸೇವಾ ಕಂಪನಿಗಳಿಗೆ ಸೇವೆಗಳ ಒದಗಿಸುವಿಕೆ ಯಲ್ಲಿ ತೊಡಗಿಸಿಕೊಂಡಿದೆ.

ಪ್ರಸ್ತಾವಿತ ವ್ಯವಹಾರ:

ಕಂಪನಿ ಮತ್ತು ಸ್ವಾಧೀನಗಾರರು Options Agreement ("ಆಪ್ಷನ್ ಒಪ್ಪಂದ") ಗೆ ಸಹಿ ಹಾಕಿದ್ದು, ಅದರ ಅನ್ವಯ ನಿಗದಿತ ಮೈಲಿಗಲ್ಲುಗಳನ್ನು ಸಾಧಿಸಿದ ನಂತರ, ಕಂಪನಿಯ ಇತ್ತೀಚಿನ ಷೇರುದಾರರಿಂದ ಕಂಪನಿಯ ಸಂಪೂರ್ಣ ಷೇರುಹಂಚಿಕೆಯನ್ನು ಸ್ವಾಧೀನಪಡಿಸಿಕೊಳ್ಳುವ ಹಕ್ಕನ್ನು ಸ್ವಾಧೀನಗಾರರಿಗೆ ನೀಡಲಾಗಿತ್ತು.

ಈಗ, ಆಪ್ಷನ್ ಒಪ್ಪಂದದ ಅನುಸಾರ, ಸ್ವಾಧೀನಗಾರರು ಕಂಪನಿಯ 100% ಷೇರುಗಳನ್ನು ಸ್ವಾಧೀನಪಡಿಸಿಕೊಳ್ಳಲು ತಮ್ಮ ಷೇರುಹಂಚಿಕೆಯನ್ನು ಹೆಚ್ಚಿಸಲು ಉದ್ದೇಶಿಸಿದ್ದಾರೆ.

ಈ ಪ್ರಸ್ತಾವಿತ ವ್ಯವಹಾರ ಪೂರ್ಣಗೊಂಡ ನಂತರ, ಕಂಪನಿಯ ನಿಯಂತ್ರಣ, ಷೇರುಹಂಚಿಕೆ, ನಿರ್ದೇಶಕರ ಮಂಡಳಿಯ ಸಂಯೋಜನೆ ಮತ್ತು ನಿರ್ವಹಣೆಯಲ್ಲಿ ಬದಲಾವಣೆಗಳು ಸಂಭವಿಸುತ್ತವೆ.

RBI ಅನುಮೋದನೆ:

ಸ್ವಾಧೀನ ನಿರ್ದೇಶನಗಳ ಅನ್ವಯ, RBI ತನ್ನ BLR.DOR.RSG.No.S791/40-01-201/2025 ಎಂಬ ಉಲ್ಲೇಖ ಸಂಖ್ಯೆಯ 16 ಜನವರಿ 2026 ದಿನಾಂಕದ ಪತ್ರದ ಮೂಲಕ, ಕಂಪನಿಗೆ (CIN: U72900KA2021PTC146931) ಈ ಪ್ರಸ್ತಾವಿತ ನಿಯಂತ್ರಣ ಬದಲಾವಣೆ, ಷೇರುಹಂಚಿಕೆ ಸ್ವಾಧೀನ, ವಿಲೀನ ಮತ್ತು ನಿರ್ವಹಣಾ ಬದಲಾವಣೆಗಳಿಗೆ ಅನುಮೋದನೆ ನೀಡಿದೆ.

ಈ ಸಾರ್ವಜನಿಕ ಸೂಚನೆ ಪ್ರಕಟಿಸಿದ ದಿನಾಂಕದಿಂದ 15 (ಹದಿನೈದು) ದಿನಗಳು ಪೂರ್ತಿಯಾದ ನಂತರ, ಸ್ವಾಧೀನ ವೃತ್ತಾಂತದ ಪ್ಯಾರಾಗ್ರಾಫ್ 8 ಅನ್ವಯ ಈ ಪ್ರಸ್ತಾವಿತ ವ್ಯವಹಾರ ಜಾರಿಗೆ ಬರಲಿದೆ.

ಆಕ್ಷೇಪಣೆಗಳು / ಸ್ಪಷ್ಟೀಕರಣ:

ಈ ಪ್ರಸ್ತಾವಿತ ವ್ಯವಹಾರಕ್ಕೆ ಸಂಬಂಧಿಸಿದ ಯಾವುದೇ ಸ್ಪಷ್ಟೀಕರಣ ಅಥವಾ ಆಕ್ಷೇಪಣೆ ಹೊಂದಿರುವವರು, ಈ ಸೂಚನೆಯ ದಿನಾಂಕದಿಂದ 15 (ಹದಿನೈದು) ದಿನಗಳ ಒಳಗೆ, ಕಂಪನಿಯ ನೋಂದಾಯಿತ ಕಚೇರಿಗೆ ಭೌತಿಕ ಪತ್ರದ ಮೂಲಕ ಅಥವಾ legal@agya.co ಗೆ ಇಮೇಲ್ ಮೂಲಕ ಸಂಪರ್ಕಿಸಬಹುದು.

ಈ ಸೂಚನೆಯ ಪ್ರತಿಯನ್ನು ಕಂಪನಿಯ ವೆಬ್‌ಸೈಟ್ www.agya.co ನಲ್ಲಿಯೂ ವೀಕ್ಷಿಸಬಹುದು.

27ಕ್ಕೆ ಬ್ಯಾಂಕ್ ಸಿಬ್ಬಂದಿ ಪ್ರತಿಭಟನೆ

ಬೆಂಗಳೂರು: ಬ್ಯಾಂಕಿಂಗ್ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗೆ ತಿಂಗಳ ಎಲ್ಲ ಶನಿವಾರ ರಜೆ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ ಜ. 27ರಂದು ಬೆಂಗಳೂರಿನ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಹಮ್ಮಿಕೊಳ್ಳಲಾಗುವುದು ಎಂದು ಯುನೈಟೆಡ್ ಫೋರಂ ಆಫ್ ಬ್ಯಾಂಕ್ ಯೂನಿಯನ್ಸ್ ತಿಳಿಸಿದೆ.

ಗುರುವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಯೂನಿಯನ್ಸ್‌ನ ಪ್ರಧಾನ ಕಾರ್ಯದರ್ಶಿ ಗಿರಿರಾಜ್ ಕೆ.ಎನ್., 'ಷೇರುಪೇಟೆ, ವಿದೇಶಿ ವಿನಿಮಯದ ವ್ಯವಹಾರಗಳು ಸೋಮವಾರದಿಂದ ಶುಕ್ರವಾರದವರೆಗೆ ಮಾತ್ರ ಕಾರ್ಯನಿರ್ವಹಿಸುತ್ತಿವೆ. ಆದ್ದರಿಂದ ಬ್ಯಾಂಕ್‌ಗಳಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ತಿಂಗಳ ಎಲ್ಲ ಶನಿವಾರವೂ ರಜೆ ನೀಡಬೇಕು. ಆನ್‌ಲೈನ್ ಸೇವೆ ಲಭ್ಯ ಇರುವುದರಿಂದ ಗ್ರಾಹಕರಿಗೆ ತೊಂದರೆ ಆಗುವುದಿಲ್ಲ' ಎಂದು ಮಾಹಿತಿ ನೀಡಿದರು.

BEFORE THE HON'BLE DEBTS RECOVERY APPELLATE TRIBUNAL AT CHENNAI

I.A. No. 1021 of 2025
And
R.A.(S.A) No. 119 of 2025

IN THE MATTER OF :
G. Corp Lotus Mall Private Limited ...Appellant

-Vs-

1. **Axis Bank Limited**
2. **THE AUTHORISED OFFICER**
3. **M/s Lotus Shopping Centers Private Limited**
4. **M/s. Anushka Construction Private Limited** ...Respondents

NOTICE

1. Whereas the above-named Appellant has preferred for an Appeal under the SARFAESI Act, 2002, against the order of the Presiding Officer, Hon'ble Debts Recovery Tribunal-1, Chennai at Chennai under Section 17 of the SARFAESI Act on 09.11.2023 in T.S.A. No.11 of 2022 and S.A.No.7 of 2023.
2. Take Notice that the said Appeal which will be taken up for hearing by the Hon'ble Appellate Tribunal **at 10.30 AM** or at such time immediately thereafter according to the convenience of the Hon'ble Appellate Tribunal **on 04.02.2026.**
3. You are hereby required to appear in person or a Pleader/ Advocate duly instructed as the case may be, at the aforesaid time and place.
4. If you do not appear on the said date of hearing, the Appeal shall be decided in your absence.

Given under my hand and under the seal of this Tribunal on this the 19th day of January, 2026.

BY ORDER OF THE TRIBUNAL,
Registrar, Debts Recovery Appellate Tribunal, Chennai.

To, **M/s Lotus Shopping Centers Private Limited,** Having its registered office at: Door No.15-8-441/50, Shop No.46, 1st Floor, Yenepoya Mall, Kadri Road, Mangalore - 575003. Represented by its Liquidator Mr. Sanjay Kumar Mishra

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: **CAO/CN/BNC/155/2025**
ದಿನಾಂಕ: **04.11.2025** ಗೆ ತಿದ್ದುಪಡಿ–**2**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಇಂಜಿನಿಯರಿಂಗ್, ಪ್ರೊಕ್ಯೂರ್‌ಮೆಂಟ್ & ನಿರ್ಮಾಣ (ಇಪಿಸಿ) ಅನುಬಂಧದ ಅಡಿಯಲ್ಲಿ ಥಣಿಸಂದ್ರದ ವಂದೇ ಭಾರತ್ ಸ್ಲೀಪರ್ ರೈಲುಗಳ ನಿರ್ವಹಣೆ ಡಿಪೋನ ಅಭಿವೃದ್ಧಿ ಮತ್ತು ತುಮಕೂರು ರೈಲ್ವೆ ನಿಲ್ದಾಣದ ಪ್ರಧಾನ ಉನ್ನತೀಕರಣಕ್ಕೆ ಸಂಬಂಧಿಸಿದಂತೆ ಯೋಜನಾ ನಿರ್ವಹಣೆ ಸೇವೆಗಳನ್ನು ಒದಗಿಸುವುದು. (ಟೆಂಡರು ಉಲ್ಲೇಖ ಸಂ.: **PMS-TK-STN-DEVVANDEBHRAT**)	ರೂ. **10,95,43,438/-**

ಕೊನೆಯ ದಿನಾಂಕ	
ಪ್ರಸ್ತುತ	ಪರಿಷ್ಕೃತ
20.01.2026 (15:00 ಗಂಟೆಯವರೆಗೆ)	**28.01.2026** (15:00 ಗಂಟೆಯವರೆಗೆ)

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್ / ನಿರ್ಮಾಣ / ಕಾಮಗಾರಿ / ಬೆಂಗಳೂರು ದಂಡು

PUB/838/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ನೈಋತ್ಯ ರೈಲ್ವೆ

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಓಪನ್ ಟೆಂಡರು ಸೂಚನೆ ಸಂ.: **BE-29-2025-26-OT-23**

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
1	ಎಸ್‌ಎಸ್‌ಇ/ಪಿ/ ಬೆಂಗಳೂರು ವ್ಯಾಪ್ತಿಯಲ್ಲಿ ಎಲೆಕ್ಟ್ರಿಕಲ್ ಕಾಮಗಾರಿಗಳಿಗಾಗಿ ಪ್ರಾಂತೀಯ ಟೆಂಡರು.	ರೂ. **41,30,741/-**

ಓಪನ್ ಟೆಂಡರು ಸೂಚನೆ ಸಂ.: **BE-29-2025-26-OT-24**

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
2	ಎಸ್‌ಎಸ್‌ಇ/ಪಿ/ ಬಂಗಾರಪೇಟೆ ವ್ಯಾಪ್ತಿಯಲ್ಲಿ ಎಲೆಕ್ಟ್ರಿಕಲ್ ಕಾಮಗಾರಿಗಳಿಗಾಗಿ ಪ್ರಾಂತೀಯ ಟೆಂಡರು.	ರೂ. **29,03,996/-**

ಓಪನ್ ಟೆಂಡರು ಸೂಚನೆ ಸಂ.: **BE-29-2025-26-OT-25**

ಕ್ರಸಂ	ಕಾಮಗಾರಿಯ ವಿವರ	ಅಂದಾಜು ಮೌಲ್ಯ
3	ಎಸ್‌ಎಸ್‌ಇ/ಪಿ/ಎಸ್‌ಎಂವಿಟಿ ಬೆಂಗಳೂರು ವ್ಯಾಪ್ತಿಯಲ್ಲಿ ಎಲೆಕ್ಟ್ರಿಕಲ್ ಕಾಮಗಾರಿಗಳಿಗಾಗಿ ಪ್ರಾಂತೀಯ ಟೆಂಡರು.	ರೂ. **33,53,330/-**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **11.02.2026, 15:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ವರಿಷ್ಠ ವಿಭಾಗೀಯ ಎಲೆಕ್ಟ್ರಿಕಲ್ ಇಂಜಿನಿಯರ್/ಸಾಮಾನ್ಯ/ಬೆಂಗಳೂರು

PUB/833/AAMO/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು - 560 020.

ನಂ:ಬೆಂಅಪ್ರಾ/ನಯೋಸ/CLU–424/3811/2025–26 ದಿನಾಂಕ: 22.01.2026

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 14–A ರ ಅಡಿಯಲ್ಲಿ ಈ ಕೆಳಕಂಡ ಅರ್ಜಿದಾರರು ವ್ಯವಸಾಯ ವಲಯದಿಂದ ವಾಣಿಜ್ಯ ಉಪಯೋಗಕ್ಕೆ ಭೂಉಪಯೋಗ ಬದಲಾವಣೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ಭೂಉಪಯೋಗ ಬದಲಾವಣೆಯ ಪ್ರಸ್ತಾವನೆಯ ವಿವರಗಳು ಈ ಕೆಳಕಂಡಂತೆ ಇರುತ್ತದೆ. ಸದರಿ ಭೂಉಪಯೋಗ ಬದಲಾವಣೆ ಪ್ರಸ್ತಾವನೆ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ, ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ನಗರ ಯೋಜಕ ಸದಸ್ಯರು, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು ಕಛೇರಿಗೆ ಸಲ್ಲಿಸಲು ತಿಳಿಸಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮದ ವಿವರ	ಸರ್ವೆ ನಂ.	ವಿಸ್ತೀರ್ಣ ಎ–ಗುಂ	ಪರಿಷ್ಕೃತ ಮಹಾ ಯೋಜನೆ 2015ರ ಪ್ರಕಾರ ಭೂಉಪಯೋಗ	ಬದಲಾವಣೆ ಕೋರಿರುವ ಭೂಉಪಯೋಗ
1	ಶ್ರೀ ಬಿ.ಮೋಹನ್‌ರಾವ್	ಯಲಹಂಕ	ಜಾಲ	ಚಾಗಲಟ್ಟಿ	57/2	1–10	ವ್ಯವಸಾಯ	ವಾಣಿಜ್ಯ

ಷರಾ: ಅರ್ಜಿದಾರರು ಪ್ರಶ್ನಿತ ಜಮೀನಿನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುವಾಗ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗ ದೊರಕುತ್ತದೆ. ಈ ವಿನ್ಯಾಸದ ಅಭಿವೃದ್ಧಿಯಿಂದ ಸುತ್ತಮುತ್ತಲಿನ ಪ್ರದೇಶ ಅಭಿವೃದ್ಧಿಗೆ ಸಹಕಾರಿಯಾಗಲಿದೆ. ಪ್ರಶ್ನಿತ ಜಾಗದಲ್ಲಿ ಬಹುಮಹಡಿಗಳ ವಾಣಿಜ್ಯ ಕಟ್ಟಡಗಳನ್ನು ಕಟ್ಟುವುದರಿಂದ ಸರ್ಕಾರಕ್ಕೆ ತೆರಿಗೆ ಸಂಗ್ರಹವಾಗುತ್ತದೆ ಹಾಗೂ ಜಮೀನುಗಳಲ್ಲಿ ಅಭಿವೃದ್ಧಿಪಡಿಸಿದ ಕಟ್ಟಡಗಳಿಂದ ಹಲವಾರು ಜನರಿಗೆ ಉದ್ಯಮಗಳು ದೊರಕುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶವನ್ನು ತಿಳಿಸುತ್ತಾ, ಸದರಿ ಪ್ರದೇಶವನ್ನು 'ವ್ಯವಸಾಯ ವಲಯ' ದಿಂದ 'ವಾಣಿಜ್ಯ ಉಪಯೋಗ'ಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಸಹಿ/– ನಗರ ಯೋಜಕ ಸದಸ್ಯರು, ಬೆಂಅಪ್ರಾ, ಬೆಂಗಳೂರು

GOVERNMENT OF INDIA
MINISTRY OF TEXTILES
OFFICE OF DEVELOPMENT COMMISSIONER FOR HANDLOOMS

Sant Kabir Handloom Award and National Handloom Award for the year, 2025

Applications duly filled in the prescribed format are invited from the residents of India for the following categories of handloom awards for the year 2025 for their outstanding contribution in the field of Handloom sector. The details are given below:

Sl. No.	Name of awards	Category	Sub- Category	No. of Awards
01	Sant Kabir Handloom Award (SKHA)	Weaving	Weaving	03
			Exclusively for women weavers (Sant Kabir Handloom Award- Kamala Devi Chattopadhyay)	01
			Languishing Weaves	01
			Tribal Weaves	01
			Total (A)	06
02	National Handloom Award (NHA)	Weaving	Weaving	08
			Exclusively for women weavers (Sant Kabir Handloom Award- Kamala Devi Chattopadhyay)	02
			Young Weavers (age not more than 30 years)	01
			Divyang Weavers	01
			Languishing Weaves	01
			Tribal Weaves	01
		Design Development		02
		Marketing of Handloom products		02
		Start-up ventures/Producer company		01
			Total (B)	19
			Total (A + B)	25

2. For more information regarding eligibility criteria, age, experience, application form etc., details can be downloaded from the website of Office of the Development Commissioner for Handlooms (www.handlooms.nic.in) For any information assistance, applicant may contact nearest Weavers Service Centre (WSC)

3. Applications are to be submitted in dual mode, i.e., both online and offline. Online applications should be submitted through the My Handlooms portal (https://myhandlooms.gov.in). Additionally, offline applications, duly filled and completed in all respects, along with hand-woven samples (wherever applicable), a printout of the online application, and all other required documents, must be submitted to the nearest WSC latest by 23rd March, 2026.

DEVELOPMENT COMMISSIONER (HANDLOOMS)

CBC 41102/11/0008/2526

ನೈಋತ್ಯ ರೈಲ್ವೆ

ಟೆಂಡರು ಸೂಚನೆ ಸಂ.: **ECN-TRD-01-2026**
ದಿನಾಂಕ: **14.01.2026**

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಅಮರಾವತಿ ಕಾಲೋನಿ–ವ್ಯಾಸ ಕಾಲೋನಿ, ರಾಯದುರ್ಗ–ಪಾವಗಡ, ಪಾವಗಡ–ಮಡಕಶಿರ & ಹಿರಿಯೂರು – ತಾವರಕೆರೆ, ವಿಭಾಗಗಳಲ್ಲಿ ಟಿಎಸ್‌ಎಸ್, ಎಸ್‌ಪಿ & ಎಸ್‌ಎಸ್‌ಪಿ ಯಲ್ಲಿ ಆರ್‌ಡಿಎಸ್‌ಓ ನಿರ್ದಿಷ್ಟತೆಗೆ ತಕ್ಕಂತೆ 2x25 ಕೆವಿ ಎಸಿ ಟ್ರ್ಯಾಕ್ಷನ್‌ಗಾಗಿ ಸ್ವಯಂಚಾಲಿತ ಫಾಲ್ಟ್ ಲೋಕೇಟರ್ (ಎಎಫ್‌ಎಲ್) ನ ಪೂರೈಕೆ, ಸ್ಥಾಪನೆ, ಪರಿಶೀಲನೆ ಮತ್ತು ಕಾರ್ಯಾರಂಭ.	ರೂ. **5,26,01,867/-**

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **12.02.2026, 11:00 ಗಂಟೆಯವರೆಗೆ**

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಲೇ ಇರಿ

ಉಪ ಮುಖ್ಯ ಎಲೆಕ್ಟ್ರಿಕಲ್ ಇಂಜಿನಿಯರ್/ಟ್ರ್ಯಾಕ್ಷನ್ ವಿನಿಯೋಗ (ನಿರ್ಮಾಣ)/ಬೆಂಗಳೂರು ದಂಡು

PUB/839/AAF/PRB/SWR/2025-26

ಕಾಯ್ದಿರಿಸದ ಟಿಕೇಟುಗಳನ್ನು ಸುಲಭವಾಗಿ ಬುಕಿಂಗ್ ಮಾಡಲು ಗೂಗಲ್ ಪ್ಲೇ ಸ್ಟೋರ್‌ನಿಂದ ಯುಟಿಎಸ್ ಮೊಬೈಲ್ ಆ್ಯಪ್‌ಅನ್ನು ಡೌನ್‌ಲೋಡ್ ಮಾಡಿರಿ

South Western Railway - SWR | SWRRLY | SWRAILWAYHQ | sw_railways

ಇದೇ 30ರಂದು ಸಂವಿಧಾನ ನಡಿಗೆ

ಪ್ರಜಾವಾಣಿ ವಾರ್ತೆ

ಸಂವಿಧಾನವೇ ಬೆಳಕು

ಬೆಂಗಳೂರು: 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ವತಿಯಿಂದ ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಸಚಿವಾಲಯದ ಸಹಯೋಗ, ಬೆಂಗಳೂರು ವಿಶ್ವವಿದ್ಯಾಲಯದ ಸಹಕಾರದೊಂದಿಗೆ ಜ.30ರಂದು ಬೆಳಿಗ್ಗೆ 7ಕ್ಕೆ 'ಸಂವಿಧಾನವೇ ಬೆಳಕು– ಹೆಜ್ಜೆಯಿಡು ಬೆಂಗಳೂರು' ಸಂವಿಧಾನ ನಡಿಗೆ ಕಾರ್ಯಕ್ರಮವನ್ನು ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿಯ ವೆಂಕಟಗಿರಿ ಗೌಡ ಆಡಿಟೋರಿಯಂನಲ್ಲಿ ಹಮ್ಮಿಕೊಳ್ಳಲಾಗಿದೆ.

ಪ್ರಜಾಪ್ರಭುತ್ವದ ಆಶಯಗಳನ್ನು ಎತ್ತಿ ಹಿಡಿಯುವುದರೊಂದಿಗೆ ಮೌಲ್ಯ, ಹಕ್ಕು, ಮತ್ತು ಕರ್ತವ್ಯ ಗಳನ್ನು ಗೌರವಿಸುವ, ಅರಿವು ಮೂಡಿಸುವ ಉದ್ದೇಶದಿಂದ ಸಂವಿಧಾನ ನಡಿಗೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಸಂವಿಧಾನದ ಬಗ್ಗೆ ಜಾಗೃತಿ ಮೂಡಿಸುವ ವಿಶೇಷ ವಿಚಾರ ಸಂಕಿರಣದೊಂದಿಗೆ ಕಾರ್ಯಕ್ರಮ ಆರಂಭಗೊಳ್ಳಲಿದೆ. ನಂತರ ನಡಿಗೆ ಚಾಲನೆ ಪಡೆಯಲಿದೆ. ಪ್ರವೇಶ ಉಚಿತವಾಗಿದ್ದು, ನೋಂದಣಿ ಕಡ್ಡಾಯವಾಗಿದೆ.

ಬೆಂಗಳೂರು ವಿಶ್ವವಿದ್ಯಾಲಯದೊಂದಿಗೆ ಸಂಯೋಜಿತವಾಗಿರುವ ಎಲ್ಲ ಕಾಲೇಜುಗಳ ಪದವಿ ವಿದ್ಯಾರ್ಥಿಗಳು ಭಾಗವಹಿಸಲು ಮುಕ್ತ ಅವಕಾಶ ಇದೆ. ನೋಂದಣಿ ಮಾಡಿಕೊಂಡವರಿಗೆ ಟಿ–ಶರ್ಟ್ ಮತ್ತು ಕ್ಯಾಪ್ ನೀಡಲಾಗುವುದು ಎಂದು ಸಂಘಟಕರು ತಿಳಿಸಿದ್ದಾರೆ. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ನೋಂದಣಿ ಮಾಡಿಕೊಳ್ಳಬಹುದು. ಮಾಹಿತಿಗೆ 9901918805 ಸಂಪರ್ಕಿಸಬಹುದು.

ಫಾರ್ಮ್ ನಂ. 14
[ನಿಯಮ 33(2) ನೋಡಿ]
ರೆಜಿಸ್ಟರ್ ಎ/ಡಿ, ದಸ್ತಿ ಅವರಿಂದ, ವಿಫಲವಾದರೆ ಪ್ರಕಟಣೆಯ ಮೂಲಕ

ವಸೂಲಾತಿ ಅಧಿಕಾರಿಗಳ ಕಚೇರಿ - I / II
ಸಾಲ ವಸೂಲಾತಿ ನ್ಯಾಯಮಂಡಳಿ ಬೆಂಗಳೂರು (ಡಿ.ಆರ್.ಟಿ. 2)

ನಂ. 4, ರೆಸಿಡೆನ್ಸಿ ರೋಡ್, ಎಲ್.ಐ.ಸಿ. ಜೀವನ್ ಮಂಗಲ್ ಬಿಲ್ಡಿಂಗ್, ಹೈಸ್ ರೋಡ್, ಬೆಂಗಳೂರು – 560025.

ಡಿಮ್ಯಾಂಡ್ ನೋಟೀಸ್

ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳಿಗೆ ಬಾಕಿ ಇರುವ ಸಾಲಗಳ ವಸೂಲಾತಿ ಕಾಯ್ದೆ, 1993 ರ ಸೆಕ್ಷನ್ 25 ರಿಂದ 28 ರ ಅಡಿಯಲ್ಲಿ ಮತ್ತು ಆದಾಯ ತೆರಿಗೆ ಕಾಯ್ದೆ, 1961 ರ ಎರಡನೇ ವೇಳಾಪಟ್ಟಿಯ ನಿಯಮ 2 ರ ಅಡಿಯಲ್ಲಿ ಸೂಚನೆ.

ಆರ್.ಸಿ. / 33 / 2022

ಕೆನರಾ ಬ್ಯಾಂಕ್
ವಿರುದ್ಧ
ಎಂ.ಎಸ್. ಪ್ರೆಸ್ಟೀಜ್ ಪೌಲ್ಟ್ರಿ ಫಾರ್ಮ್ ಅಂಡ್ ಫೀಡ್ಸ್

ಗೆ,
(ಸಿ.ಡಿ.-1) **ಕೆನರಾ ಬ್ಯಾಂಕ್**
ನಂ. 13/10, 3ನೇ ಕ್ರಾಸ್, ಸಿ.ಎಸ್.ಐ. ಕಾಂಪೌಂಡ್, 1ನೇ ಮಹಡಿ, ಎಂ ಬ್ಲಾಕ್, ಯುನಿಟಿ ಬಿಲ್ಡಿಂಗ್, ಜೆ.ಸಿ. ರಸ್ತೆ, ಬೆಂಗಳೂರು – 560 002.
... **ಪ್ರಮಾಣಪತ್ರ ಹೊಂದಿರುವವರು**

ವಿರುದ್ಧ
(ಸಿ.ಡಿ.-1) **ಎಂ.ಎಸ್. ಪ್ರೆಸ್ಟೀಜ್ ಪೌಲ್ಟ್ರಿ ಫಾರ್ಮ್ ಅಂಡ್ ಫೀಡ್ಸ್**
ಪ್ರತಿನಿಧಿಸುವವರು ಇದರ ಮಾಲೀಕರು **ಶ್ರೀ ವಿಕರ್ ಖಾದೀರ್ ಅಹ್ಮದ್ ಬಿನ್ ಬಷೀರ್ ಅಹ್ಮದ್ @ ಮುನೀರ್ ಅಹ್ಮದ್, ನೊಂದಾಯಿತ ಕಚೇರಿ ಇಲ್ಲಿ :** ಉಗಾಳ ನಾಗೆಪಲ್ಲಿ, ಮಲ್ಲಸಂದ್ರ ಗ್ರಾಮ, ಕಸಬಾ ಹೋಬಳಿ, ಬಾಗೇಪಲ್ಲಿ ತಾಲ್ಲೂಕು, ಚಿಕ್ಕಬಳ್ಳಾಪುರ – 561297.
... **ಪ್ರಮಾಣಪತ್ರ ಸಾಲಗಾರರು**

ಈ ಮೂಲಕ ಸೂಚಿಸುವುದೇನೆಂದರೆ ವಸೂಲಾತಿ ಪ್ರಮಾಣಪತ್ರದ ಪ್ರಕಾರ ಹೊರಡಿಸಿರುವ ಆದೇಶಗಳ ಅನುಸಾರವಾಗಿ **ಅಧ್ಯಕ್ಷೀಯ ಅಧಿಕಾರಿ, ಸಾಲ ವಸೂಲಾತಿ ನ್ಯಾಯಮಂಡಳಿ ಬೆಂಗಳೂರು** (ಡಿ.ಆರ್.ಟಿ. 2) **ಓ.ಎ./1309/2019 ರಲ್ಲಿ ರೂ. 17535182 (ರೂಪಾಯಿ ಒಂದು ಕೋಟಿ ಎಪ್ಪತ್ತೈದು ಲಕ್ಷ ಮೂವತ್ತೈದು ಸಾವಿರ ಒಂದು ನೂರ ಎಂಭತ್ತೆರಡು ಮಾತ್ರ)** ಜೊತೆಗೆ ಆರ್‌ಸಿ ಪ್ರಕಾರ ಪೆಂಡೆಂಟ್‌ಲೈಟ್ ಮತ್ತು ಭವಿಷ್ಯದ ಜೊತೆಗೆ **ದಿನಾಂಕ : 09-08-2019 ರಿಂದ** ಜಾರಿಗೆ ಬರುವಂತೆ ಮತ್ತು ವಸೂಲಾತಿಯವರೆಗೆ ವೆಚ್ಚವು ನಿಮ್ಮ ವಿರುದ್ಧ (ಜಂಟಿಯಾಗಿ ಮತ್ತು ಪ್ರತ್ಯೇಕವಾಗಿ) ಬಾಕಿ ಇರುತ್ತದೆ.

2. ನೋಟಿಸ್ ಸ್ವೀಕರಿಸಿದ 15 ದಿನಗಳ ಒಳಗೆ ಮೇಲಿನ ಮೊತ್ತವನ್ನು ಪಾವತಿಸಲು ನಿಮಗೆ ಇಲ್ಲಿ ನಿರ್ದೇಶಿಸಲಾಗಿದೆ, ಇಲ್ಲದಿದ್ದರೆ ಬ್ಯಾಂಕುಗಳು ಮತ್ತು ಹಣಕಾಸು ಸಂಸ್ಥೆಗಳ ಕಾಯ್ದೆ, 1993 ಮತ್ತು ಅದರ ಅಡಿಯಲ್ಲಿರುವ ನಿಯಮಗಳಿಗೆ ಅನುಸಾರವಾಗಿ ವಸೂಲಿ ಮಾಡಲಾಗುತ್ತದೆ.
3. ಮುಂದಿನ ವಿಚಾರಣೆಯ ದಿನಾಂಕದಂದು ಅಥವಾ ಅದಕ್ಕೂ ಮೊದಲು ನಿಮ್ಮ ಆಸ್ತಿಗಳ ವಿವರಗಳನ್ನು ಅಫಿಡವಿಟ್‌ನಲ್ಲಿ ಘೋಷಿಸಲು ನಿಮಗೆ ಇಲ್ಲಿ ಆದೇಶಿಸಲಾಗಿದೆ.
4. ಈ ಮೂಲಕ ನಿಮಗೆ ಆದೇಶಿಸುವುದೇನೆಂದರೆ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗೆ ಮುಂದಿನ ಪ್ರಕ್ರಿಯೆಗಳಿಗಾಗಿ ಕೆಳಗೆ ಸಹಿ ಮಾಡಿರುವವರ ಮುಂದೆ ಹಾಜರಾಗಲು ಇಲ್ಲಿ ಸೂಚಿಸಲಾಗಿದೆ.
5. ಮೇಲೆ ತಿಳಿಸಿದ ಮೊತ್ತದ ಜೊತೆಗೆ, ನೀವು ಸಹ ಪಾವತಿಸಲು ಹೊಣೆಗಾರರಾಗಿರುತ್ತೀರಿ :
(ಎ) ಈ ಪ್ರಮಾಣಪತ್ರ / ಕಾರ್ಯರೂಪ ಪ್ರಕ್ರಿಯೆಗಳ ಸೂಚನೆಯ ನಂತರ ಪ್ರಾರಂಭವಾಗುವ ಅವಧಿಗೆ ಪಾವತಿಸಬೇಕಾದ ಬಡ್ಡಿ.
(ಬಿ) ಈ ಸೂಚನೆ ಮತ್ತು ವಾರಂಟ್‌ಗಳ ಸೇವೆ ಮತ್ತು ಇತರ ಪ್ರಕ್ರಿಯೆಗೆ ಸಂಬಂಧಿಸಿದಂತೆ ಉಂಟಾದ ಎಲ್ಲಾ ವೆಚ್ಚಗಳು, ಶುಲ್ಕಗಳು ಮತ್ತು ವೆಚ್ಚಗಳು ಮತ್ತು ಬಾಕಿ ಮೊತ್ತವನ್ನು ಮರುಪಡೆಯಲು ತೆಗೆದುಕೊಂಡ ಎಲ್ಲಾ ಇತರ ಕ್ರಮಗಳು.

ನನ್ನ ಹಸ್ತಾಕ್ಷರ ಮತ್ತು ನ್ಯಾಯಮಂಡಳಿಯ ಮುದ್ರೆಯ ಅಡಿಯಲ್ಲಿ, ಈ **ದಿನಾಂಕ : 04-04-2022 ರಂದು** ನೀಡಲಾಗಿದೆ.

ಮೊಹರು

ಸಹಿ/-
ವಸೂಲಾತಿ ಅಧಿಕಾರಿ
ಸಾಲ ವಸೂಲಾತಿ ನ್ಯಾಯಮಂಡಳಿ ಬೆಂಗಳೂರು (ಡಿ.ಆರ್.ಟಿ. 2)

ಪ್ರಮಾಣಪತ್ರ ಸಾಲಗಾರ(ರು) ಮಾಡಿದ ಪಾವತಿಯನ್ನು, ಯಾವುದಾದರೂ ಇದ್ದರೆ, ಈ ಪ್ರಕರಣದಲ್ಲಿ ಬಾಕಿ ಇರುವ ಎಲ್ಲಾ ಸಾಲಗಳ ಕ್ರೋಢೀಕೃತ ಖಾತೆಗೆ ಪ್ರಮಾಣಪತ್ರ ಸಾಲಗಾರ(ರು) ಮತ್ತು ಪಾವತಿ ಸ್ಥಾನದಲ್ಲಿ ನಿಯಮಿತವಾಗಿ ಪೋಸ್ಟ್ ಮಾಡಲಾದ ವಸೂಲಾತಿ ಅಧಿಕಾರಿಯಿಂದ ಜಮಾ ಮಾಡಬೇಕೆಂದು ನಿಮಗೆ ನಿರ್ದೇಶಿಸಲಾಗಿದೆ.

ಈ ರೀತಿಯಲ್ಲಿ ನಿರ್ವಹಿಸಲಾಗುವ ಕ್ರೋಢೀಕೃತ ಖಾತೆಯು ವಸೂಲಾತಿ ಅಧಿಕಾರಿಯ ಪರಿಶೀಲನೆಗೆ ಒಳಪಟ್ಟಿರುತ್ತದೆ. ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಒಟ್ಟು ಕ್ಲೇಮ್‌ನ ನವೀಕೃತ ಹೇಳಿಕೆಯನ್ನು ಮತ್ತು ಸಾಲವನ್ನು ವಸೂಲಾತಿ ಮಾಡಬೇಕಾದ ಆಸ್ತಿ ವಿವರಗಳ ಪೂರ್ಣ ವಿವರಗಳನ್ನು ಸಲ್ಲಿಸಲು ನಿಮಗೆ ನಿರ್ದೇಶಿಸಲಾಗಿದೆ.

ಬಿಎನ್‌ಎಂಐಟಿ ಕಾಲೇಜು, ಐಇಇಇ ಸಹಯೋಗದೊಂದಿಗೆ ಆಯೋಜಿಸಲಾಗಿದ್ದ ವಿಚಾರಸಂಕಿರಣದಲ್ಲಿ ಮೈಥಿಲಿ ಬೆಳ್ಳಿ, ಪ್ರೊ. ಈಶ್ವರ್, ಎಸ್‌.ವೈ. ಕುಲಕರ್ಣಿ, ಜಿ.ಎನ್. ಕೃಷ್ಣಮೂರ್ತಿ, ಪ್ರೊ. ಟಿ.ಜೆ. ರಾಮಮೂರ್ತಿ, ಕೆ. ವೆಂಕಟೇಶ್ ಭಾಗವಹಿಸಿದ್ದರು

'ಕೈಗಾರಿಕೆಗಳ ನಿರೀಕ್ಷೆಗೆ ತಕ್ಕಂತೆ ಸಜ್ಜಾಗಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೈಗಾರಿಕೆಗಳ ನಿರೀಕ್ಷೆಗೆ ವಿದ್ಯಾರ್ಥಿಗಳು ತಕ್ಕಂತೆ ಸಿದ್ಧಗೊಳ್ಳುವುದರ ಜತೆಗೆ ನವ ಭಾರತ ನಿರ್ಮಾಣಕ್ಕೆ ಶಕ್ತಿಯಾಗಿ ನಿಲ್ಲಬೇಕು' ಎಂದು ಕ್ವಾಲ್ಕಾಮ್ ಇಂಡಿಯಾದ ಎಂಜಿನಿಯರ್ ಡಾ.ಆರ್.ಕೆ. ಶ್ರೀನಿವಾಸ್ ತಿಳಿಸಿದರು.

ಬಿಎನ್‌ಎಂಐಟಿ ಕಾಲೇಜು, ಐಇಇಇ ಸಹಯೋಗದೊಂದಿಗೆ 'ಕಂಪ್ಯೂಟಿಂಗ್, ಎಲೆಕ್ಟ್ರಿಕಲ್ ಮತ್ತು ಎಲೆಕ್ಟ್ರಾನಿಕ್ಸ್‌ನಲ್ಲಿ ಬುದ್ಧಿವಂತಿಕೆ ಮತ್ತು ನವೋದ್ಯಮ ತಂತ್ರಜ್ಞಾನ' ಕುರಿತ ವಿಚಾರಸಂಕಿರಣದಲ್ಲಿ ಅವರು ಮಾತನಾಡಿದರು.

'ನೀವು ಬರೆಯುವ ಕೋಡ್, ಸೃಷ್ಟಿಸುವ ಪ್ರೋಗ್ರಾಂ, ಮಂಡಿಸುವ ಪ್ರಬಂಧಗಳಿಂದ ಭಾರತವು ಉನ್ನತಿ ಕಾಣಲು ಸಾಧ್ಯವಿದೆ. ನಿಮ್ಮಿಂದ ನವ ಭಾರತದ ಕನಸು ನನಸು ಆಗಲಿದೆ' ಎಂದರು.

'ಎಡ್ಜ್ ಎಐ ಬಾಹ್ಯಾಕಾಶದಲ್ಲಿ ಹೊಸ ಸಂಚಲನ ಮೂಡಿಸಲಿದೆ. ಎಐ ಎಲ್ಲಿದೆಯೋ, ಅಲ್ಲಿ ಬುದ್ಧಿಮತ್ತೆ ಇರಲಿದೆ. ಸ್ಮಾರ್ಟ್ ಅಪ್ ಮೇಲೆ ಗಮನ ನೀಡಿ. ಕ್ವಾಲ್ಕಾಮ್ ಒಂದೇ 2025ರಲ್ಲಿ ಎರಡು ಸಾವಿರಕ್ಕೂ ಹೆಚ್ಚು ಹಕ್ಕು ಸ್ವಾಮ್ಯತೆಯನ್ನು ಪಡೆದಿದೆ. ಇದು ಎಲ್ಲಾ ಡೊಮೈನ್‌ನಲ್ಲಿಯೂ ಇದೆ. ಇದೇ ರೀತಿ ಹೆಚ್ಚಿನ ಹಕ್ಕು ಸ್ವಾಮ್ಯತೆಯನ್ನು ಪಡೆಯಬೇಕು' ಎಂದರು.

ಬಿಎನ್‌ಎಂಐಟಿ ಕಾಲೇಜಿನ ಡೀನ್ ಪ್ರೊ. ಈಶ್ವರ್ ಎನ್.ಮಾನೆ ಮಾತನಾಡಿ, 'ವಿದ್ಯಾರ್ಥಿಗಳು ಹೊಸ ಆಲೋಚನೆಗಳ ಬಗ್ಗೆ ಯೋಚಿಸಬೇಕು. ವಿದ್ಯಾರ್ಥಿಗಳು ಎಐ ಅನ್ನು ಒಳ್ಳೆಯ ಕೆಲಸಗಳಿಗೆ ಬಳಕೆ ಮಾಡಿಕೊಳ್ಳಬೇಕು. ಲಭ್ಯವಿರುವ ತಂತ್ರಜ್ಞಾನವನ್ನು ಸದುಪಯೋಗ ಪಡಿಸಿಕೊಳ್ಳಬೇಕು. ವಿದ್ಯಾರ್ಥಿಗಳು ಸಂಶೋಧನೆಯ ಕಡೆ ಹೆಚ್ಚಿನ ಗಮನ ನೀಡಬೇಕು' ಎಂದರು.

ಹನಿವೆಲ್ ಏರೋಸ್ಪೇಸ್ ಎಲೆಕ್ಟ್ರಾನಿಕ್ ಸೊಲ್ಯುಷನ್ಸ್‌ನ ಸನ್‌ನ ಹಿರಿಯ ನಿರ್ದೇಶಕ ಮೈಥಿಲಿ ಬೆಳ್ಳಿ ಕಾಮತ್, ಕಾಲೇಜಿನ ಹೆಚ್ಚುವರಿ ನಿರ್ದೇಶಕ ಎಸ್. ವೈ. ಕುಲಕರ್ಣಿ, ಉಪ ನಿರ್ದೇಶಕ ಡಾ. ಜಿ. ಎನ್. ಕೃಷ್ಣಮೂರ್ತಿ, ನಿರ್ದೇಶಕರಾದ ಪ್ರೊ. ಟಿ. ಜೆ.ರಾಮಮೂರ್ತಿ ಮತ್ತು ಕೆ.ವೆಂಕಟೇಶ್ ಉಪಸ್ಥಿತರಿದ್ದರು.

ಲಷ್ಕರ್ ನಂಟು: ಉತ್ತರ ಕನ್ನಡ ನಿವಾಸಿಗೆ ಶಿಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಾಕಿಸ್ತಾನ ಮೂಲದ ಭಯೋತ್ಪಾದಕ ಸಂಘಟನೆ 'ಲಷ್ಕರ್-ಎ-ತಯಬಾ'ಕ್ಕೆ ಯುವಕರನ್ನು ನೇಮಕ ಮಾಡಿಕೊಳ್ಳುವ ಮತ್ತು ಭಯೋತ್ಪಾದನಾ ಕೃತ್ಯದಲ್ಲಿ ಭಾಗಿಯಾಗಿದ್ದಕ್ಕಾಗಿ ಉತ್ತರ ಕನ್ನಡದ ಸಯ್ಯದ್ ಎಂ.ಇದ್ರಿಸ್ ಎಂಬಾತನಿಗೆ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ವಿಶೇಷ ನ್ಯಾಯಾಲಯವು 10 ವರ್ಷಗಳ ಕಠಿಣ ಶಿಕ್ಷೆ ವಿಧಿಸಿದೆ.

ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ (ಯುಎಪಿಎ) ಅಡಿಯಲ್ಲಿ ಇದ್ರಿಸ್‌ಗೆ ಕೋಲ್ಕತ್ತದ ವಿಶೇಷ ನ್ಯಾಯಾಲಯವು ಶಿಕ್ಷೆ ಹಾಗೂ ₹70 ಸಾವಿರ ದಂಡ ವಿಧಿಸಿ ಬುಧವಾರ ಆದೇಶ ಹೊರಡಿಸಿದೆ ಎಂದು ಎನ್‌ಐಎ ಪತ್ರಿಕಾ ಹೇಳಿಕೆ ತಿಳಿಸಿದೆ.

ಆರೋಪದಲ್ಲಿ ಪಶ್ಚಿಮ ಬಂಗಾಳ ಪೊಲೀಸರು ಪ್ರಕರಣ ದಾಖಲಿಸಿದ್ದರು. ಪ್ರಕರಣವನ್ನು ರಾಷ್ಟ್ರೀಯ ತನಿಖಾ ದಳಕ್ಕೆ 2020ರ ಏಪ್ರಿಲ್‌ನಲ್ಲಿ ಹಸ್ತಾಂತರಿಸಲಾಗಿತ್ತು. ಜಮ್ಮು ಮತ್ತು ಕಾಶ್ಮೀರದ ಅಲ್ತಾಫ್ ಅಹ್ಮದ್ ರಾಥರ್ ಹಾಗೂ ಇದ್ರಿಸ್ ಅವರನ್ನು ತನಿಖಾ ದಳ ಬಂಧಿಸಿತ್ತು.

ಬಂಧಿತ ಮೂವರು ಆರೋಪಿಗಳು ಹಾಗೂ ಪಾಕಿಸ್ತಾನದಲ್ಲಿ ತಲೆಮರೆಸಿಕೊಂಡಿರುವ ಇಬ್ಬರ ವಿರುದ್ಧ ರಾಷ್ಟ್ರೀಯ ತನಿಖಾ ದಳವು 2020ರ ಸೆಪ್ಟೆಂಬರ್ ಹಾಗೂ 2021ರ ಮೇ ತಿಂಗಳಲ್ಲಿ ಆರೋಪಪಟ್ಟಿ ಸಲ್ಲಿಸಿತ್ತು. ತಲೆಮರೆಸಿಕೊಂಡಿರುವ ಇಬ್ಬರ ವಿರುದ್ಧ ರೆಡ್ ಹಾಗೂ ಬ್ಲೂ ಕಾರ್ನರ್ ನೋಟಿಸ್‌ಗಳನ್ನು ಹೊರಡಿಸಲಾಗಿದೆ ಎಂದೂ ತಿಳಿಸಿದೆ.

'ಜಿಹಾದಿ ಪುಸ್ತಕ ದೊರೆತಿತ್ತು'

'ಪಶ್ಚಿಮ ಬಂಗಾಳದಲ್ಲಿ ಲಷ್ಕರ್‌ಗೆ ಯುವಕರನ್ನು ನೇಮಕ ಮಾಡಿಕೊಳ್ಳಲು ತಾನಿಯಾ ಪರ್ವೀನ್ ಜತೆ ಇದ್ರಿಸ್, ರಾಥರ್ ಸಂಚು ರೂಪಿಸಿದ್ದರು. ಉತ್ತರ 24 ಪರಗಣ ಜಿಲ್ಲೆಯ ಬದುರಿಯಾದಲ್ಲಿ 2020ರ ಮಾರ್ಚ್‌ನಲ್ಲಿ ತಾನಿಯಾ ಅವರನ್ನು ಬಂಧಿಸಲಾಗಿತ್ತು. ಶೋಧದ ವೇಳೆ ಜಿಹಾದಿ ಪುಸ್ತಕ ಸೇರಿ ಹಲವು ವಸ್ತುಗಳನ್ನು ವಶಪಡಿಸಿಕೊಳ್ಳಲಾಗಿತ್ತು' ಎಂದು ತನಿಖಾ ಸಂಸ್ಥೆ ತಿಳಿಸಿದೆ.

ಚುಟುಕು ಸುದ್ದಿ

ಸಿ.ಎಂ ಭೇಟಿಗೆ ನಿರ್ಲಕ್ಷ್ಯ: ಪಾಂಡೆಗೆ ನೋಟಿಸ್

ಬೆಂಗಳೂರು: ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಸರಿಯಾದ ಸಮಯಕ್ಕೆ ಭೇಟಿ ಮಾಡದ ಹಿನ್ನೆಲೆಯಲ್ಲಿ ಮತ್ತು ಆಡಳಿತ ಸುಧಾರಣಾ ಇಲಾಖೆಯ (ಇ-ಆಡಳಿತ) ಕಾರ್ಯದರ್ಶಿ ಪಂಕಜ್ ಕುಮಾರ್ ಪಾಂಡೆ ಅವರಿಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ನೋಟಿಸ್ ನೀಡಿದ್ದಾರೆ.

'ಇದೇ 20ರಂದು ಮಧ್ಯಾಹ್ನ 12.30ಕ್ಕೆ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಲು ಮುಖ್ಯಮಂತ್ರಿ ಕಚೇರಿಯಿಂದ ಪಾಂಡೆ ಅವರಿಗೆ ಸೂಚಿಸಲಾಗಿತ್ತು. ಆದರೆ, ಅವರು ಸರಿಯಾದ ಸಮಯಕ್ಕೆ ಹಾಜರಾಗಲಿಲ್ಲ. ಇದನ್ನು ಮುಖ್ಯಮಂತ್ರಿ ಗಂಭೀರವಾಗಿ ಪರಿಗಣಿಸಿದ್ದರು.

ಈ ವಿಚಾರವನ್ನು ನೋಟಿಸ್‌ನಲ್ಲಿ ಉಲ್ಲೇಖಿಸಿರುವ ಮುಖ್ಯ ಕಾರ್ಯದರ್ಶಿ, 'ಇದು ಗಂಭೀರ ಕರ್ತವ್ಯ ಲೋಪ ಆಗಿದ್ದು, ಶಿಸ್ತು ನಿಯಮಗಳ ಉಲ್ಲಂಘನೆ ಆಗಿದೆ. ಈ ಲೋಪಕ್ಕೆ ಸಂಬಂಧಿಸಿ ಲಿಖಿತ ವಿವರಣೆ ನೀಡಬೇಕು' ಎಂದಿದ್ದಾರೆ.

ಕೇರಳ: ಚಿನ್ನ ಕಳವು ಆಡಳಿತ–ಪ್ರತಿಪಕ್ಷಗಳ ನಡುವೆ ವಾಕ್ಸಮರ

ತಿರುವನಂತಪುರ: ಕೇರಳ ವಿಧಾನಸಭೆಯಲ್ಲಿ ಗುರುವಾರ ನಡೆದ ಕಲಾಪದ ವೇಳೆ ಶಬರಿಮಲೆ ಚಿನ್ನದ ಕಳವು ಪ್ರಕರಣವು ಆಡಳಿತ ಹಾಗೂ ವಿರೋಧ ಪಕ್ಷಗಳ ನಡುವೆ ವಾಕ್ಸಮರ, ಗದ್ದಲಕ್ಕೆ ಕಾರಣವಾಯಿತು.

ಯುಡಿಎಫ್ ಶಾಸಕರು ಕಲಾಪಕ್ಕೆ ಅಡ್ಡಿಪಡಿಸಿದರೆ, ಎಲ್‌ಡಿಎಫ್ ಶಾಸಕರು, ಪ್ರಕರಣದ ಪ್ರಮುಖ ಆರೋಪಿ ಉಣ್ಣಿಕೃಷ್ಣನ್ ಪೋಟಿ ಅವರು ಎಐಸಿಸಿ ನಾಯಕಿ ಸೋನಿಯಾ ಗಾಂಧಿ ಅವರನ್ನು ಭೇಟಿಯಾಗಿದ್ದ ಬಗ್ಗೆ ಪ್ರಸ್ತಾಪಿಸುವ ಮೂಲಕ ತಿರುಗೇಟು ನೀಡಿದರು.

ವಿಪಕ್ಷದ ನಾಯಕ ವಿ.ಡಿ. ಸತೀಶನ್ ವಿಷಯ ಪ್ರಸ್ತಾಪಿಸಿ, ದೇವಸ್ವಂ ಸಚಿವ ವಿ.ಎನ್. ವಾಸವನ್ ಅವರ ರಾಜೀನಾಮೆಗೆ ಒತ್ತಾಯಿಸಿದರು. ವಿಪಕ್ಷದ ಶಾಸಕರು ಬ್ಯಾನರ್ ಹಿಡಿದು ಘೋಷಣೆ ಕೂಗಿದರು. ಕಾಂಗ್ರೆಸ್ ಶಾಸಕರು ಪ್ರತಿಭಟಿಸಿ, ದೇವಸ್ವಂ ಸಚಿವ ಕಡಕಂಪಳ್ಳಿ ಸುರೇಂದ್ರನ್ ಅವರು ಪೋಟಿ ಮತ್ತು ಅವರ ಕುಟುಂಬ ಸದಸ್ಯರೊಂದಿಗೆ ಇರುವ ಚಿತ್ರ ಪ್ರದರ್ಶಿಸಿದರು.

'ಆಶ್ರಯ'ದಲ್ಲಿ ಪೌರಕಾರ್ಮಿಕರಿಗೆ ಆದ್ಯತೆಗೆ ಪ್ರಸ್ತಾವ

ಮೈಸೂರು: 'ಆಶ್ರಯ ಯೋಜನೆಗಳಲ್ಲಿ ಪೌರಕಾರ್ಮಿಕರಿಗೆ ಆದ್ಯತೆ ದೊರೆಯುವಂತೆ ಕ್ರಮ ಕೈಗೊಳ್ಳಲು ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು' ಎಂದು ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗದ ಅಧ್ಯಕ್ಷ ಪಿ.ರಘು ತಿಳಿಸಿದರು.


ಪಿ. ರಘು

ಇಲ್ಲಿ ನಡೆದ 'ಪೌರಕಾರ್ಮಿಕರೊಂದಿಗೆ ಸಂವಾದ'ದಲ್ಲಿ ಮಾತನಾಡಿ, 'ಮುಖ್ಯಮಂತ್ರಿ ತವರಲ್ಲೇ ಪೌರಕಾರ್ಮಿಕರು ಹಲವು ಸಮಸ್ಯೆ ಎದುರಿಸುತ್ತಿರುವುದು ಕಂಡುಬಂದಿದೆ. ಇಲ್ಲಿನ ಅಧಿಕಾರಿಗಳು ಏನು ಮಾಡುತ್ತಿದ್ದಾರೋ ತಿಳಿಯದು' ಎಂದರು.

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಇ–ಮೇಲ್: cekrdcl@gmail.com, ವೆಬ್‌ಸೈಟ್: http://www.krdcl.in
ಸಂಖ್ಯೆ: KRDCL/IFB/2025-26/23 ದಿನಾಂಕ: 13.01.2026

ಟೆಂಡರ್ ಅಧಿಸೂಚನೆ

ಕರ್ನಾಟಕ ರಸ್ತೆ ಅಭಿವೃದ್ಧಿ ನಿಗಮ ನಿಯಮಿತವು [ಕೆಆರ್‌ಡಿಸಿಎಲ್] ಕೆಟಿಪಿಪಿ 2000 ಕಾಯ್ದೆ ಮತ್ತು ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಪ್ರಕಾರ ಕೆಪಿಪಿ ಪೋರ್ಟಲ್ www.kpppkarnataka.gov.in ಮೂಲಕ ಕೆಳಗಿನ ಕಾಮಗಾರಿಗಾಗಿ ಆನ್‌ಲೈನ್ ಟೆಂಡರ್ ಅನ್ನು ಆಹ್ವಾನಿಸುತ್ತದೆ.
ಕಾಮಗಾರಿ ವಿವರ: ಬೆಂಗಳೂರು ನಗರ ರಸ್ತೆ ಸುರಕ್ಷತಾ ಪ್ರಾಧಿಕಾರ ಮತ್ತು ಸಂಚಾರ ನಿರ್ವಹಣಾ ಯೋಜನೆಯಡಿಯಲ್ಲಿ ಬೆಂಗಳೂರು ನಗರ ಟ್ರಾಫಿಕ್ ಪೊಲೀಸರಿಗೆ 5 ವರ್ಷಗಳ ನಿರ್ವಹಣೆಯೊಂದಿಗೆ ಬೆಂಗಳೂರು ನಗರದಲ್ಲಿ ತುರ್ತು ವಾಹನ ಆದ್ಯತೆಯ ವ್ಯವಸ್ಥೆಯ ಜೊತೆಗೆ ಅಡಾಪ್ಟಿವ್ ಟ್ರಾಫಿಕ್ ಸಿಗ್ನಲ್ ನಿಯಂತ್ರಣ ವ್ಯವಸ್ಥೆಯ (ATCS) ಹಂತ 02 ರ ಸಿಂಕ್ರೊನೈಸೇಷನ್ ಮತ್ತು ಅನುಷ್ಠಾನ. ಟೆಂಡರಿಗಿಟ್ಟಿರುವ ಮೊತ್ತ: ರೂ.47,11,23,859.00. ಇಎಂಡಿ: ರೂ.48,00,000.00 (ಕೆಪಿಪಿ ಪೋರ್ಟಲ್ ಮೂಲಕ 1.00 ಲಕ್ಷ ಮತ್ತು ಬ್ಯಾಂಕ್ ಗ್ಯಾರಂಟಿ ಮೂಲಕ 47 ಲಕ್ಷಗಳು ಅಥವಾ ಕೆಪಿಪಿ ಪೋರ್ಟಲ್ ಮೂಲಕ 48 ಲಕ್ಷಗಳು). ಕಾಮಗಾರಿ ಪೂರ್ಣಗೊಳ್ಳುವ ಕಾಲಾವಧಿ (ಮಳೆಗಾಲ ಸೇರಿದಂತೆ): 11 ತಿಂಗಳ ಮತ್ತು 5 ವರ್ಷಗಳ ನಿರ್ವಹಣೆ.
1. ಆಸಕ್ತಿಯುಳ್ಳ ಅರ್ಹ ಗುತ್ತಿಗೆದಾರರು ಟೆಂಡರ್ ಪ್ರಕ್ರಿಯೆಯಲ್ಲಿ ಭಾಗವಹಿಸಬಹುದು. ವಿವರಗಳು 23.01.2026 ರಿಂದ ಕೆಪಿಪಿ ಪೋರ್ಟಲ್‌ನಲ್ಲಿ ಲಭ್ಯವಿರುತ್ತದೆ. 2. ವಿವಿಧ ಚಟುವಟಿಕೆಗಳಿಗೆ ದಿನಾಂಕಗಳ ವೇಳಾಪಟ್ಟಿ ಈ ಕೆಳಗಿನಂತಿದೆ: (i) ಪೂರ್ವ–ಬಿಡ್ ಸಭೆ ನಡೆಯುವ ಸ್ಥಳ– ಜಂಟಿ ಪೊಲೀಸ್ ಆಯುಕ್ತರ ಕಛೇರಿ, ಸಂಚಾರ ನಿರ್ವಹಣಾ ಕೇಂದ್ರ, ಬೆಂಗಳೂರು ಇಲ್ಲಿ ದಿನಾಂಕ: 12.02.2026 ರಂದು 16.30 ಗಂಟೆಗೆ. ಈ ಸಮಯದೊಳಗೆ ಪೂರ್ವ–ಬಿಡ್ ವಿಚಾರಣೆಗಳನ್ನು ಸಲ್ಲಿಸಬೇಕು. (ii) ತಾಂತ್ರಿಕ ಮತ್ತು ಆರ್ಥಿಕ ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 21.02.2026 ರಂದು 17.30 ರವರೆಗೆ. (iii) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ಸಮಯ ಮತ್ತು ದಿನಾಂಕ 24.02.2026 ರಂದು ಬೆಳಿಗ್ಗೆ 11.00 ಗಂಟೆಗೆ ಕೆಆರ್‌ಡಿಸಿಎಲ್ ಮುಖ್ಯ ಕಛೇರಿಯಲ್ಲಿ. "ಕೆಆರ್‌ಡಿಸಿಎಲ್ ಯಾವುದೇ ಕಾರಣಗಳನ್ನು ನೀಡದೆ ಯಾವುದೇ ಅಥವಾ ಎಲ್ಲಾ ಬಿಡ್‌ಗಳನ್ನು ಅಂಗೀಕರಿಸಲು ಅಥವಾ ನಿರಾಕರಿಸಲು ಹಕ್ಕು ಹೊಂದಿದೆ".
ಸೂಚನೆ: ಇನ್ನುಮುಂದೆ ಟೆಂಡರ್‌ನಲ್ಲಿ ಯಾವುದೇ ಬದಲಾವಣೆಗಳು ಅಥವಾ ತಿದ್ದುಪಡಿಗಳಿದ್ದಲ್ಲಿ ಕೆಪಿಪಿ ಪೋರ್ಟಲ್‌ನಲ್ಲಿ ಮಾತ್ರ ಅಳವಡಿಸಲಾಗುವುದು.
ಸಹಿ/– ಮುಖ್ಯ ಅಭಿಯಂತರರು, ಕೆಆರ್‌ಡಿಸಿಎಲ್, ಬೆಂಗಳೂರು
ವಾಸಾಸಂಇ/ವಾ.ಪ್ರ/ಎಎಎ/5173/2025–26

ಕರ್ನಾಟಕ ಸರ್ಕಾರ — ಜಿಲ್ಲಾ ಪಂಚಾಯತ್, ಚಿತ್ರದುರ್ಗ
ಕಾರ್ಯಪಾಲಕರ ಇಂಜಿನಿಯರ್‌ರವರ ಕಛೇರಿ, ಪಂಚಾಯತ್‌ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ.
ಇ–ಮೇಲ್:zped.cta@gmail.com ದೂರವಾಣಿ ಸಂ:08194–222372
ಸಂ:ಪಂರಾಜ್‌ಇಂವಿ/ಚಿದು/ಇಇ/ತಾಂ.ಶಾ/ಟೆಂಡರ್/2025–26/2881
ದಿನಾಂಕ: 22.01.2026
ಮರು ಟೆಂಡರ್ ಪ್ರಕಟಣೆ
(Through e-Procurement Portal Only)
ಚಿತ್ರದುರ್ಗ ಜಿಲ್ಲೆಯ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿತ್ರದುರ್ಗ 2025–26ನೇ ಸಾಲಿನ ವಿವಿಧ ಕ್ರಿಯಾ ಯೋಜನೆಯಡಿ ಅನುಮೋದನೆಯಾಗಿರುವ ಕಾಮಗಾರಿಗಳಿಗೆ ಈಗಾಗಲೇ ಟೆಂಅಡರ್ ಕರೆಯಲಾಗಿತ್ತು. ಅದರಲ್ಲಿ 70 ಕಾಮಗಾರಿಗಳಿಗೆ ಯಾರೂ ಭಾಗವಹಿಸದಿರುವುದರಿಂದ 2, 3 ಮತ್ತು 5ನೇ ಕರೆ ಟೆಂಡರ್ ಕರೆಯಲಾಗಿದೆ. ಸದರಿ ಕಾಮಗಾರಿಗಳ ಅಂದಾಜು ಮೊತ್ತ ಕನಿಷ್ಠ ರೂ.6.00 ಲಕ್ಷ ಗರಿಷ್ಠ ರೂ.10.00 ಲಕ್ಷಗಳು ಒಟ್ಟು ರೂ:439.60 ಲಕ್ಷಗಳಿಗೆ ಟೆಂಡರ್ ಕರೆಯಲಾಗಿದ್ದು ದಿನಾಂಕಗಳು ಈ ಕೆಳಕಂಡಂತಿವೆ:–
ಟೆಂಡರ್ ಬಗ್ಗೆ ಮಾಹಿತಿ ಪಡೆಯಲು ಕೊನೆಯ ದಿ: 28.01.2026ರ ಸಮಯ: 11.00
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ: 29.01.2026ರ : ಸಮಯ 16.00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 30.01.2026ರ : ಸಮಯ 16.01
ಆರ್ಥಿಕ ಬಿಡ್ ತೆರೆಯುವ ದಿನಾಂಕ: 31.01.2026ರ : ಸಮಯ 16.01
ಸದರಿ ಟೆಂಡರ್‌ನ ಬಗ್ಗೆ ಹೆಚ್ಚಿನ ಮಾಹಿತಿಗಾಗಿ (support@eprochelpdesk.com) or KPPP Helpdesk Phone No: tel:+91-8046010000, +91-8068948777 ಸಂಪರ್ಕಿಸಲು ಅಥವಾ ಈ ಕಛೇರಿ ದೂರವಾಣಿ ಸಂಖ್ಯೆ: 08194–222372 ಕಾರ್ಯಪಾಲಕ ಅಭಿಯಂತರರು, ಪಂ.ರಾಜ್.ಇಂ.ವಿಭಾಗ, ಚಿತ್ರದುರ್ಗರವರನ್ನು ಕಛೇರಿಯ ಕೆಲಸದ ವೇಳೆಯಲ್ಲಿ ಸಂಪರ್ಕಿಸಲು ಕೋರಿದೆ.
RO.No.616:DIPR/CTA/KSMCA/2025-26
ಸಹಿ/– ಕಾರ್ಯಪಾಲಕ ಅಭಿಯಂತರರು ಪಂ.ರಾಜ್ ಇಂ.ವಿಭಾಗ, ಚಿತ್ರದುರ್ಗ

ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ ನಿಯಮಿತ
(ಕರ್ನಾಟಕ ಸರ್ಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಂ: ಕಾನಿಅ(ವಿ)/ಲೆ.ಅ/ಸಲೆಅ/ಹಿಸಸಿ/25–26/14078 ದಿ:21.01.2026
ಅಂತಿಮ ಕರೆ ಪತ್ರ
ಶ್ರೀ. ರುದ್ರಮುನಿ, ತಂ॥ ಸಿರಸಪ್ಪ ಹ್ಯಾಟಿ, ಮಾರ್ಗದಾಳು, ಕಾರ್ಯ ಮತ್ತು ಪಾಲನೆ ಉಪ–ವಿಭಾಗ, ಕುಕನೂರುನಲ್ಲಿ ಕಾರ್ಯನಿರ್ವಹಿಸುತ್ತಿದ್ದು, ದಿನಾಂಕ. 28.11.2024 ರಿಂದ ಈ ದಿನಾಂಕದವರೆಗೂ ಕಂಪನಿಯ ಕೆಲಸ ಕಾರ್ಯಗಳಿಗೆ ಅನಧಿಕೃತವಾಗಿ ಗೈರು ಹಾಜರಾಗಿದ್ದು, ಈಗಾಗಲೇ ಅಂತಿಮ ನೋಟಿಸ್ ಜಾರಿ ಮಾಡಿ ನೊಂದಣಿ ಅಂಚೆ ಮುಖಾಂತರ ಕಳುಹಿಸಲಾಗಿದ್ದು, ದಿನಾಂಕ. 05.05.2025 ರಂದು ಜಾರಿ ಮಾಡಿದ ಅಂತಿಮ ಕಾರಣ ಕೇಳುವ ನೋಟಿಸನ್ನು ತಾವು ದಿನಾಂಕ. 28.05.2025 ರಂದು ಪಡೆದುಕೊಂಡಿರುತೀರಿ. ಅಲ್ಲದೆ ನೀವು ಈವರೆಗೂ ಕಂಪನಿಯ ಕೆಲಸಕ್ಕೆ ಹಾಜರಾಗದಿರುವುದರಿಂದ ಇದು ನಿಮ್ಮ ಕರ್ತವ್ಯ ಲೋಪವಾಗಿದ್ದು ಕ.ವಿ.ಮಂ. ನೌಕರರ ಸೇವಾ ನಡತೆ ನಿಬಂಧನೆ–1988 ರನ್ವಯ ಅನುಬಂಧ–ಬಿ ದುರ್ನಡತೆಗೆ ಕಾರಣವಾಗುವ ಕೃತ್ಯಗಳು ಮತ್ತು ಲೋಪಗಳು ಕ್ರ ಸಂ. VI, XIV, XV ಮತ್ತು XVI ಎಂದು ಪರಿಗಣಿಸಿ ನಿಮ್ಮ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು. ಆದರೂ ನಿಮಗೆ ಈ ಪತ್ರಿಕಾ ಪ್ರಕಟಣೆಯ ಮುಖಾಂತರ ಅಂತಿಮ ಮರು ಕರೆ ಸೂಚನೆಯೊಂದಿಗೆ 07 ದಿನಗಳ ಕಾಲಾವಕಾಶವನ್ನು ನೀಡಲಾಗಿದ್ದು, ಈ ಅವಧಿಯ ಒಳಗಾಗಿ ಕಂಪನಿಯ ಕರ್ತವ್ಯಕ್ಕೆ ಹಾಜರಾಗದಿದ್ದಲ್ಲಿ ಕಂಪನಿಯ ಕೆಲಸದಲ್ಲಿ ನಿಮಗೆ ಆಸಕ್ತಿ ಇಲ್ಲವೆಂದು ಪರಿಗಣಿಸಿ ನಿಮ್ಮನ್ನು ಮಾರ್ಗದಾಳು ಹುದ್ದೆಯಿಂದ ಸ್ವಯಂ ನಿವೃತ್ತಿಗೊಳಿಸಲಾಗುವುದು.
ಸಹಿ/–ಕಾರ್ಯನಿರ್ವಾಹಕ ಅಭಿಯಂತರರು(ವಿ), ಕಾರ್ಯ ಮತ್ತು ಪಾಲನಾ ವಿಭಾಗ, ಗು.ವಿ.ಸ.ಕಂ.ನಿ., ಕೊಪ್ಪಳ
ಡಿಐಪಿಆರ್/ಕೊಪ್ಪಳ/634/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ ರೋಣ
ಮೊಬೈಲ್ : 9480865110 ಇ–ಮೇಲ್ : adtpron@gmail.com
ಕ್ರಸಂ:ತಾಪಂರೋ/ಲೆಕ್ಕಶಾಖೆ/ಅನಿರ್ಬಂಧಿತ/ವಹಿ/2025–26
ದಿನಾಂಕ : 20–01–2026
ಕೆಪಿಪಿ ಪೋರ್ಟಲ್ ಮೂಲಕ ಟೆಂಡರ ಪ್ರಕಟಣೆ
Standard Bid Document KW-1 [ದ್ವಿ ಲಕೋಟೆ ಪದ್ದತಿ]
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ರೋಣ ಇವರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಆದ್ಯಾದೇಶ 1999–2000 ಪ್ರಕಾರ ಪಾರದರ್ಶಕತೆ ಆ್ಯಕ್ಟ್ 2000 ನಿಯಮದಂತೆ Standard Bid Document KW-1 ರ ನಿಯಮಗಳನ್ವಯ ಅರ್ಹ ಗುತ್ತೇದಾರರಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, ಮುಖಾಂತರ ಈ ಕೆಳಗೆ ನಮೂದಿಸಿದ ಮಂಜೂರಾದ ಕಾಮಗಾರಿಗಳಿಗೆ, ಲೆಕ್ಕ ಶೀರ್ಷಿಕೆ: 2515–00–102–0–62 (059) 2025–26 ನೇ ಸಾಲಿನ ತಾಲೂಕ ಪಂಚಾಯತ ಅನಿರ್ಬಂಧಿತ ಅನುದಾನ ಯೋಜನೆ ಅಡಿ ಟೆಂಡರನ್ನು ಆಹ್ವಾನಿಸಲಾಗಿದೆ. ಹಾಗಾಗಿ ಪಿ.ಡಬ್ಲ್ಯು.ಡಿ. ಇಲಾಖೆಯಲ್ಲಿ ನೊಂದಾಯಿತ ಅರ್ಹ ಗುತ್ತಿಗೆದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್, (https://kppp.karnataka.gov.in) ಮುಖಾಂತರ ಭಾಗವಹಿಸಬಹುದು.
Indent-Nos : RDPR/2025-26/RD/WORK_INDENT 23321 (10.00 Lakhs) (CAT-I), 23293 (Rs. 7.576 Lakhs), 23279 (Rs. 14.735 Lakhs), 23303 (Rs. 5.00 Lakhs), 23251 (Rs. 5.858 Lakhs) (SC), 23190 (Rs. 6.50 Lakhs) (ST), 23273 (Rs. 4.00 Lakhs) (CAT-IIA), 23278 (Rs. 5.50 Lakhs) (CAT-IIA), 23364 (Rs. 8.00 Lakhs).
ಟೆಂಡರಿಗಿಟ್ಟ ಮೊತ್ತ ರೂ. 67.17 ಲಕ್ಷ
ಸಾಮಾನ್ಯ ಸೂಚನೆಗಳು : (1) ಇ–ಪೋರ್ಟಲ್ ಮೂಲಕ ಮಾಹಿತಿ ಮತ್ತು ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ : 22–01–2026 ಸಾಯಂಕಾಲ 4.30 ಗಂಟೆಯವರೆಗೆ (2) ಇ–ಪೋರ್ಟಲ್ ಮೂಲಕ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 29–01–2026 ಸಾಯಂಕಾಲ 4.30 ಗಂಟೆಯವರೆಗೆ (3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 30–01–2026 ಮಧ್ಯಾಹ್ನ 04.30 ಗಂಟೆಗೆ (4) ಆರ್ಥಿಕ ಬಿಡ್ ತೆರೆಯುವ ದಿನಾಂಕ : 31–01–2026 ಸಾಯಂಕಾಲ 4.30 ಗಂಟೆಗೆ ಹಾಗೂ ಯಾವುದೇ ಬಿಡ್ ನಿಗದಿತ ದಿನಾಂಕದ ಒಳಗಡೆ ಸಲ್ಲಿಕೆಯಾಗದಿದ್ದಲ್ಲಿ 3 ದಿನಗಳ ಸ್ವಯಂ ಚಾಲಿತವಾಗಿ ದಿನಾಂಕ ವಿಸ್ತರಣೆಯಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕ ಪಂಚಾಯತ ರೋಣ ಇವರನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು. ದೂರವಾಣಿ ಸಂಖ್ಯೆ 9480865110 ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಂ.ಡಿ ಮೊತ್ತದ ವಿವರ : ಅರ್ಜಿ ಬೆಲೆ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಇ.ಎಂ.ಡಿ. ಸಂಬಂಧಪಟ್ಟ ವರ್ಕ ಇಂಡೆಂಟ್‌ನಲ್ಲಿ ನೋಡಬಹುದಾಗಿದೆ.
ಸಹಿ/– ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲೂಕ ಪಂಚಾಯತ, ರೋಣ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/549/25–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–75/1720/2025–26 ದಿನಾಂಕ: 22.01.2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆಐಎಡಿಬಿಯು ಈ ಕೆಳಕಂಡ ಕಾಮಗಾರಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಆಧುನಿಕ ತಂತ್ರಜ್ಞಾನ ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ನ್ನು ಆಹ್ವಾನಿಸಲಾಗಿದೆ.
ಕಾಮಗಾರಿಯ ಹೆಸರು : ಹಾಸನ ಜಿಲ್ಲೆ, ಹಾಸನ ಬೆಳವಣಿಗೆ ಕೇಂದ್ರ ಕೈಗಾರಿಕಾ ಪ್ರದೇಶದಲ್ಲಿ ಉಪ ಬಡಾವಣೆ–4ರ ರಸ್ತೆ ಸಂಖ್ಯೆ 35 ರಲ್ಲಿ ಸರಪಳಿ 0.00ಮೀ ನಿಂದ 550.00 ಮೀಟರ್ ವರೆಗೆ ಮಳೆ ನೀರು ಚರಂಡಿ ನಿರ್ಮಾಣ ಮಾಡುವ ಕಾಮಗಾರಿ. (2ನೇ ಕರೆ).
ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 07.02.2026 ಸಂಜೆ 4.00 ಗಂಟೆಯವರೆಗೆ.
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/5176/NR/2025-26

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬೀದರ.
ಜಿಲ್ಲಾ ಪಂಚಾಯತ ಕಾರ್ಯಾಲಯ, ಗವಾನಚೌಕ್–ಕಿಲಾ ರಸ್ತೆ, ಬೀದರ–585 401. ದೂರವಾಣಿ 08482–231688, Email-eerdwsd.bdr1@gmail.com
ಸಂಖ್ಯೆ: ಕಾನಿಅ/ಗ್ರಾಕುನೀನೈ/ವಿ/ಬೀದರ/ಟೆಂಡರ/ಪ್ರಯೋಗಾಲಯ/2025–26/1731 ದಿನಾಂಕ:21.01.2026
(KPPP PORTAL ಮುಖಾಂತರ ಮಾತ್ರ)
ಅಲ್ಪಾವಧಿ ಟೆಂಡರ್ ಪ್ರಕಟಣೆ ಕರೆ–2
ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಕಛೇರಿಯಿಂದ, ವಿಭಾಗ ಹಾಗೂ ಉಪ–ವಿಭಾಗ ಕಛೇರಿಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸುತ್ತಿರುವ Division Office, Sub-Division Office District Lab & Taluka Labs ಸಿಬ್ಬಂದಿಗಳ ಸೇವೆಯನ್ನು ರೂ.120.00 ಲಕ್ಷಗಳಿಗೆ 12 ತಿಂಗಳು (ಒಂದು ವರ್ಷ) ಅವಧಿಗೆ ಗುತ್ತಿಗೆ ಪಡೆಯುವ ಸಲುವಾಗಿ ಸೂಕ್ತ ಮಾನ್ಯರ ಏಜೆನ್ಸಿಗಳಿಂದ ಕೆ.ಪಿ.ಪಿ.ಪಿ ಪೋರ್ಟಲ ದ್ವಿಲಕೋಟೆ ಪದ್ಧತಿಯಲ್ಲಿ ಸೇವಾ ಟೆಂಡರರನ್ನು ಆಹ್ವಾನಿಸಿದೆ. ಹಾಗೂ ಇನ್ನಿತರ ವಿವರಗಳನ್ನು ಕೆ.ಪಿ.ಪಿ.ಪಿ. ಪೋರ್ಟಲ್ https://kppp.karnataka.gov.in Portal ನಲ್ಲಿ ಪಡೆಯಬಹುದಾಗಿರುತ್ತದೆ ಹಾಗೂ ನಿಗಧಿಪಡಿಸಿರುವ ಕರಾರು ನಿಯಮಗಳಂತೆ ಸಂಬಂಧಪಟ್ಟ ದಾಖಲಾತಿಗಳನ್ನು ದರಗಳೊಂದಿಗೆ ಸಲ್ಲಿಸಲು ಕೋರಿದೆ. ದಾಖಲೆಗಳ ಡೌನಲೋಡ ಮತ್ತು ಭರ್ತಿ ಮಾಡುವ ಮಾಹಿತಿ ಅಂಶಗಳು ಈ ಕೆಳಗಿನಂತಿವೆ:
1) ಟೆಂಡರ ದಸ್ತಾವೇಜುಗಳನ್ನು ವೆಬ್ ಸೈಟಿನಿಂದ ಡೌನಲೋಡ ಮಾಡಿಕೊಳ್ಳಲ್ಲು ಪ್ರಾರಂಭವಾಗುವ ದಿನಾಂಕ :22.01.2026 ರಿಂದ 31.01.2026 ವರೆಗೆ, 2) ಭರ್ತಿ ಮಾಡಿದ ಟೆಂಡರ ಸಲ್ಲಿಸಲು ಕೊನೆಯ ದಿನಾಂಕ 31.01.2026 ರಂದು ಸಾಯಂಕಾಲ 05:00 ಗಂಟೆಯವರೆಗೆ, 3) ತಾಂತ್ರಿಕ ಬಿಡ್ ತೆರೆಯುವ ದಿನಾಂಕ: 02.02.2026 ರಂದು ಬೆಳಗ್ಗೆ 11.00 ಗಂಟೆಯ ನಂತರ, 4) ಆರ್ಥಿಕ ಬಿಡ್ ತೆರೆಯುವ ದಿನಾಂಕ:ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ
ಸಹಿ/– ಕಾರ್ಯನಿರ್ವಾಹಕ ಅಭಿಯಂತರರು, ಗ್ರಾ.ಕು.ನೀ & ನೈ ವಿಭಾಗ–ಬೀದರ
ವಾ.ಸಾ.ಸಂ.ಇ/ಬೀದರ/306/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ
(ಕರ್ನಾಟಕ ಸರ್ಕಾರದ ಅಧೀನ ಸಂಸ್ಥೆ)
ನಂ.2, 2/1 ಮತ್ತು 2/3, ಕಾಳಿದಾಸ ಮಾರ್ಗ, 1ನೇ ಮುಖ್ಯ ರಸ್ತೆ, ಗಾಂಧಿನಗರ
ಬೆಂಗಳೂರು – 560 009. ದೂ.ಸಂಖ್ಯೆ : 080–22265383, website: www.kiadb.in
ನಂ. ಐಎಡಿಬಿ/ಇಎನ್‌ಜಿಜಿ/ಇಟಿಎನ್‌ಡಿ–ಇಪಿ–73/1722/2025–26 ದಿನಾಂಕ: 22.01.2026
ಅಲ್ಪಾವಧಿ ಟೆಂಡರ್ ಆಹ್ವಾನ ಪ್ರಕಟಣೆ
ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ
ಕೆಐಡಿಬಿಯು ಈ ಕೆಳಕಂಡ ಕಾಮಗಾರಿಗಳಿಗೆ ಸಾಕಷ್ಟು ಆರ್ಥಿಕ ಸಂಪನ್ಮೂಲ, ಸೂಕ್ತ ನಿರ್ಮಾಣ ಉಪಕರಣಗಳು, ತಾಂತ್ರಿಕ ಮಾನವಶಕ್ತಿ ಮತ್ತು ಇದೇ ರೀತಿಯ ಕೆಲಸದಲ್ಲಿ ಸಾಕಷ್ಟು ಅನುಭವ ಹೊಂದಿರುವ ಅರ್ಹ ಕೆಸಿಇಐ (ವಿದ್ಯುತ್) ದರ್ಜೆ–2 ರ ಗುತ್ತಿಗೆದಾರರಿಂದ, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕ ಕಾಯ್ದೆ 1999 ಮತ್ತು ನಿಯಮ 2000 ರನ್ವಯ ದ್ವಿ ಲಕೋಟೆ ಪದ್ಧತಿಯಡಿಯಲ್ಲಿ ಐಟಂ ದರ ಆಧಾರದ ಮೇಲೆ ವಿದ್ಯುನ್ಮಾನ ಪೋರ್ಟಲ್ ಮೂಲಕ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.
ಕಾಮಗಾರಿಗಳ ಹೆಸರು : (1) ದಾವಣಗೆರೆ ಜಿಲ್ಲೆ, ಹರಿಹರ ತಾಲ್ಲೂಕಿನ ಸಾರಥಿ ಕುರುಬರಹಳ್ಳಿ , ಹಂತ–1 ಕೈಗಾರಿಕಾ ಪ್ರದೇಶದ ಪ್ಲಾಟ್‌ಗಳ ಮೇಲೆ ಹಾದುಹೋಗಿರುವ ಹೆಚ್‌ಟಿ/ಎಲ್‌ಟಿ ಲೈನ್ ಮತ್ತು ಪರಿವರ್ತಕಗಳನ್ನು ಸ್ಥಳಾಂತರಿಸುವ ಕಾಮಗಾರಿ. (ಇತರೆ). (2ನೇ ಕರೆ).
(2) ಬೆಂಗಳೂರು ಗ್ರಾಮಾಂತರ ಜಿಲ್ಲೆ ಅಪರಲ್ ಪಾರ್ಕ್ ಕೈಗಾರಿಕಾ ಪ್ರದೇಶ, ಹಂತ–1 ಮತ್ತು ಹಂತ–2 ರಲ್ಲಿ ಬೀದಿ ದೀಪಗಳ ಕಾರ್ಯಾಚರಣೆ ಮತ್ತು ವಾರ್ಷಿಕ ನಿರ್ವಹಣೆ ಕಾಮಗಾರಿ (CAT-II(A). (2ನೇ ಕರೆ).
(3) ಕೋಲಾರ ಜಿಲ್ಲೆ ವೇಮಗಲ್ ಕೈಗಾರಿಕಾ ಪ್ರದೇಶ 1ನೇ ಮತ್ತು 2ನೇ ಹಂತದ ವಿವಿಧ ಕೈಗಾರಿಕಾ ಪ್ಲಾಟ್‌ಗಳಲ್ಲಿ ಹಾದುಹೋಗಿರುವ ಹೆಚ್‌ಟಿ/ಎಲ್‌ಟಿ ಲೈನ್ ಮತ್ತು ಪರಿವರ್ತಕಗಳನ್ನು ಸ್ಥಳಾಂತರಿಸುವ ಕಾಮಗಾರಿ. (ಪ.ಜಾ). (2ನೇ ಕರೆ).
.ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 04.02.2026 ಸಂಜೆ 4.00 ಗಂಟೆಯವರೆಗೆ
ಅರ್ಜಿದಾರರು ಬಿಡ್ಡಿಂಗ್ ದಸ್ತಾವೇಜುಗಳನ್ನು ಕರ್ನಾಟಕ ಸರ್ಕಾರದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ಮೂಲಕ ಡೌನ್‌ಲೋಡ್ ಮಾಡಿಕೊಳ್ಳಬಹುದು.
ಸಹಿ/– ಮುಖ್ಯ ಅಭಿಯಂತರರು–1, ಕೆಐಎಡಿಬಿ, ಬೆಂಗಳೂರು
DIPR/CP/5174/Zen/2025-26

ಕರ್ನಾಟಕ ಸರ್ಕಾರ
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜೀನಿಯರಿಂಗ್ ವಿಭಾಗ, ಕಲಬುರಗಿ
ಲೋಕೋಪಯೋಗಿ ಇಲಾಖೆ, ವಸತಿ ಗೃಹ ಸಂಖ್ಯೆ 110 ಡಿ., ಐವಾನ್–ಇ–ಶಾಹಿ ಕಾಲೋನಿ, ಎಚ್.ಕೆ.ಇ. ಶಿಕ್ಷಣ ಸಂಸ್ಥೆಯ ಮಹಿಳಾ ಪಾಲಿಟೆಕ್ನಿಕ್ ಎದುರುಗಡೆ, ಕಲಬುರಗಿ–02,
ದೂ./ಫ್ಯಾಕ್ಸ್: 08472–241982, e-mail: ee.khsdrp.klb@gmail.com
ಸಂಖ್ಯೆ:ಆಕು.ಕ./ಕಾನಿಅ/ಇಂವಿಕ/ಸ.ಇಂ–2/15th Fin/UPHCs ಟೆಂಡರ್/2025–26/1480 ದಿನಾಂಕ : 21.01.2026
ಟೆಂಡರ್ ಪ್ರಕಟಣೆ
ಕಾರ್ಯನಿರ್ವಾಹಕ ಅಭಿಯಂತರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಇಂಜೀನಿಯರಿಂಗ್ ವಿಭಾಗ, ಕಲಬುರಗಿ ರವರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆ (KPPP Portal) ಮೂಲಕ ದ್ವಿ–ಲಕೋಟೆ ಟೆಂಡರ್ ದಾಸ್ತಾವೇಜು ಪದ್ಧತಿಯಲ್ಲಿ ಟೆಂಡರಗಳನ್ನು ಆಹ್ವಾನಿಸಲಾಗಿದೆ.
ಕ್ರ.ಸಂ. ಕಾಮಗಾರಿಯ ಹೆಸರು : 1) ಯಾದಗಿರಿ ಜಿಲ್ಲೆಯ ಯಾದಗಿರಿ ಪಟ್ಟಣದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ 84.00, ಇಎಮ್.ಡಿ. ಮೊತ್ತ (ರೂ.ಗಳಲ್ಲಿ) 1,68,000.00 ಮೀಸಲು ವರ್ಗ Gen ಕಾಮಗಾರಿಪೂರ್ಣ ಗೊಳಿಸಲು ನಿಗಧಿಪಡಿಸಿದ ಅವಧಿ 6 ತಿಂಗಳು, 2) ಯಾದಗೀರ ಜಿಲ್ಲೆಯ ಶಹಾಪೂರದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ 84.00, ಇಎಮ್.ಡಿ. ಮೊತ್ತ (ರೂ.ಗಳಲ್ಲಿ) 1,68,000.00 ಮೀಸಲು ವರ್ಗ Gen. ಕಾಮಗಾರಿಪೂರ್ಣ ಗೊಳಿಸಲು ನಿಗಧಿಪಡಿಸಿದ ಅವಧಿ 6 ತಿಂಗಳು, 3) ರಾಯಚೂರು ಜಿಲ್ಲೆಯ ಸಿಂಧನೂರು ತಾಲೂಕಿನ ಸಿಂಧನೂರು ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ 84.00, ಇಎಮ್.ಡಿ. ಮೊತ್ತ (ರೂ.ಗಳಲ್ಲಿ) 84,000.00 ಮೀಸಲು ವರ್ಗ CAT-II(A), ಕಾಮಗಾರಿಪೂರ್ಣ ಗೊಳಿಸಲು ನಿಗಧಿಪಡಿಸಿದ ಅವಧಿ 6 ತಿಂಗಳು, 4) ರಾಯಚೂರು ಜಿಲ್ಲೆಯ ರಾಯಚೂರು ತಾಲೂಕಿನ ರಾಗಿಮನಗುಡ್ಡದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ 84.00, ಇಎಮ್.ಡಿ. ಮೊತ್ತ (ರೂ.ಗಳಲ್ಲಿ) 1,68,000.00 ಮೀಸಲು ವರ್ಗ Gen. ಕಾಮಗಾರಿಪೂರ್ಣ ಗೊಳಿಸಲು ನಿಗಧಿಪಡಿಸಿದ ಅವಧಿ 6 ತಿಂಗಳು, 5) ವಿಜಯನಗರ ಜಿಲ್ಲೆಯ ಹರಪ್ಪನಹಳ್ಳಿಯ ಅಂಬೇಡ್ಕರ್ ನಗರದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ 84.00, ಇಎಮ್.ಡಿ. ಮೊತ್ತ (ರೂ.ಗಳಲ್ಲಿ) 1,68,000.00 ಮೀಸಲು ವರ್ಗ Gen, ಕಾಮಗಾರಿಪೂರ್ಣ ಗೊಳಿಸಲು ನಿಗಧಿಪಡಿಸಿದ ಅವಧಿ 6 ತಿಂಗಳು, 6) ವಿಜಯನಗರ ಜಿಲ್ಲೆಯ ಹೊಸಪೇಟೆಯ ಆಕಾಶವಾಣಿ ನಗರದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ 84.00, ಇಎಮ್.ಡಿ. ಮೊತ್ತ (ರೂ.ಗಳಲ್ಲಿ) 84,000.00 ಮೀಸಲು ವರ್ಗ ST, ಕಾಮಗಾರಿಪೂರ್ಣ ಗೊಳಿಸಲು ನಿಗಧಿಪಡಿಸಿದ ಅವಧಿ 6 ತಿಂಗಳು, 7) ಕೊಪ್ಪಳ ಜಿಲ್ಲೆಯ ಕೊಪ್ಪಳದಲ್ಲಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣ, ಟೆಂಡರಿಗಿಟ್ಟ ಮೊತ್ತ ರೂ.ಲಕ್ಷಗಳಲ್ಲಿ 84.00, ಇಎಮ್.ಡಿ. ಮೊತ್ತ (ರೂ.ಗಳಲ್ಲಿ) 1,68,000.00 ಮೀಸಲು ವರ್ಗ Gen, ಕಾಮಗಾರಿಪೂರ್ಣ ಗೊಳಿಸಲು ನಿಗಧಿಪಡಿಸಿದ ಅವಧಿ 6 ತಿಂಗಳು,
ಟೆಂಡರ ಪ್ರಕ್ರಿಯೆಗಳ ದಿನಾಂಕಗಳು : 1) ಟೆಂಡರಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: 30.01.2026 ರಂದು 16.00 ಗಂಟೆಯವರೆಗೆ, 2) ಟೆಂಡರ್ ತೆರೆಯುವ ದಿನಾಂಕ ಮತ್ತು ಸಮಯ (ತಾಂತ್ರಿಕ ಬಿಡ್) 31.01.2026 ರಂದು 16.30 ಗಂಟೆಗೆ.
ಟಿಪ್ಪಣೆ: 1. ಈ ಕೆಳಗೆ ಸಹಿ ಮಾಡಿರುವವರು ಯಾವುದೇ ಕಾರಣಗಳನ್ನು ನೀಡದೆ ಟೆಂಡರ ಪ್ರಕ್ರಿಯೆಯ ಮುಂದೂಡುವಿಕೆ /ಸಂಪೂರ್ಣವಾಗಿ ಟೆಂಡರ ರದ್ದುಗೊಳಿಸುವ/ಟೆಂಡರ ನಿರಾಕರಿಸುವ ಹಕ್ಕನ್ನು ಹೊಂದಿರುತ್ತಾರೆ. 2. ಇನ್ನುಮುಂದೆ ಟೆಂಡರ ಪ್ರಕ್ರಿಯೆಯಲ್ಲಿ ಯಾವುದೇ ಬದಲಾವಣೆಗಳು ಇದ್ದಲ್ಲಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ಬದಲಾಗಿ ವಿದ್ಯುನ್ಮಾನ ಸಂಗ್ರಹಣೆ ವೇದಿಕೆಯಲ್ಲಿ ಮಾತ್ರ ಬದಲಾವಣೆಗಳನ್ನು ಪ್ರಕಟಿಸುವಲಾಗುವುದು.
ಸಹಿ/– ಕಾರ್ಯಪಾಲಕ ಅಭಿಯಂತರರು ಆ&ಕುಕಇ ಇಂಜಿನೀಯರಿಂಗ್ ವಿಭಾಗ, ಕಲಬುರಗಿ
ವಾ.ಸಾ.ಸಂ.ಇ.ಕಲಬುರಗಿ/1004/ದೇಶಪಾಂಡೆ ಪಬ್ಲಿಸಿಟಿ/2025–26

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಅಭಿಯಂತರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ,
ಕಂಟೋನ್‌ಮೆಂಟ್, ಬಳ್ಳಾರಿ ದೂರವಾಣಿ: 08392–200293
ಸಂ: ಕಾನಿಇಂ/ಸನೀ&ಅಂ.ಅ.ವಿ/ಬ/ಸ.ಇಂ–2/2025–26/1871 ದಿ:20.01.2026
ಟೆಂಡರ್ ಪ್ರಕಟಣೆ
("KPPP" ಪೋರ್ಟಲ್ ಕೆ.ಡಬ್ಲ್ಯೂ–4 ಮುಖಾಂತರ)
ಕರ್ನಾಟಕ ಸರ್ಕಾರದ ಮಾನ್ಯ ರಾಜ್ಯಪಾಲರ ಪರವಾಗಿ ಲೆಕ್ಕಶೀರ್ಷಿಕೆ 4702 ಅಣೆಕಟ್ಟು ಪಿಕಪ್ –ಪ್ರಧಾನ ಕಾಮಗಾರಿಯಡಿ ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲ್ಲೂಕಿನ 1 ಕಾಮಗಾರಿಗಾಗಿ ದ್ವಿಲಕೋಟೆ ಪದ್ದತಿಯಲ್ಲಿ ಕಾರ್ಯನಿರ್ವಾಹಕ ಇಂಜಿನೀಯರವರಿಂದ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಟೆಂಡರಿಗಿಟ್ಟ ಅಂದಾಜು ಮೊತ್ತ ರೂ. 200.42 ಲಕ್ಷಗಳಿರುತ್ತದೆ. ಟೆಂಡರ್‌ನ್ನು ದಿನಾಂಕ: 16.01.2026 ರಿಂದ ದಿನಾಂಕ: 16.02.2026 ರ ಸಂಜೆ 5.30 ಗಂಟೆಯವರಗೆ ಸಲ್ಲಿಸಬಹುದು. ಕಾಮಗಾರಿಯ ತಾಂತ್ರಿಕ ಬಿಡ್‌ಗಳನ್ನು ದಿನಾಂಕ: 18.02.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು ಹಾಗೂ ಕಾಮಗಾರಿಯ ಆರ್ಥಿಕ ಬಿಡ್‌ಗಳನ್ನು ದಿನಾಂಕ: 21.02.2026 ರ ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಹೆಚ್ಚಿನ ಮಾಹಿತಿಗಳನ್ನು "KPPP" ವೆಬ್‌ಸೈಟ್ http://kppp.karnataka.gov.in ನಲ್ಲಿ ಪಡೆಯಬಹುದು.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ. ಬಳ್ಳಾರಿ
ಡಿಐಪಿಆರ್/ಬಳ್ಳಾರಿ/924/ಕೆಎಸ್‌ಎಂಸಿಎ/2025–26

ಕರ್ನಾಟಕ ಸರ್ಕಾರ–ಜಿಲ್ಲಾ ಪಂಚಾಯತ್–ಶಾಲಾ ಶಿಕ್ಷಣ ಇಲಾಖೆ
ಸಮಗ್ರ ಶಿಕ್ಷಣ ಕರ್ನಾಟಕ – ಶಿವಮೊಗ್ಗ ಜಿಲ್ಲೆ
ಸಂಖ್ಯೆ:ಸಶಿಕ/ಎ2/ಟೆಂಡರ್‌ಪ್ರಕಟಣೆ/39/2024–25 ದಿ: 20/01/2026
ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)
ಕರ್ನಾಟಕ ಸರ್ಕಾರದ ಶಿಕ್ಷಣ ಇಲಾಖೆಯ ಸಮಗ್ರ ಶಿಕ್ಷಣ ಕರ್ನಾಟಕ ಕಾರ್ಯಕ್ರಮದಡಿ ಇಲಾಖಾವತಿಯಿಂದ 2024–25 ನೇ ಸಾಲಿಗೆ ಜಿಲ್ಲೆಯ 11 ಕೆ.ಪಿ.ಎಸ್ ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್ ಮತ್ತು ಐ.ಸಿ.ಟಿ ಲ್ಯಾಬ್ ಸ್ಥಾಪಿಸುವ ಸಂಬಂಧ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಇ– ಟೆಂಡರ್ ಆಹ್ವಾನಿಸಲಾಗಿದ್ದು, ಕೊನೆಯ ದಿನಾಂಕ : 04–02–2026 ರ ಸಂಜೆ 5.30 ಘಂಟೆಯೊಳಗೆ ಇ– ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸಬೇಕಾಗಿರುತ್ತದೆ ಹೆಚ್ಚಿನ ವಿವರಗಳಿಗೆ, KPPP.Karnataka.gov.in ನಲ್ಲಿ ನೋಡಬಹುದು.
ಕ್ರ.ಸಂ. 1. ಕಾರ್ಯಕ್ರಮದ ವಿವರ: 2024–25 ನೇ ಸಾಲಿನಆಯವ್ಯಯ ಘೋಷಣೆಯಂತೆ ಕಲಿಕಾ ಸಾಮಾಗ್ರಿ ಒದಗಿಸಲು ಜಿಲ್ಲೆಯ 11 ಕೆ.ಪಿ.ಎಸ್ ಶಾಲೆಗಳಿಗೆ ಕಂಪ್ಯೂಟರ್ ಲ್ಯಾಬ್ ಮತ್ತು ಐ.ಸಿ.ಟಿ ಲ್ಯಾಬ್ ಸ್ಥಾಪಿಸಲು ಕಂಪ್ಯೂಟರ್ ಪರಿಕರಗಳನ್ನು ಖರೀದಿಸುವ ಬಗ್ಗೆ ಶಾಲೆಗಳ ಸಂಖ್ಯೆ: 11 ಟೆಂಡರ್ ಸಂಖ್ಯೆ: DPI/2025-26/IND0640 ಟೆಂಡರ್‌ನ ಅಂದಾಜು ಮೊತ್ತ (ಲಕ್ಷಗಳಲ್ಲಿ): 44.000
ಹೆಚ್ಚಿನ ಮಾಹಿತಿಗಾಗಿ: 9448999406/ 08182–223998 ಈ ದೂರವಾಣಿ ಸಂಖ್ಯೆಗೆ ಸಂಪರ್ಕಿಸಬಹುದು.
ಸಹಿ/– ಉಪನಿರ್ದೇಶಕರು (ಆಡಳಿತ) ಮತ್ತು ಪದನಿಮಿತ್ತ ಜಿಲ್ಲಾ ಯೋಜನಾ ಸಮನ್ವಯಾಧಿಕಾರಿಗಳು ಸಮಗ್ರ ಶಿಕ್ಷಣ ಕರ್ನಾಟಕ, ಶಿವಮೊಗ್ಗ
ವಾ.ಸಾ.ಸಂ.ಇ/ಕೆಎಸ್‌ಎಂಸಿಎ/ಶಿ/25–26/159/01/1677

ಕರ್ನಾಟಕ ಸರಕಾರ
ಕಾರ್ಯನಿರ್ವಾಹಕ ಇಂಜಿನೀಯರವರ ಕಛೇರಿ
ಪಂಚಾಯತ ರಾಜ್ ಇಂಜಿನೀಯರಿಂಗ್ ವಿಭಾಗ, ಹಾವೇರಿ
ಈ ಕಛೇರಿ ಗುತ್ತಿಗೆ ಪ್ರಕಟಣೆ ಸಂ.38/ಪಂ.ರಾ.ಇಂ/ವಿ.ಹಾ/ಪಿ.ಬಿ–1&2/ಟೆಂಡರ/2025–26/6296 ದಿನಾಂಕ : 20–01–2026
ಇ–ಟೆಂಡರ್ ಪ್ರಕಟಣೆ
ದಿನಾಂಕ : 17–01–2026 & 20–01–2026 ರಂದು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ, ಕಾಮಗಾರಿ ಇಂಡೆಂಟ್ ಸಂಖ್ಯೆ 19920/Call-2, 20467/Call-2, 20599/Call-2, 20614/Call-2 (SC) ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 27–01–2026 (ಮುಂದೂಡಿದ ಕೊನೆಯ ದಿನಾಂಕ : 29–01–2026 ಇರುತ್ತದೆ) ಹಾಗೂ 19840/Call-2 (Cat I), 19962/Call-2, 19965/Call-2 (Cat I), 20530/Call-2, 23296 (SC), 23281, 23182 (2A), 23121, 23290, 23230 (ST), 23180, 23291 (2A), 23106 (2A), 23177 (ST) & 23268 (2A) (ಒಂದನೇ ಮತ್ತು ಎರಡನೇ ಕರೆ) ಕಾಮಗಾರಿಗಳಿಗೆ ಗುತ್ತಿಗೆ ಪ್ರಕಟಣೆಯನ್ನು ನೀಡಲಾಗಿದ್ದು, ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಮೂಲಕ ಗುತ್ತಿಗೆ ಪತ್ರಗಳನ್ನು ಸಲ್ಲಿಸುವ ಕೊನೆಯ ದಿನಾಂಕ : 29–01–2026 (ಮಧ್ಯಾಹ್ನ 4.00 ಗಂಟೆಯವರೆಗೆ ಮಾತ್ರ) ವನ್ನು ನಿಗದಿಪಡಿಸಲಾಗಿರುತ್ತದೆ. ಹೆಚ್ಚಿನ ವಿವರಗಳಿಗಾಗಿ ಹಾಗೂ ಬದಲಾವಣೆಗಳಿದ್ದಲ್ಲಿ ಇಲಾಖೆಯು ವೆಬಸೈಟ್ http://www.kppp.karnatak.gov.in ನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/– ಕಾರ್ಯನಿರ್ವಾಹಕ ಇಂಜಿನೀಯರರು, ಪಂಚಾಯತರಾಜ ಇಂಜಿನೀಯರಿಂಗ್ ವಿಭಾಗ, ಹಾವೇರಿ
ವಾಸಾಸಂಇ/ಹಾವೇರಿ/ಕೆಎಸ್‌ಎಂಸಿಎ/646/2025–26

ಕರ್ನಾಟಕ ಸರ್ಕಾರ — ಜಿಲ್ಲಾ ಪಂಚಾಯಿತಿ
ಕಾರ್ಯಪಾಲಕ ಇಂಜಿನಿಯರವರ ಕಛೇರಿ,
ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು
ದೂರವಾಣಿ ಸಂಖ್ಯೆ:08262–220936 E-Mail: zpedekm@rediffmail.com
ಟೆಂಡರ್ ಪ್ರಕಟಣೆ ಸಂಖ್ಯೆ:29/2025–26/2ನೇ ಕರೆ 2946 ದಿನಾಂಕ:20.01.2026
–:ಟೆಂಡರ್ ಪ್ರಕಟಣೆ :– (2ನೇ ಕರೆ)
ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರುರವರು ಚಿಕ್ಕಮಗಳೂರು ಜಿಲ್ಲೆಯ ತರೀಕೆರೆ ತಾಲ್ಲೂಕಿನ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಕೆ.ಪಿ.ಪಿ.ಪಿ. ಮೂಲಕ ಟೆಂಡರ್ ಆಹ್ವಾನಿಸಲಾಗಿದೆ. ಕಾಮಗಾರಿಯ ಗರಿಷ್ಠ ಅಂದಾಜು ಮೊತ್ತ ರೂ.65.12 ಲಕ್ಷಗಳು ಮತ್ತು ಕನಿಷ್ಠ ಅಂದಾಜು ಮೊತ್ತ ರೂ.24.37 ಲಕ್ಷಗಳು ವಹಿಸಿಕೊಳ್ಳುವ ಅಥವಾ ನಿರ್ವಹಿಸಿರುವ ಸಾಮರ್ಥ್ಯದ ಬಗ್ಗೆ Standard Tender Document KW–2& 3 ರಂತೆ ವಿವರಗಳನ್ನು ಲಗತ್ತಿಸತಕ್ಕದ್ದು. ಸದರಿ ಕಾಮಗಾರಿಗಳಿಗೆ ಕೆ.ಪಿ.ಪಿ.ಪಿ. ಮೂಲಕ ಡೌನ್‌ಲೋಡ್ ಮಾಡಿದ ಡಾಕ್ಯೂಮೆಂಟ್‌ಗಳನ್ನು ದಿನಾಂಕ:20.01.2026 ರಿಂದ ದಿನಾಂಕ:03.02.2026 ರವರೆಗೆ ಸಂಜೆ 5.30 ಗಂಟೆಯೊಳಗೆ ಭರ್ತಿ ಮಾಡಿ ಅಪ್‌ಲೋಡ್ ಮಾಡುವುದು. ತಾಂತ್ರಿಕ ಬಿಡ್ಡನ್ನು ದಿನಾಂಕ:05.02.2026 ರಂದು ಸಂಜೆ 5.05 ಗಂಟೆಗೆ ತೆರೆಯಲಾಗುವುದು. ಆರ್ಥಿಕ ಬಿಡ್ಡನ್ನು ಸಾಧ್ಯವಾದಲ್ಲಿ ದಿನಾಂಕ:11.02.2026 ರಂದು ಬೆಳಿಗ್ಗೆ 11.00 ಗಂಟೆಗೆ ತೆರೆಯಲಾಗುವುದು. ಈ ದಿನಾಂಕದಂದು ಆಕಸ್ಮಿಕ ರಜಾ ದಿನಗಳು ಬಂದಲ್ಲಿ ಮರು ದಿನವನ್ನು ಪರಿಗಣಿಸಲಾಗುವುದು. ಪ್ರಕಟಣೆಯನ್ನು kppp.karnataka.gov.in website ನಲ್ಲಿ ಓದಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಕಛೇರಿ ವೇಳೆಯಲ್ಲಿ ವಿಷಯ ನಿರ್ವಾಹಕರನ್ನು ಸಂಪರ್ಕಿಸಿ ತಿಳಿಯಬಹುದಾಗಿದೆ.
ಸಹಿ/–ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಚಿಕ್ಕಮಗಳೂರು

ಕರ್ನಾಟಕ ನೀರಾವರಿ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯಪಾಲಕ ಇಂಜಿನೀಯರವರ ಕಛೇರಿ, ಕರ್ನಾಟಕ ನೀರಾವರಿ ನಿಗಮ ನಿಯಮಿತ, ನಂ.4, ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ.
ಸಂ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/2ನೇ ಟೆಂಡರ್ ಪ್ರಕಟಣೆ ಸಂಖ್ಯೆ : 16/2025–26 ದಿನಾಂಕ : 21.01.2026
ಉಲ್ಲೇಖ: ಕಾ.ಇಂ/ಕನೀನಿನಿ/ಬಿಡಿಯನ್–4/ತಾ.ಸಂ/ಪಿ.ಬಿ 1/4701 ಭದ್ರಾ/ಟೆಂಡರ್ ಪ್ರಕಟಣೆ ಸಂಖ್ಯೆ : 16/2025–26 ದಿನಾಂಕ : 22.12.2025
2ನೇ ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆ.ಪಿ.ಪಿ.ಪೋರ್ಟಲ್‌ನಲ್ಲಿ ಮೂಲಕ ಮಾತ್ರ)
ಕೆ.ಟಿ.ಪಿ.ಪಿ ವೇದಿಕೆಯಡಿಯಲ್ಲಿ 4701 ಭದ್ರಾ ಲೆಕ್ಕ ಶೀರ್ಷಿಕೆಯಡಿಯಲ್ಲಿ 01 ಸಂಖ್ಯೆ ಕಾಮಗಾರಿಗೆ ವ್ಯವಸ್ಥಾಪಕ ನಿರ್ದೇಶಕರು, ಕನೀನಿನಿ., ಬೆಂಗಳೂರು ಇವರ ಪರವಾಗಿ ನೊಂದಾಯಿಸಲ್ಪಟ್ಟಿರುವ ಗುತ್ತಿಗೆದಾರರಿಂದ ಟೆಂಡರ್‌ನ್ನು ಕಾರ್ಯಪಾಲಕ ಇಂಜಿನಿಯರ್, ಕನೀನಿನಿ, ನಂ.4 ಬಿ.ಆರ್.ಎಲ್.ಬಿ.ಸಿ ವಿಭಾಗ, ಭದ್ರಾವತಿ ಇವರಿಂದ ಆಹ್ವಾನಿಸಲಾಗಿದೆ.
1) ಟೆಂಡರ್ ಫಾರಂಗಳನ್ನು ಕೋರಿ ಹಾಗೂ ಅರ್ಜಿಯನ್ನು ಸಲ್ಲಿಸುವ ಕೊನೆಯ ದಿನಾಂಕಗಳು : 22.01.2026 ರಿಂದ 03.02.2026 ರವರೆಗೆ ಸಂಜೆ 17.30 ಗಂಟೆಗೆ. 2) ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 04.02.2026 ರಂದು 17.30 ಗಂಟೆಗೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ : After obtaining approval of technical bid from competent authority 4) ಕಾಲಾವಧಿ : 04 ತಿಂಗಳು (ಮಳೆಗಾಲ ಸಹಿತ). 5) ಟೆಂಡರ್‌ಗಿಟ್ಟ ಮೊತ್ತ : ರೂ. 78.81 ಲಕ್ಷಗಳು. 6) ಇಎಂಡಿ ಮೊತ್ತ : ರೂ. 1,58,000/–.
ಸೂಚನೆಗಳು ಹಾಗೂ ಹೆಚ್ಚಿನ ವಿವರಗಳಿಗಾಗಿ ಈ ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಫೋನ್ : 8660573513.
ಸಹಿ/– ಕಾರ್ಯಪಾಲಕ ಇಂಜಿನೀಯರರು, ಕನೀನಿನಿ, ನಂ.4, ಬಿಆರ್‌ಎಲ್‌ಬಿಸಿ ವಿಭಾಗ, ಭದ್ರಾವತಿ.
ವಾ.ಸಾ.ಸಂ.ಇ/ಶಿ/ನಂ.167–01/ಝೇಂಕಾರ್/2025–26

‘ಈ ವರ್ಷ ನಾಲ್ಕೈದು ಸಿನಿಮಾ’

• ಅಭಿಲಾಷ್ ಪಿ.ಎಸ್.

ಮಲಯಾಳದ ‘ಟರ್ಬೊ’ ಬಳಿಕ ಖಳನಟನಾಗಿ ತೆರೆ ಮೇಲೆ ಬರುತ್ತಿದ್ದಾರೆ ರಾಜ್ ಬಿ.ಶೆಟ್ಟಿ. ಅವರು ನಟಿಸಿರುವ ‘ಲ್ಯಾಂಡ್‌ಲಾರ್ಡ್’ ಇಂದು(ಜ.23) ತೆರೆಕಂಡಿದೆ. 2026ರಲ್ಲಿ ರಾಜ್ ನಟನೆಯ ನಾಲ್ಕೈದು ಸಿನಿಮಾಗಳು ತೆರೆಕಾಣಲಿದ್ದು ಆ ಕುರಿತು ಅವರಿಲ್ಲಿ ಮಾತನಾಡಿದ್ದಾರೆ.

• **‘ಟರ್ಬೊ’ ಬಳಿಕ ಖಳನಟನ ಪಾತ್ರ ಮಾಡುವಂತೆ ಕೇಳಿದಾಗ ನಿಮ್ಮ ಪ್ರತಿಕ್ರಿಯೆ ಹೇಗಿತ್ತು?**

ಒಂದು ಸಿನಿಮಾ ಬಳಿಕ ಅದೇ ರೀತಿಯ ಪಾತ್ರಗಳನ್ನು ಮಾಡಬೇಕು ಎನ್ನುವಂಥ ಯೋಚನೆ ಹೊಂದಿರುವವನು ನಾನಲ್ಲ. ನಮ್ಮಲ್ಲಿರುವ ಕ್ಷಮತೆ, ಸಾಮರ್ಥ್ಯಕ್ಕೆ ಸವಾಲು ಹಾಕುವ ಪಾತ್ರಗಳ ಹುಡುಕಾಟದಲ್ಲಿ ಸದಾ ಇರುತ್ತೇನೆ. ಖಳನಟನ ಪಾತ್ರ ಹಿಟ್ ಆದರೆ ಖಂಡಿತವಾಗಿಯೂ ಸಾಲು ಸಾಲು ಅಂತಹ ಪಾತ್ರಕ್ಕೇ ಕೇಳುತ್ತಾರೆ. ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ ಎಂದು ಈಗಾಗಲೇ ನಿರ್ಧರಿಸಿಯಾಗಿದೆ. ಆದರೆ ‘ಲ್ಯಾಂಡ್‌ಲಾರ್ಡ್’ನಲ್ಲಿರುವ ಪಾತ್ರ ದೂರ ಉಳಿಯುವಂಥದ್ದಾಗಿರಲಿಲ್ಲ. ಇದು ಒಂದೇ ಆಯಾಮದ ನೆಗೆಟಿವ್ ಪಾತ್ರವಾಗಿಲ್ಲ. ಆತನಿಗೊಂದು ಕುಟುಂಬವಿದೆ, ಅವನದ್ದೇ ಆದ ಇಷ್ಟ–ಕಷ್ಟಗಳಿವೆ, ಸಿದ್ಧಾಂತವಿದೆ. ಎಂತಹುದೇ ಕೆಟ್ಟವನಿಗೂ ಒಂದು ಬದುಕಿದೆ ಅಲ್ಲವೇ? ಅವನೂ ಓರ್ವ ಮನುಷ್ಯನಲ್ಲವೇ? ಹೀಗಾಗಿ ಈ ಪಾತ್ರವನ್ನು ಒಪ್ಪಿಕೊಂಡೆ.

ಸಮಾಜದಲ್ಲಿ ಓರ್ವ ಮನುಷ್ಯ ಹಲವು ಕಟ್ಟುಪಾಡುಗಳ ನಡುವೆಯೇ ಬದುಕುತ್ತಿರುತ್ತಾನೆ. ಒಳ್ಳೆಯವನಾಗಿಯೇ ಕಾಣಿಸಿಕೊಳ್ಳಬೇಕು, ಬಟ್ಟೆ ಹರಿದು ಕಿರುಚಲು ಸಾಧ್ಯವಿಲ್ಲ, ಸಿಟ್ಟಿನಲ್ಲಿ ಬೈಯಲು ಸಾಧ್ಯವಿಲ್ಲ. ಹೀಗೆ ಸುಪ್ತಭಾವಗಳನ್ನು ಹೊರಹಾಕಲು ಅವಕಾಶವೇ ಇಲ್ಲದ ಜೀವನ ನಮ್ಮದು. ನೆಗೆಟಿವ್ ಪಾತ್ರಗಳನ್ನು ಮಾಡುವಾಗ ಈ ವಿಷಯಗಳಲ್ಲಿ ಒಂದು ದೊಡ್ಡ ಸ್ವಾತಂತ್ರ್ಯವಿರುತ್ತದೆ. ಆ ಸ್ವಾತಂತ್ರ್ಯವನ್ನು ನಿರ್ದೇಶಕರಾದ ಜಡೇಶ್ ಚೆನ್ನಾಗಿ ಬರೆದಿದ್ದಾರೆ. ಹೀಗಾಗಿ ನೆಗೆಟಿವ್ ಪಾತ್ರಗಳನ್ನು ಮಾಡಲು ತುಂಬಾ ಜನ ಇಷ್ಟಪಡುತ್ತಾರೆ.

• **ಸಿನಿಮಾದೊಳಗೆ ನಿಮ್ಮ ಪಾತ್ರ ಹೇಗಿದೆ?**

ಮಾತಿನ ಜೊತೆಗೆ ಅಬ್ಬರ, ಒಂದು ಗ್ರಾಫ್ ಹಾಗೂ ಅದ್ದೂರಿತನ ನಾನು ನಿಭಾಯಿಸಿದ ಪಾತ್ರಕ್ಕಿದೆ. ಇದನ್ನು ತೆರೆಯ ಮೇಲೆ ನೋಡಿಯೇ ಸಂಭ್ರಮಿಸಬೇಕು. ನನಗೆ ಭಾಷೆ ಬಹಳ ಇಷ್ಟ. ನಾನು ಕರ್ನಾಟಕದಲ್ಲಿರುವ ಬೇರೆ ಬೇರೆ ಭಾಗದ ಕನ್ನಡ ಭಾಷೆ ತೆರೆ ಮೇಲೆ ಬರಬೇಕು ಎನ್ನುವ ವಿಚಾರದ ಪ್ರತಿಪಾದಕ. ‘ಲ್ಯಾಂಡ್‌ಲಾರ್ಡ್’ನಲ್ಲಿ ಕೋಲಾರ ಭಾಗದ ಕನ್ನಡವಿದೆ. ಇದಕ್ಕೆ ಪೂರ್ವತಯಾರಿ ಬೇಕಾಯಿತು. ಸಂಭಾಷಣೆ ಕಲಿತು ನಟಿಸಿದ್ದೆ.

• **ಇತರರ ಸಿನಿಮಾಗಳಲ್ಲಿ ನಟಿಸುವಾಗ ನೇರವಾಗಿ ಸಲಹೆ ನೀಡಿದ್ದೀರಾ?**

ಚಿತ್ರೀಕರಣದ ಸಂದರ್ಭದಲ್ಲಿ ಅಭಿಪ್ರಾಯಗಳನ್ನು ಹೇಳುತ್ತೇನೆ. ಜಾಸ್ತಿ ತಿಳಿದಿದೆ ಎಂಬ ಕಾರಣಕ್ಕೆ ನೇರವಾಗಿ ಹೇಳುವುದಲ್ಲ. ಈ ಮಾಧ್ಯಮದಲ್ಲಿ ಎಲ್ಲರೂ ಅಭಿಪ್ರಾಯಕ್ಕೆ ತೆರೆದುಕೊಂಡಿರಬೇಕು. ಒಂದು ಸನ್ನಿವೇಶದಲ್ಲಿ ಈ ಪಾತ್ರ ಇಷ್ಟು ಮಾತನಾಡಬೇಕೇ ಎನ್ನುವ ಸಂದೇಹ ಮೂಡಿದರೆ ಖಂಡಿತಾ ಪ್ರಶ್ನಿಸುತ್ತೇನೆ. ನಾನು ಒಂದು ಪಾತ್ರವನ್ನು ಚೆನ್ನಾಗಿ ಮಾಡಬಲ್ಲೆ ಎನ್ನುವ ಕಾರಣಕ್ಕೆ ನಿರ್ದೇಶಕರು ಆ ಪಾತ್ರ ನೀಡಿರುತ್ತಾರೆ. ಹೀಗಾಗಿ ನಾನು ಆ ಪಾತ್ರಕ್ಕೆ ಬದ್ಧನಾಗಿ ದುಡಿಯಬೇಕು. ಅವರ ಸಮಜಾಯಿಷಿ ಒಪ್ಪಿಗೆಯಾದರೆ ನಾನೂ ಒಪ್ಪಿಕೊಳ್ಳುತ್ತೇನೆ. ಜಡೇಶ್ ಅವರ ರೀತಿಯ ನಿರ್ದೇಶಕರು ನಮ್ಮ ಬಳಿ ಯಾವುದೇ ಸಂಕೋಚವಿಲ್ಲದೆ ಸಂದೇಹಗಳನ್ನು ಮುಂದಿಡುತ್ತಾರೆ. ಆಗ ನಾನು ಸಲಹೆಗಳನ್ನು ನೀಡುತ್ತೇನೆ. ನಟ–ನಿರ್ದೇಶಕನ ನಡುವೆ ಇರುವ ಈ ಕೊಡುಕೊಳ್ಳುವಿಕೆಯು ಸಿನಿಮಾಗೆ ಒಳ್ಳೆಯದನ್ನೇ ಮಾಡುತ್ತದೆ.

• **ಬರಹಗಾರರಾಗಿ ಜಡೇಶ್ ಅವರನ್ನು ಕಂಡ ಬಗೆ...**

ಅವರಿಗೆ ಹೊಸ ಕಥೆಗಳನ್ನು ಜನರ ಮುಂದಿಡುವ ಹಂಬಲ ಇದೆ. ಜೊತೆಗೆ ಸಲಹೆ–ಸೂಚನೆಗಳಿಗೆ ಬಹಳ ತೆರೆದುಕೊಂಡಿರುವ ಬರಹಗಾರ. ಪ್ರಶ್ನಿಸುವ ಅವಕಾಶ ನೀಡುವ ನಿರ್ದೇಶಕ. ಒಂದು ಸಿನಿಮಾ ಚೆನ್ನಾಗಿ ತೆರೆ ಮೇಲೆ ಬರಬೇಕು ಎನ್ನುವುದಷ್ಟೇ ಅವರ ತುಡಿತ. ಈ ಸಿನಿಮಾ ಕೇವಲ ಒಬ್ಬ ಹೀರೊ ಹಾಗೂ ಖಳನಟನ ಸುತ್ತ ಸುತ್ತುವುದಿಲ್ಲ. ಪ್ರತಿ ಪಾತ್ರಕ್ಕೂ ಗಟ್ಟಿಯಾದ ಕಥೆ ಬರೆದಿದ್ದಾರೆ. ಸುಮಾರು 20–22 ಒಳ್ಳೆಯ ಕಲಾವಿದರನ್ನು ಕಲೆ ಹಾಕಿ ಪಾತ್ರ ಮಾಡಿಸಿದ್ದಾರೆ. ಈ ಸಿನಿಮಾ ಗೆದ್ದರೆ ಅವರಿಗೊಂದು ಶಕ್ತಿ ಸಿಗಲಿದೆ.

• **ಈ ವರ್ಷ ನಿಮ್ಮ ಹೆಚ್ಚಿನ ಸಿನಿಮಾಗಳಿವೆ...**

ಹೌದು. 2026 ಒಳ್ಳೆಯ ವರ್ಷ ಎಂದುಕೊಂಡಿದ್ದೇನೆ. ಒಳ್ಳೊಳ್ಳೆಯ ಸಿನಿಮಾಗಳು ಬರಲಿದ್ದು, ಇವುಗಳನ್ನು ಗೆಲ್ಲಿಸಿದರೆ ಸಿನಿಮಾ ಕೃಷಿ ಮುಂದುವರಿಯಲಿದೆ. ಸಿನಿಮಾಗಳ ಸೋಲು ಎನ್ನುವುದು ಜನರು ಸಿನಿಮಾ ನೋಡುವ ರೀತಿ ಬದಲಾಗಿದೆ ಎನ್ನುವುದನ್ನು ಸ್ಪಷ್ಟವಾಗಿ ಹೇಳುತ್ತದೆ. ನಮ್ಮಲ್ಲಿ ಭಿನ್ನ ಆಲೋಚನೆಯ ಹೊಸ ನಿರ್ದೇಶಕರ ಸಿನಿಮಾಗಳು ಬರುತ್ತಿವೆ. ಮುಂದಿನ ನಾಲ್ಕೈದು ವರ್ಷಗಳಲ್ಲಿ ಮಲಯಾಳ ಸಿನಿಮಾಗಳಿಗಿರುವಂತೆ ಪ್ರೇಕ್ಷಕರ ಒಂದು ಅಲೆ ನಿರಂತರವಾಗಿ ನಮ್ಮ ಚಿತ್ರಮಂದಿರದತ್ತ ಹರಿಯುವಂತೆ ಇವು ಮಾಡಲಿವೆ. ಈ ವರ್ಷ ನನ್ನ ನಾಲ್ಕೈದು ಸಿನಿಮಾಗಳು ತೆರೆಗೆ ಬರಲಿವೆ. ಮೊದಲಿಗೆ ಜ.23ಕ್ಕೆ ‘ಲ್ಯಾಂಡ್‌ಲಾರ್ಡ್’, ಫೆಬ್ರುವರಿ 6ಕ್ಕೆ ‘ರಕ್ಕಸಪುರದೋಳ್’, ನಂತರದಲ್ಲಿ ಗುರುದತ್ ಗಾಣಿಗ ನಿರ್ದೇಶನದ ‘ಕರಾವಳಿ’ ತೆರೆಗೆ ಬರಲಿದೆ. ನಾನು ನನ್ನ ನಿರ್ದೇಶನದ ಕೆಲಸಕ್ಕೆ ಕೊಂಚ ವೇಗ ನೀಡಿದರೆ ಅದೂ ಇದೇ ವರ್ಷ ಬರಬಹುದು.

• **ನಿಮ್ಮ ಹೊಸ ಪ್ರಾಜೆಕ್ಟ್‌ಗಳು ಯಾವುವು?**

ನಾನೇ ಮುಖ್ಯಭೂಮಿಕೆಯಲ್ಲಿರುವ ಒಂದು ಸಿನಿಮಾ ಪೂರ್ಣಗೊಂಡಿದ್ದು, ಇದು ಇದೇ ವರ್ಷ ತೆರೆಕಾಣಲಿದೆ. ಶೀಘ್ರದಲ್ಲೇ ಈ ಸಿನಿಮಾ ಮಾಹಿತಿಯನ್ನು ನೀಡುತ್ತೇನೆ. ನನ್ನ ನಿರ್ದೇಶನದ ಎರಡು ಸಿನಿಮಾಗಳ ಬರವಣಿಗೆ ಮುಂದುವರಿದಿದೆ. ಕಳೆದ ಎರಡು ತಿಂಗಳಲ್ಲಿ ಹೆಚ್ಚಿನ ಸಮಯ ಪ್ರಚಾರದಲ್ಲೇ ತೊಡಗಿಸಿಕೊಂಡಿದ್ದ ಕಾರಣ ಬರವಣಿಗೆ ವೇಗ ಇಳಿದಿದೆ. ಫೆಬ್ರುವರಿ ಅಂತ್ಯದೊಳಗೆ ಇವುಗಳನ್ನು ಮುಗಿಸುವ ಗುರಿ ಹಾಕಿಕೊಂಡಿದ್ದೇನೆ. ಇದರಲ್ಲಿ ಒಂದು ಥ್ರಿಲ್ಲರ್ ಸಿನಿಮಾವಾಗಿರಲಿದೆ. ಬೇರೆ ಭಾಷೆಗಳಿಂದ ವೆಬ್‌ಸರಣಿ ಆಫರ್‌ಗಳು ಬಂದಿದ್ದವು. ಆದರೆ ಸದ್ಯಕ್ಕೆ ನನ್ನದೇ ಸಿನಿಮಾಗಳ ಮೇಲೆ ಹೆಚ್ಚಿನ ಗಮನಹರಿಸಿದ್ದೇನೆ.

ರಾಜ್ ಬಿ.ಶೆಟ್ಟಿ
ಚಿತ್ರ: ಲ್ಯಾಂಡ್‌ಲಾರ್ಡ್

‘ಲ್ಯಾಂಡ್‌ಲಾರ್ಡ್’, ‘ಕಲ್ಟ್’ ಇಂದು ತೆರೆಗೆ

ಇಂದು (ಜ.23) ತೆರೆಗಳಲ್ಲಿ ದುನಿಯಾ ವಿಜಯ್ ನಟನೆಯ ‘ಲ್ಯಾಂಡ್‌ಲಾರ್ಡ್’ ಹಾಗೂ ಝೈದ್ ಖಾನ್ ನಟನೆಯ ‘ಕಲ್ಟ್’ ಸಿನಿಮಾ ಬಿಡುಗಡೆಯಾಗುತ್ತಿದೆ. ವಿಶೇಷವೇನೆಂದರೆ ಈ ಎರಡೂ ಸಿನಿಮಾಗಳಲ್ಲಿ ನಾಯಕಿಯಾಗಿ ನಟಿ ರಚಿತಾ ರಾಮ್ ನಟಿಸಿದ್ದಾರೆ.

ಲ್ಯಾಂಡ್‌ಲಾರ್ಡ್

‘ಜಂಟಲ್‌ಮ್ಯಾನ್’, ‘ಗುರುಶಿಷ್ಯರು’ ಚಿತ್ರಗಳ ನಿರ್ದೇಶಕ, ‘ಕಾಟೇರ’ ಸಿನಿಮಾದ ಕಥೆಗಾರ ಜಡೇಶ ಕೆ. ಹಂಪಿ ನಿರ್ದೇಶನದ ಸಿನಿಮಾವಿದು. ಸಿನಿಮಾದಲ್ಲಿ ಹಳ್ಳಿಯ ದಂಪತಿ ರಾಚಯ್ಯ–ನಿಂಗವ್ವಳಾಗಿ ದುನಿಯಾ ವಿಜಯ್ ಹಾಗೂ ರಚಿತಾ ರಾಮ್ ಬಣ್ಣಹಚ್ಚಿದ್ದಾರೆ. ಕೂಲಿಗೆ ತಕ್ಕ ಕಾಸು, ಅಸಮಾನತೆ, ದಬ್ಬಾಳಿಕೆ, ಕ್ರಾಂತಿ–ಹೋರಾಟದ ಕಥೆಯುಳ್ಳ ಈ ಸಿನಿಮಾದಲ್ಲಿ ಖಳನಾಯಕನಾಗಿ ನಟ ರಾಜ್ ಬಿ.ಶೆಟ್ಟಿ ನಟಿಸಿದ್ದಾರೆ. ಹಳ್ಳಿ ಹಿನ್ನೆಲೆಯ ಈ ಕಥೆ 80–90ರ ದಶಕದಲ್ಲಿರುವಂತೆ ಚಿತ್ರೀಕರಣಗೊಂಡಿದೆ. ಅಸ್ತಿತ್ವದ ಹೋರಾಟದ ಕಥೆ ಸಿನಿಮಾದಲ್ಲಿದ್ದು, ಅದನ್ನು ಕೋಲಾರ ಭಾಗದ ಕನ್ನಡದಲ್ಲೇ ಸೆರೆಹಿಡಿಯಲಾಗಿದೆ. ಉಮಾಶ್ರೀ, ರಾಕೇಶ್ ಅಡಿಗ, ರಿತನ್ಯಾ, ಶಿಶಿರ್ ಬೈಕಾಡಿ, ಅಚ್ಯುತ್‌ಕುಮಾರ್, ಮಿತ್ರ, ಅಭಿಷೇಕ್ ದಾಸ್ ಹೀಗೆ ದೊಡ್ಡ ತಾರಾಬಳಗವೇ ಸಿನಿಮಾದಲ್ಲಿದೆ. ಸಾರಥಿ ಫಿಲಂಸ್ ಲಾಂಛನದಲ್ಲಿ ಕೆ.ವಿ.ಸತ್ಯಪ್ರಕಾಶ್ ಹಾಗೂ ಹೇಮಂತ್ ಗೌಡ ಕೆ.ಎಸ್ ನಿರ್ಮಿಸಿರುವ ಈ ಸಿನಿಮಾಗೆ ಸ್ವಾಮಿ ಜೆ. ಗೌಡ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನವಿದೆ.

ಕಲ್ಟ್

‘ಬನಾರಸ್’ ಸಿನಿಮಾ ಮೂಲಕ ಚಿತ್ರರಂಗ ಪ್ರವೇಶಿಸಿದ್ದ ನಟ ಝೈದ್ ಖಾನ್ ನಟನೆಯ ಸಿನಿಮಾವಿದು. ‘ಉಪಾಧ್ಯಕ್ಷ’ ನಿರ್ದೇಶಕ ಅನಿಲ್ ಕುಮಾರ್ ಆ್ಯಕ್ಷನ್ ಕಟ್ ಹೇಳಿದ್ದಾರೆ. ಚಿತ್ರದಲ್ಲಿ ನಾಯಕಿಯರಾಗಿ ರಚಿತಾ ರಾಮ್ ಮತ್ತು ಮಲೈಕಾ ಟಿ.ವಸುಪಾಲ್ ಅಭಿನಯಿಸಿದ್ದಾರೆ. ಪ್ರೀತಿ, ಪ್ರತೀಕಾರ, ಆ್ಯಕ್ಷನ್, ಭಾವನಾತ್ಮಕ ಅಂಶಗಳುಳ್ಳ ಕಥೆ ಚಿತ್ರದಲ್ಲಿದೆ. ಝೈದ್ ಖಾನ್ ಮೂರು ಶೇಡ್‌ಗಳಲ್ಲಿ ಹಾಗೂ ರಚಿತ ರಾಮ್ ಪಾತ್ರ ಎರಡು ಶೇಡ್‌ಗಳಲ್ಲಿ ಇಲ್ಲಿದೆ. ರಚಿತಾ ರಾಮ್ ತಂದೆಯ ಪಾತ್ರದಲ್ಲಿ ರಂಗಾಯಣ ರಘು ಅವರು ನಟಿಸಿದ್ದಾರೆ. ಅಲೋಕ್, ಕಿಶನ್ ಬೆಳಗಲಿ ತಾರಾಬಳಗದಲ್ಲಿದ್ದಾರೆ. ಲೋಕಿ ಸಿನಿಮಾಸ್ ಲಾಂಛನದಲ್ಲಿ ಈ ಸಿನಿಮಾ ನಿರ್ಮಾಣಗೊಂಡಿದೆ. ಕೆ.ವಿ.ಎನ್ ಪ್ರೊಡಕ್ಷನ್ಸ್ ಈ ಸಿನಿಮಾವನ್ನು ಅರ್ಪಿಸುತ್ತಿದೆ. ಜೆ.ಎಸ್ ವಾಲಿ ಛಾಯಾಚಿತ್ರಗ್ರಹಣ, ಕೆ.ಎಂ.ಪ್ರಕಾಶ್ ಸಂಕಲನ ಹಾಗೂ ರವಿವರ್ಮ ಸಾಹಸ ನಿರ್ದೇಶನ ಚಿತ್ರಕ್ಕಿದೆ.

ಝೈದ್, ಮಲೈಕಾ

ಸೀಟ್ ಎಡ್ಜ್ ಚಿತ್ರ ಜ.30ಕ್ಕೆ ಬಿಡುಗಡೆ

ಸಿದ್ದು ಮೂಲಿಮನಿ ನಾಯಕರಾಗಿ ನಟಿಸಿರುವ ‘ಸೀಟ್ ಎಡ್ಜ್’ ಚಿತ್ರ ಜ.30ರಂದು ತೆರೆಕಾಣುತ್ತಿದ್ದು, ಸಿನಿಮಾದ ಟ್ರೇಲರ್ ಇತ್ತೀಚೆಗೆ ಬಿಡುಗಡೆಯಾಗಿದೆ.

ಡಾರ್ಕ್ ಕಾಮಿಡಿಯ ಜೊತೆಗೆ ಹಾರರ್-ಥ್ರಿಲ್ಲರ್ ಜಾನರ್‌ನ ಈ ಸಿನಿಮಾವನ್ನು ಚೇತನ್ ಶೆಟ್ಟಿ ಕಥೆ, ಚಿತ್ರಕಥೆ ಬರೆದು ನಿರ್ದೇಶಿಸಿದ್ದಾರೆ. ಸಿದ್ದು ಅವರಿಗೆ ಜೋಡಿಯಾಗಿ ರವೀಕ್ಷಾ ಶೆಟ್ಟಿ ಬಣ್ಣಹಚ್ಚಿದ್ದಾರೆ. ಎರಡು ಶೇಡ್‌ಗಳಲ್ಲಿ ಅವರ ಪಾತ್ರವಿದೆ.

ಚಿತ್ರದ ಕುರಿತು ಮಾತನಾಡಿದ ಸಿದ್ದು, ‘ಸಿನಿಮಾದ ಯಾವುದೇ ಹಿನ್ನೆಲೆ ಇಲ್ಲದೆ ‘ರಂಗಿತರಂಗ’ದಿಂದ ಸಣ್ಣಪುಟ್ಟ ಪಾತ್ರಗಳನ್ನು ಮಾಡಿಕೊಂಡು ಬಂದವನು ನಾನು. ನಿರ್ದೇಶಕರು ಭಿನ್ನವಾದ ಪಾತ್ರಗಳ ಅವಕಾಶ ನೀಡುತ್ತಿದ್ದಾರೆ. ಇದಕ್ಕೆ ‘ಲವ್ ಯು ಮುದ್ದು’ ಒಂದು ಉದಾಹರಣೆ. ‘ಸೀಟ್ ಎಡ್ಜ್’ ಸಿನಿಮಾ ಕಾಂಟೆಂಟ್ ಕ್ರಿಯೇಟರ್ಸ್‌ಗಳ ಮೇಲಿದೆ. ಹೀಗಾಗಿ ಜನರಿಗೆ ಹತ್ತಿರವಾಗುವ ಬಹಳ ವಿಷಯಗಳು ಇಲ್ಲಿವೆ. ಓರ್ವ ವ್ಲಾಗರ್‌ನ ಕಥೆ ಇದಾಗಿದೆ. ವ್ಲಾಗರ್ಸ್ ತಮಗೆ ಕಂಡಿದ್ದೆಲ್ಲವನ್ನೂ ಸೆರೆ ಹಿಡಿಯುವುದು ಪ್ರೇಕ್ಷಕರಿಗಾಗಿಯೇ. ಜನರು ಸಿನಿಮಾಗಳನ್ನು ನೋಡುವುದಕ್ಕಿಂತ ಹೆಚ್ಚಾಗಿ ಇಂತಹ ಚಾನೆಲ್‌ಗಳನ್ನು ನೋಡುತ್ತಿರುತ್ತಾರೆ. ಯಾರೂ ಹೋಗದ ಒಂದು ನಿಗೂಢ ಜಾಗವನ್ನು ಪ್ರೇಕ್ಷಕರಿಗೆ ವ್ಲಾಗ್ ಮೂಲಕ ಪರಿಚಯಿಸಬೇಕು ಎಂಬ ಹಟ ನಾಯಕನಿಗೆ. ಇಂಥ ಒಂದು ಘೋಸ್ಟ್ ಟೌನ್‌ಗೆ ಹೋಗಿ ಘೋಸ್ಟ್ ಹಂಟಿಂಗ್ ವಿಡಿಯೊ ಮಾಡುತ್ತಾನೆ. ಆ ಸಂದರ್ಭದಲ್ಲಿ ಎದುರಾಗುವ ಘಟನೆಗಳೇ ಚಿತ್ರದ ಕಥೆ’ ಎಂದಿದ್ದಾರೆ.

ಚಿತ್ರದಲ್ಲಿ ಹಾಸ್ಯ ಮತ್ತು ಹಾರರ್ ಅಂಶಗಳ ಮಿಶ್ರಣವಿದೆ ಎನ್ನುವುದಕ್ಕೆ ಸಾಕ್ಷಿಯಂತಿದೆ ಟ್ರೇಲರ್. ರಾಘು ರಾಮನಕೊಪ್ಪ, ಗಿರೀಶ್ ಶಿವಣ್ಣ ಜೋಡಿ ಸಿನಿಮಾದಲ್ಲಿದೆ. ನಟಿ ರವೀಕ್ಷಾ ಶೆಟ್ಟಿ ಅವರಿಗೆ ಇದು ಮೊದಲ ಸಿನಿಮಾ. ಸಿನಿಮಾದಲ್ಲಿ ಏರೋಬಿಕ್ಸ್ ಟೀಚರ್ ಆಗಿ ಇವರು ಬಣ್ಣಹಚ್ಚಿದ್ದಾರೆ. ಮಿಮಿಕ್ರಿ ಗೋಪಿ, ಲಕ್ಷ್ಮಿ ಸಿದ್ದಯ್ಯ, ಕಿರಣ್, ಪುನೀತ್ ಬಾಬು, ತೇಜು ಪೊನ್ನಪ್ಪ, ಮನಮೋಹನ್ ರೈ ಮೊದಲಾದವರು ಚಿತ್ರದ ಇತರ ಪ್ರಮುಖ ಪಾತ್ರಗಳಲ್ಲಿ ಅಭಿನಯಿಸಿದ್ದಾರೆ. ಎನ್.ಆರ್. ಸಿನಿಮಾ ಪ್ರೊಡಕ್ಷನ್ಸ್ ಬ್ಯಾನರಿನಲ್ಲಿ ಗಿರಿಧರ ಟಿ.ವಸಂತಪುರ ಈ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ದೀಪಕ್ ಕುಮಾರ್ ಜೆ.ಕೆ.ಛಾಯಾಚಿತ್ರಗ್ರಹಣ, ಆಕಾಶ್ ಪರ್ವ ಸಂಗೀತ ಚಿತ್ರಕ್ಕಿದೆ.

ರವೀಕ್ಷಾ ಶೆಟ್ಟಿ, ಸಿದ್ದು ಮೂಲಿಮನಿ



ನಂದಿತಾ

‘ಬೆನ್ನಿ’ಯಲ್ಲಿ ಹೀಗಿದ್ದಾರೆ ನಂದಿತಾ

ವಿನಯ್ ರಾಜ್‌ಕುಮಾರ್ ನಟಿಸಿದ್ದ ‘ಪೆಪೆ’ ಸಿನಿಮಾ ನಿರ್ದೇಶಕ ಶ್ರೀಲೇಶ್ ಎಸ್.ನಾಯರ್ ನಿರ್ದೇಶನದ ಹೊಸ ಸಿನಿಮಾ ‘ಬೆನ್ನಿ’ ಪೋಸ್ಟರ್ ಬಿಡುಗಡೆಯಾಗಿದೆ.

‘ಬೆನ್ನಿ’ ಸಿನಿಮಾ ಮೂಲಕ ಮಹಿಳಾ ಪ್ರಧಾನ ಕಥೆಯನ್ನು ಹೇಳುವುದಕ್ಕೆ ಶ್ರೀಲೇಶ್ ಸಜ್ಜಾಗಿದ್ದಾರೆ. ಬಹುಭಾಷಾ ನಟಿ, ಕನ್ನಡದ ‘ನಂದ ಲವ್ಸ್ ನಂದಿತಾ’ ಸಿನಿಮಾದ ನಾಯಕಿಯಾಗಿದ್ದ ನಂದಿತಾ ಶ್ವೇತಾ ಈ ಚಿತ್ರದ ನಾಯಕಿಯಾಗಿದ್ದಾರೆ. ನಂದಿತಾ ಈ ಪೋಸ್ಟರ್‌ನಲ್ಲಿ ರಗಡ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ.

‘ಬೆನ್ನಿ’ ಚಿತ್ರದಲ್ಲಿ ದಕ್ಷಿಣದ ಭಾರತದ ಪ್ರಮುಖ ನಟರು ಅಭಿನಯಿಸಲಿದ್ದಾರೆ ಎಂದಿದೆ ಚಿತ್ರತಂಡ. ಕನ್ನಡ ಮಾತ್ರವಲ್ಲ ತೆಲುಗು, ತಮಿಳು ಹಾಗೂ ಮಲಯಾಳದಲ್ಲಿ ಈ ಚಿತ್ರ ಮೂಡಿಬರಲಿದೆ. ಸಂಡೇ ಸಿನಿಮಾಸ್ ಬ್ಯಾನರ್‌ನಡಿ ರಾಮೇನಹಳ್ಳಿ ಜಗನ್ನಾಥ್ ಈ ಚಿತ್ರವನ್ನು ನಿರ್ಮಿಸಿ ಪ್ರಸ್ತುತಪಡಿಸುತ್ತಿದ್ದಾರೆ. ಸಚಿನ್ ಬಸ್ರೂರು ಈ ಚಿತ್ರಕ್ಕೆ ಸಂಗೀತ ನಿರ್ದೇಶನ ಮಾಡುತ್ತಿದ್ದು, ಗುರುಪ್ರಸಾದ್ ನಾರ್ನಾಡ್ ಛಾಯಾಚಿತ್ರಗ್ರಹಣ, ಮನು ಶೇಡ್ಗಾರ್ ಹಾಗೂ ರಂಜನ್ ನರಸಿಂಹಮೂರ್ತಿ ಸಂಕಲನ ಚಿತ್ರಕ್ಕಿದೆ.

ಏ.9ಕ್ಕೆ ‘ಪಳ್ಳಿಚಟ್ಟಂಬಿ’ ತೆರೆಗೆ

ಮಲಯಾಳ ನಟ ಟೊವಿನೋ ಥಾಮಸ್ ನಟನೆಯ ಹೊಸ ಸಿನಿಮಾದ ಬಿಡುಗಡೆ ದಿನಾಂಕ ಘೋಷಣೆಯಾಗಿದೆ. ಚಿತ್ರವು ಏ.9ರಂದು ತೆರೆಗೆ ಬರಲಿದೆ.

ಡಿಜೋ ಜೋಸ್ ಆಂಟೋನಿ ಸಾರಥ್ಯದ ‘ಪಳ್ಳಿಚಟ್ಟಂಬಿ’ ಸಿನಿಮಾದ ಮೋಷನ್ ಪೋಸ್ಟರ್ ಇತ್ತೀಚೆಗೆ ಬಿಡುಗಡೆಯಾಗಿದೆ. ವರ್ಲ್ಡ್ ವೈಡ್ ಫಿಲ್ಮ್ಸ್ ಮತ್ತು ಸಿ ಕ್ಯೂಬ್ ಬ್ರದರ್ಸ್ ಎಂಟರ್‌ಟೇನ್ಮೆಂಟ್ ಬ್ಯಾನರ್‌ನಡಿ ಈ ಸಿನಿಮಾವನ್ನು ನೌಫಲ್ ಮತ್ತು ಬ್ರಿಜೇಶ್ ನಿರ್ಮಿಸಿದ್ದಾರೆ. ಕನ್ನಡ, ಮಲಯಾಳ ಸೇರಿದಂತೆ ಐದು ಭಾಷೆಗಳಲ್ಲಿ ಚಿತ್ರ ಬಿಡುಗಡೆಯಾಗಲಿದೆ. ಚಿತ್ರದಲ್ಲಿ ಕಯಾದು ಲೋಹರ್ ನಾಯಕಿಯಾಗಿ ನಟಿಸಿದ್ದಾರೆ. ವಿಜಯ ರಾಘವನ್, ಸುಧೀರ್ ಕರಮನ, ಬಾಬುರಾಜ್, ವಿನೋದ್ ಕೆದಮಂಗಲಂ, ಪ್ರಶಾಂತ್ ಅಲೆಕ್ಸಾಂಡರ್ ಸೇರಿದಂತೆ ಹಲವರು ತಾರಾಗಣದಲ್ಲಿದ್ದಾರೆ. 1950-60ರ ದಶಕದ ಸುತ್ತ ಕಥೆಯನ್ನು ಹೆಣೆಯಲಾಗಿದೆ.

ಚಿತ್ರಕ್ಕೆ ಟಿಜೊ ಟಾಮಿ ಛಾಯಾಚಿತ್ರಗ್ರಹಣ, ಜೇಕ್ಸ್ ಬಿಜಾಯ್ ಸಂಗೀತ ಸಂಯೋಜಿಸಿದ್ದಾರೆ. ಶ್ರೀಜಿತ್ ಸಾರಂಗ್ ಸಂಕಲನ ಚಿತ್ರಕ್ಕಿದ್ದು, ಎಸ್. ಸುರೇಶ್ ಬಾಬು ಚಿತ್ರಕಥೆ ಬರೆದಿದ್ದಾರೆ.

ಟೊವಿನೋ ಥಾಮಸ್

ಚಿಟಿಕೆ ಸುದ್ದಿ

ಪೋಕ್ಸೊ ಪ್ರಕರಣ 20 ವರ್ಷ ಕಠಿಣ ಶಿಕ್ಷೆ

ಹಾಸನ: ಬಾಲಕಿಯ ಮೇಲೆ ಅತ್ಯಾಚಾರ ಎಸಗಿ, ಆಕೆಗೆ ಮಗು ಜನಿಸಲು ಕಾರಣವಾಗಿದ್ದ ಅಪರಾಧಿಗೆ ಇಲ್ಲಿನ ಪೋಕ್ಸೊ ವಿಶೇಷ ನ್ಯಾಯಾಲಯವು 20 ವರ್ಷಗಳ ಕಠಿಣ ಕಾರಾಗೃಹ ಶಿಕ್ಷೆ ಹಾಗೂ ₹25 ಸಾವಿರ ದಂಡ ವಿಧಿಸಿದೆ.

ಚನ್ನರಾಯಪಟ್ಟಣ ತಾಲ್ಲೂಕಿನ ಗ್ರಾಮವೊಂದರಲ್ಲಿ ಆರೋಪಿಯು, ತನ್ನ ಪತ್ನಿಯ ಚಿಕ್ಕಪ್ಪನ ಮಗಳಾದ ಬಾಲಕಿಗೆ ಮನೆಯಲ್ಲಿ ಕೆಲಸವಿದೆ ಎಂದು ಹೇಳಿ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಶ್ರವಣಬೆಳಗೊಳ ಪೊಲೀಸರು ದೋಷಾರೋಪಣೆ ಪಟ್ಟಿ ಸಲ್ಲಿಸಿದ್ದರು.

ವಿಚಾರಣೆ ನಡೆಸಿದ ನ್ಯಾಯಾಧೀಶ ದೇವರಾಜು ಅವರು, ಶಿಕ್ಷೆ ವಿಧಿಸುವುದರೊಂದಿಗೆ, ಬಾಲಕಿಯ ಕುಟುಂಬಕ್ಕೆ ಸರ್ಕಾರದಿಂದ ₹7 ಲಕ್ಷ ಪರಿಹಾರ ನೀಡುವಂತೆ ಆದೇಶಿಸಿದರು.

₹39 ಕೋಟಿ ಮೌಲ್ಯದ ಕೊಕೇನ್ ಜಪ್ತಿ

ದೇವನಹಳ್ಳಿ (ಬೆಂ.ಗ್ರಾಮಾಂತರ): ಬ್ರೆಜಿಲ್‌ನಿಂದ ಗುರುವಾರ ರಾತ್ರಿ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಬಂದಿಳಿದ ಪ್ರಯಾಣಿಕನ ಸೂಟ್‌ಕೇಸ್‌ನಿಂದ ಕಸ್ಟಮ್ಸ್ ಅಧಿಕಾರಿಗಳು ₹38.60 ಕೋಟಿ ಮೌಲ್ಯದ 7.72 ಕೆ.ಜಿ ಕೊಕೇನ್ ಜಪ್ತಿ ಮಾಡಿದ್ದಾರೆ.

ಕೊಕೇನ್

ಸೂಟ್‌ಕೇಸ್ ಒಳಗಡೆ ಪದರು, ಪದರುಗಳಾಗಿ ಕೊಕೇನ್ ಅಂಟಿಸಲಾಗಿತ್ತು. ಸೂಟ್‌ಕೇಸ್‌ನಲ್ಲಿದ್ದ ಮಕ್ಕಳ ಕಾಮಿಕ್ ಪುಸ್ತಕಗಳ ಒಳಗೂ ಅಪಾರ ಪ್ರಮಾಣದ ಕೊಕೇನ್ ಮುಚ್ಚಿಡಲಾಗಿತ್ತು.

ತಪಾಸಣೆ ವೇಳೆ ಆರೋಪಿಯು ಕಸ್ಟಮ್ಸ್ ಅಧಿಕಾರಿಗಳ ಕಣ್ತಪ್ಪಿಸಲು ಹಲವು ತಂತ್ರಗಳನ್ನು ಬಳಸಿದ. ಆದರೆ, ಅಧಿಕಾರಿಗಳ ಸೂಕ್ಷ್ಮ ತಪಾಸಣೆ ನಂತರ ಕಳ್ಳ ಸಾಗಣೆ ಪತ್ತೆಯಾಯಿತು.

ಗಾಂಜಾ ಜಪ್ತಿ

ದೇವನಹಳ್ಳಿ: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಬುಧವಾರ ತಡರಾತ್ರಿ ಬ್ಯಾಂಕಾಕ್‌ನಿಂದ ಬಂದ ಪ್ರಯಾಣಿಕನಿಂದ ವೈಮಾನಿಕ ಗುಪ್ತಚರ ಸಿಬ್ಬಂದಿ 8.98 ಕೆ.ಜಿ. ಹೈಡ್ರೊ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಜಪ್ತಿ ಮಾಡಿದ ಗಾಂಜಾ ಮೌಲ್ಯ ಸುಮಾರು ₹3.14 ಕೋಟಿ ಎಂದು ಅಂದಾಜಿಸಲಾಗಿದೆ.

ಬ್ಯಾಂಕಾಕ್‌ನಿಂದ ಗಾಂಜಾ ಕಳ್ಳಸಾಗಣೆ ನಡೆಸುತ್ತಿರುವ ಜಾಲದ ಬಗ್ಗೆ ನಿಗಾವಹಿಸಿದ್ದ ಗುಪ್ತಚರ ಸಿಬ್ಬಂದಿ ತಪಾಸಣೆಯನ್ನು ಬಿಗಿಗೊಳಿಸಿದ್ದ ಪರಿಣಾಮವಾಗಿ ಈ ಕಳ್ಳಸಾಗಣೆ ಪತ್ತೆ ಹಚ್ಚಲಾಗಿದೆ.

'ಅಧಿಕಾರ ಹಸ್ತಾಂತರ ಗೊಂದಲ ಬಗೆಹರಿಸಿ'

ನವದೆಹಲಿ: ಕರ್ನಾಟಕ ಕಾಂಗ್ರೆಸ್ ಸರ್ಕಾರದ ಅಧಿಕಾರ ಹಸ್ತಾಂತರದ ಗೊಂದಲವನ್ನು ಆದಷ್ಟು ಬೇಗ ಬಗೆಹರಿಸಬೇಕು ಎಂದು ಸಚಿವ ಸತೀಶ ಜಾರಕಿಹೊಳಿ ಅವರು ಹೈಕಮಾಂಡ್‌ಗೆ ಮನವಿ ಮಾಡಿದ್ದಾರೆ.

ದೆಹಲಿಗೆ ಬಂದಿರುವ ಅವರು ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ.ವೇಣುಗೋಪಾಲ್ ಅವರನ್ನು ಬುಧವಾರ ರಾತ್ರಿ ಭೇಟಿ ಮಾಡಿ ಸಮಾಲೋಚಿಸಿದರು.

'ಕಳೆದ 3 ತಿಂಗಳಿಂದ ಸೃಷ್ಟಿಯಾಗಿರುವ ಗೊಂದಲದಿಂದ ಆಡಳಿತದ ಮೇಲೆ ಪರಿಣಾಮ ಬೀರಿದೆ. ಎರಡು ಬಣಗಳ ನಾಯಕರು ನಿತ್ಯ ಹೇಳಿಕೆ ನೀಡುತ್ತಾ ಸಮಸ್ಯೆ ಸೃಷ್ಟಿಸುತ್ತಿದ್ದಾರೆ. ಮುಖ್ಯಮಂತ್ರಿ ಹಾಗೂ ಉಪಮುಖ್ಯಮಂತ್ರಿ ಅವರನ್ನು ಕರೆಸಿ ಸಂದೇಶ ನೀಡಿ ಇಂತಹ ಚಟುವಟಿಕೆಗೆ ಕಡಿವಾಣ ಹಾಕಬೇಕು' ಎಂದು ಅವರು ಆಗ್ರಹಿಸಿದರು.

ನಿಧಿ ಒಪ್ಪಿಸಿದ ಕುಟುಂಬಕ್ಕೆ ನಿವೇಶನ

ಲಕ್ಕುಂಡಿ ಗ್ರಾಮ ಪಂಚಾಯಿತಿಯ ವಿಶೇಷ ಗ್ರಾಮಸಭೆಯಲ್ಲಿ ನಿರ್ಣಯ

ಪ್ರಜಾವಾಣಿ ವಾರ್ತೆ

ಗದಗ: ಹೊಸ ಮನೆಯ ನಿರ್ಮಾಣಕ್ಕಾಗಿ ತಳಪಾಯ ಅಗೆಯುವಾಗ ಸಿಕ್ಕ ಚಿನ್ನದ ನಿಧಿಯನ್ನು ಸರ್ಕಾರಕ್ಕೆ ಒಪ್ಪಿಸಿದ ಬಾಲಕ ಪ್ರಜ್ವಲ್ ರಿತ್ತಿ ಪ್ರಾಮಾಣಿಕತೆಗೆ ಮೆಚ್ಚಿ ಲಕ್ಕುಂಡಿ ಗ್ರಾಮ ಪಂಚಾಯಿತಿಯು ಅವರ ಕುಟುಂಬಕ್ಕೆ 30x40 ಅಡಿ ನಿವೇಶನ ಹಂಚಿಕೆ ಮಾಡಲು ನಿರ್ಧರಿಸಿದೆ.

ಲಕ್ಕುಂಡಿಯಲ್ಲಿ ಗುರುವಾರ ನಡೆದ ವಿಶೇಷ ಗ್ರಾಮ ಸಭೆಯಲ್ಲಿ, ಗ್ರಾಮದ ಮಾರುತಿ ನಗರದಲ್ಲಿ ಕುಟುಂಬಕ್ಕೆ 30x40 ನಿವೇಶನ ಮಂಜೂರು ಮಾಡಲು ನಿರ್ಣಯ ಕೈಗೊಳ್ಳಲಾಗಿದೆ.

'ರಿತ್ತಿ ಕುಟುಂಬಕ್ಕೆ ಗೌರವ ಸಲ್ಲಿಸಲು ಗುರುವಾರ ಗ್ರಾಮ ಪಂಚಾಯಿತಿಯಲ್ಲಿ ವಿಶೇಷ ಗ್ರಾಮ ಸಭೆ ಕರೆಯಲಾಗಿತ್ತು. ಎಲ್ಲರ ಒಮ್ಮತದ ನಿರ್ಣಯದಂತೆ ಅವರಿಗೆ ನಿವೇಶನ ಹಂಚಿಕೆ ಮಾಡಲು ನಿರ್ಧರಿಸಲಾಗಿದೆ. ಈ ಸಂಬಂಧ ಜಿಲ್ಲಾ ಉಸ್ತುವಾರಿ ಸಚಿವ ಎಚ್.ಕೆ.ಪಾಟೀಲ ಅವರೂ ಪಂಚಾಯಿತಿ ವತಿಯಿಂದ ನಿವೇಶನ ಒದಗಿಸಲು ಕ್ರಮ ವಹಿಸುವಂತೆ ಕೋರಿದ್ದರು' ಎಂದು ಲಕ್ಕುಂಡಿ ಗ್ರಾಮ ಪಂಚಾಯಿತಿ ಅಧ್ಯಕ್ಷ ಕೆಂಚಪ್ಪ ಪೂಜಾರ ತಿಳಿಸಿದರು.

'ಇಷ್ಟು ದಿನ ಹೇಗೋ ಏನೋ ಎಂಬ ಆತಂಕ ಇತ್ತು. ಈಗ ಎಲ್ಲರೂ ನೆರವಿಗೆ ಬಂದ ಕಾರಣ ಭಯ ದೂರವಾಗಿದೆ. ಪಂಚಾಯಿತಿಯವರು ಜಾಗ ಕೊಡಲು ನಿರ್ಧರಿಸಿದ್ದಾರೆ. ಮನೆ ಕಟ್ಟಿಕೊಳ್ಳಲು ಸರ್ಕಾರದಿಂದ ನೆರವು ಹಾಗೂ ನೌಕರಿಯ ಭರವಸೆ ಸಿಕ್ಕಿದೆ. ಮುಂದೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆಯಿದೆ' ಎಂದು ಪ್ರಜ್ವಲ್‌ನ ತಾಯಿ ಗಂಗವ್ವ ರಿತ್ತಿ ಹೇಳಿದರು. ಪ್ರಜ್ವಲ್ ಮತ್ತು ಆತನ ತಾಯಿ ಗಂಗವ್ವ ಅವರನ್ನು ಸನ್ಮಾನಿಸಲಾಯಿತು.

> **ವಿಶೇಷ ಗ್ರಾಮಸಭೆಯಲ್ಲಿ ರಿತ್ತಿ ಕುಟುಂಬಕ್ಕೆ ನಿವೇಶನ ಹಂಚಿಕೆಗಾಗಿ ಠರಾವು ಪಾಸು ಮಾಡಲಾಗಿದೆ. ಗಣರಾಜ್ಯೋತ್ಸವದಂದು ನಿವೇಶನದ ಹಕ್ಕುಪತ್ರ ನೀಡಲಾಗುವುದು**
> **ಸಿದ್ದು ಪಾಟೀಲ,** ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ

> **ರಿತ್ತಿ ಕುಟುಂಬದವರಿಗೆ ಮನೆ ಕಟ್ಟಿಕೊಳ್ಳಲು ಸರ್ಕಾರದ ಯೋಜನೆಯ ನೆರವು ಸಾಕಾಗದು. ₹10ಲಕ್ಷದಿಂದ ₹15 ಲಕ್ಷ ಧನ ಸಹಾಯ ನೀಡಲು ಸರ್ಕಾರವನ್ನು ಒತ್ತಾಯಿಸಲಾಗುವುದು**
> **ಕೆಂಚಪ್ಪ ಪೂಜಾರ,** ಅಧ್ಯಕ್ಷ, ಲಕ್ಕುಂಡಿ ಗ್ರಾಮ ಪಂಚಾಯಿತಿ

ಉತ್ಖನನ: ಲೋಹದ ಹಣತೆ ತುಣುಕು ಪತ್ತೆ

ತಾಲ್ಲೂಕಿನ ಲಕ್ಕುಂಡಿ ಗ್ರಾಮದ ಕೋಟೆ ವೀರಭದ್ರೇಶ್ವರ ದೇವಸ್ಥಾನದ ಆವರಣದಲ್ಲಿ ನಡೆದಿರುವ ಉತ್ಖನನದ ವೇಳೆ ಗುರುವಾರ ಲೋಹದ ಹಣತೆ ತುಣುಕು, ಮೂಳೆ ತುಂಡುಗಳು, ಕವಡೆ, ಶಂಖ ರೂಪದ ವಸ್ತು ಮತ್ತು ಮಡಿಕೆ ಚೂರುಗಳು ಪತ್ತೆಯಾಗಿವೆ.

'ಏಳನೇ ದಿನದ ಉತ್ಖನನದ ಆರಂಭದಲ್ಲೇ ಅಪರೂಪದ ಲೋಹದ ವಸ್ತುಗಳು ಸಿಕ್ಕಿವೆ. ಇದು ಹಣತೆಯ ತುಣುಕು ಇರಬಹುದು ಎಂದು ತಜ್ಞರು ಅಂದಾಜಿಸಿದ್ದಾರೆ' ಎಂದು ಲಕ್ಕುಂಡಿ ಪಾರಂಪರಿಕ ಪ್ರದೇಶಾಭಿವೃದ್ಧಿ ಪ್ರಾಧಿಕಾರದ ರಾಜ್ಯ ಸದಸ್ಯ ಸಿದ್ದು ಪಾಟೀಲ ತಿಳಿಸಿದ್ದಾರೆ.

ಉತ್ಖನನದಲ್ಲಿ ತೊಡಗಿರುವ ಕಾರ್ಮಿಕರಿಗೆ ಗುರುವಾರ ಬಯೋ ಮೆಟ್ರಿಕ್ ಹಾಜರಾತಿ ಸಮಸ್ಯೆ ಕಾಡಿತು. ಕಲ್ಲು ಮತ್ತು ಮಣ್ಣಿನ ಕೆಲಸದಿಂದ ಬೆರಳಚ್ಚು ಸ್ಪಷ್ಟವಾಗದ ಕಾರಣ ಯಂತ್ರದಲ್ಲಿ ಹಾಜರಾತಿ ದಾಖಲಾಗಲಿಲ್ಲ. ಬಳಿಕ ಹಾಜರಾತಿ ಪುಸ್ತಕದಲ್ಲಿ ಹೆಸರು ನೋಂದಣಿ ಮಾಡಿ ಕಾರ್ಮಿಕರು ಕೆಲಸ ಮುಂದುವರಿಸಿದರು.

ಗದಗ ತಾಲ್ಲೂಕಿನ ಲಕ್ಕುಂಡಿ ಗ್ರಾಮ ಪಂಚಾಯಿತಿ ವತಿಯಿಂದ ಗುರುವಾರ ನಡೆದ ವಿಶೇಷ ಸಾಮಾನ್ಯ ಸಭೆಯಲ್ಲಿ ಪ್ರಜ್ವಲ್ ರಿತ್ತಿ ಕುಟುಂಬಕ್ಕೆ ನಿವೇಶನ ಹಂಚಿಕೆ ಮಾಡಲು ನಿರ್ಣಯಿಸಿದ ಪತ್ರವನ್ನು ಹಸ್ತಾಂತರಿಸಲಾಯಿತು

Digital ಪ್ರಜಾವಾಣಿ

ವ್ಯಾಲೆಂಟೈನ್ಸ್ ಡೇ ರೀಲ್ಸ್ ಸ್ಪರ್ಧೆಗೆ ಆಹ್ವಾನ



CAMBRIDGE INSTITUTE OF TECHNOLOGY NORTH CAMPUS

ವ್ಯಾಲೆಂಟೈನ್ಸ್ ಡೇ ಅಂಗವಾಗಿ ಕೇಂಬ್ರಿಡ್ಜ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ನಾರ್ಥ್ ಕ್ಯಾಂಪಸ್ ಸಹಯೋಗದೊಂದಿಗೆ ವಿಶೇಷ ರೀಲ್ಸ್ ಸ್ಪರ್ಧೆಯನ್ನು 'ಪ್ರಜಾವಾಣಿ ಡಿಜಿಟಲ್' ಆಯೋಜಿಸಿದೆ. ಪ್ರೀತಿ, ಸ್ನೇಹ, ನಂಬಿಕೆ, ಸಂಬಂಧಗಳ ಮೌಲ್ಯ ಹಾಗೂ ಜೀವನದ ಸೌಂದರ್ಯವನ್ನು ಪ್ರತಿಬಿಂಬಿಸುವ ಸೃಜನಾತ್ಮಕ ರೀಲ್‌ಗಳನ್ನು ಆಹ್ವಾನಿಸಲಾಗುತ್ತಿದೆ.

ಸ್ಪರ್ಧೆಯಲ್ಲಿ ಭಾಗವಹಿಸಲು ಆಸಕ್ತರು ತಮ್ಮ ಮೂಲ ಸೃಜನಾತ್ಮಕ ಮತ್ತು ಕುಟುಂಬ ಸ್ನೇಹಿ ರೀಲ್‌ಗಳನ್ನು ನಿಗದಿತ ಅವಧಿಯೊಳಗೆ ಸಲ್ಲಿಸಬಹುದು. ಅಶ್ಲೀಲತೆ, ಹಿಂಸೆ, ದ್ವೇಷ ಭಾಷೆ, ಹಕ್ಕುಸ್ವಾಮ್ಯ ಉಲ್ಲಂಘನೆ ಅಥವಾ ಇತರರ ವಿಷಯದ ನಕಲು ಇರುವ ರೀಲ್‌ಗಳನ್ನು ಪರಿಗಣಿಸಲಾಗುವುದಿಲ್ಲ.

ಆಯ್ಕೆಯಾದ ರೀಲ್‌ಗಳನ್ನು ಪ್ರಜಾವಾಣಿ ಡಿಜಿಟಲ್‌ನ ಸಾಮಾಜಿಕ ಮಾಧ್ಯಮ ವೇದಿಕೆಗಳಲ್ಲಿ ಪ್ರಕಟಿಸಲಾಗುವುದು. ವಿಜೇತರಿಗೆ ವಿಶೇಷ ಗೌರವ/ಪ್ರಶಸ್ತಿಗಳನ್ನು ನೀಡಲಾಗುತ್ತದೆ.

- **ಪ್ರಥಮ ಬಹುಮಾನ ₹25 ಸಾವಿರ**
- **ದ್ವಿತೀಯ ಬಹುಮಾನ ₹20 ಸಾವಿರ**
- **ತೃತೀಯ ಬಹುಮಾನ ₹15 ಸಾವಿರ**

ಜತೆಗೆ, 10 ಸಮಾಧಾನಕರ ಬಹುಮಾನಗಳು

ರೀಲ್ ಕಳುಹಿಸಲು ಫೆ.5 ಕೊನೆಯ ದಿನ

ನಿಮ್ಮ ಪ್ರತಿಭೆಯನ್ನು ಪ್ರದರ್ಶಿಸಿ, ಪ್ರೀತಿಯನ್ನು ಸಂಭ್ರಮಿಸಿ!

ರೀಲ್‌ಗಳನ್ನು ಕಳುಹಿಸಬೇಕಾದ ಇ-ಮೇಲ್
events.pvdigital@prajavani.co.in
ಕಳುಹಿಸುವವರು ತಮ್ಮ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು ನಮೂದಿಸಿ

ನಿಯಮ ಮತ್ತು ಷರತ್ತುಗಳಿಗೆ ಕೋಡ್ ಸ್ಕ್ಯಾನ್ ಮಾಡಿ

ಅಮೃತಾಗೌಡಗೆ ನಿಂದನೆ: ಎಫ್‌ಐಆರ್ ರದ್ದುಪಡಿಸಲು ಹೈಕೋರ್ಟ್ ನಕಾರ

ರಾಜೀವ್ ಗೌಡ ಪ್ರಕರಣ ತನಿಖೆಗೆ ಅರ್ಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಶಿಡ್ಲಘಟ್ಟ ನಗರಸಭೆಯ ಪೌರಾಯುಕ್ತೆ ಅಮೃತಾ ಗೌಡ ವಿರುದ್ಧ ಸ್ಥಳೀಯ ಕಾಂಗ್ರೆಸ್ ಮುಖಂಡ ಬಿ.ವಿ.ರಾಜೀವ್ ಗೌಡ ಬಳಸಿರುವ ನಿಂದನೀಯ ಭಾಷೆ ತನಿಖೆಗೆ ಅರ್ಹವಾಗಿದೆ' ಎಂದು ಅಭಿಪ್ರಾಯಪಟ್ಟಿರುವ ಹೈಕೋರ್ಟ್, ರಾಜೀವ್ ಗೌಡ ವಿರುದ್ಧದ ಕ್ರಿಮಿನಲ್ ಪ್ರಕರಣ ರದ್ದುಗೊಳಿಸಲು ಸ್ಪಷ್ಟವಾಗಿ ನಿರಾಕರಿಸಿದೆ.

'ನನ್ನ ವಿರುದ್ಧ ಅಮೃತಾ ಗೌಡ ದಾಖಲಿಸಿರುವ ಎಫ್‌ಐಆರ್ ರದ್ದುಪಡಿಸಬೇಕು' ಎಂದು ಕೋರಿ ಬಿ.ವಿ.ರಾಜೀವ್ ಗೌಡ (46) ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ಪ್ರಕಟಿಸಿತು.

ರಾಜೀವ್ ಗೌಡ ಬಳಸಿರುವ ಭಾಷೆ ಬಗ್ಗೆ ತೀವ್ರ ಆಘಾತ ವ್ಯಕ್ತಪಡಿಸಿರುವ ನ್ಯಾಯಪೀಠ, 'ಅಧಿಕೃತ ಕರ್ತವ್ಯ ನಿರ್ವಹಿಸುವ ಸರ್ಕಾರಿ ಅಧಿಕಾರಿಯೊಬ್ಬರ, ಅದೂ ಮಹಿಳೆಯೊಬ್ಬರಿಗೆ ಧಮಕಿ ಹಾಕಿ ಅವರ ಕರ್ತವ್ಯ ನಿಭಾವಣೆಗೆ ತಡೆಯೊಡ್ಡಿ ಭೀತಿ ಸೃಷ್ಟಿಸಿರುವ ರಾಜೀವ್ ಗೌಡ ವಿರುದ್ಧದ ಈ ಪ್ರಕರಣ ಮೇಲ್ನೋಟಕ್ಕೆ ಅಪರಾಧಿಕ ಕೃತ್ಯ ಎಸಗಿರುವುದನ್ನು ಬಿಂಬಿಸುತ್ತದೆ' ಎಂದು ಹೇಳಿದೆ.

'ಅಮೃತಾ ತಮ್ಮ ಕರ್ತವ್ಯವನ್ನು ಶ್ರದ್ಧೆಯಿಂದ ನಿರ್ವಹಿಸಿದ್ದಾರೆ. ಸಾರ್ವಜನಿಕ ಸೇವಕಿಯೊಬ್ಬರು ಕಾನೂನುಬದ್ಧ ಕರ್ತವ್ಯಗಳನ್ನು ನಿರ್ವಹಿಸಿದಾಗ, ಯಾರೊಬ್ಬರೂ ಅಂಥವರನ್ನು ಬೆದರಿಸಲು ಅಥವಾ ನಿಂದಿಸಲು ಸಾಧ್ಯವೇ ಇಲ್ಲ. ಆದರೆ, ರಾಜೀವ್ ಗೌಡ ದೂರವಾಣಿ ಮೂಲಕ ಅಮೃತಾ ಜೊತೆ ನಡೆಸಿರುವ ಸಂಭಾಷಣೆ ಗಮನಿದರೆ, ಈತ ಮಹಿಳೆ ಮತ್ತು ಸಾರ್ವಜನಿಕ ಸೇವಕರ ಘನತೆಗೆ ಧಕ್ಕೆ ತರುವ ರೀತಿಯಲ್ಲಿ ಮಾತನಾಡಿರುವುದು ಸುಲಭವಾಗಿ ವೇದ್ಯವಾಗುತ್ತದೆ' ಎಂದು ತೀರ್ಪಿನಲ್ಲಿ ಉಲ್ಲೇಖಿಸಿದೆ.

'ರಾಜೀವ್ ಗೌಡ ಉದ್ಗರಿಸಿರುವ ಪದಗಳು ಮತ್ತು ಅವರ ಸ್ವಭಾವ, ಭಾರತೀಯ ನ್ಯಾಯ ಸಂಹಿತಾ–2023ರ ಕಲಂ79 ಮತ್ತು ಭಾರತೀಯ ದಂಡ ಸಂಹಿತೆಯ–1860ರ ಕಲಂ 509ರ ಅಪರಾಧಿಕ ದಂಡನೆಗಳ ವ್ಯಾಪ್ತಿಯಲ್ಲಿ ನಿಸ್ಸಂದೇಹವಾಗಿ ದಂಡದ ಪರಿಣಾಮಗಳನ್ನು ಎದುರಿಸಲು ಯೋಗ್ಯವಾಗಿದೆ' ಎಂದು ಹೇಳಿದೆ.

'ಬಳಸುವ ಪದಗಳು, ಧ್ವನಿ, ಸನ್ನೆ ಅಥವಾ ಕೃತ್ಯದ ಮೂಲಕ ಮಹಿಳೆಯ ವಿನಮ್ರತೆಯನ್ನು ಅವಮಾನಿಸುವುದು ಕಲಂ 79ರ ಪ್ರಕಾರ ಗುರುತರ ಅಪರಾಧ. ಇಂತಹ ಉದ್ದೇಶದಿಂದ ಕೃತ್ಯ ಎಸಗಿದವರಿಗೆ ದಂಡದ ಜೊತೆಗೆ 3 ವರ್ಷಗಳವರೆಗೆ ವಿಸ್ತರಿಸಬಹುದಾದ ಜೈಲು ಶಿಕ್ಷೆ ವಿಧಿಸಲಾಗುತ್ತದೆ ಎಂಬುದನ್ನು ನೆನಪಿಡಬೇಕು. ಶಾಸನಬದ್ಧ ಕರ್ತವ್ಯ ನಿರ್ವಹಿಸುತ್ತಿರುವ ಸಾರ್ವಜನಿಕ ಸೇವಕಿಯನ್ನು ಉದ್ದೇಶಿಸಿ ಮಾತನಾಡುವಾಗ ನೆದರು ಇಟ್ಟುಕೊಳ್ಳಬೇಕು' ಎಂದು ನ್ಯಾಯಪೀಠ ಎಚ್ಚರಿಸಿದೆ. ಸರ್ಕಾರದ ಪರ ರಾಜ್ಯ ಹೆಚ್ಚುವರಿ ಪ್ರಾಸಿಕ್ಯೂಟರ್ ಬಿ.ಎನ್. ಜಗದೀಶ್ ವಾದ ಮಂಡಿಸಿದ್ದರು.

ಸರ್ಕಾರ ಆನಂದದ ಕೊಳದಲ್ಲಿ ಈಜುತ್ತಿದೆ..!

'ಸಾರ್ವಜನಿಕ ಸ್ಥಳಗಳಲ್ಲಿ ಚಲನಚಿತ್ರ ಪ್ರಚಾರಕ್ಕಾಗಿ ಅಥವಾ ಇನ್ನಾವುದೇ ಕಾರಣಕ್ಕಾಗಿ ವಿವೇಚನೆಯಿಲ್ಲದೆ ಕಟ್ಟುವ ಬ್ಯಾನರ್‌ಗಳು, ಫ್ಲೆಕ್ಸ್‌ಗಳು ನಿಶ್ಚಿತವಾಗಿ ಸಾರ್ವಜನಿಕರಿಗೆ ಮತ್ತು ಸಂಚಾರಕ್ಕೆ ಅಡ್ಡಿಯುಂಟು ಮಾಡಿ ಅಪಾಯ ತಂದೊಡ್ಡುತ್ತವೆ. ಅಂತೆಯೇ, ನಗರದ ಸೌಂದರ್ಯವನ್ನು ಕೆಡಿಸುತ್ತವೆ ಎಂಬುದನ್ನು ಬಿಡಿಸಿ ಹೇಳಬೇಕಾಗಿಲ್ಲ. ಆದರೆ, ರಾಜ್ಯದೆಲ್ಲೆಡೆ ವ್ಯಾಪಕವಾಗಿರುವ ಇಂತಹ ನಡೆಯ ಬಗ್ಗೆ ರಾಜ್ಯ ಸರ್ಕಾರ ತೀವ್ರ ಅಸಡ್ಡೆ ತೋರುತ್ತಿದ್ದು ತನ್ನದೇ ಆದ ಆನಂದ ಸರೋವರದಲ್ಲಿ ಮೈ ಚೆಲ್ಲಿ ಈಜುತ್ತಿದೆ' ಎಂದು ನ್ಯಾಯಪೀಠ ಕಿಡಿ ಕಾರಿದೆ.

'ಬೇಕಾಬಿಟ್ಟಿ ಬ್ಯಾನರ್, ಬಂಟಿಂಗ್ಸ್, ಫ್ಲೆಕ್ಸ್‌ಗಳನ್ನು ನೇತು ಹಾಕುವ ಕೃತ್ಯಗಳನ್ನು ಎಸಗುವವರ ವಿರುದ್ಧ ಕ್ರಮ ಕೈಗೊಳ್ಳುವುದೇ ಅಪರೂಪವಾಗಿ ಬಿಟ್ಟಿದೆ. ಆದ್ದರಿಂದ, ರಾಜ್ಯ ಸರ್ಕಾರ ಕೂಡಲೇ ಎಚ್ಚೆತ್ತುಕೊಂಡು, ಕರ್ನಾಟಕ ಸಾರ್ವಜನಿಕ ಸ್ಥಳಗಳ ವಿರೂಪಗೊಳಿಸುವಿಕೆಯನ್ನು ತಡೆಗಟ್ಟುವ ಕಾಯ್ದೆ–1981ರ ಅಡಿಯಲ್ಲಿ ಅಪರಾಧಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಜಾರಿಗೊಳಿಸಲು ಇದು ಸೂಕ್ತ ಸಮಯ' ಎಂದು ತಾಕೀತು ಮಾಡಿದೆ.

> **ಅಮೃತಾ ಕೇವಲ ಸಾರ್ವಜನಿಕ ಸೇವಕಿಯಲ್ಲ. ಅವರೊಬ್ಬ ಘನತೆಯುಳ್ಳ ಮಹಿಳೆ. ಯಾವುದೇ ಪುರುಷ ನಾಗರಿಕತೆ ಮತ್ತು ಕಾನೂನಿನ ಸಹಿಷ್ಣುತೆಯ ಮಿತಿ ಮೀರಿ ಆಕ್ರಮಣಕಾರಿ ಭಾಷೆಯಲ್ಲಿ ಮಾತನಾಡುವುದು ಅಪರಾಧ**
> **ಎಂ.ನಾಗಪ್ರಸನ್ನ,** ನ್ಯಾಯಮೂರ್ತಿ

ಪರಿಹಾರ ನೀಡದ ರೈಲ್ವೆ ಇಲಾಖೆ ಚರಾಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಕುಣಿಗಲ್ (ತುಮಕೂರು): ರೈಲ್ವೆ ಯೋಜನೆಗೆ ಭೂಮಿ ನೀಡಿದ ತಾಲ್ಲೂಕಿನ ಮಲ್ಲಾಘಟ್ಟದ ಇಬ್ಬರು ಸಂತ್ರಸ್ತರಿಗೆ ರೈಲ್ವೆ ಇಲಾಖೆ ಪರಿಹಾರ ನೀಡದ ಕಾರಣ ನ್ಯಾಯಾಲಯದ ಆದೇಶದ ಮೇರೆಗೆ ಗುರುವಾರ ಕುಣಿಗಲ್ ರೈಲು ನಿಲ್ದಾಣದ ಸ್ಟೇಷನ್ ಮಾಸ್ಟರ್ ಕಚೇರಿಯ ಪೀಠೋಪಕರಣಗಳನ್ನು ಜಪ್ತಿ ಮಾಡಲಾಯಿತು.

ಮಲ್ಲಾಘಟ್ಟ ಗ್ರಾಮದ ನಿವಾಸಿಗಳಾದ ಲೆಂಕಯ್ಯ ಮತ್ತು ಮೂಡಲಗಿರಿ ಅವರ ಮನೆ ಮತ್ತು ಜಮೀನನ್ನು ರೈಲ್ವೆ ಇಲಾಖೆ ಸ್ವಾಧೀನಪಡಿಸಿಕೊಂಡಿತ್ತು. ₹20 ಲಕ್ಷ ಪರಿಹಾರ ನೀಡದ ಕಾರಣ ಇಬ್ಬರೂ ನ್ಯಾಯಾಲಯದ ಮೊರೆ ಹೋಗಿದ್ದರು.

ಪರಿಹಾರ ನೀಡುವಂತೆ ನ್ಯಾಯಾಲಯ 2020ರಲ್ಲಿ ಆದೇಶಿಸಿತ್ತು. ಆದರೆ, ರೈಲ್ವೆ ಇಲಾಖೆ ಪರಿಹಾರ ನೀಡದ ಕಾರಣ ಚರಾಸ್ತಿ ಜಪ್ತಿಗೆ ಆದೇಶ ನೀಡಲಾಗಿತ್ತು. ಈ ಬಗ್ಗೆ ಹಲವು ಬಾರಿ ಅಧಿಕಾರಿಗಳಿಗೆ ಮನವರಿಕೆ ಮಾಡಿಕೊಟ್ಟಿದ್ದರೂ ಪರಿಹಾರ ನೀಡಿರಲಿಲ್ಲ. ಹಾಗಾಗಿ ಕುಣಿಗಲ್ ರೈಲು ನಿಲ್ದಾಣದ ಚರಾಸ್ತಿ ಜಪ್ತಿಮಾಡಲಾಗಿದೆ ಎಂದು ನ್ಯಾಯಾಲಯದ ಅಮೀನರಾದ ಕಲ್ಪನಾ ಮತ್ತು ಮಹೇಶ ತಿಳಿಸಿದರು.

ಅಶ್ವಿನಿ ಪುನೀತ್ ಅವರಿಂದ ಲೋಕಾರ್ಪಣೆ

ಪ್ರತಿಮೆಗಳಿಗೆ ತಲಾ ₹ 5 ಲಕ್ಷ ಹಾಗೂ ದೇಗುಲ ನಿರ್ಮಾಣಕ್ಕೆ ₹ 25 ಲಕ್ಷ ವೆಚ್ಚವಾಗಿದೆ. ನಿತ್ಯ ಪೂಜೆಗೆ ನಿರ್ಧಾರ

ರಾಜ್, ಪುನೀತ್‌ಗೆ ದೇಗುಲ

ಭದ್ರಾವತಿ (ಶಿವಮೊಗ್ಗ): ದಿವಂಗತ ಡಾ.ರಾಜಕುಮಾರ್ ಮತ್ತು ಪುನೀತ್ ರಾಜಕುಮಾರ್ ಅವರ ಅಭಿಮಾನಿಗಳ ಸಂಘದಿಂದ ನಗರದ ರೈಲು ನಿಲ್ದಾಣದ ಎದುರು ಪುನೀತ್ ಹಾಗೂ ರಾಜಕುಮಾರ್ ಅವರಿಗಾಗಿ ದೇಗುಲ ನಿರ್ಮಿಸಲಾಗಿದ್ದು, ಅದರಲ್ಲಿ ಇಬ್ಬರೂ ನಟರ 3 ಅಡಿ ಎತ್ತರದ ಕಂಚಿನ ಪುತ್ಥಳಿ ಪ್ರತಿಷ್ಠಾಪಿಸಲಾಗಿದೆ.

ಗುರುವಾರ ನಡೆದ ಕಾರ್ಯಕ್ರಮದಲ್ಲಿ ಪುನೀತ್ ರಾಜಕುಮಾರ್ ಅವರ ಪತ್ನಿ ಅಶ್ವಿನಿ ದೇಗುಲ ಲೋಕಾರ್ಪಣೆ ಮಾಡಿದರು.

ದೇಗುಲದಲ್ಲಿ ಪ್ರತಿಷ್ಠಾಪಿಸಿರುವ ರಾಜಕುಮಾರ್ ಮತ್ತು ಪುನೀತ್ ರಾಜಕುಮಾರ್ ಅವರ ಕಂಚಿನ ಪುತ್ಥಳಿಗಳು

'ಪ್ರತಿಮೆಗಳಿಗೆ ತಲಾ ₹ 5 ಲಕ್ಷ ಹಾಗೂ ದೇಗುಲ ನಿರ್ಮಾಣಕ್ಕೆ ₹ 25 ಲಕ್ಷ ವೆಚ್ಚವಾಗಿದೆ. ಪುನೀತ್ ಮತ್ತು ರಾಜಕುಮಾರ್ ಅಭಿಮಾನಿಗಳ ದೇಣಿಗೆಯಿಂದ ದೇಗುಲ ನಿರ್ಮಿಸಲಾಗಿದೆ. ಇಲ್ಲಿ ಪ್ರತಿನಿತ್ಯ ಪೂಜೆ ನಡೆಸಲಾಗುತ್ತದೆ' ಎಂದು ಅಭಿಮಾನಿ ಸಂಘದವರು ತಿಳಿಸಿದ್ದಾರೆ.

ಇದೇ ವೇಳೆ ನಗರದಲ್ಲಿರುವ ತಾಲ್ಲೂಕು ಕಚೇರಿ ರಸ್ತೆಗೆ 'ಡಾ.ಪುನೀತ್ ರಾಜಕುಮಾರ್ ರಸ್ತೆ' ಎಂದು ನಾಮಕರಣ ಮಾಡಲಾಯಿತು. ಇದರ ನಾಮಫಲಕ ಹಾಗೂ ಕನಕ ಆಟೊ ಚಾಲಕರ ಸಂಘದಿಂದ ಪ್ರತ್ಯೇಕವಾಗಿ ಪ್ರತಿಷ್ಠಾಪಿಸಲಾದ ಪುನೀತ್ ರಾಜಕುಮಾರ್ ಅವರ ಪುತ್ಥಳಿಯನ್ನೂ ಅಶ್ವಿನಿ ಅನಾವರಣಗೊಳಿಸಿದರು.

ನೌಕರರಿಗೆ ರಕ್ಷಣೆ: ಕಠಿಣ ಕಾನೂನಿಗೆ ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನೌಕರರ ಮೇಲೆ ನಡೆಯುವ ಹಲ್ಲೆ, ದೌರ್ಜನ್ಯ, ಅವಾಚ್ಯ ಶಬ್ದಗಳ ನಿಂದನೆ, ಕಿರುಕುಳ ನೀಡುತ್ತಿರುವವರನ್ನು ಶಿಕ್ಷೆಗೆ ಒಳಪಡಿಸಲು ಕಠಿಣ ಕಾನೂನು ರೂಪಿಸಬೇಕು' ಎಂದು ರಾಜ್ಯ ಸರ್ಕಾರಿ ನೌಕರರ ಸಂಘ ಮನವಿ ಮಾಡಿದೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರನ್ನು ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ಅವರ ನೇತೃತ್ವದಲ್ಲಿ ಗುರುವಾರ ಭೇಟಿ ಮಾಡಿದ ಸಂಘದ ಪ್ರತಿನಿಧಿಗಳು 'ಅಧಿಕಾರಿ–ನೌಕರರು ಮುಕ್ತ ವಾತಾವರಣದಲ್ಲಿ ದಕ್ಷತೆಯಿಂದ ಕರ್ತವ್ಯ ನಿರ್ವಹಿಸಲು ಅವಕಾಶ ಕಲ್ಪಿಸಬೇಕು' ಎಂದು ಮನವಿ ಸಲ್ಲಿಸಿದರು.

ಶಿಡ್ಲಘಟ್ಟ ನಗರಸಭೆಯ ಪೌರಾಯುಕ್ತೆ ಅಮೃತಾಗೌಡ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದನೆ, ಮುಳಬಾಗಿಲು ತಹಶೀಲ್ದಾರ್ ಬಿ.ಕೆ. ಚಂದ್ರಶೇಖರ್ ಅವರ ಮೇಲೆ ಹಲ್ಲೆ ಸೇರಿದಂತೆ 14 ಪ್ರಕರಣಗಳಲ್ಲಿ ಸರ್ಕಾರಿ ನೌಕರರ ಮೇಲೆ ನಡೆದಿರುವ ದೌರ್ಜನ್ಯ, ಹಲ್ಲೆಯನ್ನು ಮನವಿ ಪತ್ರದಲ್ಲಿ ಉಲ್ಲೇಖಿಸಲಾಗಿದೆ.

'2.73 ಲಕ್ಷ ಹುದ್ದೆಗಳು ಖಾಲಿ ಇದ್ದರೂ ರಾಜ್ಯದ ಅಭಿವೃದ್ಧಿಗಾಗಿ ದಕ್ಷತೆ ಮತ್ತು ಪ್ರಾಮಾಣಿಕತೆಯಿಂದ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ–ನೌಕರರ ಮೇಲೆ ಕೆಲವು ಗಣ್ಯ ವ್ಯಕ್ತಿಗಳು, ಸಾರ್ವಜನಿಕರು ಹಲ್ಲೆ, ದೌರ್ಜನ್ಯ, ಅವಾಚ್ಯ ಶಬ್ದಗಳಿಂದ ನಿಂದನೆ, ಕಿರುಕುಳ ನೀಡುವ ಪ್ರಕರಣಗಳು ಮರುಕಳಿಸುತ್ತಿವೆ. ಸರ್ಕಾರಿ ನೌಕರರ ರಕ್ಷಣೆಗೆ ಈಗಲಾದರೂ ಕಾನೂನು ರಚಿಸಬೇಕು' ಎಂದು ಕೋರಲಾಗಿದೆ.

'ಸಂಘದ ಪ್ರಸ್ತಾವಕ್ಕೆ ಸ್ಪಂದಿಸಿದ ಮುಖ್ಯ ಕಾರ್ಯದರ್ಶಿಯವರು ಈ ಹಿಂದೆ ವೈದ್ಯರ ಮೇಲೆ ಹಲ್ಲೆಯಾದಾಗ ರೂಪಿಸಲಾಗಿದ್ದ ನಿಯಮಗಳ ಮಾದರಿಯಲ್ಲಿಯೇ ನೌಕರರ ಮೇಲೆ ಹಲ್ಲೆ ಮಾಡಿದವರ ಮೇಲೆಯೂ ಕಠಿಣ ಕಾನೂನು ಕ್ರಮ ಕೈಗೊಳ್ಳಲು ನಿಯಮಗಳನ್ನು ರೂಪಿಸಿ ಕೂಡಲೇ ಕಡತ ಮಂಡಿಸುವಂತೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಕಾರ್ಯದರ್ಶಿಗೆ ಸೂಚಿಸಿದರು' ಎಂದು ಸಿ.ಎಸ್. ಷಡಾಕ್ಷರಿ ತಿಳಿಸಿದರು.

ಸಂಘದ ಗೌರವಾಧ್ಯಕ್ಷ ಎಸ್. ಬಸವರಾಜು, ಹಿರಿಯ ಉಪಾಧ್ಯಕ್ಷ ಸುರೇಶ್ ಶೆಡಶ್ಯಾಳ, ಉಪಾಧ್ಯಕ್ಷರಾದ ಹರ್ಷ, ನೆಲ್ಕುದ್ರಿ ಸದಾನಂದ್, ಚೇತನ್ ಹಾಗೂ ಕಾರ್ಯದರ್ಶಿಗಳಾದ ಚಂದ್ರಶೇಖರ್, ನಾಗನಗೌಡ ಉಪಸ್ಥಿತರಿದ್ದರು.

ಸರ್ಕಾರಿ ನೌಕರರ ಸಂಘದ ಅಧ್ಯಕ್ಷ ಸಿ.ಎಸ್. ಷಡಾಕ್ಷರಿ ನೇತೃತ್ವದಲ್ಲಿ ಸಂಘದ ಪ್ರತಿನಿಧಿಗಳು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ಮನವಿ ಸಲ್ಲಿಸಿದರು

ಅಟಲ್ ಟಿಂಕರಿಂಗ್ ಲ್ಯಾಬ್‌ನಲ್ಲಿ ತರಬೇತುದಾರ ಎಂ.ವಿ.ತೇಜಸ್ವಿಕುಮಾರ್ ಜೊತೆ ಎಂ.ಎಸ್.ಯಶವಂತ್ ಹಾಗೂ ಶಂಕರ್

ಗಣರಾಜ್ಯೋತ್ಸವ: ಚುರ್ಚಿಗುಂಡಿ ವಿದ್ಯಾರ್ಥಿಗಳಿಗೆ ಬಂತು ಆಹ್ವಾನ

ಪ್ರಜಾವಾಣಿ ವಾರ್ತೆ

ಶಿಕಾರಿಪುರ (ಶಿವಮೊಗ್ಗ): ನವದೆಹಲಿಯ ಕೆಂಪುಕೋಟೆಯಲ್ಲಿ ನಡೆಯಲಿರುವ ಗಣರಾಜ್ಯೋತ್ಸವ ಸಮಾರಂಭಕ್ಕೆ ತಾಲ್ಲೂಕಿನ ಚುರ್ಚಿಗುಂಡಿ ಮೊರಾರ್ಜಿ ದೇಸಾಯಿ ವಸತಿ ಶಾಲೆಯ ಇಬ್ಬರು ವಿದ್ಯಾರ್ಥಿಗಳು ಅತಿಥಿಗಳಾಗಿ ಪಾಲ್ಗೊಳ್ಳುವ ಅವಕಾಶ ಪಡೆದಿದ್ದಾರೆ.

ನೀತಿ ಆಯೋಗ ನಡೆಸಿದ ರಾಷ್ಟ್ರ ಮಟ್ಟದ ಸ್ಪರ್ಧೆಯಲ್ಲಿ ಕರ್ನಾಟಕದಿಂದ ಈ ಶಾಲೆಯ 10ನೇ ತರಗತಿ ವಿದ್ಯಾರ್ಥಿಗಳಾದ ಎಂ.ಎಸ್. ಯಶವಂತ್ ಹಾಗೂ ಶಂಕರ್ ವಿಜೇತರಾಗಿ ಆಯ್ಕೆಯಾಗಿದ್ದಾರೆ.

ನೀತಿ ಆಯೋಗದ ಅಟಲ್ ಇನ್ನೊವೇಷನ್ ಮಿಷನ್ (ಎಐಎಂ) ಮೂಲಕ ದೇಶದ 10,000 ಸರ್ಕಾರಿ, ಖಾಸಗಿ ಶಾಲೆಗಳಲ್ಲಿ 'ಅಟಲ್ ಟಿಂಕರಿಂಗ್ ಲ್ಯಾಬ್' ಅಳವಡಿಸಲಾಗಿದೆ. ಲ್ಯಾಬ್‌ನಲ್ಲಿ ಕೈಗೊಳ್ಳುವ ಪ್ರಾಜೆಕ್ಟ್‌ನ ಗುಣಮಟ್ಟದ ಆಧಾರದಲ್ಲಿ ಗಣರಾಜ್ಯೋತ್ಸವ ಕಾರ್ಯಕ್ರಮಕ್ಕೆ ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿದೆ.

ಶಾಲೆಯಲ್ಲಿರುವ ಲ್ಯಾಬ್ ಬಳಸಿಕೊಂಡು ವಿದ್ಯಾರ್ಥಿಗಳು 'ಬಹು ಉಪಯೋಗಿ ಕೃಷಿ ಸಲಕರಣೆ ಯಂತ್ರ' ಸಿದ್ಧಪಡಿಸಿದ್ದಾರೆ. ಒಂದೇ ಯಂತ್ರದಲ್ಲಿ ಬಿತ್ತನೆ, ಬೆಳೆಗಳಿಗೆ ಔಷಧಿ ಸಿಂಪಡಣೆ, ಹನಿ ನೀರಾವರಿಗೆ ಅನುಕೂಲ ಕಲ್ಪಿಸುವುದೂ ಸೇರಿದಂತೆ ಒಟ್ಟು 12 ಪರಿಕರ ಅಳವಡಿಸಿದ್ದಾರೆ. 10,000 ಪ್ರಾಜೆಕ್ಟ್‌ಗಳ ಪೈಕಿ ಮೊದಲ ಹಂತದಲ್ಲಿ 1,000 ಶಾಲೆಗಳನ್ನು ಆಯ್ಕೆ ಮಾಡಿದ್ದು, ಇದರಲ್ಲಿ ಚುರ್ಚಿಗುಂಡಿ ಶಾಲೆ 86ನೇ ಸ್ಥಾನ ಪಡೆದಿತ್ತು.

ವಿದ್ಯಾರ್ಥಿಗಳೊಂದಿಗೆ, ತರಬೇತುದಾರ ಎಂ.ವಿ.ತೇಜಸ್ವಿಕುಮಾರ್, ಪ್ರಾಚಾರ್ಯರಾದ ಸುಮಾ ನವದೆಹಲಿಗೆ ಹೋಗಲಿದ್ದು, ಗಣರಾಜ್ಯೋತ್ಸವ ವೀಕ್ಷಣೆಯ ಜೊತೆಗೆ, ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ನಡೆಸಲಿರುವ ಚರ್ಚೆಯಲ್ಲಿ ಭಾಗವಹಿಸಲಿದ್ದಾರೆ.

ರೀಲ್ಸ್ ಹುಚ್ಚಾಟ: ಟ್ರ್ಯಾಕ್ಟರ್ ಚಕ್ರಕ್ಕೆ ಸಿಲುಕಿ ಚಾಲಕ ಸಾವು

ಪ್ರಜಾವಾಣಿ ವಾರ್ತೆ

ಕಮಲಾಪುರ (ಕಲಬುರಗಿ ಜಿಲ್ಲೆ): ಟ್ರ್ಯಾಕ್ಟರ್ ಚಲಾಯಿಸುತ್ತಲೇ ರೀಲ್ಸ್ ಮಾಡುತ್ತಿದ್ದ ಚಾಲಕ ಅದೇ ಟ್ರ್ಯಾಕ್ಟರ್ ಚಕ್ರಕ್ಕೆ ಸಿಲುಕಿ ಮೃತಪಟ್ಟಿರುವ ಘಟನೆ ತಾಲ್ಲೂಕಿನ ಮಹಾಗಾಂವದಲ್ಲಿ ಬುಧವಾರ ನಡೆದಿದೆ.


ಲೋಕೇಶ

ಮಹಾಗಾಂವ ಗ್ರಾಮದ ನಿವಾಸಿ ಲೋಕೇಶ ಕಲ್ಲಪ್ಪ ಪೂಜಾರಿ (22) ಮೃತ ಚಾಲಕ.

ಗ್ರಾಮದ ಕಬ್ಬಿನ ಗದ್ದೆಯೊಂದರಲ್ಲಿ ಲೋಕೇಶ ಟ್ರ್ಯಾಕ್ಟರ್‌ನಿಂದ ನೇಗಿಲು ಹೊಡೆಯುತ್ತ ರೀಲ್ ಮಾಡಲು ಮೊಬೈಲ್ ಫೋನ್‌ನಲ್ಲಿ ವಿಡಿಯೊ ಚಿತ್ರೀಕರಿಸುತ್ತಿದ್ದರು. ಆಗ ಆಯತಪ್ಪಿ ಕೆಳಗೆ ಬಿದ್ದಿದ್ದಾರೆ. ಟ್ರ್ಯಾಕ್ಟರ್ ಚಕ್ರಕ್ಕೆ ಅವರ ದೇಹದ ಮೇಲೆ ಹರಿದು ಸ್ಥಳದಲ್ಲಿಯೇ ಮೃತಪಟ್ಟಿದ್ದಾರೆ.

ಈ ಸಮಯದಲ್ಲಿ ಹೊಲದಲ್ಲಿ ಯಾರೂ ಇರಲಿಲ್ಲ. ಸುಮಾರು ಅರ್ಧ ತಾಸು ಲೋಕೇಶ್ ಅವರ ಮೇಲೆಯೇ ಗಾಲಿ ತಿರುಗಿದೆ. ದೇಹದ ಅರ್ಧ ಭಾಗ ನಜ್ಜುಗುಜ್ಜಾಗಿದೆ. ಬಹಳ ಹೊತ್ತಿನಿಂದ ಒಂದೆಡೆ ನಿಂತು ತಿರುಗುತ್ತಿದ್ದ ಟ್ರ್ಯಾಕ್ಟರ್ ಅನ್ನು ಗಮನಿಸಿದ ರೈತರೊಬ್ಬರು ಅದರ ಸಮೀಪ ಹೋಗಿ ನೋಡಿದಾಗ ಅವಘಡ ಗೊತ್ತಾಗಿದೆ. ತಕ್ಷಣ ಸುತ್ತಲಿನ ರೈತರು ಜಮಾಯಿಸಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮಹಾಗಾಂವ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಿಪಿಐ ಶಿವಶಂಕರ ಸಾಹು, ಪಿಎಸ್‌ಐ ಬಸವರಾಜ ಚಿತ್ತಕೋಟೆ ಹಾಗೂ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ್ದಾರೆ.

ನಾಗಲಕ್ಷ್ಮಿಗೆ 'ಮುಗುಳ್ನಗೆಯ ಮಂದಾರ' ಪ್ರಶಸ್ತಿ

ಕಲಬುರಗಿ: ಜಿಲ್ಲೆಯ ಚಿತ್ತಾಪುರ ತಾಲ್ಲೂಕಿನ ಮುಗುಳನಾಗಾವಿಯ ಕಟ್ಟಿಮನಿ ಹಿರೇಮಠ ನೀಡುವ 'ಮುಗುಳ್ನಗೆಯ ಮಂದಾರ' ಪ್ರಶಸ್ತಿಗೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಭಾಜನರಾಗಿದ್ದಾರೆ.

'ಮಠದ ಪೀಠಾಧಿಪತಿ ಅಭಿನವ ಸಿದ್ಧಲಿಂಗ ಶಿವಾಚಾರ್ಯರ 49ನೇ ಜನ್ಮದಿನದ ಅಂಗವಾಗಿ ಈ ಪ್ರಶಸ್ತಿ ನೀಡಲಾಗುತ್ತಿದೆ. ಪ್ರಶಸ್ತಿಯು 5 ಗ್ರಾಂ ಚಿನ್ನ ಹಾಗೂ ಫಲಪುಷ್ಪ ಒಳಗೊಂಡಿದೆ' ಎಂದು ಮಠದ ಭಕ್ತೆ ಜ್ಯೋತಿ ಎಂ. ಮರಗೋಳ ತಿಳಿಸಿದರು.

ಶಿರಸ್ತೇದಾರ ಆತ್ಮಹತ್ಯೆ ಯತ್ನ

ಪ್ರಜಾವಾಣಿ ವಾರ್ತೆ

ಬೇಲೂರು (ಹಾಸನ): 'ತಹಶೀಲ್ದಾರ್ ಶ್ರೀಧರ್ ಕಂಕನವಾಡಿ ಕಿರುಕುಳ ನೀಡುತ್ತಿದ್ದಾರೆ' ಎಂದು ಆರೋಪಿಸಿ ಇಲ್ಲಿನ ತಾಲ್ಲೂಕು ಕಚೇರಿಯ ಶಿರಸ್ತೇದಾರ ತನ್ವೀರ್ ಅಹಮ್ಮದ್ ಅವರು ಗುರುವಾರ ಮಧ್ಯಾಹ್ನ ಮಧುಮೇಹದ ಮಾತ್ರೆಗಳನ್ನು ನುಂಗಿ ಆತ್ಮಹತ್ಯೆಗೆ ಯತ್ನಿಸಿದ್ದಾರೆ. ಅವರನ್ನು ಸಹೋದ್ಯೋಗಿಗಳು ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ದಾಖಲಿಸಿದ್ದಾರೆ.

'15 ದಿನಗಳಿಂದ ತಹಶೀಲ್ದಾರ್ ಹೀಯಾಳಿಸಿ ಮಾತನಾಡುತ್ತಿದ್ದಾರೆ. ಅನಾರೋಗ್ಯವಿದೆ ಎಂದರೂ ಜನಗಣತಿ ಮೇಲ್ವಿಚಾರಣೆಯ ಹೆಚ್ಚುವರಿ ಕೆಲಸ ನೀಡಿದ್ದಾರೆ. ನೊಂದು 5 ಮಾತ್ರೆಗಳನ್ನು ಒಟ್ಟಿಗೇ ಸೇವಿಸಿದ್ದೆ' ಎಂದು ಅವರು ತಿಳಿಸಿದರು.

'ಬೇರೆ ಸಿಬ್ಬಂದಿಗೂ ಹೆಚ್ಚು ಕೆಲಸವಿದ್ದುದರಿಂದ ಜನಗಣತಿ ವಿಭಾಗದ ಹೊಣೆ ನೀಡಲಾಗಿತ್ತು. ಆತ್ಮಹತ್ಯೆ ಮಾಡಿಕೊಳ್ಳುವುದಾಗಿ ಹೇಳಿ ಹೋದರು. ನಾನು ಕಿರುಕುಳ ನೀಡಿಲ್ಲ' ಎಂದು ತಹಶೀಲ್ದಾರ್ ಸ್ಪಷ್ಟಪಡಿಸಿದರು. 'ಅಹಮ್ಮದ್ ಅವರು ಆರೋಗ್ಯದಿಂದ ಇದ್ದಾರೆ' ಎಂದು ವೈದ್ಯರು ತಿಳಿಸಿದರು.

ರಾಜ್ಯಪಾಲರ ನಡೆ: ಕೋಲಾಹಲಕ್ಕೆ ಎಡೆ

ಒಂದನೇ ಪುಟದಿಂದ...

ಮಾರ್ಷಲ್‌ಗಳ ಬಂದೋಬಸ್ತ್ ನಡುವೆಯೇ ರಾಜ್ಯಪಾಲರು ಮುಂದೆ ಹೋಗುತ್ತಿದ್ದಂತೆ ಕಾಂಗ್ರೆಸ್ ಸದಸ್ಯರು ಧಿಕ್ಕಾರ ಕೂಗಿದರು. ಇದಕ್ಕೆ ವಿರುದ್ಧವಾಗಿ ಬಿಜೆಪಿ ಸದಸ್ಯರು ಜೈಕಾರವನ್ನು ಮೊಳಗಿಸಿದರು.

ಸರ್ಕಾರ ಸಿದ್ಧಪಡಿಸಿದ ಭಾಷಣದಲ್ಲಿ ಕೇಂದ್ರ ಸರ್ಕಾರವನ್ನು ಟೀಕಿಸುವ 11 ಅಂಶಗಳನ್ನು ಕೈಬಿಡಬೇಕು ಎಂದು ಪಟ್ಟು ಹಿಡಿದಿದ್ದ ರಾಜ್ಯಪಾಲರು, ಇದನ್ನು ಸರಿಪಡಿಸದೇ ಇದ್ದರೆ ಭಾಷಣ ಮಾಡಲು ನಿರಾಕರಿಸಿದ್ದರು. ಬುಧವಾರ ಬೆಳಿಗ್ಗೆಯೇ ಈ ಬಗ್ಗೆ ಸಂದೇಶ ರವಾನಿಸಿದ್ದರು. ಸಾಂವಿಧಾನಿಕ ಬಿಕ್ಕಟ್ಟು ತಪ್ಪಿಸುವ ಉದ್ದೇಶದಿಂದ ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ರಾಜ್ಯಪಾಲರನ್ನು ಭೇಟಿ ಮಾಡಿ ಮನವೊಲಿಸುವ ಪ್ರಯತ್ನ ನಡೆಸಿದ್ದರು. ಒಂದು ವೇಳೆ ರಾಜ್ಯಪಾಲರು ಬರದಿದ್ದರೆ ಸುಪ್ರೀಂ ಕೋರ್ಟ್ ಮೆಟ್ಟಿಲು ಹತ್ತಲು ಸರ್ಕಾರ ತೀರ್ಮಾನಿಸಿತ್ತು.

ಗುರುವಾರ ನಡೆದಿದ್ದೇನು?: ರಾಜ್ಯಪಾಲರು ಬರುತ್ತಾರೋ ಇಲ್ಲವೊ ಎಂಬ ಸ್ಪಷ್ಟತೆ ಇರಲಿಲ್ಲ. ನಿಗದಿತ ಸಮಯಕ್ಕೆ ಬಂದರು. ಅವರು ಏನು ಓದುತ್ತಾರೆ, ಏನು ಬಿಡುತ್ತಾರೆ... ಎಂದು ಸದಸ್ಯರು ಲೆಕ್ಕಾಚಾರದಲ್ಲಿರುವಾಗಲೇ ಗೆಹಲೋತ್ ಅವರು ಭಾಷಣದ ಶಾಸ್ತ್ರ ಮುಗಿಸಿದ್ದರು.

46 ಪುಟಗಳ ಭಾಷಣದ ಪ್ರತಿಯ ಎರಡು ಸಾಲುಗಳನ್ನು ಓದಿ 'ಜೈ ಹಿಂದ್, ಜೈ ಕರ್ನಾಟಕ' ಎಂದು ಹೇಳಿ ಭಾಷಣ ಮುಗಿಸಿದರು. ಕೂಡಲೇ ಸದನದಲ್ಲಿ ಗುಜುಗುಜು ಗದ್ದಲ ಆರಂಭವಾಯಿತು.

ಭಾಷಣ ಮೊಟಕುಗೊಳಿಸಿದ್ದರಿಂದ ಸಿಟ್ಟಿಗೆದ್ದ ಆಡಳಿತ ಪಕ್ಷದ ಸದಸ್ಯರು ಮತ್ತು ಸಚಿವರಾದ ಎಚ್.ಕೆ.ಪಾಟೀಲ, ಪ್ರಿಯಾಂಕ್ ಖರ್ಗೆ ಮತ್ತು ಇತರ ಸಚಿವರು ಏರಿದ ಧ್ವನಿಯಲ್ಲಿ ರಾಜ್ಯಪಾಲರನ್ನು ಆಕ್ಷೇಪಿಸಿದರು. 'ಪೂರ್ಣ ಭಾಷಣ ಓದದೇ ಸಂವಿಧಾನ ಉಲ್ಲಂಘನೆ ಮಾಡಿದ್ದೀರಿ, ಕನ್ನಡಿಗರಿಗೆ ಅನ್ಯಾಯ ಮಾಡಿದ್ದೀರಿ' ಎಂದು ರಾಜ್ಯಪಾಲರತ್ತ ಕೈತೋರಿಸಿ ಬೊಬ್ಬಿಟ್ಟರು. ಆ ಮಾತು ಕೇಳಿಸಿಕೊಂಡ ರಾಜ್ಯಪಾಲರು ಕೈಮುಗಿದು ಪೀಠದಿಂದ ಕೆಳಗಿಳಿದರು. ಆಗ ಕಾಂಗ್ರೆಸ್ ಸದಸ್ಯರು ರಾಜ್ಯಪಾಲರ ವಿರುದ್ಧ ಧಿಕ್ಕಾರ ಕೂಗಲಾರಂಭಿಸಿದರು.

ರಾಜ್ಯಪಾಲರು ನಿರ್ಗಮಿಸುವುದಕ್ಕೆ ಮುನ್ನ ಸದನದಲ್ಲಿ ರಾಷ್ಟ್ರಗೀತೆ ನುಡಿಸುವುದು ಪದ್ಧತಿ. ಆದರೆ, ರಾಷ್ಟ್ರಗೀತೆ ನುಡಿಸಲಿಲ್ಲ. ರಾಜ್ಯಪಾಲರು ಹೊರಟೇ ಬಿಟ್ಟರು.

ಸದನ ಕೋಲಾಹಲ: 'ಕೇಂದ್ರ ವಿರುದ್ಧ ವಿನಾ ಕಾರಣ ದ್ವೇಷ ಕಾರುವ, ರಾಜಕೀಯ ಮಾಡುವ ಉದ್ದೇಶದ ಭಾಷಣವನ್ನು ಓದದೇ ನಿರ್ಗಮಿಸಿದ್ದು ಸರಿಯಾದ ಕ್ರಮ' ಎಂದು ವಿರೋಧಪಕ್ಷದ ನಾಯಕ ಆರ್. ಅಶೋಕ ಹೇಳಿದರು. ಬಿಜೆಪಿ ಸದಸ್ಯರು ರಾಜ್ಯಪಾಲರಿಗೆ ಜೈಕಾರ ಹಾಕಿ, ಕಾಂಗ್ರೆಸ್ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಕೂಗಲಾರಂಭಿಸಿದರು. ಆಗ ವಿರೋಧ ಪಕ್ಷಗಳ ಸದಸ್ಯರತ್ತ ಕೈಮುಗಿದು ರಾಜ್ಯಪಾಲರು ಹೊರ ನಡೆದರು.

ಹೊರ ನಡೆಯುತ್ತಿದ್ದ ರಾಜ್ಯಪಾಲರನ್ನು ಹಿಂಬಾಲಿಸಿದ ಕಾಂಗ್ರೆಸ್‌ನ ಎಚ್.ಸಿ. ಬಾಲಕೃಷ್ಣ, ಶರತ್ ಬಚ್ಚೇಗೌಡ, ಪ್ರದೀಪ್ ಈಶ್ವರ್ ಮತ್ತಿತರರು ಅಡ್ಡಹಾಕಿದರೆ, ವಿಧಾನಪರಿಷತ್ ಸದಸ್ಯ ಎಸ್.ರವಿ ಮತ್ತು ಇತರರು ಹಿಂದಿನಿಂದ ರಾಜ್ಯಪಾಲರಿಗೆ ಧಿಕ್ಕಾರ ಕೂಗುತ್ತಾ ನಡೆದರು. ಬಾಗಿಲಿನ ಬಳಿ ವಿಧಾನಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಅವರು ರಾಜ್ಯಪಾಲರಿಗೆ ಅಡ್ಡ ನಿಂತು ವಾಗ್ವಾದಕ್ಕೆ ಮುಂದಾದಾಗ ಮಾರ್ಷಲ್‌ಗಳು ಅವರನ್ನು ಬದಿಗೆ ತಳ್ಳಿ ರಾಜ್ಯಪಾಲರಿಗೆ ದಾರಿ ಮಾಡಿಕೊಟ್ಟರು.

ಈ ತಳ್ಳಾಟ– ನೂಕಾಟದಲ್ಲೂ ರಾಜ್ಯಪಾಲರು ಎಲ್ಲರಿಗೂ ನಮಸ್ಕರಿಸುತ್ತಲೇ ಮುಂದೆ ನಡೆದರು. ಶಿಷ್ಟಾಚಾರದಂತೆ ರಾಜ್ಯಪಾಲರ ಅಕ್ಕಪಕ್ಕದಲ್ಲಿ ಸಭಾಧ್ಯಕ್ಷ ಯು.ಟಿ. ಖಾದರ್ ಮತ್ತು ಸಭಾಪತಿ ಬಸವರಾಜ ಹೊರಟ್ಟಿ ಅವರಿಗೆ ಮಾರ್ಷಲ್‌ಗಳು ಜಾಗ ಮಾಡಿಕೊಟ್ಟರು. ಅವರ ಹಿಂದೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಕಾನೂನು ಸಚಿವ ಎಚ್.ಕೆ.ಪಾಟೀಲ ಅವರು ಏದುಸಿರು ಬಿಡುತ್ತಾ ಸಾಗಿದರು. ವಿಧಾನಸೌಧದ ಮೆಟ್ಟಿಲುವರೆಗೆಹೋಗಿ ರಾಜ್ಯಪಾಲರನ್ನು ಬೀಳ್ಕೊಟ್ಟರು.

ನೋಂದಣಿ ಮತ್ತು ಮುದ್ರಾಂಕ ಇಲಾಖೆ
ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರವರ ಕಚೇರಿ, ಕಂದಾಯ ಭವನ, 8ನೇ ಮಹಡಿ, ಕೆ.ಜಿ. ರಸ್ತೆ, ಬೆಂಗಳೂರು–560009
ದೂ: 080–22220436, ಇಮೇಲ್: aigrcomp@karnataka.gov.in

ಸಂಖ್ಯೆ: DSR/2025-26/IND0001/CALL-2 ದಿನಾಂಕ: 20.01.2026

ಟೆಂಡರ್ ಪ್ರಕಟಣೆ–2ನೇ ಕರೆ

ನೋಂದಣಿ ಮತ್ತು ಮುದ್ರಾಂಕ ಇಲಾಖೆಗೆ **Digital Signature Certificates Class-III, Encryption Certificates and Tokens** ಗಳನ್ನು ಸರಬರಾಜು ಮಾಡಲು ಏಜೆನ್ಸಿಯನ್ನು ಆಯ್ಕೆ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದೆ. ಟೆಂಡರ್ ಫಾರಂಗಳು ಮತ್ತು ಷರತ್ತುಗಳನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **https://kppp.karnataka.gov.in** ನಲ್ಲಿ ಪಡೆಯಬಹುದು. ಪೂರ್ಣಗೊಳಿಸಿದ ಟೆಂಡರ್ ಫಾರಂಗಳನ್ನು ದಿನಾಂಕ: **21.02.2026ರ ಸಂಜೆ 5.00 ಗಂಟೆಯವರೆಗೂ** ಸಲ್ಲಿಸಬಹುದು. ಹೆಚ್ಚಿನ ವಿವರಗಳಿಗೆ **ಸಹಾಯಕ ನೋಂದಣಿ ಮಹಾಪರಿವೀಕ್ಷಕರು (ಗಣಕೀಕರಣ) ಮತ್ತು ಯೋಜನಾ ನಿರ್ದೇಶಕರು, ಕಾವೇರಿ** (ಇ–ಮೇಲ್: **aigrcomp@karnataka.gov.in**) ಇವರನ್ನು ಸಂಪರ್ಕಿಸಿ.

ಸಹಿ/– ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರು, ಬೆಂಗಳೂರು

DIPR/CP/YC/5171/2025-26

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–01 editpage@prajavani.co.in

ಅಭಿಮತ



ಸುಭಾಷಿತ

'ಸತ್ಯ' ಒಂದೇ ಪರಮಾತ್ಮನ ಪರಿಪೂರ್ಣ ವಿವರಣೆ. ಇತರ ಎಲ್ಲಾ ವಿವರಣೆಗಳು ಅಪರಿಪೂರ್ಣ.

–ಮಹಾತ್ಮ ಗಾಂಧೀಜಿ

ಸಂಪಾದಕೀಯ

ರಾಜ್ಯಪಾಲರ ರಾಜಕೀಯ ನಡೆ 'ಅರ್ಥಹೀನ' ಸಂಪ್ರದಾಯ ಬೇಕೆ?

ರಾಜ್ಯಪಾಲರು ಮಾಡಬೇಕಾದ ಸಾಂಪ್ರದಾಯಿಕ ಭಾಷಣಗಳು ಈಗೀಗ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳ ವಿಧಾನಸಭೆಗಳಲ್ಲಿ ಹಲವು ನಾಟಕೀಯ ಸನ್ನಿವೇಶಗಳಿಗೆ ಕಾರಣವಾಗುತ್ತಿದ್ದು, ವಿವಾದದ ಸ್ವರೂಪವನ್ನೂ ಪಡೆಯುತ್ತಿವೆ. ಭಾಷಣವನ್ನು ಮಾಡಲು ನಿರಾಕರಿಸುವುದು, ಸರ್ಕಾರ ಸಿದ್ಧಪಡಿಸಿಕೊಟ್ಟ ಭಾಷಣದ ಕೆಲ ಭಾಗಗಳನ್ನು ಓದದೇ ಕೈಬಿಡುವುದು ಇಲ್ಲವೆ ರಾಜ್ಯಪಾಲರೇ ಕೆಲವು ವಾಕ್ಯಗಳು ಮತ್ತು ಪದಗಳನ್ನು ಸೇರ್ಪಡೆ ಮಾಡಿ ಓದುವುದು ಹೊಸ ರೂಢಿಯಾಗಿದೆ. ಗುರುವಾರ ಆರಂಭವಾದ ರಾಜ್ಯ ವಿಧಾನಮಂಡಲದ ವರ್ಷದ ಮೊದಲ ಅಧಿವೇಶನದಲ್ಲಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸರ್ಕಾರ ಸಿದ್ಧಪಡಿಸಿದ ಪೂರ್ಣ ಭಾಷಣ ಓದದೇ, ಕೆಲವು ಸಾಲುಗಳನ್ನು ಮಾತ್ರ ಓದಿ ಸಭೆಯಿಂದ ಹೊರನಡೆದಿದ್ದಾರೆ. ಹಾಗೆ ಮಾಡುವ ಮೂಲಕ ಅವರು ತಮ್ಮ ಮೇಲಿನ ಸಾಂವಿಧಾನಿಕ ಹೊಣೆಯನ್ನು ಕಡೆಗಣಿಸಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ರಾಜ್ಯಪಾಲರ ಈ ವರ್ತನೆಯನ್ನು ಸದನಕ್ಕೆ ಮಾಡಿದ ಅವಮಾನ ಎಂದು ಬಣ್ಣಿಸಿದ್ದಾರೆ. ತಮಿಳುನಾಡಿನಲ್ಲಿ ರಾಜ್ಯಪಾಲರ ಶಿಷ್ಟಾಚಾರಗಳನ್ನು ನಿರಂತರವಾಗಿ ಉಲ್ಲಂಘಿಸುತ್ತಿರುವ ರಾಜ್ಯಪಾಲ ಆರ್.ಎನ್. ರವಿ ಕೂಡ ಭಾಷಣವನ್ನು ಓದಲು ನಿರಾಕರಿಸಿ ಮಂಗಳವಾರವಷ್ಟೇ ಸದನದಿಂದ ಹೊರನಡೆದಿದ್ದರು. ಕೇರಳ ರಾಜ್ಯಪಾಲ ರಾಜೇಂದ್ರ ಅರ್ಲೇಕರ್ ಅವರು ಭಾಷಣದ ಕೆಲವು ಭಾಗಗಳನ್ನು ಕೈಬಿಟ್ಟು, ತಮ್ಮದೇ ವಾಕ್ಯಗಳನ್ನು ಸೇರಿಸಿ ಓದಿದ್ದರು. ಅಲ್ಲಿನ ವಿಧಾನಸಭೆಯು ಈ ಬದಲಾವಣೆಯನ್ನು ತಿರಸ್ಕರಿಸಿ, ಸರ್ಕಾರ ಸಿದ್ಧಪಡಿಸಿದ ಭಾಷಣವನ್ನೇ ದಾಖಲೆಗೆ ಸೇರ್ಪಡೆ ಮಾಡಲು ನಿರ್ಧರಿಸಿತ್ತು.

ಮಸೂದೆಗಳಿಗೆ ಅಂಕಿತ ಹಾಕುವುದು, ಕುಲಪತಿಗಳಂತಹ ಹುದ್ದೆಗಳಿಗೆ ನೇಮಕ ಮಾಡುವುದು ಮತ್ತು ಸಾಂಪ್ರದಾಯಿಕ ಭಾಷಣ ಮಾಡುವ ವಿಷಯಗಳಲ್ಲಿ ಸರ್ಕಾರಗಳು ಮತ್ತು ರಾಜ್ಯಪಾಲರ ನಡುವೆ ಸಂಘರ್ಷಗಳು ಹೆಚ್ಚಾಗುತ್ತಿವೆ. ಕೇಂದ್ರ ಮತ್ತು ರಾಜ್ಯಗಳ ನಡುವೆ ಸಾಂವಿಧಾನಿಕ ಪ್ರತಿನಿಧಿಗಳಾಗಿರಬೇಕಾದ ರಾಜ್ಯಪಾಲರು ಆ ಸಾಂವಿಧಾನಿಕ ಹುದ್ದೆಗಿಂತಲೂ ಹೆಚ್ಚಾಗಿ ರಾಜಕೀಯ ಏಜೆಂಟರಂತೆ ವರ್ತಿಸುತ್ತಿರುವುದೇ ಈ ಎಲ್ಲ ಅಹಿತಕರ ವಿದ್ಯಮಾನಗಳಿಗೆ ಕಾರಣವಾಗಿದೆ. ಬಿಜೆಪಿಯೇತರ ಪಕ್ಷಗಳು ಆಡಳಿತದಲ್ಲಿರುವ ರಾಜ್ಯಗಳಲ್ಲಿ ಮಾತ್ರ ಈ ಸಂಘರ್ಷಗಳು ಕಂಡುಬರುತ್ತಿರುವುದು ರಾಜ್ಯಪಾಲರ ನಡವಳಿಕೆಯ ಹಿಂದಿರುವ ರಾಜಕೀಯಕ್ಕೆ ದ್ಯೋತಕವಾಗಿದೆ.

> ಸಾಂವಿಧಾನಿಕ ಪ್ರತಿನಿಧಿಗಳಾದ ರಾಜ್ಯಪಾಲರು ಕೇಂದ್ರದ ವಕ್ತಾರರಂತೆ ವರ್ತಿಸಬಾರದು. ಬಿಜೆಪಿಯೇತರ ಪಕ್ಷದ ಆಡಳಿತ ಇರುವ ರಾಜ್ಯಗಳಲ್ಲಿನ ರಾಜ್ಯಪಾಲರ ನಡವಳಿಕೆಗಳು ಅವರ ಹುದ್ದೆಯ ಘನತೆ ಕುಗ್ಗಿಸುವಂತಿವೆ.

ರಾಜ್ಯಪಾಲರು ನಡೆಸುವ ಇಂತಹ ವಾರ್ಷಿಕ ಗೊಂದಲಮಯ ಪ್ರದರ್ಶನಗಳು ಅವರಿಗಷ್ಟೇ ಅಲ್ಲ, ಅವರು ಹೊಂದಿರುವ ಸಾಂವಿಧಾನಿಕ ಹುದ್ದೆಯ ಘನತೆಗೂ ಕುಂದು ತರುತ್ತವೆ. ಭಾಷಣ ಓದದಿರುವ ಮೂಲಕ, ಸರ್ಕಾರ ಏನು ಹೇಳಲು ಹೊರಟಿದೆ ಎಂಬುದನ್ನು ಕೇಳಿಸಿಕೊಳ್ಳುವ ಜನಪ್ರತಿನಿಧಿಗಳ ಸಭೆಯ ಹಕ್ಕನ್ನೂ ಅವರು ಕಸಿದಿದ್ದಾರೆ. ಸರ್ಕಾರ ಸಿದ್ಧಪಡಿಸಿದ ಭಾಷಣ ಓದುವ ವಿಷಯದಲ್ಲಿ ಸಂವಿಧಾನವು ರಾಜ್ಯಪಾಲರಿಗೆ ಯಾವುದೇ ಆಯ್ಕೆಯನ್ನು ಕೊಟ್ಟಿಲ್ಲ. ರಾಜ್ಯ ಸರ್ಕಾರವು ತನ್ನ ನೀತಿ–ನಿಲುವುಗಳನ್ನು ವಿವರಿಸುವ ಭಾಷಣದ ನಿಖರವಾದ ಪಠ್ಯವನ್ನು ರಾಜ್ಯಪಾಲರು ಯಥಾವತ್ತಾಗಿ ಓದಬೇಕು ಎನ್ನುವುದು ಸಂವಿಧಾನ ತಜ್ಞರ ಪ್ರತಿಪಾದನೆ. ಕೇಂದ್ರ ಸರ್ಕಾರವನ್ನು ಟೀಕಿಸುವ ಹಕ್ಕು ರಾಜ್ಯ ಸರ್ಕಾರಕ್ಕೆ ಇದ್ದೇ ಇದೆ ಮತ್ತು ಸರ್ಕಾರದ ನಿಲುವುಗಳನ್ನು ರಾಜ್ಯಪಾಲರು ಅನುಮೋದಿಸುವ ಇಲ್ಲವೆ ತಿರಸ್ಕರಿಸುವ ಅಗತ್ಯವಿಲ್ಲ. ರಾಜಕೀಯದಿಂದ ನಿರ್ದೇಶಿತವಾದ ಮತ್ತು ಚುನಾಯಿತ ರಾಜ್ಯ ಸರ್ಕಾರದ ದಾರಿಗೆ ಅಡ್ಡಿಯಾಗುವ ರಾಜ್ಯಪಾಲರ ಕಾರ್ಯವೈಖರಿಗೆ ಒಕ್ಕೂಟ ವ್ಯವಸ್ಥೆಯಲ್ಲಿ ಯಾವುದೇ ಸ್ಥಾನವಿಲ್ಲ. ಹಾಗೆಯೇ ರಾಜ್ಯಪಾಲರನ್ನು ಅಡ್ಡಗಟ್ಟಲು ಮುಂದಾದ ಆಡಳಿತ ಪಕ್ಷವಾದ ಕಾಂಗ್ರೆಸ್‌ನ ಕೆಲವು ಶಾಸಕರ ವರ್ತನೆಯೂ ಸದನಕ್ಕೆ ಶೋಭೆ ತರುವಂಥದ್ದಲ್ಲ. ಸಾಂವಿಧಾನಿಕ ಹುದ್ದೆಯಲ್ಲಿದ್ದವರು ಸದನಕ್ಕೆ ಬಂದಾಗ ಅವರನ್ನು ಗೌರವಯುತವಾಗಿ ನಡೆಸಿಕೊಳ್ಳುವುದು ಪ್ರತಿಯೊಬ್ಬ ಸದಸ್ಯರ ಹೊಣೆ. ಈ ವಿಷಯದಲ್ಲಿ ಆಡಳಿತ ಪಕ್ಷ ಎಡವಿದೆ ಎಂದೇ ಹೇಳಬೇಕಾಗುತ್ತದೆ. ವರ್ಷದ ಮೊದಲ ಅಧಿವೇಶನದಲ್ಲಿ ರಾಜ್ಯಪಾಲರಿಂದ ಭಾಷಣ ಮಾಡಿಸುವ ಸಂಪ್ರದಾಯವನ್ನು ಕೈಬಿಡಲು ಸಂವಿಧಾನ ತಿದ್ದುಪಡಿಯ ಅಗತ್ಯವನ್ನು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಪ್ರತಿಪಾದಿಸಿದ್ದಾರೆ. ರಾಜ್ಯಪಾಲರಿಂದ ಹೀಗೆ ಭಾಷಣ ಮಾಡಿಸುವುದು 'ಅರ್ಥಹೀನ ಸಂಪ್ರದಾಯ' ಎಂದು ಮೂರೂವರೆ ದಶಕಗಳಷ್ಟು ಹಿಂದೆಯೇ ಅಭಿಪ್ರಾಯಪಟ್ಟಿದ್ದ ಅಂದಿನ ರಾಷ್ಟ್ರಪತಿ ಆರ್. ವೆಂಕಟರಾಮನ್, ಈ ಸಂಪ್ರದಾಯಕ್ಕೆ ವಿದಾಯ ಹೇಳುವಂತೆ ಸಲಹೆಯನ್ನೂ ನೀಡಿದ್ದರು. ಆ ಸಲಹೆಯನ್ನು ಪರಿಗಣಿಸಲು ಇದು ಸಕಾಲ. ಏಕೆಂದರೆ, ಇದರಿಂದ ಪ್ರತಿವರ್ಷ ರಾಜ್ಯಪಾಲರು ರೂಢಿ ಮತ್ತು ಸಂಪ್ರದಾಯ ಮುರಿಯುವ ನಾಟಕೀಯ ಸನ್ನಿವೇಶ ಸೃಷ್ಟಿಸದಂತೆ ತಡೆಯಲು ಸಾಧ್ಯವಿದೆ.

ಚಾಟಿ

ರಾಜ್ಯಪಾಲರು ಏಜೆಂಟ್‌ಗಳಲ್ಲ



ತಮಗೆ ಮನ್ನಣೆ ನೀಡದ ದಕ್ಷಿಣ ಭಾರತದ ರಾಜ್ಯಗಳ ಜನತೆಯನ್ನು ಪಳಗಿಸಲು ಬಿಜೆಪಿ ಹೈಕಮಾಂಡ್ ನೇಮಿಸಿದ ಏಜೆಂಟ್‌ಗಳ ರೀತಿ ಕೇರಳ, ತಮಿಳುನಾಡು, ಕರ್ನಾಟಕದ ರಾಜ್ಯಪಾಲರು ನಡೆದುಕೊಳ್ಳುತ್ತಿದ್ದಾರೆ.

ಮುನೀರ್ ಕಾಟಿಪಳ್ಳ, ಸಾಮಾಜಿಕ ಹೋರಾಟಗಾರ, 'ಫೇಸ್‌ಬುಕ್'ನಿಂದ

ಕಿಡಿನುಡಿ

ಎನ್‌ಇಪಿ ರದ್ದತಿ, ತೆರಿಗೆ ಹಂಚಿಕೆ, ಅನುದಾನ ವಿಚಾರದಲ್ಲಿ ಕಾಂಗ್ರೆಸ್ ಸರ್ಕಾರ ರಾಜ್ಯಪಾಲರ ಭಾಷಣದ ಪಠ್ಯದಲ್ಲಿ ಹಸಿ ಸುಳ್ಳುಗಳನ್ನು ಸೇರಿಸಿದೆ. ಸುಳ್ಳು ಹೇಳದಿರುವುದು ರಾಜ್ಯಪಾಲರ ಪರಮಾಧಿಕಾರ. ಇದಕ್ಕೆ ಆಕ್ರೋಶ ವ್ಯಕ್ತಪಡಿಸುವುದು ರಾಜಕೀಯ ಹತಾಶೆಯಷ್ಟೆ.

ಎನ್. ರವಿಕುಮಾರ್, ಬಿಜೆಪಿ ವಿಧಾನ ಪರಿಷತ್ ಸದಸ್ಯ

25 ವರ್ಷಗಳ ಹಿಂದೆ

ಮಂಗಳವಾರ, 23-1-2001

• ಬೆಂಗಳೂರು-ಮೈಸೂರು ಕಾರಿಡಾರ್ ಕಾಮಗಾರಿ ಮುಂದಿನ ತಿಂಗಳು ಆರಂಭ

ಬೆಂಗಳೂರು, ಜ. 22– ಬೆಂಗಳೂರು-ಮೈಸೂರು ಕಾರಿಡಾರ್ ಹೆದ್ದಾರಿ ಕಾಮಗಾರಿ ಮುಂದಿನ ತಿಂಗಳು ಪ್ರಾರಂಭವಾಗಲಿದ್ದು, ಈಗಿರುವ ಹೆದ್ದಾರಿಯನ್ನು ಅಂತರರಾಷ್ಟ್ರೀಯ ಮಟ್ಟಕ್ಕೆ ಏರಿಸಲಾಗುತ್ತದೆ ಎಂದು ಮುಖ್ಯಮಂತ್ರಿ ಎಸ್.ಎಂ. ಕೃಷ್ಣ ಇಂದು ಇಲ್ಲಿ ತಿಳಿಸಿದರು.

ಎಂಟೂವರೆ ಕೋಟಿ ರೂಪಾಯಿ ವೆಚ್ಚದ ಶಿವಾಜಿನಗರದ ಅತ್ಯಾಧುನಿಕ ಬಸ್ ನಿಲ್ದಾಣವನ್ನು ಉದ್ಘಾಟಿಸಿ ಅವರು, 'ಈಗಿರುವ ಬೆಂಗಳೂರು–ಮೈಸೂರು ಹೆದ್ದಾರಿಯನ್ನು ಅಂತರ-ರಾಷ್ಟ್ರೀಯಮಟ್ಟದ ರಸ್ತೆಯನ್ನಾಗಿಸಲು ಸಮಗ್ರ ಯೋಜನೆಯೊಂದನ್ನು ಸರ್ಕಾರ ರೂಪಿಸಿದೆ' ಎಂದು ಪ್ರಕಟಿಸಿದರು.

• ಉಪಗ್ರಹ ಸೇವೆ ಬಳಕೆಗೆ ಇಸ್ರೊ ಜತೆ ಒಪ್ಪಂದ

ಬೆಂಗಳೂರು, ಜ. 22– ಜನ ಸಾಮಾನ್ಯರ ಜೀವನ ಗುಣಮಟ್ಟ ಹೆಚ್ಚಿಸುವ ಉದ್ದೇಶದಿಂದ ಉಪಗ್ರಹ ಸೇವೆಯನ್ನು ಬಳಸಿಕೊಳ್ಳಲು ನಿರ್ಧರಿಸಿರುವ ರಾಜ್ಯ ಸರ್ಕಾರ, ಇಂದು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ (ಇಸ್ರೊ) ಜೊತೆ ಐದು ಒಪ್ಪಂದಗಳಿಗೆ ಸಹಿ ಹಾಕಿತು.

75 ವರ್ಷಗಳ ಹಿಂದೆ

ಮಂಗಳವಾರ, 23-1-1951

• ಬೆಂಗಳೂರಿನಲ್ಲಿ ಇಳಿದ ವಿಮಾನ ಜಖಂ

ಬೆಂಗಳೂರು, ಜ. 22– ಇಂದು ಕಲ್ಕತ್ತದಿಂದ ಬೆಂಗಳೂರಿಗೆ ಬಂದ 'ಏರ್‌ವೇಸ್ ಇಂಡಿಯಾ' ವಿಮಾನವೊಂದು ವಿಮಾನ ನಿಲ್ದಾಣದಲ್ಲಿ ಕೆಳಗಿಳಿಯುವಾಗ ನೆಲಕ್ಕೆ ತಾಕಿದ್ದರಿಂದ ಆ ವಿಮಾನಕ್ಕೆ ಸ್ವಲ್ಪ ಜಖಂ ಆಗಿದೆ. ವಿಮಾನದಲ್ಲಿದ್ದ ಯಾರಿಗೂ ಅಪಾಯವಾಗಿಲ್ಲ.

ಮೈಸೂರಿನ ಮಾಜಿ ದಿವಾನರಾದ ಸರ್ ಆರ್ಕಾಟ್ ರಾಮಸ್ವಾಮಿ ಮೊದಲಿಯಾರ್ ಅವರೂ ಆ ವಿಮಾನದಲ್ಲಿ ಇದ್ದರು.

• ಸಿಂಗಪುರದಲ್ಲಿ ಭಾರತದ ಯುವಕರಿಗೆ ಶಿಕ್ಷೆ

ಸಿಂಗಪುರ, ಜ. 22– 'ಬರ್ಥಾ ಹರ್ಟೋಗ್' ವ್ಯವಹಾರದ ಬಗ್ಗೆ ಸಿಂಗಪುರ ಪಟ್ಟಣದಲ್ಲಿ ಡಿಸೆಂಬರ್ ತಿಂಗಳಲ್ಲಿ ನಡೆದ ದೊಂಬಿಯಲ್ಲಿ ನ್ಯಾಯಬಾಹಿರವಾದ ಸಭೆಯ ಸದಸ್ಯರಾದ್ದರಿಂದ ಇಬ್ಬರು ಭಾರತೀಯ ಯುವಕರನ್ನು ಶಿಕ್ಷೆಗೆ ಒಳಪಡಿಸಲಾಗಿದೆ.

ರಂಗಸ್ವಾಮಿ ಮತ್ತು ಸಿ. ಕೃಷ್ಣನ್ ಎಂಬ ಇಬ್ಬರು ಯುವಕರಿಗೆ ಕ್ರಮವಾಗಿ ನಾಲ್ಕು ವರ್ಷ ಮತ್ತು ತಿಂಗಳ ಕಠಿಣ ಶಿಕ್ಷೆ ವಿಧಿಸಲಾಗಿದೆ.

ವಿಶ್ವಗುರುವಿನ ಬಿಕ್ಕಟ್ಟುಗಳು

ವಿಶ್ಲೇಷಣೆ

ಪುರುಷೋತ್ತಮ ಬಿಳಿಮಲೆ

> ವರ್ತಮಾನದ ಭಾರತದಲ್ಲಿ ಚಾಲ್ತಿಯಲ್ಲಿರುವ ರಂಗುರಂಗಿನ ಕನಸುಗಳಲ್ಲಿ 'ವಿಶ್ವಗುರು' ಪರಿಕಲ್ಪನೆಯೂ ಒಂದು. ಗುರಿ ಚೆನ್ನಾಗಿಯೇ ಇದೆ. ಸಮಸ್ಯೆ ಇರುವುದು, ವಿಶ್ವಗುರು ಆಗುವುದಕ್ಕೆ ಅಗತ್ಯವಾದ ಇಂಧನವನ್ನು ಭೂತಕಾಲದಲ್ಲಿ ಹುಡುಕುತ್ತಿರುವುದರಲ್ಲಿ ಹಾಗೂ ಸನಾತನ ಧರ್ಮದ ವ್ಯಾಖ್ಯಾನಗಳನ್ನು ರಾಜಕೀಯಗೊಳಿಸಿರುವುದರಲ್ಲಿ.

'ಭಾರತವನ್ನು ವಿಶ್ವಗುರುವನ್ನಾಗಿ ಮಾಡುವುದು ನಮ್ಮ ಗುರಿ' ಎಂದು ಬಿಜೆಪಿ–ಆರ್‌ಎಸ್‌ಎಸ್ ಒಕ್ಕೂಟವು ಬಹಳ ಕಾಲದಿಂದಲೂ ಹೇಳುತ್ತಲೇ ಬಂದಿದೆ. ಆಕರ್ಷಕವಾದ ಈ ಮಾತಿಗೆ ದೊಡ್ಡ ಸಂಖ್ಯೆಯ ಭಾರತೀಯರು ಮಾರುಹೋಗಿದ್ದಾರೆ. ಬಹಳ ಜನರು ಈಗಾಗಲೇ ಭಾರತವು ವಿಶ್ವಗುರು ಆಗಿಬಿಟ್ಟಿದೆ ಎಂದು ನಂಬಿದ್ದಾರೆ. ನಮ್ಮ ದೇಶವು ಇಡೀ ಜಗತ್ತನ್ನು ಸುಧಾರಿಸುವ ಗುರು ಆಗುವುದಾದರೆ, ಅದು ಬೇಡ ಎಂದು ಹೇಳುವ ಯಾವ ಭಾರತೀಯನೂ ಇರಲಾರ.

ಭಾರತವನ್ನು ವಿಶ್ವಗುರುವನ್ನಾಗಿ ಪರಿವರ್ತಿಸುವ ತನ್ನ ಕನಸಿನ ಬಗ್ಗೆ ಬಿಜೆಪಿಯು 2014ರ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಕೆಲವು ಮಾತುಗಳನ್ನು ಹೇಳಿದೆ. ಅದರಲ್ಲಿ ಬಹಳ ಮುಖ್ಯವಾದದ್ದೆಂದರೆ, 'ಭಾರತದ ಶಕ್ತಿ ಅದರ ಪ್ರಾಚೀನ ಬುದ್ಧಿವಂತಿಕೆ ಮತ್ತು ಪರಂಪರೆಯಲ್ಲಿದೆ' ಎಂಬ ಮಾತು. ಪ್ರಧಾನಿ ಮೋದಿಯವರು ತಮ್ಮ ಮೊದಲ ಸ್ವಾತಂತ್ರ್ಯ ದಿನಾಚರಣೆಯ ಭಾಷಣದಲ್ಲಿ (2014) 'ನನ್ನ ತಾಯಿ ಭಾರತವನ್ನು ವಿಶ್ವಗುರುವಾಗಿ ಕೂರಿಸಲಾಗುವುದು' ಎಂದು ಹೇಳಿದ್ದರು. 'ಭಾರತವನ್ನು ವಿಶ್ವಗುರುವನ್ನಾಗಿ ಮಾಡುವುದು ನಮ್ಮ ಗುರಿ' ಎಂದು ಮೋಹನ ಭಾಗವತರು ಹೇಳುತ್ತಲೇ ಇದ್ದಾರೆ. ಈ ಕನಸಿಗೆ ಪೂರಕವಾಗಿ ಹಲವು ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಜಾರಿಗೆ ತಂದಿದೆ. 2023ರಲ್ಲಿ ದೆಹಲಿಯಲ್ಲಿ ನಡೆದ ಜಿ–20 ಶೃಂಗಸಭೆಯಲ್ಲಿ ಅಂತರರಾಷ್ಟ್ರೀಯ ನಾಯಕರಿಗೆ 'ಇಂಡಿಯಾ' ಎಂಬ ಪದದ ಬದಲು 'ಭಾರತ' ಎಂಬ ಹಳೆಯ ಹೆಸರನ್ನು ಪರಿಚಯಿಸಲಾಯಿತು. ಋಷಿವಾಕ್ಯಗಳನ್ನು ಉಲ್ಲೇಖಿಸುವ ಮೂಲಕ ಪ್ರಧಾನಮಂತ್ರಿ ಅವರು ಭಾರತದ ಹಳೆಯ ನಾಗರಿಕತೆ ಎಷ್ಟು ಭವ್ಯವಾಗಿದೆ ಎಂಬುದನ್ನು ಜಗತ್ತಿಗೆ ತಿಳಿಸಲು ಪ್ರಯತ್ನಿಸುತ್ತಲೇ ಇದ್ದಾರೆ. ಮೆಕಾಲೆಯನ್ನು ಖಳನಾಯಕನನ್ನಾಗಿ ಮಾಡಲಾಗಿದೆ. ಭಾರತದ ಪ್ರಾಚೀನ ಬುದ್ಧಿವಂತಿಕೆಯು ವೈಜ್ಞಾನಿಕವೂ ಆಗಿದೆ ಎಂಬ ನಂಬಿಕೆಯಲ್ಲಿ ಅದನ್ನು ವರ್ತಮಾನಕ್ಕೆ ಪರಿಚಯಿಸಲು ಭಾರತೀಯ ವಿಜ್ಞಾನ ಸಮ್ಮೇಳನವನ್ನು ಶಂಖ ಊದಿ ಆರಂಭಿಸಲಾಯಿತು. ಅಲ್ಲಿ ಸೇರಿದ್ದ ವಿಜ್ಞಾನಿಗಳಿಗೆ 'ಗಣಪತಿಗೆ ತಲೆ ಜೋಡಿಸಿದ್ದು ನಮ್ಮಲ್ಲಿದ್ದ ಪ್ಲಾಸ್ಟಿಕ್ ಸರ್ಜರಿಗೆ ಉದಾಹರಣೆ' ಎಂದು ಹೇಳಲಾಯಿತು. ರಾಮಾಯಣ ಕಾಲದಲ್ಲಿ ವಿಮಾನ ಇತ್ತು, ಹಸುವಿನ ಸಗಣಿ, ಮೂತ್ರ, ಹಾಲು ಇತ್ಯಾದಿ ಬಳಸಿ ಮಾಡಿದ ಪಂಚಗವ್ಯದಿಂದ ಕ್ಯಾನ್ಸರ್ ಗುಣಪಡಿಸಬಹುದು, ಎಂದೆಲ್ಲಾ ಪ್ರಚಾರ ಮಾಡಲಾಯಿತು. ಅಯೋಧ್ಯೆಯಲ್ಲಿ ರಾಮಮಂದಿರ ನಿರ್ಮಾಣ, ವಾರಾಣಸಿಯಲ್ಲಿ ಪ್ರಧಾನಿಗಳ ಗಂಗಾರತಿ, ಕೇದಾರನಾಥದಲ್ಲಿ ಪ್ರಧಾನಿಗಳ ಗುಹಾಧ್ಯಾನ, ಸೋಮನಾಥಪುರದಲ್ಲಿನ ಡಮರು ಯಾತ್ರೆ – ಇತ್ಯಾದಿಗಳನ್ನು ಸನಾತನ ಧರ್ಮದ ಮೇಲಣ ನಂಬಿಕೆಯನ್ನು ಗಟ್ಟಿಗೊಳಿಸಲು ಸಹಕಾರಿಯಾಗುವಂತೆ ಪ್ರಸ್ತುತಪಡಿಸಲಾಯಿತು. ಇಂಥ ಪ್ರಕ್ರಿಯೆಗಳನ್ನು ಬಲಪಡಿಸಲು ಅನಿವಾಸಿ ಭಾರತೀಯರೂ ಪ್ರಯತ್ನಿಸುತ್ತಿದ್ದಾರೆ.

ಕಳೆದ ಅನೇಕ ವರ್ಷಗಳ ಈ ಪ್ರಯತ್ನಗಳು ಭಾರತವನ್ನು ವಿಶ್ವಗುರುವನ್ನಾಗಿಸಲು ಎಷ್ಟು ಸಹಕರಿಸಿವೆ ಎಂಬ ಪ್ರಶ್ನೆಯನ್ನು ನಾವೀಗ ಕೇಳಿಕೊಳ್ಳಬಹುದು. ಭಾರತವನ್ನು 'ಗುರು' ಎಂದು ಒಪ್ಪಿಕೊಳ್ಳಲು ನಮಗೆ ಕೆಲವಾದರೂ ಶಿಷ್ಯ ದೇಶಗಳು ಬೇಕು. ಆದರೆ, ವಾಸ್ತವದಲ್ಲಿ ಭಾರತದ ವಿಫಲ ವಿದೇಶಾಂಗ ನೀತಿಯಿಂದಾಗಿ ನಮಗೆ ಗೆಳೆಯರಾಗಿದ್ದ ದೇಶಗಳೇ ಈಗ ದೂರ ಸರಿದಿವೆ. ಪ್ರಧಾನಮಂತ್ರಿ ಅವರು ವಿಶ್ವದ ಅನೇಕ ದೇಶಗಳಿಗೆ ಭೇಟಿ ನೀಡಿದ್ದಾರೆ. ಆದರೆ, ಅಂಥ ದೇಶಗಳು ಭಾರತವನ್ನು ತಮ್ಮ 'ಗುರು' ಎಂದು ತಪ್ಪಿಯೂ ಹೇಳಿಲ್ಲ. ಆಯಕಟ್ಟಿನ ಜಾಗದಲ್ಲಿರುವ ಬಾಂಗ್ಲಾ ಮತ್ತು ನೇಪಾಳ ಇವತ್ತು ನಮ್ಮ ಜೊತೆ ಇಲ್ಲ. ಮನಮೋಹನ್ ಸಿಂಗ್ ಅವರನ್ನು ಅಮೆರಿಕದ ಆಗಿನ ಅಧ್ಯಕ್ಷರಾಗಿದ್ದ ಬರಾಕ್ ಒಬಾಮ ಅವರು 'ತಮ್ಮ ಗುರು' ಎಂದು ಕರೆದಿದ್ದರು. ಅದೇ ಅಮೆರಿಕ ಇವತ್ತು ಭಾರತವನ್ನು ಅವಮಾನಿಸುತ್ತಿದೆ. ನಮ್ಮನ್ನು 'ಗುರು' ಎಂದು ಬೇರೆ ದೇಶಗಳು ತಾವಾಗಿಯೇ ಒಪ್ಪಿಕೊಳ್ಳುವಂತೆ ನಾವು ಬೆಳೆಯಬೇಕು. ಅದರ ಬದಲು ನಾವೇ 'ವಿಶ್ವಗುರು' ಎಂದು ಘೋಷಿಸಿಕೊಂಡರೆ, ಅದನ್ನು ಒಂದು ಪುಟ್ಟ ದೇಶವೂ ಒಪ್ಪಿಕೊಳ್ಳಲಾರದು. ರಾಷ್ಟ್ರೀಯಭಾವ ನಮಗೆ ಮಾತ್ರವಲ್ಲ, ಎಲ್ಲ ದೇಶಗಳಿಗೂ ಇರುತ್ತದೆ.

ರಾಜಕೀಯಗೊಳಿಸಲಾದ ಸನಾತನ ಧರ್ಮದ ಅಪವ್ಯಾಖ್ಯಾನಗಳನ್ನು ವಿಶ್ವದ ವಿದ್ವತ್ ಲೋಕವೂ ಅಂಗೀಕರಿಸಿಲ್ಲ. ಬಹುಶಃ ಭಾರತವು ವಿಶ್ವಗುರು ಆಗಲು ಬೇಕಾದ ಶಕ್ತಿಯನ್ನು ಭೂತಕಾಲದಲ್ಲಿ ಹುಡುಕುತ್ತಿರುವುದೇ ಈ ದಯನೀಯ ವೈಫಲ್ಯಕ್ಕೆ ಕಾರಣವಿರಬೇಕು. ಇದ್ದುದರಲ್ಲಿ ಭಾರತದ ಯೋಗಪದ್ಧತಿ ಬಹಳ ದೇಶಗಳಲ್ಲಿ ಜನಪ್ರಿಯವಾಗಿದೆ.

ಸನಾತನ ಧರ್ಮದಲ್ಲಿ ಇತ್ತು ಎನ್ನಲಾದ ಅಂಶಗಳನ್ನು ವರ್ತಮಾನಕ್ಕೆ ಒಗ್ಗಿಸಿ, ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಭಾರತ ಇದುವರೆಗೆ ಯಶಸ್ವಿಯಾಗಿಲ್ಲ. ಅದರ ಬದಲು, ಸರ್ಕಾರ ಹೇರಿದ ಅಪಕಲ್ಪನೆಗಳಿಗೆ ಬಲಿಯಾಗಿರುವ ನಮ್ಮ ಶಿಕ್ಷಣ ಸಂಸ್ಥೆಗಳು ಹಾಸ್ಯಾಸ್ಪದವಾಗುತ್ತಿವೆ. ಎರಡು ಸಾವಿರ ವರ್ಷಗಳಷ್ಟು ಹಿಂದೆ, ಜಾಗತಿಕ ಶಿಕ್ಷಣ ವ್ಯವಸ್ಥೆ ಅಸ್ತಿತ್ವದಲ್ಲಿರದ ಕಾಲದಲ್ಲಿ ಚೀನಾ, ಪರ್ಷಿಯಾ, ಮತ್ತು ಆಗ್ನೇಯ ಏಷ್ಯಾಗಳಿಂದ ನಳಂದಾ, ತಕ್ಷಶಿಲೆ, ಮತ್ತು ವಲ್ಲಭಿಗೆ ಗಣಿತ, ವೈದ್ಯಕೀಯ, ಕಾನೂನು, ತತ್ತ್ವಶಾಸ್ತ್ರ ಮತ್ತಿತರ ವಿಷಯಗಳ ಅಧ್ಯಯನಕ್ಕೆ ವಿದ್ಯಾರ್ಥಿಗಳು ಬರುತ್ತಿದ್ದರು. ಆದರೆ, ಇಂದಿನ ಭಾರತವು ಅಂತರರಾಷ್ಟ್ರೀಯ ವಿದ್ಯಾರ್ಥಿಗಳನ್ನು ಆಕರ್ಷಿಸಲು ವಿಫಲವಾಗಿದೆ. ಸಂಕೀರ್ಣ ವೀಸಾ ಪ್ರಕ್ರಿಯೆಗಳು, ವಿಶ್ವವಿದ್ಯಾಲಯಗಳ ಮೇಲೆ ರಾಜಕೀಯ ನಿಯಂತ್ರಣ, ಅಭಿವ್ಯಕ್ತಿ ಸ್ವಾತಂತ್ರ್ಯದ ಮೇಲೆ ನಿರಂತರ ಹಲ್ಲೆ, ಸಾರ್ವಜನಿಕ ವಲಯಗಳಲ್ಲಿ ಹೆಚ್ಚುತ್ತಿರುವ ದ್ವೇಷಭಾಷಣಗಳು, ಕೋಮುವಾದ, ಇತ್ಯಾದಿ ಕಾರಣಗಳಿಂದ ವಿದ್ಯಾರ್ಥಿಗಳು ಭಾರತಕ್ಕೆ ಬರಲು ಹೆದರುತ್ತಿದ್ದಾರೆ. ಜ್ಞಾನದ ಬಗೆಗಣ ಭಾರತೀಯರ ತಿಳಿವಳಿಕೆಯು ಬಹಳ ಸೀಮಿತ ಎಂಬ ಭಾವನೆ ಅಂತರರಾಷ್ಟ್ರೀಯವಾಗಿ ಬೆಳೆಯುತ್ತಿದೆ.

ವಿವೇಕಾನಂದರು 'ಮೈ ಮಾಸ್ಟರ್' ಪ್ರಬಂಧದಲ್ಲಿ ಗುರುವಾಗಲು ಮೂರು ವಿಷಯಗಳು ಅವಶ್ಯಕ ಎಂದು ಹೇಳಿದ್ದಾರೆ. ಮೊದಲನೆಯದು, ಜನರ ಬಗ್ಗೆ ನೀವು ನಿಜವಾಗಿಯೂ ಅನುಕಂಪ ಮತ್ತು ಸಹಾನುಭೂತಿ ಹೊಂದಿದ್ದೀರಾ ಎಂದು ಕೇಳಿಕೊಳ್ಳುವುದು; ಎರಡನೆಯದು, ಹಳೆಯ ವಿಚಾರಗಳಿಂದ ಚಿನ್ನವನ್ನು ತೆಗೆಯಬಲ್ಲಿರಾ ಎಂದು ಪರಿಶೀಲಿಸಿಕೊಳ್ಳುವುದು; ಮೂರನೆಯದು, ನಿಮ್ಮ ನಿಜವಾದ ಉದ್ದೇಶವೇನು? ಅಧಿಕಾರದ ದಾಹದಿಂದ ನಿಮ್ಮ ಉದ್ದೇಶಗಳು ಪ್ರೇರಿತವಾಗಿಲ್ಲ ಎಂಬುದು ಖಚಿತವಾಗಿದೆಯೇ ಎಂಬ ಪ್ರಶ್ನೆಗಳಿಗೆ ಪ್ರಾಮಾಣಿಕ ಉತ್ತರ ನೀಡುವುದು. ಇವುಗಳಿಗೆ ಸರಿಯಾದ ಉತ್ತರ ಕಂಡುಕೊಂಡರೆ ನೀವು ಮನುಕುಲದ ಗುರುವಾಗಬಲ್ಲಿರಿ ಎಂದರು ವಿವೇಕಾನಂದರು. ಅಲ್ಪಸಂಖ್ಯಾತರ ಮೇಲೆ ವಿನಾಕಾರಣ ಆಕ್ರಮಣ ಮಾಡುವ, ಮಹಿಳೆಯರ ಮೇಲೆ ಅತ್ಯಾಚಾರ ನಡೆಸುವ, ದಲಿತರಿಗೆ ಬೆಂಕಿ ಹಚ್ಚುವ ಜನರು ನಮ್ಮಲ್ಲಿ ಇರುವವರೆಗೂ ವಿವೇಕಾನಂದರು ಹೇಳುವ 'ಗುರುತ್ವ' ನಮಗೆ ದಕ್ಕದು. ಇದರರ್ಥ, ಭಾರತಕ್ಕೆ ವಿಶೇಷವಾದ ಶಕ್ತಿಗಳಿಲ್ಲ ಎಂದರ್ಥವಲ್ಲ. ಬೇರೆ ಯಾವುದೇ ದೇಶಕ್ಕಿಲ್ಲದ ಭಾಷಾ ವೈವಿಧ್ಯ, ಧಾರ್ಮಿಕ ವೈವಿಧ್ಯ, ಆಹಾರ ವೈವಿಧ್ಯ, ಸಮುದಾಯ ವೈವಿಧ್ಯ, ಮತ್ತು ಭೌಗೋಳಿಕ ವೈವಿಧ್ಯ ಭಾರತಕ್ಕಿದೆ. ಭಾರತದ ಈ ಗುಣಗಳು ನಾಶವಾಗದಂತೆ ಬೆಳೆಯುವ ರಾಷ್ಟ್ರೀಯ ವ್ಯವಸ್ಥೆಯೊಂದು ನಿರ್ಮಾಣವಾದರೆ, ಅದು ಜಗತ್ತಿಗೊಂದು ಹಾದಿ ತೋರಿಸಬಹುದು. ಶ್ರೇಷ್ಠತೆಯ ವ್ಯಸನದ ಧಾರ್ಮಿಕ ರಾಷ್ಟ್ರೀಯತೆಯು ಇವತ್ತಿನ ಜಗತ್ತಿಗೆ ಮಾರ್ಗದರ್ಶನ ಮಾಡಲಾರದು.

ಜಗತ್ತು ನಮ್ಮ ದೇಶವನ್ನು ಗುರುವಾಗಿ ಸ್ವೀಕರಿಸಬೇಕಾದರೆ, ಸ್ಥಳೀಯ ಸಂಸ್ಕೃತಿಗಳು ತಮ್ಮ ಅಸ್ತಿತ್ವವನ್ನು ಉಳಿಸಿಕೊಂಡೇ ರಾಷ್ಟ್ರೀಯ ಪರಿಕಲ್ಪನೆಯನ್ನು ಸೃಜಿಸುವ ರಾಜಕೀಯ ವ್ಯವಸ್ಥೆಯನ್ನು ಆಗುಮಾಡಬೇಕು. ಅಲ್ಪಸಂಖ್ಯಾತರಿಗೆ ಅಧಿಕಾರದಲ್ಲಿ ನ್ಯಾಯಯುತ ಪಾಲನ್ನು ನೀಡುವ ಮಾರ್ಗವನ್ನು ಕಂಡುಕೊಳ್ಳಬೇಕು. ಬಂಡವಾಳಶಾಹಿ ಮತ್ತು ಸಮಾಜವಾದದ ಸಮತೋಲನವುಳ್ಳ ಮಾನವಾಭ್ಯುದಯ ಕೇಂದ್ರಿತ ಅಭಿವೃದ್ಧಿಯ ಪ್ರಯತ್ನವನ್ನು ಭಾರತ ಬಿಟ್ಟುಬಿಡಬಾರದು. ಜಗತ್ತಿನಾದ್ಯಂತ ಜನರು ಸರ್ವಾಧಿಕಾರಿ ಸರ್ಕಾರಗಳ ಅಡಿಯಲ್ಲಿ ಬಳಲುತ್ತಿರುವಾಗ, 'ಭಾರತವು ಪ್ರಜಾಪ್ರಭುತ್ವದ ತಾಯಿ' ಎಂದು ಘೋಷಿಸಿದ ಪ್ರಧಾನಿಗಳು ತಮ್ಮ ದೇಶದಲ್ಲೇ ಜನತಂತ್ರವನ್ನು ಬಿಕ್ಕಟ್ಟಿಗೆ ತಳ್ಳಬಾರದು.

ಭಾರತವು ವಿದೇಶಿ ಸಂಸ್ಥೆಗಳು ಮಾಡುವ ಟೀಕೆಗಳನ್ನು ಸ್ವೀಕರಿಸುವ ಉದಾರತೆ ತೋರಿಸಬೇಕು. ಟೀಕಿಸುವವರನ್ನು ಜೈಲಿಗೆ ತಳ್ಳುವುದನ್ನು ಕೈಬಿಡಬೇಕು. ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳನ್ನು ನಿರ್ಬಂಧಿಸುವುದು, ವಿದೇಶಿ ಅನುದಾನಿತ ಸಂಸ್ಥೆಗಳಿಗೆ ಕಿರುಕುಳ ನೀಡುವುದು, ಅಂತರರಾಷ್ಟ್ರೀಯ (ಆಮ್ನೆಸ್ಟಿ ಇಂಟರ್‌ನ್ಯಾಷನಲ್ ಮತ್ತು ಹ್ಯೂಮನ್ ರೈಟ್ಸ್ ವಾಚ್‌ನಂತಹ) ಸಂಸ್ಥೆಗಳ ಬಗ್ಗೆ ಲಘುವಾಗಿ ಮಾತಾಡುವುದು ಇತ್ಯಾದಿ ಘಟನೆಗಳು ದೇಶದ ಘನತೆಯನ್ನು ಹೆಚ್ಚಿಸಲಾರವು. ಅಂತರರಾಷ್ಟ್ರೀಯ ಮೌಲ್ಯಮಾಪನಗಳನ್ನು ಒಪ್ಪದೆ, 'ನಮಗೆ ನಮ್ಮದೇ ಮಾನದಂಡಗಳಿವೆ' ಎಂದು ವಾದಿಸುವವರು ವಿಶ್ವಗುರುವಾಗುವ ಕನಸು ಕಾಣಬಾರದು.

ಕೊನೆಯದಾಗಿ, ಗಾಂಧೀಜಿ ಮತ್ತು ಅಂಬೇಡ್ಕರರ ಪ್ರಾಮಾಣಿಕತೆ, ದಾರ್ಶನಿಕತೆಯನ್ನು ಭಾರತವು ಎಲ್ಲಿಯೂ ಯಾವುದೇ ಕಾರಣಕ್ಕೂ ಬಿಟ್ಟುಕೊಡಬಾರದು. ಗಾಂಧೀಜಿಯವರ ಜಾಗತಿಕ ಮಹತ್ವವು ಅವರ ಸತ್ಯ ಮತ್ತು ಅಹಿಂಸಾತತ್ತ್ವದ ಮೇಲೆ ನಿಂತಿದೆ. ಜಗತ್ತಿನಲ್ಲಿ ಹೆಚ್ಚು ಶಾಂತಿ ಮತ್ತು ನ್ಯಾಯವನ್ನು ತುಂಬಲು ನಮಗೆ ಗಾಂಧೀಜಿ ಬೇಕು. ಅಂಬೇಡ್ಕರ್ ದೀನದಲಿತರ ಹಕ್ಕುಗಳಿಗಾಗಿ ಹೋರಾಡಿದವರು. ಸಾಮಾಜಿಕ ಸಮಾನತೆ ಮತ್ತು ನ್ಯಾಯದ ಪ್ರವರ್ತಕರಾಗಿ ಮಾನವನ ಘನತೆಯನ್ನು ಎತ್ತಿ ಹಿಡಿದವರು. ಬೌದ್ಧ ಧರ್ಮದ ಪುನರುಜ್ಜೀವನಕಾರರಾಗಿ ವಿಶ್ವಪ್ರಸಿದ್ಧರು. ಅವರ ದೂರದೃಷ್ಟಿಯ ಚಿಂತನೆಗಳು, ಮಾನವ ಹಕ್ಕುಗಳ ಹೋರಾಟಗಳು ಜಾಗತಿಕ ಸಮೂಹಕ್ಕೆ ಸ್ಫೂರ್ತಿ ನೀಡುತ್ತಿವೆ.

ಗುರಿಯೇನೋ ಸರಿ ಇದೆ. ಅದನ್ನು ತಲಪಲು ಅನುಸರಿಸುವ ವಿಧಾನ ಮತ್ತು ತಂತ್ರ ಸರಿ ಇರಬೇಕು.



ವಾಚಕರ ವಾಣಿ

ನಗಿಸುವುದು ಪರಧರ್ಮ; ನಿಂದನೆ ಅಧರ್ಮ

ಮನರಂಜನೆ ಹೆಸರಿನಲ್ಲಿ ಜನರು ಟಿ.ವಿ ಮತ್ತು ಡಿಜಿಟಲ್ ವೇದಿಕೆಗಳಿಗೆ ಜೋತುಬಿದ್ದಿರುವುದು ಹೊಸ ವಿಷಯವಲ್ಲ. ಆದರೆ, ಕೆಲವು ಕಾಮಿಡಿ ಶೋಗಳಲ್ಲಿ ಕಲಾವಿದರು ಬಳಸುವ ಮಾತು ಹಾಗೂ ಅಪಮಾನಕರ ಸಂಭಾಷಣೆಯು ಸಾಮಾಜಿಕ ಮೌಲ್ಯಗಳಿಗೆ ಗಾಸಿಯುಂಟು ಮಾಡುತ್ತದೆ. ನಗಿಸುವ ಉದ್ದೇಶ ತಪ್ಪಲ್ಲ. ಆದರೆ, ಅದಕ್ಕಾಗಿ ಭಾಷೆಯ ಸದಭಿರುಚಿ, ಸಂಸ್ಕೃತಿ, ಗೌರವ ಮತ್ತು ಸಂವೇದನಾಶೀಲತೆ ಮರೆತರೆ ಅದು ಮನರಂಜನೆಯಾಗುವುದಿಲ್ಲ; ಮೌಲ್ಯಗಳಿಗೆ ಹಾನಿ ಆಗುತ್ತದೆ. ಇಂತಹ ಕಾರ್ಯಕ್ರಮಗಳ ಪ್ರಭಾವ ದೊಡ್ಡವರಿಗಿಂತ ಹೆಚ್ಚಾಗಿ ಮಕ್ಕಳ ಮೇಲೆ ಬೀರುತ್ತದೆ. ಚಿಣ್ಣರ ಮನಸ್ಸು ಸುಲಭವಾಗಿ ಪ್ರಭಾವಿತವಾಗುವ ಕಾರಣ, ಆಯೋಜಕರು ತಮ್ಮ ಕಾರ್ಯಕ್ರಮಗಳ ಬಗ್ಗೆ ಗಂಭೀರವಾಗಿ ಯೋಚಿಸಬೇಕಾಗಿದೆ.

ಸತೀಶ್, ಮಾನವಿ

ಹೊಸ ನಾಯಕತ್ವಕ್ಕೆ ಯುವ ಸ್ಪರ್ಶ ಬೇಕು

ಯುವಜನರಿಗೆ ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಗುರುತಿಸಿಕೊಳ್ಳುವ ಹಂಬಲ ಸಹಜ. ಜನಸೇವೆಯ ಕನಸು ಹೊತ್ತಿರುವ ಯುವಜನರು ರಾಜಕೀಯಕ್ಕೆ ಧುಮುಕಲು ಮತ್ತು ಉದಯೋನ್ಮುಖ ನಾಯಕರಾಗಿ ಬೆಳೆಯಲು ಸ್ಥಳೀಯ ಮಟ್ಟದ ಚುನಾವಣೆಗಳೇ ಪ್ರಮುಖ ವೇದಿಕೆಗಳಾಗಿವೆ. ಈಗಾಗಲೇ, ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಯ ಅಧಿಕಾರಾವಧಿ ಮುಗಿದು, ಬಹುತೇಕ ಒಂದು ಅವಧಿಯಷ್ಟು ಸಮಯ ಕಳೆದಿದೆ. ಆದರೂ, ಸರ್ಕಾರಕ್ಕೆ ಚುನಾವಣೆ ನಡೆಸುವ ಮನಸ್ಸಿಲ್ಲ. ಅವಧಿ ಮುಗಿಯಲಿರುವ ಗ್ರಾಮ ಪಂಚಾಯಿತಿಗಳಿಗೂ ಆಡಳಿತಾಧಿಕಾರಿಗಳನ್ನು ನೇಮಿಸಿ ಚುನಾವಣೆ ಮುಂದೂಡುವ ತರಾತುರಿಯಲ್ಲಿದೆ. ಇಂತಹ ಪ್ರಜಾಪ್ರಭುತ್ವ ವಿರೋಧಿ ನಡೆಯು ಹೊಸ ನಾಯಕತ್ವದ ಬೆಳವಣಿಗೆಗೂ ಅಡ್ಡಿಯಾಗುತ್ತದೆ.

ಸಂತೋಷ್ ಸಿ. ಬಡಿಗೇರ, ಇಂಡಿ

ನೇಮಕಾತಿ ವಿಳಂಬ: ಕನಸಿಗೆ ಕೊಳ್ಳಿ

ಕಳೆದ ಎರಡು ಮೂರು ವರ್ಷಗಳಿಂದ ರಾಜ್ಯದಲ್ಲಿ ಸರ್ಕಾರಿ ಉದ್ಯೋಗಗಳಿಗೆ ನೇಮಕಾತಿ ನಡೆದಿಲ್ಲ. ದಲಿತರು ಮತ್ತು ಬಲಹೀನರಿಗೆ ರಕ್ಷಣೆಯಾಗಬೇಕಿದ್ದ ಮೀಸಲಾತಿಯು ರಾಜಕೀಯ ಲಾಭದ ಸಾಧನವಾಗಿ ಬದಲಾಗಿರುವುದು ದುರದೃಷ್ಟಕರ. ಉದ್ಯೋಗಾಕಾಂಕ್ಷಿಗಳ ಸಾಲಿನಲ್ಲಿ ರಾಜಕೀಯ ನಾಯಕರ ಮಕ್ಕಳಿದ್ದಿದ್ದರೆ, ಸರ್ಕಾರಕ್ಕೂ ನಿರುದ್ಯೋಗಿಗಳ ಕಷ್ಟ ಅರ್ಥವಾಗುತ್ತಿತ್ತು. ನೇಮಕಾತಿ ಅಧಿಸೂಚನೆ ಪ್ರಕಟವಾಗಲಿದೆಯೆಂದು ಯುವಜನರು ನಿರೀಕ್ಷೆಯಿಂದ ಕಾಯುವುದೇ ಶಿಕ್ಷೆಯಾಗಿದೆ. ಒಂದೇ ಬಾರಿಗೆ ಅನ್ವಯವಾಗುವಂತೆ ವಯೋಮಿತಿ ಸಡಿಲಿಕೆ ಘೋಷಿಸುವುದು ದೊಡ್ಡ ಅನ್ಯಾಯ ಅಲ್ಲವೇ? ಒಂದೇ ಅವಕಾಶ ನೀಡಿ 'ನ್ಯಾಯ ಕೊಟ್ಟೆವು' ಎಂದು ಹೇಳುವುದು ಸರ್ಕಾರದ ಅಸೂಕ್ಷ್ಮ ನಡೆಯ ಸಂಕೇತ.

ದರ್ಶನ್ ಎಂ.ಜಿ., ಕಡೂರು

ಬಿಗ್‌ಬಾಸ್‌ಗೆ ಪ್ರೀತಿ; ಮತದಾನಕ್ಕೆ ಅಸಡ್ಡೆ

ಈ ಬಾರಿಯ 'ಬಿಗ್‌ಬಾಸ್' ರಿಯಾಲಿಟಿ ಶೋ ದೊಡ್ಡ ಮಟ್ಟದಲ್ಲಿ ಜನಪ್ರಿಯತೆ ಗಳಿಸಿತು. ಹಿಂದಿನ ಸೀಸನ್‌ಗಳಿಗಿಂತ ಹೆಚ್ಚು ಜನರು ವೀಕ್ಷಿಸಿ, ಮತ ಹಾಕಿ ತಮ್ಮ ನೆಚ್ಚಿನ ಸ್ಪರ್ಧಿಯನ್ನು ಗೆಲ್ಲಿಸಿದರು. ಇದರಲ್ಲಿ ಬಹುಪಾಲು ಯುವಸಮೂಹವೇ ಭಾಗಿಯಾಗಿತ್ತು. ಕಳೆದ ವಿಧಾನಸಭೆ ಚುನಾವಣೆಗೆ ಶೇ 73ರಷ್ಟು ಹಾಗೂ ಲೋಕಸಭೆ ಚುನಾವಣೆಗೆ ಶೇ 64ರಷ್ಟು ಮತದಾನ ನಡೆದಿತ್ತು. ಬಿಗ್‌ಬಾಸ್ ಸ್ಪರ್ಧಿಗಳಿಗೆ ಬೆಂಬಲ ಹಾಗೂ ವಿರೋಧಕ್ಕೆ ದಿನಪೂರ್ತಿ ಜಾಲತಾಣದಲ್ಲಿ ಕಾಲ ಕಳೆಯುವ ಯುವಜನರಿಗೆ ಅಭಿವೃದ್ಧಿಗೆ ಪೂರಕವಾದ ಚುನಾವಣೆಗಳ ಬಗ್ಗೆ ನಿರಾಸಕ್ತಿ ಏಕೆ? ಕೆಲವೇ ದಿನಗಳಲ್ಲಿ ಐಪಿಎಲ್ ಟೂರ್ನಿಯೂ ಪ್ರಾರಂಭವಾಗಲಿದೆ. ಯುವಸಮೂಹ ಅದರಲ್ಲಿ ಮುಳುಗುತ್ತದೆ. ಇದೆಲ್ಲವನ್ನು ಗಮನಿಸಿದರೆ 'ಜನರಿಗೆ ಬ್ರೆಡ್ ಮತ್ತು ಸರ್ಕಸ್ ಕೊಡು, ಆಗ ಅವರ ಗಮನವನ್ನು ಬೇರೆಡೆ ಸೆಳೆಯಬಹುದು' ಎಂಬ ರೋಮನ್ ಗಾದೆ ನೆನಪಾಗುತ್ತದೆ.

ಚಂದ್ರಶೇಖರ್ ಬಿ.ಎನ್., ಮೈಸೂರು

ಹೆಸರು ಬದಲಿಸುವುದೇ ಸರ್ಕಾರದ ಕೆಲಸ

ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ದೇಶದ ಪ್ರಧಾನಿಯಾಗಿದ್ದಾರೆ. ಈ ಮೂರು ಅವಧಿಯಲ್ಲಿಯೂ ಸರ್ಕಾರಿ ಯೋಜನೆ, ಕಟ್ಟಡ, ಸೇತುವೆ ಇತ್ಯಾದಿ ಹೆಸರು ಬದಲಾವಣೆ ಮಾಡುವುದನ್ನೇ ಕಾಯಕ ಮಾಡಿಕೊಂಡಿದ್ದಾರೆ. ಇಂದಿರಾ ಆವಾಸ್ ಯೋಜನೆಯನ್ನು ಪ್ರಧಾನಮಂತ್ರಿ ಗ್ರಾಮೀಣ ಆವಾಸ್ ಯೋಜನೆಯೆಂದು ಬದಲಾಯಿಸಲಾಯಿತು. ಆದರೆ, ಬಡವರಿಗೆ ಸೂರು ಕಲ್ಪಿಸುವುದು ಕನಸಾಗಿಯೇ ಉಳಿದಿದೆ. ಪ್ರಸ್ತುತ 'ಮನರೇಗಾ' ಯೋಜನೆಯನ್ನು 'ವಿಬಿ–ಜಿ ರಾಮ್ ಜಿ' ಎಂದು ಬದಲಿಸಲಾಗಿದೆ. ಉದ್ಯೋಗ ನೀಡುವುದು ಸರ್ಕಾರದ ಆದ್ಯತೆಯಾಗಬೇಕು. ಯೋಜನೆಯ ಹೆಸರು ಬದಲಿಸುವುದನ್ನೇ ಉದ್ಯೋಗ ಮಾಡಿಕೊಳ್ಳಬಾರದು.

ಕುರುಬರ ಸಚಿನ್, ವಿಜಯನಗರ

ಅಧಿಕಾರಿಗಳ ನಡತೆ ಎತ್ತರಕ್ಕೇರುತ್ತಿಲ್ಲ ಏಕೆ?

ಡಿಜಿಪಿ ಕೆ. ರಾಮಚಂದ್ರರಾವ್ ಅವರ ಆಕ್ಷೇಪಾರ್ಹ ವಿಡಿಯೊ ಕೇವಲ ಒಂದು ಘಟನೆಯಲ್ಲ; ಅದು ಆಡಳಿತ ವ್ಯವಸ್ಥೆಯ ನೈತಿಕ ಕುಸಿತದ ಸಂಕೇತ. ನಾಗರಿಕರ ಹಕ್ಕುಗಳನ್ನು ರಕ್ಷಿಸಲು ನೇಮಕಗೊಂಡಿದ್ದ ಈ ಅಧಿಕಾರಿಯೇ ಮಹಿಳೆಯರ ಗೌರವಕ್ಕೆ ಚ್ಯುತಿ ತಂದಿರುವುದು ಅಕ್ಷಮ್ಯ. ಸಾಮಾನ್ಯ ನೌಕರ ಹಾದಿತಪ್ಪಿದರೆ ಅದು ವೈಯಕ್ತಿಕ ದೋಷ; ಆದರೆ, ಉನ್ನತ ಹುದ್ದೆಯಲ್ಲಿದ್ದವರು ನೈತಿಕತೆಯ ಮಿತಿ ಮೀರಿದರೆ ಅದು ವ್ಯಕ್ತಿಯ ತಪ್ಪಲ್ಲ, ವ್ಯವಸ್ಥೆಯ ದೋಷ ಎಂದು ಹೇಳುವುದು ಸಾಧ್ಯವಿಲ್ಲ. ಹುದ್ದೆಗಳ ಎತ್ತರ ಏರುತ್ತಿದೆಯಾದರೂ, ನಡತೆಯ ಎತ್ತರ ಏರುತ್ತಿದೆಯೇ ಎಂಬ ಪ್ರಶ್ನೆಯನ್ನು ಈ ಪ್ರಕರಣ ಜನರ ಮುಂದಿಟ್ಟಿದೆ. ಅಧಿಕಾರಿಗಳ ನಡತೆಯೇ ಪಾತಕಮಯವಾಗಿದ್ದರೆ, ಸಮಾಜಕ್ಕೆ ದಾರಿ ತೋರಿಸುವ ಬೆಳಕು ಎಲ್ಲಿಂದ ಬರುತ್ತದೆ? ಅಧಿಕಾರಿಗಳ ನೈತಿಕತೆ ಶುದ್ಧವಾಗಿರಬೇಕು. ಇಲ್ಲದಿದ್ದರೆ, ಹುದ್ದೆಗಳು ಬೆಳಕನ್ನು ನೀಡುವುದಿಲ್ಲ; ಕತ್ತಲೆಯನ್ನೇ ಗಾಢಗೊಳಿಸುತ್ತವೆ.

ಪ್ರಶಾಂತ ಕುಲಕರ್ಣಿ, ಸಿಂದಗಿ

ಚುರುಮುರಿ

ಯಜಮಾನಿಕೆ ಪ್ರಶ್ನೆ

• ಬಿ.ಎನ್. ಮಲ್ಲೇಶ್

'ಲೇಯ್, ಏನೇ ಇದು ಉಪ್ಪಿಟ್ಟು ಇಷ್ಟು ಉಪ್ಪುಪ್ಪಾಗಿದೆ? ನೆಟ್ಟಗೆ ಮಾಡಾಕೆ ಬರಲ್ವಾ?' ಹೆಂಡತಿ ಪಮ್ಮಿ ಮೇಲೆ ತೆಪರೇಸಿ ರೇಗಿದ.

'ಅದು ಹಂಗೇ... ನೀವು ಮನೆ ಯಜಮಾನಿಕೆ ಬಿಟ್ಟು ಕೊಡ್ತೀನಿ ಅಂತ ಹೇಳಿ ಎಷ್ಟು ದಿನಾತು, ಬಿಟ್ ಕೊಟ್ಟಿದ್ದೀರಾ? ದೀಪಾವಳಿ ಆತು, ಹೊಸ ವರ್ಷಾತು, ಸಂಕ್ರಾಂತಿನೂ ಆತು... ನನ್ ತಾಳ್ಮೆಗೂ ಒಂದು ಮಿತಿ ಇದೆ...' ಪಮ್ಮಿ ಗುರ್ ಎಂದಳು.

'ನಿಂಗೆ ಯಜಮಾನಿಕೆ ಬಿಟ್ ಕೊಡಾಣ ಅಂದ್ರೆ ಬರೀ ಗುಡಿ ಗುಂಡಾರ ಸುತ್ತುತೀಯ. ಪ್ರಾರ್ಥನೆ, ಫಲ ಅಂತ ಪ್ರವಚನ ಹೇಳ್ತೀಯ. ಅದೆಲ್ಲೋ ರೇಷ್ಮೆ ಸೀರೆ ಕಮ್ಮಿ ರೇಟಿಗೆ ಕೊಡ್ತಾರೆ ಅಂತ ದಿನಗಟ್ಲೆ ಕ್ಯೂ ನಿಲ್ತೀಯ... ಯಜಮಾನಿಕೆ ಹೆಂಗ್ ನಡೆಸ್ತೀಯ?'

'ನೀವು ರಾಜಕೀಯದಲ್ಲಿ ಇರ್ಬೇಕಿತ್ತು ಕಣ್ರೀ, ಯಜಮಾನಿಕೆ ವಿಷ್ಯ ಎತ್ತಿದಾಗೆಲ್ಲ ದೊಡ್ಡ ಖರ್ಗೆ ಸಾಹೇಬ್ರ ತರ ಮಾತೇ ಆಡಲ್ಲ, ಮನೆ ಖರ್ಚಿಗೆ ದುಡ್ಡು ಕೊಡಿ ಅಂದ್ರೆ ಜಮೀರಣ್ಣನ ತರ ಮಾತೇ ನಿಲ್ಸಲ್ಲ... ಈಗ ಈ ಕತೆ ಹೇಳ್ತೀರಾ?'

'ನೀನೂ ಟ್ರಂಪ್ ತರ ದಾದಾಗಿರಿ ಮಾಡೋದು ಬಿಡು. ನಾನೇನು ಮನೆ ಯಜಮಾನಿಕಿನ ಬೀದೀಲಿ ಹೋಗೋ ದಾಸಮ್ಮನಿಗೆ ಕೊಡಲ್ಲ. ಒಂಬತ್ತು ಸಲ ಎಮ್ಮೆಲ್ಲೆ ಆದ ಖರ್ಗೆ ಸಾಹೇಬ್ರೇ ಸಿಎಂ ಆಗದೆ ಸುಮ್ನಿದಾರೆ, ನೀನು ಹಾರಾಡ್ತೀಯ... ಒಂದು ವೇಳೆ ನೀನು ಮನಿ ಯಜಮಾನಿ ಆದ್ರೂ...'

'ಹುಂ, ಆದ್ರೂ...'

'ನಾನು ನಿನ್ನ ಯಜಮಾನ ಅನ್ನೋದನ್ನ ತಪ್ಸೋಕಾಗುತ್ತಾ? ಸುಮ್ನೆ ನಾನು ಹೇಳಿದಂಗೆ ಕೇಳು...' ತೆಪರೇಸಿ ನಕ್ಕ.

'ನೀವಿನ್ನೂ ಯಾವ ಕಾಲದಾಗದೀರಿ? ಅಂಥಾ ಗೌರ್ನರ್ ಸಾಹೇಬ್ರೇ ಈಗ ಸರ್ಕಾರದ ಮಾತು ಕೇಳಲ್ಲ, ಇನ್ನು ನಾನು ಕೇಳ್ತೀನಾ? ನೋ ಚಾನ್ಸ್...'

ಪಮ್ಮಿ ತಿರುಗೇಟಿಗೆ ತೆಪರೇಸಿ ತೆಪ್ಪಗಾದ. ಗೆಳೆಯ ಡುಂಡಿರಾಜ್ ಚುಟುಕು ನೆನಪಾಯಿತು:

'ನೀರಿನ ಸಾಗರ ದಾಟಲು ತೆಪ್ಪ ಬೇಕು... ಸಂಸಾರದ ಸಾಗರ ದಾಟಲು ತೆಪ್ಪಗಿರಬೇಕು!'

ಸಂಗತ

'ಎಸ್‌ಐಆರ್' ಜೊತೆ ಸಲ್ಲಾಪ ಅಪಾಯಕಾರಿ

ಎಸ್‌ಐಆರ್‌ನ ರಾಜಕೀಯ ದುರುದ್ದೇಶಗಳನ್ನು ರಾಜ್ಯ ಸರ್ಕಾರ ಗಂಭೀರವಾಗಿ ಪರಿಗಣಿಸಿದಂತಿಲ್ಲ. ಈ ಪ್ರಕ್ರಿಯೆ ಜನತಂತ್ರದ ಬುನಾದಿ ಅಲುಗಾಡಿಸುವಂತಿದೆ.

• ಕೆ. ಫಣಿರಾಜ್

ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬೆಳಗಾವಿ ಜಿಲ್ಲೆಯ ನಂದವಾಡಿಯಲ್ಲಿ 'ಎಸ್‌ಐಆರ್ ಅನ್ನು ರಾಜಕೀಯ ವಿಷಯ ಮಾಡಲು ಕಾಂಗ್ರೆಸ್ ಇಚ್ಛಿಸುವುದಿಲ್ಲ. ಅರ್ಹ ಮತದಾರರು ಮತದಾರರ ಪಟ್ಟಿಯಲ್ಲಿ ಇರುವಂತೆ ನೋಡಿಕೊಳ್ಳುವ ಕಾಳಜಿಯನ್ನು ಮಾತ್ರ ಪಕ್ಷ ಹೊಂದಿದೆ' ಎಂಬ ಹೇಳಿಕೆ ನೀಡಿದ್ದಾರೆ (ಪ್ರ.ವಾ., ಜ. 21). ಈ ಹೇಳಿಕೆ ಗಮನಿಸಿದರೆ, ಒಕ್ಕೂಟ ಸರ್ಕಾರವು ರಾಜಕೀಯ ತಂತ್ರವಾಗಿ ಹರಿಬಿಟ್ಟಿರುವ ಎಸ್‌ಐಆರ್ ನಡಾವಳಿಯ ಹಿಂದೆ ಅಡಗಿರುವ ಕರಾಳತೆಯನ್ನು ಮುಖ್ಯಮಂತ್ರಿ ಅವರು ಹಗುರವಾಗಿ ಪರಿಗಣಿಸಿದಂತೆ ಕಾಣುತ್ತದೆ.

ರಾಜ್ಯದಲ್ಲಿ 2002ರ ಮತದಾರರ ಪಟ್ಟಿಯನ್ನು ಆಧಾರವಾಗಿ ಇಟ್ಟುಕೊಂಡು ರಾಜ್ಯ ಚುನಾವಣಾ ಆಯೋಗವು 'ಮತದಾರರ ಪಟ್ಟಿ' ತಯಾರಿ ಶುರುಮಾಡಿರುವ ಹೊತ್ತಲ್ಲಿ ಬಂದಿರುವ ಮುಖ್ಯಮಂತ್ರಿಗಳ ಹೇಳಿಕೆಯು ನಿಜಕ್ಕೂ ಆತಂಕಕಾರಿಯಾಗಿದೆ. ಆತಂಕಕ್ಕೆ ಕಾರಣಗಳು ವಾಸ್ತವಿಕವಾಗಿವೆ.

ಎಸ್‌ಐಆರ್ ಸಾಮಾನ್ಯ ಮತದಾರರ ಪಟ್ಟಿಯ ಪರಿಷ್ಕರಣೆ ಆಗಿರದೆ, 'ಈ ದೇಶದಲ್ಲಿ ಯಾರು ಅಧಿಕೃತ ಪ್ರಜೆಗಳು, ಯಾರು ಅಲ್ಲ' ಎಂಬ ರಾಜಕೀಯ ತತ್ತ್ವದ ಆಧಾರದಲ್ಲಿ ಮತದಾರರನ್ನು ಅಧಿಕೃತಗೊಳಿಸುವ, ಆ ಮೂಲಕ ದೇಶವಾಸಿಗಳ ಪೌರತ್ವವನ್ನು ನಿರ್ಣಯಿಸುವ ರಾಜಕೀಯ ಕಾರ್ಯಾಚರಣೆ ಆಗಿದೆ.

ಭಾರತದ ಸಂವಿಧಾನವು, ಸ್ವಾತಂತ್ರ್ಯ ಕಾಲಕ್ಕೆ ಜಾತಿ ಮತ್ತು ಮತಾತೀತವಾಗಿ ಈ ದೇಶದಲ್ಲಿ ವಾಸಿಸುತ್ತಿರುವ ಎಲ್ಲರೂ ಈ ದೇಶದ ಪ್ರಜೆಗಳು ಎಂಬ ಅತ್ಯಂತ ಪುರೋಗಾಮಿ ರಾಷ್ಟ್ರ ರಾಜಕೀಯ ತತ್ತ್ವವನ್ನು ಅಂಗೀಕರಿಸಿತು. ಆ ತತ್ತ್ವದ ಅನುಸಾರ, ದೇಶದಲ್ಲಿ ವಾಸಿಸುವ ಪ್ರತಿ ವ್ಯಕ್ತಿಗೂ ಮತದಾನದ ಮೌಲ್ಯಯುತ ಹಕ್ಕನ್ನು ನೀಡಬೇಕೆಂದು, ದೇಶದ ಪ್ರಥಮ ಚುನಾವಣಾ ಆಯೋಗವು ಕಾಡು, ಬೆಟ್ಟ, ಹಳ್ಳಕೊಳ್ಳಗಳನ್ನು ಲೆಕ್ಕಿಸದೆ ದೇಶದಾದ್ಯಂತ ಮಹಾಯಾನಗೈದು ಮತದಾರರ ಯಾದಿ ತಯಾರಿಸಿತು. ಬಹುತೇಕ ಮತದಾರರು ಅನಕ್ಷರಸ್ಥರಾಗಿದ್ದ ಕಾರಣ, ಪಕ್ಷಗಳನ್ನು ಗುರುತಿಸಿ ಮತದಾನದ ಹಕ್ಕನ್ನು ಚಲಾಯಿಸಲು ಚಿತ್ರರೂಪದ 'ಪಕ್ಷ ಚಿಹ್ನೆ'ಗಳನ್ನು ರೂಪಿಸಿತು. ಅದು ಯಾರನ್ನೂ ಪ್ರಜಾಪ್ರಭುತ್ವ ನಡಾವಳಿಗಳಿಂದ ಹೊರಗುಳಿಸದೆ 'ಒಳಗೊಳ್ಳುವಿಕೆ'ಯ ಮಹತ್ವದ ಮಹಾನಡೆಯಾಗಿತ್ತು.

ಆ ತತ್ತ್ವದ ಆಧಾರದಲ್ಲಿಯೇ ಚುನಾವಣಾ ಆಯೋಗದ ನಿಯಮಗಳನ್ನು ಕಟ್ಟಲಾಯಿತು. ಪ್ರಸ್ತುತ ಎಸ್‌ಐಆರ್, ಆ ಮಹಾನ್ ತತ್ತ್ವವನ್ನು ಹಿನ್ನಡೆಗೆ ಸರಿಸಿ, ಮತ ಹಾಗೂ ಪಕ್ಷಪಾತದ ಆಧಾರದಲ್ಲಿ ಮತದಾರರನ್ನು 'ಹೊರಗಿಡುವ' ನಿಯಮಾವಳಿಗಳ ಮೂಲಕ ಬುಡಮೇಲು ಮಾಡುವ ಸಕಲ ಸೂಚನೆಗಳನ್ನೂ ಪ್ರದರ್ಶಿಸುತ್ತಿದೆ.

ಒಕ್ಕೂಟ ಸರ್ಕಾರ ಹಾಗೂ ಚುನಾವಣಾ ಆಯೋಗ ಬಿಂಬಿಸುತ್ತಿರುವಂತೆ, ಎಸ್‌ಐಆರ್ ನಡಾವಳಿಗೆ ನೈಜವಾದ ಸಂವಿಧಾನದ ಮಾನ್ಯತೆ ಇಲ್ಲ. ಸಂವಿಧಾನಾತ್ಮಕವಾಗಿ ಚುನಾವಣಾ ಆಯೋಗಕ್ಕೆ ಕಾಲಕಾಲಕ್ಕೆ ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ಅಧಿಕಾರವಿದೆ. ಅಗತ್ಯ ಸಮಯದಲ್ಲಿ 'ತೀವ್ರ ಪರಿಷ್ಕರಣೆ' ಮಾಡುವ ಅಧಿಕಾರವೂ ಇದೆ. ಇವುಗಳನ್ನು ಹಿಂದಿನ ಆಯೋಗಗಳು ಮಾಡಿಕೊಂಡು ಬಂದಿವೆ. ಆದರೆ, ಸಾಂವಿಧಾನಿಕ ನಡಾವಳಿ ಅನ್ವಯ 'ವಿಶೇಷ ಸಮಗ್ರ ಪರಿಷ್ಕರಣೆ' (ಎಸ್‌ಐಆರ್) ಅನ್ನು ದೇಶದಾದ್ಯಂತ ಬೇಷರತ್ತಾಗಿ ನಡೆಸುವ ಅಧಿಕಾರವನ್ನು ಚುನಾವಣಾ ಆಯೋಗಕ್ಕೆ ನೀಡಲಾಗಿಲ್ಲ. ಮತದಾರರ 'ಪೌರತ್ವ'ವನ್ನು ನಿರ್ಣಯಿಸುವ ಅಧಿಕಾರವೂ ಆಯೋಗಕ್ಕೆ ಇಲ್ಲ. ಇದನ್ನೆಲ್ಲ ಲೆಕ್ಕಿಸದೆ, ಹಾಲಿ ಒಕ್ಕೂಟ ಸರ್ಕಾರವು, ಕೆಲವು ವರ್ಷಗಳ ಹಿಂದೆ ನಡೆಸಲು ಯತ್ನಿಸಿದ್ದ 'ರಾಷ್ಟ್ರೀಯ ಪೌರತ್ವ ನೋಂದಣಿ'ಯ (ಎನ್‌ಆರ್‌ಸಿ) ವಿಫಲ ನಡೆಯನ್ನು 'ಎಸ್‌ಐಆರ್' ಮೂಲಕ ಸಾಧಿಸಲು ಹೊರಟಿದೆ. ಎನ್‌ಆರ್‌ಸಿಯ ಉದ್ದೇಶವು ಅಲ್ಪಸಂಖ್ಯಾತರ ಪೌರತ್ವದ ಹಕ್ಕುಗಳನ್ನು ಕಿತ್ತುಕೊಳ್ಳುವುದಾಗಿತ್ತು. ಎಸ್‌ಐಆರ್ ನಿರೂಪಣೆ, ನಡೆಗಳೂ ಅದೇ ಉದ್ದೇಶವನ್ನು ಹೊಂದಿವೆ. ಇದು ರಾಜಕೀಯವೇ ಹೊರತು, ಪ್ರಜಾಪ್ರಭುತ್ವದ ಸಾಮಾನ್ಯ ನಡಾವಳಿಯಲ್ಲ.

ಇದುವರೆಗೂ ಎಸ್‌ಐಆರ್ ನಡೆದಿರುವ ಹಾಗೂ ನಡೆಯುತ್ತಿರುವ ರಾಜ್ಯಗಳ ವಿದ್ಯಮಾನಗಳು ಮೇಲೆ ತಿಳಿಸಿರುವ ಅಂಶಗಳನ್ನು ಪುಷ್ಟೀಕರಿಸುತ್ತವೆ. ಈ ನಡಾವಳಿಗಳ ಹಲವು ಹಂತಗಳಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯವು ಮಧ್ಯ ಪ್ರವೇಶಿಸಿ ಚುನಾವಣಾ ಆಯೋಗವನ್ನು ಎಚ್ಚರಿಸುತ್ತಿದೆ. ಪ್ರಸ್ತುತ ಎಸ್‌ಐಆರ್ ನಡೆಯುತ್ತಿರುವ ಪಶ್ಚಿಮ ಬಂಗಾಳ ರಾಜ್ಯದಲ್ಲಿ, ಎಸ್‌ಐಆರ್ ನಿಯಮಾನುಸಾರ ಎಲ್ಲ ದಾಖಲೆಗಳನ್ನು ಸಲ್ಲಿಸಿದ ನಂತರವೂ, 1.3 ಕೋಟಿ ಜನರನ್ನು 'ತಾರ್ಕಿಕ ಲೋಪ'ವೆಂಬ ಹೊಸ ಅಸ್ತ್ರದ ಮೂಲಕ ಹಿಂಸಿಸುತ್ತಿರುವ ಕುರಿತು ಸುಪ್ರೀಂ ಕೋರ್ಟ್ ದಿಗ್ಭ್ರಮೆ ವ್ಯಕ್ತಪಡಿಸಿದೆ.

ಎಸ್‌ಐಆರ್ ಹಿಂದಿನ ರಾಜಕೀಯ ಉದ್ದೇಶಗಳನ್ನು ಅರಿತು ಕೇರಳ, ತಮಿಳುನಾಡು ಹಾಗೂ ಪಶ್ಚಿಮ ಬಂಗಾಳ ಸರ್ಕಾರಗಳು ಎಸ್‌ಐಆರ್ ಅನ್ನು 'ರಾಜಕೀಯ ಸವಾಲು' ಎಂದು ಪರಿಗಣಿಸಿ ಪ್ರತಿರೋಧ ತೋರುತ್ತಿವೆ. ಈ ರಾಜ್ಯಗಳಲ್ಲಿ ಅಧಿಕಾರದಲ್ಲಿ ಇರುವ ಪಕ್ಷಗಳು ತಮ್ಮ ಸಂಘಟನಾ ಹಂದರವನ್ನು ಜನಜಾಗೃತಿಗೆ ಹುರಿಗೊಳಿಸುತ್ತಿವೆ. ಈ ಹಾದಿಯಲ್ಲಿ ನಡೆಯುವ ಇಚ್ಛಾಶಕ್ತಿಯನ್ನು ನಮ್ಮ ಮುಖ್ಯಮಂತ್ರಿ ಅವರು ತೋರದೆ ಇರುವುದು ಒಂದು ಕಡೆಯಾದರೆ, ಮತ್ತೊಂದು ಕಡೆ ತಮ್ಮ ಪಕ್ಷವು ರಾಜಕೀಯವಾಗಿ ನಿರ್ಲಿಪ್ತವಾಗಿ ನಿಷ್ಕ್ರಿಯವಾಗಿ ಇರುತ್ತದೆ ಎಂಬ ಸೂಚನೆ ಕೊಡುತ್ತಿದ್ದಾರೆ.

ಎಸ್‌ಐಆರ್ ಜೊತೆಗಿನ ಸಲ್ಲಾಪ ಬಹಳ ಅಪಾಯಕಾರಿ ಎನ್ನುವ ಎಚ್ಚರದ ತಿಳಿವಳಿಕೆಯನ್ನು ರಾಜ್ಯ ಕಾಂಗ್ರೆಸ್ ಹಾಗೂ ಸರ್ಕಾರಕ್ಕೆ ನಾಡಿನ ಜನ ಚಳವಳಿಗಳು ನೀಡಬೇಕಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಶಿರೂರು ಗುಡ್ಡ ಕುಸಿತ: ಐಐಟಿ ಧಾರವಾಡದಿಂದ ಅಧ್ಯಯನ

ಪಶ್ಚಿಮ ಘಟ್ಟ: ಅರ್ಧಕ್ಕೂ ಹೆಚ್ಚು ಭಾಗದಲ್ಲಿ ಭೂಕುಸಿತದ ಅಪಾಯ

1,270 ಜಿಯಾಲಜಿಕಲ್ ಸರ್ವೇ ಆಫ್ ಇಂಡಿಯಾದ ಪ್ರಕಾರ, 1998–2020ರವರೆಗೆ ರಾಜ್ಯದ ಪಶ್ಚಿಮ ಘಟ್ಟ ಭಾಗದಲ್ಲಿ ಸಂಭವಿಸಿದ ಭೂಕುಸಿತಗಳು

45 ಸಾವಿರ ಚದರ ಕಿ.ಮೀ ಕರ್ನಾಟಕದಲ್ಲಿ ಪಶ್ಚಿಮ ಘಟ್ಟದ ವ್ಯಾಪ್ತಿ

7 ಗುಡ್ಡ ಕುಸಿತದ ಅಪಾಯ ಇರುವ ಜಿಲ್ಲೆಗಳು

ಬೇಡ್ತಿ–ವರದಾ ನದಿ ಜೋಡಣೆ ಯೋಜನೆಗೆ ಒಂದು ಕಡೆ ರಾಜ್ಯ ಸರ್ಕಾರ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಮುಂದಾಗಿದ್ದರೆ, ಮತ್ತೊಂದು ಕಡೆ ಜನ ತೀವ್ರ ವಿರೋಧ ವ್ಯಕ್ತಪಡಿಸುತ್ತಿದ್ದಾರೆ. ಈ ಯೋಜನೆಯ ಬಗ್ಗೆ ರಾಜ್ಯದಲ್ಲಿ ಚರ್ಚೆಯಾಗುತ್ತಿರುವ ವೇಳೆಯಲ್ಲೇ ಪ್ರಮುಖ ಅಧ್ಯಯನ ವರದಿಯೊಂದು ಪ್ರಕಟವಾಗಿದೆ. ಕರ್ನಾಟಕದ ಪಶ್ಚಿಮ ಘಟ್ಟ ಪ್ರದೇಶದಲ್ಲಿನ ಶೇ 60ಕ್ಕೂ ಹೆಚ್ಚು ಭಾಗವು ಸಂಭವನೀಯ ಭೂಕುಸಿತ ಪ್ರದೇಶವಾಗಿದ್ದು, ರಾಜ್ಯದಲ್ಲಿ ಘಟ್ಟವು ಹರಡಿರುವ ಏಳು ಜಿಲ್ಲೆಗಳಲ್ಲಿ ಭೂಕುಸಿತ ಸಾಧ್ಯತೆಗಳು ಇವೆ; ಈ ಪೈಕಿ ಅತಿ ಹೆಚ್ಚು ಭೂಕುಸಿತದ ಅಪಾಯ ಇರುವುದು ಉತ್ತರ ಕನ್ನಡ ಜಿಲ್ಲೆಯಲ್ಲಿ ಎಂದು ವರದಿ ಉಲ್ಲೇಖಿಸಿದೆ

ಪ್ರಜಾವಾಣಿ ವಾರ್ತೆ

ರಾಷ್ಟ್ರೀಯ ಹೆದ್ದಾರಿ–66ರ ವಿಸ್ತರಣೆ ಸಲುವಾಗಿ ಅವೈಜ್ಞಾನಿಕವಾಗಿ ಗುಡ್ಡ ಕತ್ತರಿಸಿದ್ದ ಪರಿಣಾಮ ಅಂಕೋಲಾದ ಶಿರೂರಿನಲ್ಲಿ ಗುಡ್ಡ ಕುಸಿತ ಸಂಭವಿಸಿತ್ತು



ಉತ್ತರ ಕನ್ನಡ ಜಿಲ್ಲೆಯಲ್ಲಿ ಪಶ್ಚಿಮ ಘಟ್ಟ ಉಳಿಸಿ ಎನ್ನುವ ಕೂಗು ತೀವ್ರವಾಗುವ ಹೊತ್ತಿನಲ್ಲಿ ಧಾರವಾಡದ ಭಾರತೀಯ ತಂತ್ರಜ್ಞಾನ ಸಂಸ್ಥೆಯ (ಐಐಟಿ) ಸಿವಿಲ್ ಆ್ಯಂಡ್ ಇನ್‌ಫ್ರಾಸ್ಟ್ರಕ್ಚರ್ ಎಂಜಿನಿಯರಿಂಗ್ ವಿಭಾಗದ ಸಂಶೋಧನಾ ವಿದ್ಯಾರ್ಥಿ ಮಲಯ್ ಪ್ರಾಮಾಣಿಕ್ ಅವರು ಪ್ರೊ.ಅಮರನಾಥ ಹೆಗಡೆ ಅವರ ಮಾರ್ಗದರ್ಶನದಲ್ಲಿ ನಡೆಸಿರುವ ಭೂಕುಸಿತಕ್ಕೆ ಸಂಬಂಧಿಸಿದ ಅಧ್ಯಯನ ವರದಿ 'ಜಿಯೋಹಝಾರ್ಡ್ಸ್ ಮೆಕ್ಯಾನಿಕ್ಸ್' ಜರ್ನಲ್‌ನಲ್ಲಿ ಪ್ರಕಟವಾಗಿದೆ. 2024ರ ಜುಲೈನಲ್ಲಿ ಅಂಕೋಲಾದ ಶಿರೂರಿನಲ್ಲಿ ಸಂಭವಿಸಿದ್ದ ಗುಡ್ಡಕುಸಿತವನ್ನು ಆಧಾರವಾಗಿಟ್ಟುಕೊಂಡು ರಾಜ್ಯದ ಪಶ್ಚಿಮ ಘಟ್ಟದಲ್ಲಿ ಭೂಕುಸಿತ ಸಂಭವನೀಯತೆ ಬಗ್ಗೆ ಈ ಅಧ್ಯಯನವನ್ನು ನಡೆಸಲಾಗಿದ್ದು, ಘಟ್ಟದ ಅರ್ಧಕ್ಕೂ ಹೆಚ್ಚು ಭಾಗ ಭೂಕುಸಿತದ ಅಪಾಯ ಎದುರಿಸುತ್ತಿದೆ ಎಂದು ವರದಿ ಹೇಳಿದೆ.

ಪಶ್ಚಿಮ ಘಟ್ಟಗಳಲ್ಲಿ ಭೂಕುಸಿತದ ಪ್ರಕರಣಗಳು ಮರುಕಳಿಸುತ್ತಿರುವುದರಿಂದ ಅಲ್ಲಿನ ದೈನಂದಿನ ಚಟುವಟಿಕೆಗಳಿಗೆ ಅಡ್ಡಿಯಾಗುತ್ತಿದ್ದು, ಸಾಮಾಜಿಕ–ಆರ್ಥಿಕ ಬಿಕ್ಕಟ್ಟುಗಳನ್ನೂ ಸೃಷ್ಟಿಸುತ್ತಿವೆ. ಈ ಬಿಕ್ಕಟ್ಟುಗಳನ್ನು ಸಮರ್ಥವಾಗಿ ಎದುರಿಸಲು ಭೂಕುಸಿತದ ಬಗೆಗಿನ ಅಧ್ಯಯನ ಅಗತ್ಯ ಎಂದು ಪ್ರತಿಪಾದಿಸಿರುವ ಅಧ್ಯಯನಕಾರರು, ಉಪಗ್ರಹಗಳ ಚಿತ್ರಗಳು, ಈ ಹಿಂದಿನ ಭೂಕುಸಿತದ ದಾಖಲೆಗಳು, ಮಣ್ಣಿನ ರಚನೆ, ನೀರು ಇತ್ಯಾದಿ ಕುರಿತಂತೆ ದತ್ತಾಂಶ ಸಂಗ್ರಹಿಸಿ, ಅವುಗಳನ್ನು ವಿಶ್ಲೇಷಿಸಿ, ಪಶ್ಚಿಮ ಘಟ್ಟದ ವ್ಯಾಪ್ತಿಯಲ್ಲಿ ಬರುವ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಭೂಕಂಪದ ಸಂಭವನೀಯತೆಯ ಪ್ರಮಾಣವನ್ನು ಲೆಕ್ಕ ಹಾಕಿದ್ದಾರೆ.

ವರದಿಯ ಪ್ರಕಾರ, ರಾಜ್ಯದಲ್ಲಿ ಹರಡಿರುವ ಪಶ್ಚಿಮ ಘಟ್ಟದ ಶೇ 60.7ರಷ್ಟು ಭಾಗವು ಸಂಭವನೀಯ ಭೂಕುಸಿತದ ಪ್ರದೇಶವಾಗಿದ್ದು, ಈ ಪೈಕಿ ಉತ್ತರಕನ್ನಡ ಜಿಲ್ಲೆಯ ಅತಿಹೆಚ್ಚು ಭೂಪ್ರದೇಶ (ಶೇ 30ರಷ್ಟು) ಭೂಕುಸಿತದ ಸಂಭಾವ್ಯತೆ ಹೊಂದಿದೆ. ನಂತರದ ಸ್ಥಾನಗಳಲ್ಲಿ ಶಿವಮೊಗ್ಗ, ಚಿಕ್ಕಮಗಳೂರು, ಕೊಡಗು, ದಕ್ಷಿಣ ಕನ್ನಡ, ಹಾಸನ ಮತ್ತು ಉಡುಪಿ ಜಿಲ್ಲೆಗಳಿವೆ.

ಅಧ್ಯಯನ ಏಕೆ?: ಪಶ್ಚಿಮ ಘಟ್ಟಗಳು ಜೀವವೈವಿಧ್ಯದ ಪ್ರಮುಖ ತಾಣಗಳಾಗಿವೆ. ಇಲ್ಲಿನ ಭೂಬಳಕೆಯ ಸ್ವರೂಪವು ತೀವ್ರಗತಿಯಲ್ಲಿ ಬದಲಾಗುತ್ತಿದೆ. ಈ ಪ್ರದೇಶದಲ್ಲಿ ಭೂಕುಸಿತದ ಪ್ರಕರಣಗಳು ಹೆಚ್ಚುತ್ತಿವೆ. 2024ರಲ್ಲಿ ಪಶ್ಚಿಮ ಘಟ್ಟ ಪ್ರದೇಶದಲ್ಲಿ 40ಕ್ಕೂ ಹೆಚ್ಚು ಭೂಕುಸಿತಗಳು ಸಂಭವಿಸಿವೆ. ವಯನಾಡ್‌ನಲ್ಲಿ ಗುಡ್ಡ ಕುಸಿದು ಹಲವು ಗ್ರಾಮಗಳು ಕೊಚ್ಚಿಕೊಂಡು ಹೋಗಿ, 250 ಮಂದಿ ಸಾವಿಗೀಡಾಗಿದ್ದರು. ಅಂಕೋಲಾದಲ್ಲಿ ನಡೆದ (ಶಿರೂರು) ಭೂಕುಸಿತವು ರಾಜ್ಯಕ್ಕೆ ಎಚ್ಚರಿಕೆಯ ಗಂಟೆಯಾಗಿತ್ತು. ಈ ದಿಸೆಯಲ್ಲಿ ಕೇಂದ್ರ ಸರ್ಕಾರವು ಭೂಕುಸಿತದ ಅಪಾಯ ಇರುವ 15 ರಾಜ್ಯಗಳನ್ನು ಗುರಿಯಾಗಿಸಿಕೊಂಡು, ರಾಷ್ಟ್ರೀಯ ಭೂಕುಸಿತ ಹಾನಿ ತಡೆ ಕಾರ್ಯಕ್ರಮ (ಎನ್‌ಎಲ್‌ಆರ್‌ಎಂಪಿ) ಜಾರಿ ಮಾಡಿತು. ಇವುಗಳಲ್ಲಿ ಪಶ್ಚಿಮ ಘಟ್ಟಗಳ ವ್ಯಾಪ್ತಿಯ ನಾಲ್ಕು ರಾಜ್ಯಗಳು (ಕರ್ನಾಟಕ, ಕೇರಳ, ಮಹಾರಾಷ್ಟ್ರ, ತಮಿಳುನಾಡು) ಸೇರಿವೆ. ಹಾನಿ ತಡೆಗೆ ಸೂಕ್ತ ಮೂಲಸೌಕರ್ಯ ಕಲ್ಪಿಸುವುದು, ಕ್ಷಿಪ್ರ ಮಾಹಿತಿ ಸಂಗ್ರಹ ಮತ್ತು ಸಿದ್ಧತೆಗಳನ್ನು ನಡೆಸುವುದು ಯೋಜನೆಯ ಪ್ರಮುಖ ಉದ್ದೇಶವಾಗಿತ್ತು. ಆದರೆ, ವಿಶ್ವಾಸಾರ್ಹವಾದ ಭೂಕುಸಿತದ ಸಂಭಾವ್ಯತೆಯ ನಕ್ಷೆಗಳು ಇಲ್ಲದಿರುವುದು ಈ ಯೋಜನೆಗೆ ಪ್ರಮುಖ ತೊಡಕಾಗಿತ್ತು. ಈ ಕೊರತೆಯನ್ನು ನೀಗುವುದು ಮತ್ತು ಪಶ್ಚಿಮ ಘಟ್ಟಗಳಲ್ಲಿ ಗುಡ್ಡ ಕುಸಿತದ ಹಾನಿ ತಡೆಯುವುದು ಅಧ್ಯಯನದ ಆಶಯವಾಗಿದೆ.

ಪಶ್ಚಿಮ ಘಟ್ಟದ ಪರಿಸರ ಸೂಕ್ಷ್ಮ ಪ್ರದೇಶದಲ್ಲಿ ಅವೈಜ್ಞಾನಿಕವಾದ ಅಭಿವೃದ್ಧಿ ಯೋಜನೆಗಳು, ಪ್ರಕೃತಿಯ ಸಮತೋಲನವನ್ನು ಹಾಳುಮಾಡುವಂತಹ ಯೋಜನೆಗಳನ್ನು ಕೈಗೊಳ್ಳುವುದು ಭೂಕುಸಿತದ ಸಾಧ್ಯತೆಯನ್ನು ಹೆಚ್ಚಿಸುತ್ತವೆ ಎಂದು ಹಿಂದಿನಿಂದಲೂ ಹಲವು ತಜ್ಞರು ಹೇಳುತ್ತಲೇ ಬಂದಿದ್ದಾರೆ. ಪ್ರಸ್ತುತ ರಾಜ್ಯದಲ್ಲಿ ಬೇಡ್ತಿ –ವರದಾ ನದಿ ಜೋಡಣೆ ಯೋಜನೆ ಜಾರಿಗೆ ಸರ್ಕಾರ ಮುಂದಾಗಿದ್ದು, ಅಘನಾಶಿನಿ–ವೇದಾವತಿ ನದಿ ಜೋಡಣೆ ಯೋಜನೆಯ ಬಗ್ಗೆಯೂ ಪ್ರಸ್ತಾಪಿಸಲಾಗಿದೆ. ಇವುಗಳ ವಿರುದ್ಧ ಉತ್ತರ ಕನ್ನಡ ಜಿಲ್ಲೆಯಲ್ಲಿ ಭಾರಿ ಹೋರಾಟವೇ ನಡೆಯುತ್ತಿದೆ. ವಯನಾಡ್‌ನಲ್ಲಿ ಆದ ಗುಡ್ಡ ಕುಸಿತ, ಶಿರೂರು ಗುಡ್ಡ ಕುಸಿತದಂಥ ಪ್ರಕರಣಗಳು ಮತ್ತು ತಜ್ಞರ ಅಧ್ಯಯನ ವರದಿಗಳು ಭೂಕುಸಿತದ ಘೋರ ಪರಿಣಾಮಗಳನ್ನು ಜನರ ಮುಂದಿಟ್ಟಿದ್ದು, ಯೋಜನೆಯನ್ನು ಮತ್ತೊಮ್ಮೆ ಪರಿಶೀಲಿಸಬೇಕು ಎನ್ನುವ ಒತ್ತಾಯ ವ್ಯಕ್ತವಾಗಿದೆ.

ಭೂಕುಸಿತದ ಸಾಧ್ಯತೆ ಇರುವ ಪ್ರದೇಶದ ಪ್ರಮಾಣ (ಜಿಲ್ಲಾವಾರು)



ಅಂಕೋಲಾದಲ್ಲಿ ಏನು ನಡೆದಿತ್ತು?

2024ರ ಜುಲೈ 16ರಂದು ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ತಾಲ್ಲೂಕಿನ ಶಿರೂರಿನಲ್ಲಿ ರಾಷ್ಟ್ರೀಯ ಹೆದ್ದಾರಿ 66ರ ಬದಿಯ ಗುಡ್ಡ ಕುಸಿದು 11 ಜನರು ಮೃತಪಟ್ಟಿದ್ದರು. ಹೆದ್ದಾರಿ ಬದಿಯಲ್ಲಿದ್ದ ಹೋಟೆಲ್ ಹಾಗೂ ಸಮೀಪದಲ್ಲೇ ನಿಂತಿದ್ದ ಲಾರಿಯೊಂದು ಮಣ್ಣಿನೊಂದಿಗೆ ಕೊಚ್ಚಿಕೊಂಡು ಹೋಗಿ ಪಕ್ಕದಲ್ಲೇ ಹರಿಯುತ್ತಿದ್ದ ಗಂಗಾವಳಿ ನದಿ ಪಾಲಾಗಿದ್ದವು.

ಪಶ್ಚಿಮ ಘಟ್ಟದಲ್ಲಿ ಭೂಕುಸಿತದ ಸಾಧ್ಯತೆ



(ಆವರಣದಲ್ಲಿರುವುದು ಒಟ್ಟು ಪ್ರದೇಶದಲ್ಲಿ ಭೂಕುಸಿತದ ಸಾಧ್ಯತೆ ಇರುವ ಪ್ರದೇಶದ ಪ್ರಮಾಣ)

ಅಧ್ಯಯನ ಹೇಳಿದ್ದೇನು?

- ತೀವ್ರ ಮಳೆ, ಇಳಿಜಾರಿನ ಭೂಪ್ರದೇಶ, ಮಣ್ಣಿನ ಗುಣಲಕ್ಷಣಗಳು ಭೂಕುಸಿತಕ್ಕೆ ಪ್ರಮುಖ ಕಾರಣಗಳು
- ವಾರ್ಷಿಕವಾಗಿ 300 ಸೆಂ.ಮೀಗಿಂತಲೂ ಹೆಚ್ಚು ಮಳೆಯಾಗುವುದು
- ಈ ಭಾಗದಲ್ಲಿ ಜೇಡಿ, ಮರಳು ಮಿಶ್ರಿತ ಮಣ್ಣು ಹೆಚ್ಚಾಗಿದೆ
- ಅಧ್ಯಯನ ನಡೆಸಲಾದ ಪ್ರದೇಶದಲ್ಲಿ ಭೂಮಿಯು 28 ಡಿಗ್ರಿಗಿಂತಲೂ ಹೆಚ್ಚು ಇಳಿಜಾರು ಹೊಂದಿದೆ. ಅಂಕೋಲಾದಲ್ಲಿ ಭೂಕುಸಿತ ಸಂಭವಿಸಿದ ಪ್ರದೇಶ 31 ಡಿಗ್ರಿಯಷ್ಟು ಇಳಿಜಾರಾಗಿತ್ತು. ಅಲ್ಲಿ ವಾರ್ಷಿಕವಾಗಿ 300 ಸೆಂ.ಮೀಗಿಂತಲೂ ಹೆಚ್ಚು ಮಳೆಯಾಗುತ್ತದೆ. ಪಕ್ಕದಲ್ಲೇ ರಸ್ತೆ ಮತ್ತು ನದಿ ಇರುವುದರಿಂದ ಭೂಕುಸಿತದ ಅಪಾಯ ಹೆಚ್ಚಾಗಿತ್ತು
- ಗುಡ್ಡ ಕತ್ತರಿಸುವಿಕೆ, ರಾಷ್ಟ್ರೀಯ ಹೆದ್ದಾರಿಯ ಬಳಿ ನಡೆಯುತ್ತಿದ್ದ ಅವೈಜ್ಞಾನಿಕ ಅಭಿವೃದ್ಧಿ ಕಾಮಗಾರಿಗಳು ಕೂಡ ಅಂಕೋಲಾ ಗುಡ್ಡ ಕುಸಿತಕ್ಕೆ ಕಾರಣವಾಗಿರುವ ಸಾಧ್ಯತೆ ಹೆಚ್ಚಿದೆ

ನಮ್ಮ ಅಧ್ಯಯನದಿಂದ ಕೆಲವು ಮಹತ್ವದ ಸಂಗತಿಗಳು ತಿಳಿದು ಬಂದಿವೆ. ಪಶ್ಚಿಮ ಘಟ್ಟ ವ್ಯಾಪ್ತಿಯಲ್ಲಿ ಹೆಚ್ಚು ಮಳೆ ಬೀಳುವ, ಜೇಡಿ ಮಿಶ್ರಿತ ಮಣ್ಣು ಹೊಂದಿರುವ ಮತ್ತು ಇಳಿಜಾರಾಗಿರುವ ಪ್ರದೇಶಗಳಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಕೈಗೆತ್ತಿಕೊಳ್ಳುವಾಗ ಹೆಚ್ಚು ಜಾಗರೂಕವಾಗಿದ್ದರೆ, ಗುಡ್ಡಕುಸಿತದಂತಹ ದುರಂತಗಳನ್ನು ತಡೆಯಬಹುದು

ಪ್ರೊ.ಅಮರನಾಥ ಹೆಗಡೆ, ಪ್ರಾಧ್ಯಾಪಕ, ಐಐಟಿ ಧಾರವಾಡ



ಶಿರೂರು ಗುಡ್ಡ ಕುಸಿತ ಘಟನೆಯನ್ನು ಆಧರಿಸಿಕೊಂಡು ಈ ಅಧ್ಯಯನ ನಡೆಸಲಾಗಿದೆ. ಈಗ ಲಭ್ಯವಿರುವ ದತ್ತಾಂಶಗಳನ್ನೇ ಇಲ್ಲಿ ವಿಶ್ಲೇಷಿಸಲಾಗಿದೆ. ದಿಢೀರ್ ಆಗಿ ಭಾರಿ ಪ್ರಮಾಣದಲ್ಲಿ ಮಳೆಯಾದಾಗ ಭೂಕುಸಿತ ಸಂಭವಿಸುವ ಸಾಧ್ಯತೆ ಹೆಚ್ಚು. ಪಶ್ಚಿಮ ಘಟ್ಟದಲ್ಲಿ ಭೂಕುಸಿತದ ಅಪಾಯ ಇರುವ ಸ್ಥಳಗಳ ಬಗ್ಗೆ ಭೂ ವೈಜ್ಞಾನಿಕ ಅಧ್ಯಯನ ನಡೆಸಬೇಕಾದ ಅಗತ್ಯವಿದೆ. ಮುನ್ನೆಚ್ಚರಿಕೆ ನೀಡುವ ವ್ಯವಸ್ಥೆ ರೂಪಿಸಬೇಕಾಗಿದೆ

ಎಚ್.ಎಸ್.ಎಂ. ಪ್ರಕಾಶ್, ನಿವೃತ್ತ ಉಪಮಹಾನಿರ್ದೇಶಕ, ಜಿಎಸ್‌ಐ

ರಾಷ್ಟ್ರೀಯ

ಮದ್ರಾಸ್ ವಿ.ವಿ. ಘಟಿಕೋತ್ಸವ ಬಹಿಷ್ಕರಿಸಿದ ಸಚಿವ ಚೆಳಿಯನ್



ಗೋವಿ ಚೆಳಿಯನ್

ಚೆನ್ನೈ (ಪಿಟಿಐ): ತಮಿಳುನಾಡು ಉನ್ನತ ಶಿಕ್ಷಣ ಸಚಿವ ಗೋವಿ ಚೆಳಿಯನ್ ಅವರು ಗುರುವಾರ ರಾಜ್ಯಪಾಲ ಆರ್.ಎನ್.ರವಿ ಅವರು ಅಧ್ಯಕ್ಷತೆ ವಹಿಸಿದ್ದ ಮದ್ರಾಸ್ ವಿಶ್ವವಿದ್ಯಾಲಯದ 167ನೇ ಘಟಿಕೋತ್ಸವ ಕಾರ್ಯಕ್ರಮವನ್ನು ಬಹಿಷ್ಕರಿಸಿದ್ದಾರೆ.

'ರಾಜ್ಯಪಾಲರು ಚುನಾಯಿತ ಸರ್ಕಾರದ ವಿರುದ್ಧ ನಡೆದುಕೊಳ್ಳುತ್ತಿದ್ದು, ಪದವಿ ಪ್ರದಾನ ಮಾಡಲು ರಾಜ್ಯಪಾಲರಿಗೆ ಯಾವುದೇ ಅರ್ಹತೆ ಇಲ್ಲ' ಎಂದು ತಿಳಿಸಿದ್ದಾರೆ.

'ರಾಜ್ಯಪಾಲ ಆರ್.ಎನ್.ರವಿ ಅವರು ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡುವ ಯಾವುದೇ ಅರ್ಹತೆ ಹೊಂದಿಲ್ಲ. ಹೀಗಾಗಿ, ಮದ್ರಾಸ್ ವಿಶ್ವವಿದ್ಯಾಲಯ ಘಟಿಕೋತ್ಸವದಲ್ಲಿ ರಾಜ್ಯಪಾಲರು ಭಾಗವಹಿಸುವ ಕಾರ್ಯಕ್ರಮದಿಂದಲೇ ದೂರ ಉಳಿಯುತ್ತೇನೆ' ಎಂದು ಚೆಳಿಯನ್ ಅವರು ಮಾಧ್ಯಮಗಳಿಗೆ ಬಿಡುಗಡೆಗೊಳಿಸಿದ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ರಾಜ್ಯ ವಿಧಾನಸಭೆ ಅಧಿವೇಶನದ ಮೊದಲ ದಿನ ರಾಜ್ಯಪಾಲ ಆರ್.ಎನ್. ರವಿ ಅವರು ಭಾಷಣ ಮಾಡದೇ, ಹೊರ ನಡೆದಿದ್ದನ್ನು ಟೀಕಿಸಿದ ಅವರು, ರಾಜ್ಯ ಸರ್ಕಾರದ ವಿರುದ್ಧ ಆರೋಪಗಳನ್ನು ಹೊರಿಸುವುದರ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿದರು.

'ರಾಜ್ಯಪಾಲರು ಚುನಾಯಿತ ಸರ್ಕಾರ ಹಾಗೂ ಸಂವಿಧಾನದ ವಿರುದ್ಧ ನಡೆದುಕೊಂಡಿದ್ದಾರೆ. ರವಿ ಅವರು ಸದನದ ಘನತೆಗೆ ಕುಂದುತಂದಿದ್ದು, ತಮಿಳು ಭಾಷೆ ಹಾಗೂ ತಮಿಳರ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ' ಎಂದು ದೂರಿದ್ದಾರೆ.

ಘಟಿಕೋತ್ಸವವು ಗುರುವಾರ ಬೆಳಿಗ್ಗೆ 10.30ಕ್ಕೆ ಕುಲಪತಿ ಅವರ ಅನುಪಸ್ಥಿತಿಯಲ್ಲಿ ನಡೆಯಿತು. ಉನ್ನತ ಶಿಕ್ಷಣ ಇಲಾಖೆಯ ಕಾರ್ಯದರ್ಶಿ ಪಿ.ಶಂಕರ್ ಅವರು ಪ್ರಮಾಣಪತ್ರಗಳಿಗೆ ಸಹಿ ಹಾಕಿದರು.

'ರಾಜ್ಯಪಾಲರ ಭಾಷಣ ನಿಲ್ಲಿಸಬೇಕು'

ಚೆನ್ನೈ: 'ರಾಜ್ಯಪಾಲರ ಭಾಷಣದ ಮೂಲಕ ಮೊದಲ ಅಧಿವೇಶನ ನಡೆಸುವ ಸಂಪ್ರದಾಯವನ್ನೇ ಕೈ ಬಿಡಬೇಕು' ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಆಗ್ರಹಿಸಿದ್ದಾರೆ. ಕರ್ನಾಟಕ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸದನದಲ್ಲಿ ಭಾಷಣ ಮಾಡದೇ, ಹೊರನಡೆದ ಬೆನ್ನಲ್ಲೇ ತಮ್ಮ ಬೇಡಿಕೆಯನ್ನು ಪುನರುಚ್ಚರಿಸಿದ್ದಾರೆ. 'ಮೊದಲು ತಮಿಳುನಾಡು, ನಂತರ ಕೇರಳ, ಈಗ ಕರ್ನಾಟಕ. ಮಾದರಿಯೂ ಸ್ಪಷ್ಟ ಹಾಗೂ ಉದ್ದೇಶಪೂರ್ವಕವಾಗಿದೆ. ಸರ್ಕಾರವು ಸಿದ್ಧಪಡಿಸಿಕೊಟ್ಟ ಭಾಷಣವನ್ನು ರಾಜ್ಯಪಾಲರು ಓದಲು ನಿರಾಕರಿಸುವ ಪಕ್ಷದ ಏಜೆಂಟರಂತೆ ವರ್ತಿಸಿದ್ದಾರೆ. ಆ ಮೂಲಕ ಜನರಿಂದ ಆಯ್ಕೆಯಾದ ಸರ್ಕಾರವನ್ನೇ ದುರ್ಬಲಗೊಳಿಸುವ ಯತ್ನಕ್ಕೆ ಕೈ ಹಾಕಿದ್ದಾರೆ' ಎಂದು ತಿಳಿಸಿದ್ದಾರೆ.

'ಡಿಎಂಕೆ ದೇಶದಾದ್ಯಂತ ಸಮಾನ ಮನಸ್ಕ ವಿರೋಧ ಪಕ್ಷಗಳ ಜೊತೆಗೆ ಈ ಬಗ್ಗೆ ಚರ್ಚೆ ನಡೆಸಲಿದ್ದು, ಅಪ್ರಸ್ತುತವಾದ ಪದ್ಧತಿಯನ್ನು ರದ್ದುಗೊಳಿಸಲು ಮುಂದಿನ ಅಧಿವೇಶನದಲ್ಲಿಯೇ ತಿದ್ದುಪಡಿ ತರಲು ಒತ್ತಾಯಿಸಲಾಗುವುದು' ಎಂದು ತಿಳಿಸಿದ್ದಾರೆ.

ನ್ಯಾಯಾಧೀಶರ ವೈಯಕ್ತಿಕ ನಂಬಿಕೆ ತೀರ್ಪಿನಲ್ಲಿ ಜಾಗವಿಲ್ಲ: ಡಿಎಂಕೆ

ಚೆನ್ನೈ (ಪಿಟಿಐ): 'ಸನಾತನ ಧರ್ಮ' ಕುರಿತು ಉಪಮುಖ್ಯಮಂತ್ರಿ ಉದಯನಿಧಿ ಸ್ಟಾಲಿನ್ ಹೇಳಿಕೆಗೆ ಸಂಬಂಧಿಸಿ ಮದ್ರಾಸ್ ಹೈಕೋರ್ಟ್ ನೀಡಿರುವ ಆದೇಶ ತಪ್ಪು' ಎಂದು ಆಡಳಿತಾರೂಢ ಪಕ್ಷ ಡಿಎಂಕೆ ಗುರುವಾರ ಹೇಳಿದೆ.

ಅಲ್ಲದೆ, 'ಹೈಕೋರ್ಟ್ ನ್ಯಾಯಾಧೀಶರ ವೈಯಕ್ತಿಕ ನಂಬಿಕೆಗೆ ತೀರ್ಪಿನಲ್ಲಿ ಅವಕಾಶ ಇಲ್ಲ' ಎಂದು ಡಿಎಂಕೆ ವಕ್ತಾರ ಶರವಣನ್ ಅಣ್ಣಾದೊರೈ ಹೇಳಿದ್ದಾರೆ.

'ಸನಾತನ ಧರ್ಮವನ್ನು ನಿರ್ಮೂಲನೆ ಮಾಡಬೇಕು' ಎಂದು ಕಾರ್ಯಕ್ರಮವೊಂದರಲ್ಲಿ ಉದಯನಿಧಿ ಸ್ಟಾಲಿನ್ ಕರೆನೀಡಿದ್ದರು. ಈ ಹೇಳಿಕೆ ಖಂಡಿಸಿ ಬಿಜೆಪಿ ನಾಯಕ ಅಮಿತ್ ಮಾಳವೀಯ ಪೋಸ್ಟ್ ಮಾಡಿದ್ದರು. ಈ ಸಂಬಂಧ ತಮ್ಮ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಮಾಳವೀಯ ಹೈಕೋರ್ಟ್ ಮೊರೆ ಹೋಗಿದ್ದರು.

ಅರ್ಜಿ ವಿಚಾರಣೆ ನಡೆಸಿದ್ದ ಮದ್ರಾಸ್ ಹೈಕೋರ್ಟ್‌ನ ಮದುರೆ ಪೀಠ, ಮಾಳವೀಯ ವಿರುದ್ಧ ದಾಖಲಾಗಿದ್ದ ಎಫ್‌ಐಆರ್ ರದ್ದು ಮಾಡಿ ಆದೇಶಿಸಿತ್ತು. ಉದಯನಿಧಿ ಅವರ ಹೇಳಿಕೆ 'ದ್ವೇಷ ಭಾಷಣ'ಕ್ಕೆ ಸಮ ಎಂದೂ ಹೇಳಿತ್ತು. ಮದುರೆ ಪೀಠದ ಈ ಆದೇಶ ಕುರಿತು ಪ್ರತಿಕ್ರಿಯಿಸಿರುವ ಶರವಣನ್, 'ಈ ತೀರ್ಪು ತಪ್ಪು' ಎಂದು ಹೇಳಿದರು.

'ಮತ್ತೊಂದು ಬದಿಯವರ ವಾದ ಆಲಿಸದೇ ತೀರ್ಪು ನೀಡಬಾರದು ಎಂಬುದು ನ್ಯಾಯಶಾಸ್ತ್ರದ ತತ್ವ. ಮದುರೆ ಪೀಠದ ಆದೇಶ ಈ ತತ್ವಕ್ಕೆ ಅನುಗುಣವಾಗಿಲ್ಲ' ಎಂದರು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಮಹಾರಾಷ್ಟ್ರದಲ್ಲಿ ಇತ್ತೀಚೆಗೆ ನಡೆದ ನಗರ ಪಾಲಿಕೆ ಚುನಾವಣೆಯಲ್ಲಿ ಮತಗಟ್ಟೆಯೊಂದರಲ್ಲಿ ಸ್ವಾಮೀಜಿಗಳು ಸರತಿ ಸಾಲಿನಲ್ಲಿ ನಿಂತು ಮತದಾನ ಮಾಡಿದ್ದಾರೆ ಎಂದು ಪ್ರತಿಪಾದಿಸುತ್ತಾ ಹಲವರು ಸಾಮಾಜಿಕ ಜಾಲತಾಣಗಳಲ್ಲಿ ವಿಡಿಯೊವೊಂದನ್ನು ಹಂಚಿಕೊಳ್ಳುತ್ತಿದ್ದಾರೆ. 'ಟೊಪ್ಪಿ ಮತ್ತು ಬುರ್ಕಾ ಧರಿಸಿದವರು ಮತದಾನ ಮಾಡುವುದನ್ನು ನೀವು ನೋಡಿರುತ್ತೀರಿ. ಆದರೆ, ಇದನ್ನೂ ನೋಡಿ' ಎಂಬ ಒಕ್ಕಣೆಯನ್ನು ವಿಡಿಯೊದಲ್ಲಿ ಬರೆಯಲಾಗಿದೆ. ಆದರೆ, ಇದು ಸುಳ್ಳು.

ವಿಡಿಯೊದ ಕೀ ಫ್ರೇಮ್ ಒಂದನ್ನು ರಿವರ್ಸ್ ಇಮೇಜ್ ಸರ್ಚ್ ವಿಧಾನದ ಮೂಲಕ ಆನ್‌ಲೈನ್‌ನಲ್ಲಿ ಹುಡುಕಿದಾಗ 2024ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಇದೇ ವಿಡಿಯೊ ಅಪ್‌ಲೋಡ್ ಆಗಿದ್ದು ಕಂಡು ಬಂತು. ಆಗಲೂ ಹಲವರು ಈ ವಿಡಿಯೊವನ್ನು ಹಂಚಿಕೊಂಡಿದ್ದರು. ಅದು ಗುಜರಾತ್ ವಡೋದರಾದಲ್ಲಿನ ಮತಗಟ್ಟೆಗೆ ಸಂಬಂಧಿಸಿದ ವಿಡಿಯೊ ಆಗಿತ್ತು. ವಿಡಿಯೊವನ್ನು ಸೂಕ್ಷ್ಮವಾಗಿ ಗಮನಿಸಿದರೆ, ಮತಗಟ್ಟೆಯ ಗೋಡೆಯಲ್ಲಿ ಗುಜರಾತಿ ಭಾಷೆಯಲ್ಲಿ ಬರೆದಿರುವುದು ಕಂಡು ಬರುತ್ತದೆ. ಇದರ ಆಧಾರದಲ್ಲಿ ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಿದಾಗ ಸ್ವಾಮಿನಾರಾಯಣ ಸಂಪ್ರದಾಯದ ಸನ್ಯಾಸಿಗಳು 2024 ಮತ್ತು 2019ರ ಲೋಕಸಭಾ ಚುನಾವಣೆಗಳಲ್ಲಿ ಗುಜರಾತ್‌ನ ವಡೋದರಾದ ಮತಗಟ್ಟೆಯೊಂದರಲ್ಲಿ ಮತದಾನ ಮಾಡಲು ಸರತಿ ಸಾಲಿನಲ್ಲಿ ನಿಂತಿದ್ದ ಫೋಟೊಗಳು ಮತ್ತು ವಿಡಿಯೊಗಳು ಸಿಕ್ಕಿದವು. ಆಕಾಶವಾಣಿ (ಆಲ್ ಇಂಡಿಯಾ ರೇಡಿಯೊ) ಕೂಡ ತನ್ನ ಎಕ್ಸ್ ಖಾತೆಯಲ್ಲಿ 2019ರ ಚುನಾವಣೆಯಲ್ಲಿ ಸ್ವಾಮಿನಾರಾಯಣ ಪರಂಪರೆಯ ಸ್ವಾಮೀಜಿಗಳು ಮತದಾನ ಮಾಡಲು ಮತಗಟ್ಟೆಗೆ ಬಂದಿರುವ ಫೋಟೊವನ್ನು ಹಂಚಿಕೊಂಡಿತ್ತು. ಇದು ಗುಜರಾತ್‌ಗೆ ಸಂಬಂಧಿಸಿದ್ದ ವಿಡಿಯೊವಾಗಿದ್ದು, ಹಳೆಯದು. ಈಗ ಜಾಲತಾಣಗಳಲ್ಲಿ ಮಹಾರಾಷ್ಟ್ರದ ವಿಡಿಯೊ ಎಂದು ತಪ್ಪಾಗಿ ಹಂಚಿಕೊಳ್ಳಲಾಗುತ್ತಿದೆ ಎಂದು ಬೂಮ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಸಮಾಜದ ವಿರೋಧ ಮತ್ತು ನಾವು

ನುಡಿ ಬೆಳಗು

ರೇಣುಕಾ ನಿಡಗುಂದಿ

ಗಂಗಾತೀರದಲ್ಲಿ ಒಬ್ಬ ಸಂತರು ತಮ್ಮ ಶಿಷ್ಯರಿಗೆ ಬೋಧಿಸುತ್ತಿದ್ದರು. ಆಗ ಒಬ್ಬ ಶಿಷ್ಯ ಕೇಳುತ್ತಾನೆ: 'ಗುರುಗಳೇ, ನಾವು ಏನಾದರೂ ಹೊಸತನ್ನು, ಒಳ್ಳೆಯ ಕಾರ್ಯವನ್ನು ಮಾಡಹೊರಟರೆ ಸಮಾಜ ಅದನ್ನು ವಿರೋಧಿಸುತ್ತದೆ. ಆಗ ನಾವೇನು ಮಾಡಬೇಕು?'

ಗುರು ಸ್ವಲ್ಪ ಯೋಚಿಸಿ, ಈ ಪ್ರಶ್ನೆಗೆ ಉತ್ತರವನ್ನು ನಾಳೆ ಕೊಡುವುದಾಗಿ ಹೇಳುತ್ತಾರೆ.

ಮರುದಿನ ಎಲ್ಲಾ ಶಿಷ್ಯಂದಿರು ನದಿಯ ತಟದಲ್ಲಿ ಸೇರುತ್ತಾರೆ. ಗುರು ಹೇಳುತ್ತಾರೆ: 'ನಾವು ಇಂದು ಒಂದು ಪ್ರಯೋಗವನ್ನು ಮಾಡೋಣ. ಮೀನಿಗೆ ಗಾಳ ಹಾಕುವ ಈ ಮೂರು ಕೋಲುಗಳನ್ನು ನೋಡಿರಿ. ಇವು ಒಂದೇ ಗಳುವಿನಿಂದ ಮಾಡಿದವು, ಒಂದೇ ಆಕಾರದವು'. ಬಳಿಕ ಗುರು ಪ್ರಶ್ನೆ ಮಾಡಿದ ಶಿಷ್ಯನನ್ನು ಮುಂದೆ ಕರೆದು, 'ಮಗೂ ಈ ಗಾಳ ತಗೋ, ಮೀನು ಹಿಡಿ' ಎಂದು ಆದೇಶಿಸುತ್ತಾರೆ.

ಶಿಷ್ಯನು ಗಾಳಕ್ಕೆ ಸಿಕ್ಕಿಸಿದ ಕೊಕ್ಕೆಗೆ ಎರೆಹುಳು ಚುಚ್ಚಿ ನೀರಲ್ಲಿ ಗಾಳಹಾಕುತ್ತಾನೆ. ತಕ್ಷಣ ಒಂದು ದೊಡ್ಡ ಮೀನು ಸಿಕ್ಕಿಕೊಳ್ಳುತ್ತದೆ. 'ಬೇಗ.. ನಿನ್ನ ಶಕ್ತಿಯನ್ನೆಲ್ಲ ಪ್ರಯೋಗಿಸಿ ಗಾಳವನ್ನು ಹಿಂದಕ್ಕೆಳೆದುಕೋ' ಎಂದು ಗುರು ಹೇಳುತ್ತಾರೆ.

ಶಿಷ್ಯ ಹಾಗೆಯೇ ಮಾಡಿದ. ಮೀನೂ ಅಷ್ಟೇ ಬಲವಾಗಿ ಬಿಡಿಸಿಕೊಂಡು ಓಡಲು ಪ್ರಯತ್ನಿಸಿತು. ಪರಿಣಾಮವಾಗಿ ಕೋಲು ಮುರಿದುಹೋಯಿತು.

'ಪರವಾಗಿಲ್ಲ, ಈ ಎರಡನೇ ಗಾಳವನ್ನು ತಗೋ, ಮತ್ತೆ ಪ್ರಯತ್ನಿಸು'. ಶಿಷ್ಯ ಮತ್ತೆ ಗಾಳ ಹಾಕುತ್ತಾನೆ. ಈ ಬಾರಿಯೂ ಮೀನು ಸಿಕ್ಕಿಕೊಳ್ಳುತ್ತದೆ. ಆಗ ಗುರು, 'ನಿಧಾನ, ಹಗುರವಾಗಿ ಗಾಳವನ್ನು ಎಳೆ' ಎಂದರು. ಶಿಷ್ಯ ಹಾಗೇ ಮಾಡಿದ. ಆದರೆ, ಮೀನು ಎಷ್ಟು ಬಲವಾಗಿ ಎಳೆಯಿತೆಂದರೆ, ಕೈಯಿಂದ ಗಾಳವೇ ಬಿದ್ದುಹೋಯ್ತು.

ಗುರು, 'ಓಹೋ ಮೀನು ನುಣುಚಿಕೊಂಡಿತು. ಈ ಕೊನೆಯ ಗಾಳವನ್ನು ತಗೊಂಡು ಮತ್ತೆ ಪ್ರಯತ್ನಿಸು' ಎನ್ನುತ್ತಾರೆ. ಶಿಷ್ಯ ಹಾಗೇ ಮಾಡಿದ. ಈ ಬಾರಿಯೂ ಮೀನು ಸಿಕ್ಕಿಕೊಳ್ಳುತ್ತದೆ. ಆಗ ಗುರು, 'ನಿಧಾನವಾಗಿ, ಈ ಸಲ ಹೆಚ್ಚಿನ ಬಲವನ್ನೂ ಹಾಕಬೇಡ, ಕಡಿಮೆ ಬಲವನ್ನೂ ಹಾಕಬೇಡ. ಮೀನು ಯಾವ ಶಕ್ತಿ ಬಲದಿಂದ ಗಾಳವನ್ನು ಒಳಕ್ಕೆಳೆಯುತ್ತದೋ ಅಷ್ಟೇ ಪ್ರಮಾಣದ ಬಲದಿಂದ ಗಾಳವನ್ನು ಹೊರಗೆಳೆ' ಎಂದರು. ಶಿಷ್ಯ ಹಾಗೇ ಮಾಡಿದ. ಈ ಬಾರಿ ಮೀನು ತಪ್ಪಿಸಿಕೊಳ್ಳಲಾಗದೇ ಗಾಳಕ್ಕೆ ಸಿಕ್ಕಿಬೀಳುತ್ತದೆ.

ಗುರು ಶಿಷ್ಯರನ್ನು ಕೇಳುತ್ತಾರೆ: 'ಇದರಿಂದ ಏನನ್ನು ಕಲಿತಿರಿ? ಈ ಮೀನುಗಳು ನಮ್ಮ ಸಮಾಜವಿದ್ದಂತೆ. ನೀವು ಮಾಡುವ ಕೆಲಸಗಳಿಗೆ ವಿರೋಧವುಂಟುಮಾಡುತ್ತವೆ. ಒಂದು ವೇಳೆ ನೀವು ಅದರ ವಿರುದ್ಧ ಅಧಿಕ ಶಕ್ತಿಪ್ರಯೋಗ ಮಾಡಿದರೆ ನೀವು ಕುಸಿಯುತ್ತೀರಿ, ಅದೇ ರೀತಿ ಕಡಿಮೆ ಒತ್ತಡ ಹಾಕಿದಾಗ ಸಮಾಜ ನಿಮ್ಮನ್ನು ಹಾಗೂ ನಿಮ್ಮ ಯೋಜನೆಗಳನ್ನು ನಷ್ಟಗೊಳಿಸುತ್ತದೆ. ಆದರೆ ನೀವು ಅದರ ವಿರೋಧದ ಪ್ರಮಾಣದಷ್ಟೇ ನಿಮ್ಮ ಬಲವನ್ನು ಪ್ರಯೋಗಿಸತೊಡಗಿದಾಗ, ಅದು ನಿಧಾನವಾಗಿ ದಣಿಯುತ್ತದೆ, ಮಣಿಯುತ್ತದೆ. ತನ್ನ ಸೋಲನ್ನು ಒಪ್ಪಿಕೊಳ್ಳುತ್ತದೆ. ಆಗ ನೀವು ಗೆಲ್ಲುತ್ತೀರಿ. ಆದ್ದರಿಂದ ಸಮಾಜಕ್ಕೆ ಪ್ರಯೋಜನವಾಗುವಂತಹ ಕಾರ್ಯಗಳನ್ನು ಮಾಡಲುಹೊರಟಾಗ ಸಮಾಜ ನಿಮ್ಮನ್ನು ವಿರೋಧಿಸಿದರೆ ಸಮಾನ ಬಲ ಪ್ರಯೋಗದ ಸಿದ್ಧಾಂತವನ್ನು ಅನುಸರಿಸಿರಿ, ಆಗ ನೀವು ಯಶಸ್ವಿಯಾಗುತ್ತೀರಿ' ಎನ್ನುತ್ತಾರೆ.

ಪದಬಂಧ 6293

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ದೇಶದ ಒಂದು ವಿಭಾಗ (3)
4.ದೈನ್ಯಕ್ಕೆ ಒಳಗಾಗಿರುವೆನೆಂಬ ಭಾವ (4)
6.ಗೌರವ ಸೂಚಕವಾಗಿ ಕೈಮುಗಿದು ತಲೆಬಾಗುವುದು (4)
7.ರಜದಲ್ಲಿ ಖರೀದಿಸಿರುವ ಬೆಳ್ಳಿ (3)
10.ಬಿಡದಿ ಹತ್ತಿರವಿರುವ ಹೆಂಡತಿ (3)
12.ಇದಿನ್ನೂ ಎಳೆ ಮಗು (4)
15.ಲಯ ನಡುವಿದ್ದಾಗ ಕಾಣಿಸಿದ ಶ್ರೀಗಂಧ (4)
16.ಪಿತ್ತಕೋಶ ಇಲ್ಲಿದೆ (3)

ಮೇಲಿಂದ ಕೆಳಕ್ಕೆ
1.ವೇದಗಳಿಂದ ಸಂಗ್ರಹಿಸಿದ ಭಾಗ (3)
2.ಹೊಳೆಯ ದಡವಿದು (4)
3.ವನದ ಕೊನೆಗಿರುವ ಮನೆ (3)
5.ತರತರದ ಕಾಯಿ ಪಲ್ಲೆ (4)
8.ಕನ್ನಡ ಸಂಸ್ಕೃತಗಳೆರಡಕ್ಕೂ ಸಮಾನವಾದ ಶಬ್ದ (3)
9.ಮರದೊಳಗೆ ಚಲುವಾದುದು ಕಂಡಿದೆ (4)
11.ಎಲ್ಲದಿಕ್ಕುಗಳಲ್ಲಿರುವ ರಾಜ್ಯಗಳನ್ನು ಗೆಲ್ಲುವುದು (4)
13.ಒಳ್ಳೆಯ ಬುದ್ಧಿ (3)
14.ಆ ಹೊತ್ತು ಎದುರಾದ ತೊಂದರೆ (3)



6292ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅವಭೃಥಸ್ನಾನ 4.ಗುರಿಕಾರ
5.ಸನದು 7.ಬುದ್ಬುದ
10.ರಿವಾಜು
12.ಕನಕ 13.ನಕ್ತಂಚರ
15.ವಿಚಾರವೇದಿಕೆ

ಮೇಲಿಂದ ಕೆಳಕ್ಕೆ:
1.ಅವಸರ 2.ನಗು
3. ಪಾರತಂತ್ರ್ಯ 6.ದುರಾಚಾರಿ
7.ಬುರುಜು 8.ದಣಾಯಕ
9.ಬಡನಡು 11.ತುಕಡಿಕೆ
14.ರವಿ

ಸುಡೊಕು 6677

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

7		4		5			9	
	2		1		9	6		5
		5		3			1	
					4	1		9
9		1	5	8			4	
4				1		3		7
			3		7			1
	6			9	1	7		
				2			6	4

6676 ಸುಡೊಕು

8	7	9	6	2	1	3	4	5
3	2	6	5	4	8	9	1	7
1	4	5	9	7	3	2	8	6
2	6	8	1	3	5	4	7	9
9	3	1	7	8	4	5	6	2
4	5	7	2	9	6	1	3	8
6	9	2	3	1	7	8	5	4
7	1	4	8	5	9	6	2	3
5	8	3	4	6	2	7	9	1

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

23 ಜನವರಿ 2026 ಶುಕ್ರವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಶುಕ್ಲ ಪಂಚಮಿ ಗಂ. 25-47 ನಕ್ಷತ್ರ: ಪೂರ್ವಾಭಾದ್ರ ಗಂ. 14-33 ಯೋಗ: ಪರಿಘ ಗಂ. 15-59 ಕರಣ: ಬವ ಗಂ. 14-11 ಮಕರ ಮಾಸದ 09 ನೇ ದಿನ. ಮಳೆ ನಕ್ಷತ್ರ : ಉತ್ತರಾಷಾಢ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30-12-00 ಸೂರ್ಯೋದಯ : 07-01 ಸೂರ್ಯಾಸ್ತ : 06-23, ಮುಸ್ಲಿಂ ದಿನಾಂಕ : 3 ಶಬನ್, ದಿನ ವಿಶೇಷ : ವಸಂತ ಪಂಚಮಿ, ಅದೃಷ್ಟ ಸಂಖ್ಯೆ : 6, 4

ಮೇಷ: ಜೀವನಶೈಲಿಯಲ್ಲಿ ಮಹತ್ತರ ಬದಲಾವಣೆಗಳನ್ನು ತಂದುಕೊಳ್ಳುವ ಸನ್ನಿವೇಶ ಬರಲಿದೆ. ಉತ್ತಮ ಕಾರ್ಯ ಮಾಡಿದವರನ್ನು ಮುಕ್ತವಾಗಿ ಶ್ಲಾಘಿಸುವ ಮನಸ್ಥಿತಿ ವೃದ್ಧಿಸಿಕೊಳ್ಳಿ. ಉತ್ತಮ ಪರಿಶ್ರಮಕ್ಕೆ ಲಾಭ ಸಿಗುತ್ತದೆ.

ವೃಷಭ: ಹೊಸ ಜವಾಬ್ದಾರಿಗಳು ಅಂದುಕೊಂಡಷ್ಟು ಸುಲಭವಾದದ್ದಲ್ಲದೇ ಇರುವುದರಿಂದ ಹೊಂದಿಕೊಳ್ಳಲು ಅಧಿಕ ಪರಿಶ್ರಮ ಬೇಕಾಗುತ್ತದೆ. ತಾಂತ್ರಿಕ ವಿದ್ಯಾಭ್ಯಾಸದಲ್ಲಿ ಉನ್ನತ ಯಶಸ್ಸು ದೊರೆತು ಆನಂದವಾಗುತ್ತದೆ.

ಮಿಥುನ: ವಕೀಲಿ ವೃತ್ತಿಯವರಿಗೆ ನಿಗೂಢ ಅಥವಾ ಅಗತ್ಯವಿರುವ ವಿಷಯ ಸಂಗ್ರಹಣೆಗೆ ಅತ್ಯಂತ ಸೂಕ್ತವಾಗಿರುತ್ತದೆ. ಗುಂಪು ಚಟುವಟಿಕೆಗಳಿಗೆ ಮುಂದಾಳತ್ವವು ಅನಗತ್ಯ.

ಕರ್ಕಾಟಕ: ಹೃದಯ ಸಂಬಂಧ ಅನಾರೋಗ್ಯದ ವಿಚಾರದಲ್ಲಿ ನಿರ್ಲಕ್ಷ್ಯ ತೋರುವುದು ಸರಿಯಲ್ಲ. ಮನೆ ನಿರ್ಮಾಣ ಕಾರ್ಯವನ್ನು ಅನಿವಾರ್ಯಕ್ಕೆ ನಿಲ್ಲಿಸಬೇಕಾಗುತ್ತದೆ. ವಾದವಿವಾದಗಳಿಗೆ ತೆರೆ ಎಳೆಯುವ ಪ್ರಯತ್ನ ಮಾಡಿ.

ಸಿಂಹ: ಶ್ರೀಮಂತಿಕೆಯ ಬದುಕಿಗೆ ಮನಸ್ಸು ಹಾತೊರೆಯುವುದು. ಹಾಸಿಗೆ ಇದ್ದಷ್ಟು ಕಾಲು ಚಾಚು ಎಂಬುವ ಮಾತನ್ನು ಮರೆಯದಿರಿ. ಔದಾರ್ಯ ಬುದ್ಧಿ ತೋರಿದಲ್ಲಿ ವಂಚನೆಗೆ ಒಳಗಾಗುವ ಸನ್ನಿವೇಶಗಳಿವೆ.

ಕನ್ಯಾ: ಜವಳಿ ವ್ಯಾಪಾರಿಗಳಿಗೆ ವಿಶೇಷ ರಿಯಾಯಿತಿ ಮಾರಾಟಗಳಿಂದ ಲಾಭ ಉಂಟಾಗುವುದು. ದವಸ ಧಾನ್ಯಗಳ ದಾಸ್ತಾನಿಗಾಗಿ ಬಂಡವಾಳ ಹೂಡುವುದು ಸರಿಯಲ್ಲ. ಮಿತ್ರರಿಂದ ಸಂತಸ ಹೊಂದುವಿರಿ.

ತುಲಾ: ಸಾಧ್ಯವಾದಷ್ಟು ತಾಳ್ಮೆಯಿಂದ ಮುಂದುವರಿದಲ್ಲಿ ನೆಮ್ಮದಿ ಕಾಣುವಿರಿ. ಅಚ್ಚರಿಯ ಸುದ್ದಿ ಕೇಳಲಿರುವಿರಿ. ಇಂದಿನ ಆಫೀಸಿನ ಕೆಲಸಗಳೂ ಬೇಗನೇ ಮುಗಿಯುವುದು.

ವೃಶ್ಚಿಕ: ಹಿರಿಯ ಅಧಿಕಾರಿಗಳ ಅಥವಾ ಆಪ್ತರ ಸಹಾಯ ಸಿಗುವುದು. ಮತ್ತೊಬ್ಬರ ಅವಲಂಬನೆ ಬೇಡವೆನಿಸುತ್ತದೆ. ದೈವಾನುಕೂಲದಿಂದ ನಡೆಯಬೇಕಾದ ಶುಭ ಕಾರ್ಯಗಳನ್ನು ನಿಶ್ಚಯ ಮಾಡಬಹುದು.

ಧನು: ವಾಹನ ಮಾರಾಟದ ಯೋಚನೆಯಲ್ಲಿರುವವರು ಸದ್ಯದ ಮಟ್ಟಿಗೆ ಆ ಯೋಚನೆ ಕೈಬಿಡಿ. ವಿದ್ಯುತ್ತಿನ ಜೊತೆಯಲ್ಲಿ ಕಾರ್ಯ ನಿರ್ವಹಿಸುವವರು ಜಾಗರೂಕತೆ ವಹಿಸಬೇಕು.

ಮಕರ: ಆಲಸ್ಯದಿಂದಾಗಿ ಅಧಿಕಾರ ಹೋಗುವ ಪರಿಸ್ಥಿತಿ ಉಂಟಾಗುವುದು. ಎಚ್ಚರದಿಂದಿರಿ. ನೂತನ ವ್ಯಾಪಾರಿಗಳು ವ್ಯಾಪಾರದಲ್ಲಿ ಪ್ರಬುದ್ಧತೆಯಿಂದ ವ್ಯವಹರಿಸಿ. ಜಮೀನಿನ ಖರೀದಿ ವಿಚಾರದ ಮಾತುಕತೆಗಳು ನಡೆಯಲಿವೆ.

ಕುಂಭ: ಲೇವಾದೇವಿ ವ್ಯವಹಾರ ಮಾಡುವವರಿಗೆ ಜವಾಬ್ದಾರಿಯ ಹೊರೆ, ಮಾನಸಿಕ ಒತ್ತಡ ಹೆಚ್ಚಲಿದೆ. ಬಂಧುಗಳ ಮನೆಯ ಶುಭಕಾರ್ಯಗಳಲ್ಲಿ ಜವಾಬ್ದಾರಿ ಮತ್ತು ಓಡಾಟವಿರುವುದು. ಸಂತಸದ ಸುದ್ದಿ ಕೇಳುವಿರಿ.

ಮೀನ: ಯಾರಿಗೂ ಶಕ್ತಿಯಿಂದ ಗೆಲ್ಲಲಾಗದ ಕೆಲವು ಸವಾಲುಗಳನ್ನು ಯುಕ್ತಿಯಿಂದ ಸರಳವಾಗಿ ಗೆದ್ದು ಬೀಗುವಿರಿ. ವ್ಯವಹಾರ ಒಪ್ಪಂದಗಳು ಲಾಭ ತರಲಿವೆ. ಸ್ನೇಹಿತರಿಗೆ ಸಹಾಯ ಮಾಡುವ ಬಗ್ಗೆ ನಿರ್ಧರಿಸಿ.

ಗುಂಡಣ್ಣ



ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ:	25,157
ಇಂದಿನ ಅಂತ್ಯ:	25,289
ದಿನದ ಕನಿಷ್ಠ:	25,168
	132

ಮೊಟ್ಟೆ ಧಾರಣೆ (ಎನ್‌ಇಸಿಸಿ)

ಬೆಂಗಳೂರು		
	100 ಕ್ಕೆ	₹550
	12 ಕ್ಕೆ	₹75
ಮೈಸೂರು:	100 ಕ್ಕೆ	₹550

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-765
ದ್ವಿತಳಿ (ಬಿ.ವಿ)	₹222-920

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹190
ಆರ್‌ಎಸ್‌ಎಸ್-5	₹185
ಗುಡ್ ಲಾಟ್	₹174

ಮುದ್ರೆ-ಮನೆ ಕಾಫಿ (50 ಕೆಜಿಗೆ)

ಎಪಿ	₹26.150
ಎಸಿ	₹14,140
ಆರ್‌ಪಿ	₹17,400
ಆರ್‌ಸಿ	₹10,300

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹28500-28500
ತಿಪಟೂರು	₹28000-29076
ತುರುವೇಕೆರೆ	₹27500-29000

ಮುಂಬೈ ಧಾರಣೆ (ಶೇಂಗಾ)

22-01-2026	
ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10500-10600
ದಪ್ಪ ಮಧ್ಯಪ್ರದೇಶ (ಹೊಸ)	8200-8300
ದಪ್ಪ ಗುಜರಾತ್ (ಹೊಸ)	9500-9600
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1660 (1645)
ಒಂದು ವಾರದ ಡೆಲಿವರಿ	1655 (1640)
ಪಾಮ್ ವಾರದ ಡೆಲಿವರಿ	1298 (1293)
ಸೂರ್ಯಕಾಂತಿ ಎಣ್ಣೆ ಕಚ್ಚಾ	1530 (1515)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,50,600 (1,54,000)
ಬೆಳ್ಳಿ ಕೆ.ಜಿಗೆ	2,99,900 (3,18,500)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಈರುಳ್ಳಿ ಧಾರಣೆ
ಬೆಂಗಳೂರು (ಕ್ವಿಂಟಲ್‌ಗೆ)

ದೊಡ್ಡ	₹1600-2500
ಮಧ್ಯಮ	₹1000-1400
ಸಣ್ಣ	₹400-1000

3 ದಿನಗಳ ನಂತರ ಪುಟಿದ ಷೇರುಪೇಟೆ

ವ್ಯಾಪಾರ ಒಪ್ಪಂದ, ಗ್ರೀನ್‌ಲ್ಯಾಂಡ್ ಕುರಿತು ಅಧ್ಯಕ್ಷ ಟ್ರಂಪ್ ಮಾತಿನ ಪರಿಣಾಮ

ಮುಂಬೈ (ಪಿಟಿಐ): ಸತತ ಮೂರು ದಿನಗಳಿಂದ ಕುಸಿತ ಕಾಣುತ್ತಿದ್ದ ದೇಶದ ಷೇರುಪೇಟೆ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಗುರುವಾರದ ವಹಿವಾಟಿನಲ್ಲಿ ಪುಟಿದೆದ್ದಿವೆ.

ಭಾರತದ ಜೊತೆ ಅಮೆರಿಕವು ಒಳ್ಳೆಯ ವ್ಯಾಪಾರ ಒಪ್ಪಂದವೊಂದನ್ನು ಮಾಡಿಕೊಳ್ಳಲಿದೆ ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರುವುದು ಹಾಗೂ ಗ್ರೀನ್‌ಲ್ಯಾಂಡ್ ವಿಚಾರವಾಗಿ ಅವರು ಮಾತುಕತೆಯ ಮಾರ್ಗ ಅನುಸರಿಸುವ ಸೂಚನೆ ನೀಡಿದ ನಂತರದಲ್ಲಿ ಜಾಗತಿಕ ಷೇರು ಮಾರುಕಟ್ಟೆಗಳಲ್ಲಿ ತೇಜಿ ವಹಿವಾಟು ನಡೆಯಿತು.

ರೂಪಾಯಿ ಮೌಲ್ಯದಲ್ಲಿ ಕಂಡುಬಂದ ತುಸು ಮಟ್ಟಿಗಿನ ಚೇತರಿಕೆ ಹಾಗೂ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿನ ಅಲ್ಪ ಇಳಿಕೆ ಕೂಡ ಸೂಚ್ಯಂಕ ಏರಿಕೆಗೆ ನೆರವಾದವು ಎಂದು ವರ್ತಕರು ತಿಳಿಸಿದ್ದಾರೆ.

ಗುರುವಾರದ ವಹಿವಾಟಿನಲ್ಲಿ ಸೆನ್ಸೆಕ್ಸ್ 397 ಅಂಶ, ನಿಫ್ಟಿ 132 ಅಂಶ ಏರಿಕೆ ಕಂಡಿವೆ. 'ಗ್ರೀನ್‌ಲ್ಯಾಂಡ್ ವಿಚಾರವಾಗಿ ಜಾಗತಿಕ ಮಟ್ಟದಲ್ಲಿ ಸೃಷ್ಟಿಯಾಗಿದ್ದ ಬಿಕ್ಕಟ್ಟು ತಣ್ಣಗಾಗುವ ಸೂಚನೆಗಳು ಬಂದಿವೆ. ಈ ಹಿನ್ನೆಲೆಯಲ್ಲಿ ಮಾರುಕಟ್ಟೆಯಲ್ಲಿ ಹೊಸದಾಗಿ ಷೇರುಗಳನ್ನು ಖರೀದಿಸುವ ಉಮೇದು ಮೂಡಿದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಂಪತ್ತು ನಿರ್ವಹಣಾ ವಿಭಾಗದ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

'ಅಲ್ಲದೆ, ಭಾರತ ಮತ್ತು ಅಮೆರಿಕ ನಡುವಿನ ವ್ಯಾಪಾರ ಒಪ್ಪಂದದ ವಿಚಾರವಾಗಿ ಹೊಸದಾಗಿ ಆಶಾಭಾವನೆ ಮೂಡಿದೆ' ಎಂದು ಕೂಡ ಅವರು ತಿಳಿಸಿದ್ದಾರೆ.

ಚಿನ್ನ, ಬೆಳ್ಳಿ ಬೆಲೆ ಇಳಿಕೆ

ನವದೆಹಲಿ (ಪಿಟಿಐ): ಬೆಳ್ಳಿ ಹಾಗೂ ಚಿನ್ನದ ದರವು ಸಾರ್ವಕಾಲಿಕ ಗರಿಷ್ಠ ಮಟ್ಟದಿಂದ ಕೆಳಕ್ಕೆ ಬಂದಿವೆ. ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ನಡೆದ ವಹಿವಾಟಿನಲ್ಲಿ ಚಿನ್ನದ (ಶೇ 99.9ರಷ್ಟು ಪರಿಶುದ್ಧ) ಬೆಲೆಯು 10 ಗ್ರಾಂಗೆ ₹2,500ರಷ್ಟು ಕಡಿಮೆ ಆಗಿದೆ.

ಹೂಡಿಕೆದಾರರು ಲಾಭ ಗಳಿಕೆಯ ಉದ್ದೇಶದಿಂದ ಅಮೂಲ್ಯ ಲೋಹಗಳನ್ನು ಮಾರಾಟ ಮಾಡಿದ್ದಾರೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ಹೇಳಿದೆ.

ಸತತ ಒಂಬತ್ತು ದಿನಗಳಿಂದ ಏರಿಕೆ ಕಾಣುತ್ತಿದ್ದ ಬೆಳ್ಳಿಯ ಬೆಲೆಯು ಗುರುವಾರ ಕೆ.ಜಿ.ಗೆ ₹14,300ರಷ್ಟು ಕುಸಿದಿದೆ. ಇಲ್ಲಿನ ಚಿನಿವಾರ ಪೇಟೆಯಲ್ಲಿ ಬೆಳ್ಳಿಯ ಬೆಲೆಯು ₹3.20 ಲಕ್ಷ ಆಗಿದೆ.

'ಯುರೋಪಿನ ದೇಶಗಳ ಮೇಲೆ ಸುಂಕ ಹೇರುವ ಬೆದರಿಕೆಯನ್ನು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಹಿಂಪಡೆದರು. ಗ್ರೀನ್‌ಲ್ಯಾಂಡ್ ಕುರಿತಾಗಿ ಮುಂದಿನ ಹೆಜ್ಜೆ ಇರಿಸಲು ಚೌಕಟ್ಟೊಂದನ್ನು ರೂಪಿಸಲಾಗಿದೆ ಎಂದು ತಿಳಿಸಿದರು. ಇದಾದ ನಂತರದಲ್ಲಿ ಚಿನ್ನ, ಬೆಳ್ಳಿಯ ಬೆಲೆಯು ಇಳಿಕೆ ಕಂಡಿದೆ' ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ಸರಕುಗಳ ವಿಭಾಗದ ಹಿರಿಯ ವಿಶ್ಲೇಷಕ ಸೌಮಿಲ್ ಗಾಂಧಿ ಹೇಳಿದ್ದಾರೆ.

ಆಸ್ತಿ ದಾಖಲೆ ನಕಲಿ ತಡೆಗೆ ಬ್ಲಾಕ್‌ಚೈನ್ ತಂತ್ರಜ್ಞಾನ: ಸುಪ್ರೀಂ ಕೋರ್ಟ್ ತೀರ್ಪು

ನವದೆಹಲಿ: ನೋಂದಾಯಿತ ದಾಖಲೆಗಳು ಮತ್ತು ಭೂ ದಾಖಲೆಗಳ ಡಿಜಿಟಲೀಕರಣಕ್ಕೆ ಬ್ಲಾಕ್‌ಚೈನ್‌ನಂತಹ ಸುರಕ್ಷಿತ ತಂತ್ರಜ್ಞಾನ ಬಳಸಿಕೊಂಡು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕ್ರಮ ಕೈಗೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ಗುರುವಾರ ತೀರ್ಪು ನೀಡಿದೆ.

ಅಡಮಾನ ಪತ್ರ ವಿವಾದಕ್ಕೆ ಸಂಬಂಧಿಸಿದಂತೆ ಕರ್ನಾಟಕ ಹೈಕೋರ್ಟ್‌ನ ತೀರ್ಪು ಪ್ರಶ್ನಿಸಿ ಬೀದರ್‌ನ ಹೇಮಲತಾ ಎಂಬವರು ಸಲ್ಲಿಸಿದ್ದ ವಿಶೇಷ ಮೇಲ್ಮನವಿ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿಗಳಾದ ರಾಜೇಶ್ ಬಿಂದಾಲ್ ಹಾಗೂ ಮನಮೋಹನ್ ಅವರ ಪೀಠವು, 'ನಕಲಿ ಆಸ್ತಿ ದಾಖಲೆಗಳನ್ನು ಸೃಷ್ಟಿಸುವ ಪಿಡುಗನ್ನು ಮಟ್ಟ ಹಾಕಲು ಇಂತಹ ಸುಧಾರಣೆ ಅಗತ್ಯ' ಎಂದು ಅಭಿಪ್ರಾಯಪಟ್ಟಿದೆ.

ಬ್ಲಾಕ್ ಚೈನ್ ತಂತ್ರಜ್ಞಾನದಲ್ಲಿ ಆಸ್ತಿ ಮಾರಾಟ/ಖರೀದಿ/ವರ್ಗಾವಣೆಯ ದಿನಾಂಕ, ಆಸ್ತಿ ಮೌಲ್ಯ, ಮಾರಾಟಗಾರ/ಖರೀದಿದಾರ ಮೊದಲಾದ ಅಂಶಗಳು ಘಟಕಗಳ ರೂಪದಲ್ಲಿ ದಾಖಲಾಗಿರುತ್ತವೆ. ಡಿಜಿಟಲ್ ರೆಕಾರ್ಡ್ ಬುಕ್ ವ್ಯವಸ್ಥೆಯಾದ ಬ್ಲಾಕ್‌ಚೈನ್ ವ್ಯವಸ್ಥೆಯು ಮಾರಾಟ ಅಥವಾ ಅಡಮಾನ ಅಥವಾ ಅಂತಹುದೇ ವಹಿವಾಟನ್ನು ದಾಖಲಿಸಿದ ನಂತರ ಬದಲಾಗುವುದಿಲ್ಲ ಎಂದು ಅನೇಕ ತಜ್ಞರು ಅಭಿಪ್ರಾಯಪಟ್ಟಿದ್ದಾರೆ. ಆಧುನಿಕ ಆರ್ಥಿಕತೆಯಲ್ಲಿ ವ್ಯವಹಾರ ಸುಲಭಗೊಳಿಸಲು ಮತ್ತು ಆಸ್ತಿ ದಾಖಲೆಗಳ ಪಾವಿತ್ರ್ಯ ಎತ್ತಿ ಹಿಡಿಯಲು ಈ ತಂತ್ರಜ್ಞಾನದ ಅಳವಡಿಕೆ ತುರ್ತು ಅಗತ್ಯ ಎಂದು ಪೀಠ ಪ್ರತಿಪಾದಿಸಿದೆ.

ಕ್ಯಾರೆಟ್ ಮಾರಾಟಕ್ಕೆ ಸಿದ್ಧ

ಪಿಟಿಐ ಚಿತ್ರ

ಚಿಕ್ಕಮಗಳೂರಿನಲ್ಲಿ ರೈತರೊಬ್ಬರು ಕ್ಯಾರೆಟ್‌ಗಳನ್ನು ಕಿತ್ತು ಮಾರಾಟಕ್ಕಾಗಿ ಚೀಲದಲ್ಲಿ ತುಂಬಿ ಇರಿಸಿದರು

ಕಾಫಿ ರಫ್ತು ಇಳಿಕೆ

ನವದೆಹಲಿ (ಪಿಟಿಐ): 2025ರ ಕ್ಯಾಲೆಂಡರ್ ವರ್ಷದಲ್ಲಿ ದೇಶದ ಕಾಫಿ ರಫ್ತು ಶೇ 4.47ರಷ್ಟು ಇಳಿದಿದ್ದು 3.84 ಲಕ್ಷ ಟನ್ ಆಗಿದೆ. ಆದರೆ ಮೌಲ್ಯದ ಲೆಕ್ಕದಲ್ಲಿ ಶೇ 22.50ರಷ್ಟು ಹೆಚ್ಚಳ ಕಂಡು ಸರಿಸುಮಾರು ₹18,850 ಕೋಟಿ ಆಗಿದೆ.

2024ರಲ್ಲಿ ಒಟ್ಟು 4.02 ಲಕ್ಷ ಟನ್ ಕಾಫಿ ರಫ್ತಾಗಿತ್ತು. ಕಾಫಿ ಉತ್ಪಾದನೆಯಲ್ಲಿ ಭಾರತವು ಜಾಗತಿಕವಾಗಿ ಏಳನೆಯ ಸ್ಥಾನದಲ್ಲಿದೆ, ಕಾಫಿ ರಫ್ತಿನಲ್ಲಿ ಐದನೆಯ ಸ್ಥಾನದಲ್ಲಿದೆ.

ಕಾಫಿ ಮಂಡಳಿಯ ಬಳಿ ಇರುವ ಅಂಕಿ–ಅಂಶಗಳ ಪ್ರಕಾರ ಅರೇಬಿಕಾ ಕಾಫಿ ರಫ್ತು ಶೇ 65ರಷ್ಟು ಕಡಿಮೆ ಆಗಿದ್ದು, 15,607 ಟನ್‌ಗೆ ತಲುಪಿದೆ. ಇದು 2024ರಲ್ಲಿ 44,315 ಟನ್ ಆಗಿತ್ತು. ರೊಬಸ್ಟಾ ಕಾಫಿ ರಫ್ತು ಕೂಡ ಶೇ 13ರಷ್ಟು ಕಡಿಮೆ ಆಗಿ 1.80 ಲಕ್ಷ ಟನ್‌ಗೆ ತಲುಪಿದೆ. ಇದು 2025ರಲ್ಲಿ 2.07 ಲಕ್ಷ ಟನ್‌ನಷ್ಟು ಆಗಿತ್ತು.

ಸುದ್ದಿ 2 ನಿಮಿಷ

ಇಂಡಿಗೊ ಲಾಭ ಕುಸಿತ

ನವದೆಹಲಿ (ಪಿಟಿಐ): ಭಾರತದ ನಾಗರಿಕ ವಿಮಾನಯಾನ ಕ್ಷೇತ್ರದ ಅತಿದೊಡ್ಡ ಕಂಪನಿಯಾಗಿರುವ ಇಂಡಿಗೊ ಡಿಸೆಂಬರ್ ತ್ರೈಮಾಸಿಕದ ಲಾಭದಲ್ಲಿ ಶೇಕಡ 78ರಷ್ಟು ಇಳಿಕೆ ಕಂಡಿದೆ. ಹೊಸ ಕಾರ್ಮಿಕ ಸಂಹಿತೆಗಳ ಅನುಷ್ಠಾನ ಹಾಗೂ ಡಿಸೆಂಬರ್‌ನಲ್ಲಿ ವಿಮಾನಗಳ ಕಾರ್ಯಾಚರಣೆಯಲ್ಲಿ ಎದುರಾಗಿದ್ದ ಸಮಸ್ಯೆಗಳು ಲಾಭದ ಪ್ರಮಾಣವನ್ನು ತಗ್ಗಿಸಿವೆ.

ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹549 ಕೋಟಿ ಲಾಭ ಗಳಿಸಿದೆ. ಇದು ಹಿಂದಿನ ವರ್ಷದ ಇದೇ ಅವಧಿಯಲ್ಲಿ ₹2,448 ಕೋಟಿ ಆಗಿತ್ತು. ವಿಮಾನಗಳ ಸಂಚಾರದಲ್ಲಿ ಉಂಟಾದ ಸಮಸ್ಯೆಗಳ ಪರಿಣಾಮವಾಗಿ ಕಂಪನಿಯು ₹577 ಕೋಟಿ, ಹೊಸ ಕಾರ್ಮಿಕ ಸಂಹಿತೆಗಳ ಅನುಷ್ಠಾನದ ಕಾರಣದಿಂದಾಗಿ ₹969 ಕೋಟಿ ಹೊರೆ ಕಂಪನಿಯ ಮೇಲೆ ಬಿದ್ದಿದೆ.

ಆದರೆ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯ ವರಮಾನ ಹೆಚ್ಚಳವಾಗಿದೆ. ಹಿಂದಿನ ವರ್ಷದ ಡಿಸೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ₹22,992 ಕೋಟಿ ವರಮಾನ ಗಳಿಸಿತ್ತು. ಅದು ಈ ಬಾರಿ ₹24,540 ಕೋಟಿಗೆ ಹೆಚ್ಚಾಗಿದೆ.

'ಕಿರುಕುಳ ತಪ್ಪಿಸಿ, ಬಲ ತುಂಬಿ'

ಬೆಂಗಳೂರು: 'ಮೈಕ್ರೋ ಫೈನಾನ್ಸ್‌ಗಳು ಬಾಕಿ ವಸೂಲಿ ಹೆಸರಿನಲ್ಲಿ ಕಿರುಕುಳ ನೀಡುವುದನ್ನು ತಪ್ಪಿಸಿ ಸ್ವಯಂ ನಿಯಂತ್ರಣದೊಂದಿಗೆ ವಹಿವಾಟು ನಡೆಸಬೇಕು' ಎಂದು ಆರ್ಥಿಕ ಇಲಾಖೆ ಕಾರ್ಯದರ್ಶಿ ಆರ್.ವಿಶಾಲ್ ಸಲಹೆ ನೀಡಿದರು.

ನಗರದಲ್ಲಿ ಬುಧವಾರ ನಡೆದ ಮೈಕ್ರೋ ಫೈನಾನ್ಸ್ ಕರ್ನಾಟಕ ಶೃಂಗಸಭೆ–2026ನಲ್ಲಿ ಮಾತನಾಡಿದ ಅವರು, 'ಕಳೆದ ವರ್ಷ ದೇಶದ ಹಲವು ಕಡೆಗಳಲ್ಲಿ ಕಿರುಕುಳ ಪ್ರಕರಣ ವರದಿಯಾಗಿದ್ದವು. ಕರ್ನಾಟಕದಲ್ಲೂ ಈ ಸಂಖ್ಯೆ ಹೆಚ್ಚಿದ್ದವು' ಎಂದರು.

'ಫೈನಾನ್ಸ್‌ಗಳ ವಹಿವಾಟಿನ ಮೇಲೆ ನಿಯಂತ್ರಣ ಇಡಲೆಂದೇ ಸರ್ಕಾರ ಕಾಯ್ದೆಯನ್ನು ಜಾರಿಗೊಳಿಸಿದೆ. ಮೈಕ್ರೋ ಫೈನಾನ್ಸ್ ಸಮಾಜದಲ್ಲಿ ಅವಕಾಶವಂಚಿತ ಸಮುದಾಯಗಳಿಗೆ ಆರ್ಥಿಕ ಬಲ ತುಂಬುವ ವ್ಯವಸ್ಥೆಯಾಗಿದೆ. ಈ ವ್ಯವಸ್ಥೆ ಕುಸಿದರೆ ಆರ್ಥಿಕ ಏರುಪೇರು ಆಗಲಿದ್ದು ಸರ್ಕಾರದ ಮೇಲೂ ಪರಿಣಾಮ ಬೀರಲಿದೆ' ಎಂದು ಹೇಳಿದರು.

'ಮೈಕ್ರೋ ಫೈನಾನ್ಸ್ ವಲಯ ಮುಂದಿನ ಮೂರ್ನಾಲ್ಕು ದಶಕದಲ್ಲಿ ಹೇಗೆ ಬೆಳೆಯಬೇಕು ಎನ್ನುವ ಕುರಿತು ನೀಲನಕ್ಷೆಯನ್ನು ಸಿದ್ಧಪಡಿಸಿ. ಬಡ್ಡಿ ದರ, ಸಾಲ ನೀಡಿಕೆ, ವಸೂಲಾತಿ ಮಾರ್ಗಗಳ ಕುರಿತು ಈ ವಲಯದಲ್ಲಿ ಕೆಲಸ ಮಾಡುವವರು ಚರ್ಚಿಸಿ ಆರ್ಥಿಕ ವ್ಯವಸ್ಥೆ ಬಲಪಡಿಸಿ' ಎಂದು ಸಲಹೆ ನೀಡಿದರು.

ಗೋಷ್ಠಿಯೊಂದರಲ್ಲಿ ಮಾತನಾಡಿದ ಬೆಂಗಳೂರು ಐಐಎಂ ಪ್ರಾಧ್ಯಾಪಕ ಎಂ.ಎಸ್.ಶ್ರೀರಾಮ್, 'ಯಾವುದೇ ವಲಯದಲ್ಲಿ ಬಿಕ್ಕಟ್ಟು ಮೂರ್ನಾಲ್ಕು ವರ್ಷಗಳಿಗೊಮ್ಮೆ ಇದ್ದೇ ಇರುತ್ತದೆ. ಮೈಕ್ರೋ ಫೈನಾನ್ಸ್ ವಲಯವೂ ಇಂತಹ ಬಿಕ್ಕಟ್ಟುಗಳನ್ನು ಎದುರಿಸುತ್ತಲೇ ಸುಸ್ಥಿರವಾಗಿ ಬೆಳೆಯುತ್ತಲಿದೆ. ಸ್ವಯಂ ನಿಯಂತ್ರಣ ಹಾಕಿಕೊಂಡು ಮುಂದಡಿ ಇಡಬೇಕು' ಎಂದರು.

ಪ್ರಜಾವಾಣಿ ಪತ್ರಿಕೆ ಚಂದಾದಾರರಾಗಲು/ ದೂರುಗಳಿಗೆ

(ಪತ್ರಿಕೆ ಬಾರದಿರುವುದು, ತಡವಾಗಿ ಪತ್ರಿಕೆ ಬರುವುದು, ಬೇರೆ ಪತ್ರಿಕೆ ಹಾಕುವುದು ಇತ್ಯಾದಿ)

ಸಂಪರ್ಕಿಸಿ 90083 66666

support@deccanherald.co.in

ಸಂಪರ್ಕಿಸಲು ಕೋಡ್ ಸ್ಕ್ಯಾನ್ ಮಾಡಿ ಅಥವಾ ಕೆಳಗಿನ ಲಿಂಕ್‌ಗೆ ಭೇಟಿಮಾಡಿ https://bit.ly/40dPCqy

ಶಾಂತಿ ಮಂಡಳಿ: ಕಾರ್ಯಕ್ರಮದಿಂದ ದೂರ ಉಳಿದ ಭಾರತ

ನವದೆಹಲಿ (ಪಿಟಿಐ): ಗಾಜಾದಲ್ಲಿ ಶಾಶ್ವತ ಶಾಂತಿ ನೆಲಸುವಂತೆ ಮಾಡುವ ಉದ್ದೇಶದಿಂದ ರಚಿಸಿರುವ 'ಶಾಂತಿ ಮಂಡಳಿ'ಗೆ ಸಹಿ ಹಾಕುವುದಕ್ಕೆ ಸ್ವಿಟ್ಜರ್ಲೆಂಡ್‌ನ ದಾವೋಸ್‌ನಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಗುರುವಾರ ಆಯೋಜಿಸಿದ್ದ ಕಾರ್ಯಕ್ರಮದಿಂದ ಭಾರತ ದೂರ ಉಳಿದಿದೆ.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ ವಾರ್ಷಿಕ ಸಭೆ ಸಂದರ್ಭದಲ್ಲಿ ನಡೆದ ಈ ಕಾರ್ಯಕ್ರಮಕ್ಕೆ ಫ್ರಾನ್ಸ್, ಬ್ರಿಟನ್, ಚೀನಾ, ಜರ್ಮನಿ ಸೇರಿ ಇತರ ದೇಶಗಳು ಕೂಡ ಗೈರಾಗಿದ್ದವು.

'ಶಾಂತಿ ಮಂಡಳಿ' ಭಾಗವಾಗುವಂತೆ ಪ್ರಧಾನಿ ನರೇಂದ್ರ ಮೋದಿ ಅವರಿಗೂ ಟ್ರಂಪ್ ಆಹ್ವಾನ ನೀಡಿದ್ದಾರೆ. ಈ ಕುರಿತು ಭಾರತ ಇನ್ನೂ ಯಾವುದೇ ನಿರ್ಧಾರ ಕೈಗೊಂಡಿಲ್ಲ.

ಇಸ್ರೇಲ್ ಹಾಗೂ ಗಾಜಾ ಪಟ್ಟಿಯ ಹಮಾಸ್ ಬಂಡುಕೋರರ ನಡುವಿನ ಕದನ ವಿರಾಮ ಒಪ್ಪಂದ ದ 2ನೇ ಹಂತದ ಭಾಗವಾಗಿ ಟ್ರಂಪ್ ಈ 'ಶಾಂತಿ ಮಂಡಳಿ' ರಚಿಸಿದ್ದಾರೆ. ಪಾಕಿಸ್ತಾನ, ಯುಎಇ, ಸೌದಿ ಅರೇಬಿಯಾ, ಈಜಿಪ್ಟ್ ಸೇರಿ ಹಲವು ರಾಷ್ಟ್ರಗಳು ಈ ಮಂಡಳಿ ಸೇರಿವೆ.

ಕರಾಚಿ: ಸಾವಿನ ಸಂಖ್ಯೆ 55ಕ್ಕೆ ಏರಿಕೆ

ಕರಾಚಿ (ಎಪಿ): ಪಾಕಿಸ್ತಾನದ ಕರಾಚಿಯ ಮಾಲ್‌ವೊಂದರಲ್ಲಿ ಕಳೆದ ವಾರ ಸಂಭವಿಸಿದ ಭೀಕರ ಅಗ್ನಿದುರಂತದಲ್ಲಿ ಮೃತಪಟ್ಟವರ ಸಂಖ್ಯೆ 55ಕ್ಕೆ ಏರಿಕೆಯಾಗಿದೆ.

ಗುಲ್ ಪ್ಲಾಜಾ ಹೆಸರಿನ ಮೂರು ಅಂತಸ್ತಿನ ಕಟ್ಟಡಕ್ಕೆ ಕಳೆದ ಶನಿವಾರ ರಾತ್ರಿ ಬೆಂಕಿ ಹತ್ತಿಕೊಂಡಿತ್ತು. ಭಾನುವಾರದವರೆಗೂ ಕಟ್ಟಡ ಹೊತ್ತಿ ಉರಿದಿತ್ತು.

ಅವಶೇಷಗಳ ಅಡಿಯಿಂದ ಬುಧವಾರ 25 ಮೃತದೇಹಗಳನ್ನು ಹೊರತೆಗೆಯಲಾಗಿದೆ. ಶನಿವಾರ ರಾತ್ರಿಯಿಂದ ಈವರೆಗೆ ಒಟ್ಟು 55 ಮೃತದೇಹಗಳು ಪತ್ತೆಯಾಗಿವೆ ಎಂದು ಕರಾಚಿ ದಕ್ಷಿಣ ಜಿಲ್ಲೆಯ ಜಿಲ್ಲಾಧಿಕಾರಿ ತಿಳಿಸಿದ್ದಾರೆ. ಜತೆಗೆ ಡಿಎನ್‌ಎ ಮಾದರಿಗಳು ತಾಳೆ ಮಾಡಿದ ಬಳಿಕ ಮೃತದೇಹಗಳನ್ನು ಹಸ್ತಾಂತರಿಸಲಾಗುತ್ತಿದೆ ಎಂದಿದ್ದಾರೆ.

ಟ್ರಂಪ್ – ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಮಾತುಕತೆ

'ಗ್ರೀನ್‌ಲ್ಯಾಂಡ್ ವಶಕ್ಕೆ ರೂಪುರೇಷೆ ಸಿದ್ಧ'

ದಾವೋಸ್ (ಎಪಿ/ಎಎಫ್‌ಪಿ/ಪಿಟಿಐ): ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮತ್ತು ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅವರು ದಾವೋಸ್‌ನ ವಿಶ್ವ ಆರ್ಥಿಕ ವೇದಿಕೆ ಶೃಂಗ ಸಭೆಯ ಸಂದರ್ಭದಲ್ಲಿ ಬುಧವಾರ ಭೇಟಿಯಾಗಿ ಗ್ರೀನ್‌ಲ್ಯಾಂಡ್ ಕುರಿತಾಗಿ ಮಾತುಕತೆ ನಡೆಸಿದರು. ಈ ಬಳಿಕ, ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ಹೊಸ ಬೆಳವಣಿಗೆಗಳು ನಡೆಯುತ್ತಿವೆ.

ಮಾತುಕತೆ ಬಳಿಕ ಮಾತನಾಡಿದ ಟ್ರಂಪ್, 'ಗ್ರೀನ್‌ಲ್ಯಾಂಡ್ ವಿಚಾರವಾಗಿ ನನ್ನನ್ನು ಸಂತುಷ್ಟಗೊಳಿಸುವ ಒಪ್ಪಂದವೊಂದರ ರೂಪುರೇಷೆ ಸಿದ್ಧಗೊಂಡಿದೆ. ಆದ್ದರಿಂದ, ಆ ದೇಶವನ್ನು ವಶಪಡಿಸಿಕೊಳ್ಳಲು ಸೇನೆ ಬಳಸುವುದರಿಂದ ಹಿಂದೆ ಸರಿದಿದ್ದೇನೆ' ಎಂದಿದ್ದಾರೆ. ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳಲು ತಡೆಯೊಡ್ಡುವ ಐರೋಪ್ಯ ದೇಶಗಳ ಮೇಲೆ ಸುಂಕ ಹೇರುವುದಾಗಿ ಟ್ರಂಪ್ ಬೆದರಿಕೆ ಒಡ್ಡಿದ್ದರು. ಮಾತುಕತೆ ಬಳಿಕ, ಈ ಹೇಳಿಕೆಯಿಂದಲೂ ಟ್ರಂಪ್ ಹಿಂದೆ ಸರಿದಿದ್ದಾರೆ.

'ಆರ್ಕ್‌ಟಿಕ್ ಪ್ರದೇಶದ ಭದ್ರತೆಗಾಗಿ ನ್ಯಾಟೊ ಪ್ರಮುಖರೊಂದಿಗೆ ನಾನು ಮಾತುಕತೆ ನಡೆಸಿದ್ದೇನೆ. ನಮಗೆ ಗ್ರೀನ್‌ಲ್ಯಾಂಡ್‌ಗೆ ಪ್ರವೇಶ ದೊರೆಯಲಿದೆ. ನಮಗೆ ಬೇಕಾದ ಹಾಗೆ ನಮ್ಮ ಸೇನೆಯೂ ಪ್ರವೇಶ ಪಡೆಯಲಿದೆ. ನಮ್ಮ ಒಪ್ಪಂದದ ಮಾತುಕತೆಯು ಪೂರ್ಣಗೊಂಡರೆ, ನಮ್ಮ ಕ್ಷಿಪಣಿ ದಾಳಿ ರಕ್ಷಣಾ ವ್ಯವಸ್ಥೆ 'ಗೋಲ್ಡನ್ ಡೋಮ್' ಅಳವಡಿಸುತ್ತೇವೆ' ಎಂದಿದ್ದಾರೆ.

'ರುಟ್ಟೆ ಅವರು ಟ್ರಂಪ್ ಅವರೊಂದಿಗಿನ ಮಾತುಕತೆಯಲ್ಲಿ ಯಾವುದೇ ದೇಶದ ಸಾರ್ವಭೌಮತ್ವದ ಕುರಿತು ರಾಜಿ ಮಾಡಿಕೊಂಡಿಲ್ಲ. ರಷ್ಯಾ ಮತ್ತು ಚೀನಾ ದೇಶಗಳಿಗೆ ಆರ್ಥಿಕವಾಗಿ ಅಥವಾ ಸೇನಾ ವಿಚಾರಗಳು ಸೇರಿ ಯಾವುದೇ ರೀತಿಯಲ್ಲಿಯೂ ಗ್ರೀನ್‌ಲ್ಯಾಂಡ್ ಪ್ರವೇಶ ಸಿಗಬಾರದು ಎನ್ನುವುದರ ಕುರಿತು ಮಾತ್ರವೇ ಟ್ರಂಪ್ ಅವರೊಂದಿಗೆ ಮುಂದಿನ ಚರ್ಚೆ ಸಾಗಲಿದೆ' ಎಂದು ನ್ಯಾಟೊದ ವಕ್ತಾರ ಅಲಿಸನ್ ಹಾರ್ಟ್ ಪ್ರತಿಕ್ರಿಯಿಸಿದರು.

ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ನ್ಯಾಟೊ ಪ್ರಧಾನ ಕಾರ್ಯದರ್ಶಿ ಮಾರ್ಕ್ ರುಟ್ಟೆ ಅವರನ್ನು ದಾವೋಸ್‌ನಲ್ಲಿ ಬುಧವಾರ ಭೇಟಿ ಮಾಡಿ ಮಾತುಕತೆ ನಡೆಸಿದರು —ಎಪಿ ಚಿತ್ರ

ಗ್ರೀನ್‌ಲ್ಯಾಂಡ್ ಅನ್ನು ರಷ್ಯಾ ಮತ್ತು ಚೀನಾದಿಂದ ರಕ್ಷಿಸಲು ಹೇಗೆ ಕೆಲಸ ಮಾಡಬೇಕು ಎಂಬ ಕಾರ್ಯ ಯೋಜನೆ ಟ್ರಂಪ್ ಭೇಟಿ ಬಳಿಕ ರೂಪುಗೊಂಡಿತು

ಮಾರ್ಕ್ ರುಟ್ಟೆ, ನ್ಯಾಟೊ ಪ್ರಧಾನ ಕಾರ್ಯದರ್ಶಿ

'ಸಾರ್ವಭೌಮತ್ವದ ಕುರಿತು ಚರ್ಚೆಯೇ ಇಲ್ಲ'

ಭದ್ರತೆ, ಹೂಡಿಕೆ ವಿಚಾರಗಳಲ್ಲಿ ಚರ್ಚೆಗೆ ನಾವು ಸಿದ್ಧರಿದ್ದೇವೆ. ಆದರೆ, ನಮ್ಮ ಸಾರ್ವಭೌಮತ್ವದ ವಿಚಾರದಲ್ಲಿ ಮಾತುಕತೆ ಸಾಧ್ಯವೇ ಇಲ್ಲ. ಡೆನ್ಮಾರ್ಕ್ ಮತ್ತು ಗ್ರೀನ್‌ಲ್ಯಾಂಡ್ ವಿಚಾರದಲ್ಲಿ ಈ ದೇಶಗಳೇ ನಿರ್ಧಾರ ತೆಗೆದುಕೊಳ್ಳುತ್ತವೆ. ಗೋಲ್ಡನ್ ಡೋಮ್ ವಿಚಾರದಲ್ಲಿಯೂ ಮಾತುಕತೆ ನಡೆಸುತ್ತೇವೆ. ಆದರೆ, ಇದು ನಮ್ಮ ಸಾರ್ವಭೌಮತ್ವವನ್ನು ಗೌರವಿಸಿಯೇ ಆಗಬೇಕು

ಫ್ರೆಡ್ರಿಕ್‌ಸೆನ್, ಡೆನ್ಮಾರ್ಕ್ ಪ್ರಧಾನಿ

'ಉಕ್ರೇನ್–ರಷ್ಯಾ ಯುದ್ಧ ನಿಲ್ಲಲೇಬೇಕು'

ಡೊನಾಲ್ಡ್ ಟ್ರಂಪ್ ಅವರು ಗುರುವಾರ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರನ್ನು ದಾವೋಸ್‌ನಲ್ಲಿ ಭೇಟಿ ಮಾಡಿ ಮಾತುಕತೆ ನಡೆಸಿದರು.

'ಬಹಳಷ್ಟು ಜನರು ಮೃತಪಟ್ಟಿದ್ದಾರೆ. ಯುದ್ಧ ನಿಲ್ಲಲೇಬೇಕು ಎನ್ನುವುದೇ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರಿಗೆ ನನ್ನ ಸಂದೇಶ' ಎಂದು ಟ್ರಂಪ್ ಹೇಳಿದರು.

'ನಾನು ಝೆಲೆನ್‌ಸ್ಕಿ ಅವರನ್ನು ಭೇಟಿ ಮಾಡಿದೆ. ಮಾತುಕತೆಯು ಉತ್ತಮವಾಗಿತ್ತು. ನಮ್ಮ ನಿಯೋಗವು ಸದ್ಯದಲ್ಲಿಯೇ ಪುಟಿನ್ ಅವರನ್ನು ಭೇಟಿ ಮಾಡಲಿದೆ. ಯುದ್ಧವನ್ನು ನಿಲ್ಲಿಸಲೇಬೇಕು. ಇದು ಸಾಧ್ಯವಾಗದೇ ಇದ್ದಲ್ಲಿ ನಮಗೇ ಅವಮಾನ' ಎಂದು ಟ್ರಂಪ್ ಹೇಳಿದರು.

'ಟ್ರಂಪ್ ಅವರೊಂದಿಗೆ ಉತ್ತಮ ರೀತಿಯಲ್ಲಿ ಮಾತುಕತೆ ನಡೆಯಿತು. ನಮ್ಮ ದೇಶದ ಪರವಾಗಿಯೇ ಎಲ್ಲವೂ ನಡೆಯಿತು' ಎಂದು ವಿಶ್ವ ಆರ್ಥಿಕ ವೇದಿಕೆ ಯಲ್ಲಿ ಭಾಷಣ ಮಾಡಿದ ಬಳಿಕ, ಝೆಲೆನ್‌ಸ್ಕಿ ಪ್ರತಿಕ್ರಿಯಿಸಿದರು. ಅಮೆರಿಕದ ನಿಯೋಗವು ಉಕ್ರೇನ್ ಅಧಿಕಾರಿಗಳನ್ನೂ ಪ್ರತ್ಯೇಕವಾಗಿ ಭೇಟಿ ಮಾಡಲಿದೆ.

ಅಡಿಕೆ ಧಾರಣೆ

ಚಿತ್ರದುರ್ಗ		ಕೋಕ	20989-36500	ಕೆಂಪುಗೋಟು	22618-36699
ಆಪಿ	55229-55669	ಕೆಂಪುಗೋಟು	30989-42669	ರಾಶಿ	51099-57409
ಬೆಟ್ಟೆ	37619-38079	ರಾಶಿ	46689-57910	**ಯಲ್ಲಾಪುರ**	
ಕೆಂಪುಗೋಟು	32109-32510	ಸಿಪ್ಪೆಗೋಟು	12121-24699	ಆಪಿ	62601-70008
ರಾಶಿ	54739-55199	**ಸಿದ್ದಾಪುರ**		ಬಿಳಿಗೋಟು	16899-38199
ಕುಮಟಾ		ಬಿಳಿಗೋಟು	26689-38109	ಕೋಕ	11699-30899
ಚಿಪ್ಪು	13569-39869	ಚಾಲಿ	43109-49659	ಹಳೆಚಾಲಿ	38675-50366
ಕೋಕ	12899-36800	ಕೋಕ	21999-32189	ಹೊಸಚಾಲಿ	39299-45200
ಹಳೆಚಾಲಿ	39620-49289	ಹೊಸಚಾಲಿ	38619-47639	ಕೆಂಪುಗೋಟು	20600-38969
ಹೊಸಚಾಲಿ	33799-44177	ಕೆಂಪುಗೋಟು	31699-35699	ರಾಶಿ	50819-62199
ಪುತ್ತೂರು		ರಾಶಿ	45399-55699	ತಟ್ಟಿಬೆಟ್ಟೆ	38995-52289
ಕೋಕ	23000-28000	ತಟ್ಟಿಬೆಟ್ಟೆ	37889-50699	**ಶಿವಮೊಗ್ಗ**	
ಹೊಸತು	26000-46000	**ಶಿರಸಿ**		ಸರಕು/ಹಸ	55419-98006
ಸಾಗರ		ಬೆಟ್ಟೆ	33899-51209	ಬೆಟ್ಟೆ	55000-66669
ಬಿಳಿಗೋಟು	17989-36815	ಬಿಳಿಗೋಟು	26899-41806	ರಾಶಿಇಡಿ	45366-57559
ಚಾಲಿ	28989-45099	ಚಾಲಿ	48218-50399	ಗೊರಬಲು	19030-42301

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ
General

ಉದ್ಯೋಗಾವಕಾಶಗಳು TVS, ಬ್ರಿಟಾನಿಯಾ,ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th, PUC, ITI, Degree. ಸಂಬಳ 16,000-86,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

ಕಂಪನಿಗಳಿಗೆ ಬೇಕಾಗಿದ್ದಾರೆ: ಟಯೋಟಾ, ಬ್ರಿಟಾನಿಯಾ, ಟಾಟಾಮೋಟಾರ್ಸ್, TVSಗಳಿಗೆ SSLC,PUC, Degree, Diploma, ITIನವರು 18,500/- 60,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 9035075571.

ಸೌಂದರ್ಯ–ಆರೋಗ್ಯ
Health Clinic

ಉಚಿತ ಚಿಕಿತ್ಸೆ ಮಂಡಿ, ಬೆನ್ನು, ಭುಜದನೋವು, ಲಕ್ವ,ಕೀಲುನೋವು, ವೆರಿಕೋಸ್, ವೆಯಿನ್ಸ್, ಸಮಸ್ಯೆಗೆ, ಯಾವುದೇ ರೀತಿಯ ಶಸ್ತ್ರ ಚಿಕಿತ್ಸೆ, ಔಷಧಿ ಇಲ್ಲದೇ ವಿಶೇಷವಾದ ಹೈಡ್ರೊ ಥೆರಪಿಯಿಂದ ಚಿಕಿತ್ಸೆ ಪಡೆಯಿರಿ. ಶೇಷಾದ್ರಿಪುರಂ,ಬೆಂಗಳೂರು. 8217756612

ಭವಿಷ್ಯ
Astrology

ಶಿವಶಕ್ತಿ ಜ್ಯೋತಿಷ್ಯಂ (ಪ್ರೇಮಭವಿಷ್ಯ) ಪ್ರೀತಿಸಿದವರನ್ನು ಮರಳಿ ಸ್ತ್ರೀಪುರುಷ ವಶೀಕರಣ ಮಾಡಿಕೊಡುತ್ತಾರೆ. ಶತ್ರುನಾಶ ಗಂಡಹೆಂಡತಿ ಪರಿಹಾರಕ್ಕೆ ಮಂಜುನಾಥ್ ಭಟ್ 9663243202

ಪ್ರವಾಸ
Travel

ಕಾಶ್ಮೀರ್ ಗುಲ್ಮಾರ್ಗ ಪೆಹಲ್‌ಗಾಂ ವೈಷ್ಣೋದೇವಿ 10ದಿನಗಳು. ಅಹಮದಾಬಾದ್ ರನ್‌ಆಫ್‌ಕಚ್ ಗಿರ್‌ಫಾರೆಸ್ಟ್ ಡಿಯು ಸೋಮನಾಥ್ ದ್ವಾರಕಾ 10 ದಿನಗಳು. ಉದಯಪುರ್ ಮೌಂಟ್‌ಅಬು ಜೈಸೆಲ್‌ಮೇರ್ ಪುಷ್ಕರ್ ಜೈಪುರ್ 10 ದಿನಗಳು. ಗ್ವಾಲಿಯರ್ ಖಜುರಹೋ ಮಾರ್ಬಲ್‌ರಾಕ್ಸ್ ಭೂಪಾಲ್ ಮಾಹೇಶ್ವರ್ ಉಜ್ಜಯಿನಿ,ಓಂಕಾರೇಶ್ವರ 10 ದಿನಗಳು. ಅಸ್ಸಾಂ,ಮೇಘಾಲಯ ಅರುಣಾಚಲ ಪ್ರದೇಶ ತ್ರೀ ಸಿಸ್ಟರ್ಸ್ 11 ದಿನಗಳು. ಮಾರ್ಚ್ ಏಪ್ರಿಲ್‌ನಲ್ಲಿ ಸಂಪರ್ಕಿಸಿ. 26508956 9980993631 ಶ್ರೀಚೈತನ್ಯ ಟ್ರಾವಲ್ಸ್ ಬೆಂಗಳೂರು.18.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ರಾಜ್ಯಪಾಲರು, ಅಧಿವೇಶನ ಭಾಷಣದ ಮೊದಲ, ಕೊನೆಯ ವಾಕ್ಯ ಓದಿ ಹೊರನಡೆದದ್ದು ಸರಿಯೇ?

● ಸರಿ ● ತಪ್ಪು ● ಗೊತ್ತಿಲ್ಲ

ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಇರಾನ್: 3,117 ಪ್ರತಿಭಟನಕಾರರ ಸಾವು

ಪ್ಯಾರಿಸ್ (ಎಎಫ್‌ಪಿ): ಇರಾನ್‌ನಲ್ಲಿ ಈಚೆಗೆ ನಡೆದ ಪ್ರತಿಭಟನೆಯಲ್ಲಿ 3,117 ಜನರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ಬುಧವಾರ ತಿಳಿಸಿದ್ದಾರೆ. ಇರಾನ್ ಸರ್ಕಾರ ಮೃತಪಟ್ಟವರ ಸಂಖ್ಯೆ ಬಗ್ಗೆ ಅಧಿಕೃತ ಮಾಹಿತಿ ನೀಡಿದ್ದು ಇದೇ ಮೊದಲು.

ಪ್ರತಿಭಟನೆಯನ್ನು ಹತ್ತಿಕ್ಕಲು ಇರಾನ್ ಆಡಳಿತವು ಕಠಿಣ ಕ್ರಮ ಕೈಗೊಂಡಿದ್ದರಿಂದ ಸಾವಿನ ಸಂಖ್ಯೆ ಹಲವು ಪಟ್ಟು ಹೆಚ್ಚಿದೆ ಎಂದು ಹೋರಾಟಗಾರರು ಪ್ರತಿಕ್ರಿಯಿಸಿದ್ದಾರೆ.

ಇರಾನ್‌ನಲ್ಲಿ ಆರ್ಥಿಕತೆಯ ಕುಸಿತದಿಂದ ಸರ್ಕಾರದ ವಿರುದ್ಧ ಜನರ ಆಕ್ರೋಶ ಭುಗಿಲೆದ್ದಿತ್ತು. ಜ.8ರಿಂದ ಹಲವು ದಿನ ಜನರು ಬೀದಿಗಿಳಿದು ಪ್ರತಿಭಟಿಸಿದ್ದರು.

ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ

ಸಾರಿಗೆ ನಿಗಮ: 650 ಬಸ್ ಖರೀದಿಗೆ ಅಸ್ತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ರಸ್ತೆ ಸಾರಿಗೆ ನಿಗಮಗಳಿಗೆ ₹247 ಕೋಟಿ ವೆಚ್ಚದಲ್ಲಿ ಒಟ್ಟು 650 ಬಿಎಸ್–6 ಬಸ್‌ಗಳನ್ನು ಖರೀದಿಸಲು ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ.

ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ. ಈ ಪೈಕಿ, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಕ್ಕೆ 500 ಮತ್ತು ವಾಯವ್ಯ ರಸ್ತೆ ಸಾರಿಗೆ ನಿಗಮಕ್ಕೆ 150 ಬಸ್‌ಗಳು ಎಂದು ಮೂಲಗಳು ತಿಳಿಸಿವೆ.

ಸಂಪುಟದ ಇತರ ನಿರ್ಣಯಗಳು

- ಪೌಷ್ಟಿಕ ಆಹಾರ ಯೋಜನೆಯಡಿ ಎಂಟು ಜಿಲ್ಲೆಗಳ ಪರಿಶಿಷ್ಟ ಪಂಗಡದ 50,046 ಕುಟುಂಬಗಳಿಗೆ ₹ 145.03 ಕೋಟಿಯಲ್ಲಿ (ಪ್ರತಿ ಕಿಟ್‌ಗೆ ₹ 2,415.38) ಒಂದು ವರ್ಷದವರೆಗೆ ಆಹಾರ ಪದಾರ್ಥ ಖರೀದಿಸಿ ಹಂಚಿಕೆ
- ಕಲಬುರಗಿ ವಿಭಾಗದ ಆರೋಗ್ಯ ಕೇಂದ್ರಗಳಲ್ಲಿ ಪ್ರತಿ ಡಯಾಲಿಸಿಸ್‌ಗೆ ₹ 1,000ದಿಂದ ₹ 1,300ಕ್ಕೆ ಹೆಚ್ಚಳ
- ಇ- ಆಡಳಿತ ಕೇಂದ್ರವು ಅಭಿವೃದ್ಧಿಪಡಿಸಿರುವ ಕರ್ನಾಟಕ ಆಧುನಿಕ ಹಾಜರಾತಿ ನಿರ್ವಹಣಾ ವ್ಯವಸ್ಥೆಯನ್ನು ಶಾಲಾ ಶಿಕ್ಷಣ ಇಲಾಖೆಯ ಬೋಧಕ,ಬೋಧಕೇತರ ಸಿಬ್ಬಂದಿಗೆ ಪೂರ್ಣ ಪ್ರಮಾಣದಲ್ಲಿ ವಿಸ್ತರಣೆ
- ಸಮಗ್ರ ಶಿಕ್ಷಣ ಯೋಜನೆಯಡಿ 3,862 ಪ್ರಾಥಮಿಕ, ಪ್ರೌಢ, ಹಿರಿಯ ಪ್ರೌಢ (ಪದವಿ ಪೂರ್ವ) ಮತ್ತು ಕಸ್ತೂರಬಾ ಗಾಂಧಿ ಬಾಲಿಕಾ ವಿದ್ಯಾಲಯ (ಕೆಜಿಬಿವಿ) ಶಾಲೆಗಳಿಗೆ ₹ 91.55 ಕೋಟಿಯಲ್ಲಿ ಸ್ಮಾರ್ಟ್ ಕ್ಲಾಸ್ ಕೊಠಡಿ
- ಕೇಂದ್ರ ಪ್ರವಾಸೋದ್ಯಮ ಸಚಿವಾಲಯದ 'ಸ್ವದೇಶ್ ದರ್ಶನ್–2.0' ಯೋಜನೆಯಡಿ ₹ 25 ಕೋಟಿ ವೆಚ್ಚದಲ್ಲಿ ಬೀದರ್ ನಗರ ಸಾಂಸ್ಕೃತಿಕ ಮತ್ತು ಪಾರಂಪರಿಕ ಪ್ರವಾಸೋದ್ಯಮ ತಾಣವಾಗಿ ಅಭಿವೃದ್ಧಿ
- ಕೋಲಾರ ಜಿಲ್ಲೆಯ ನಗರದ ಸ್ಥಳೀಯ ಸಂಸ್ಥೆಗಳು ಮತ್ತು ಎಪಿಎಂಸಿ ಹಾಗೂ ಬಿಬಿಎಂಪಿಯಿಂದ ಸಂಗ್ರಹವಾಗುವ ಒಟ್ಟಾರೆ 150 ಟನ್ ಹಸಿ ತ್ಯಾಜ್ಯವನ್ನು ಸಂಸ್ಕರಿಸಲು ಕಂಪ್ರೆಸ್ಡ್ ಬಯೊ ಗ್ಯಾಸ್ (ಸಿಬಿಜಿ) ಘಟಕ ಸ್ಥಾಪಿಸಲು, ಕೋಲಾರದ ನಗರಸಭೆಗೆ ಸೇರಿದ ಅರಾಭಿಕೊತ್ತನೂರು ಗ್ರಾಮದಲ್ಲಿ 9.38 ಎಕರೆ ಜಮೀನು 25 ವರ್ಷಗಳ ಅವಧಿಗೆ ಗೇಲ್ ಸಂಸ್ಥೆಗೆ ವರ್ಗಾವಣೆ
- ಕಲಬುರಗಿ ನಗರದ ಮಹಬೂಬು ಗುಲ್ಶನ್ ಗಾರ್ಡನ್ ಇಂದಿರಾ ಸ್ಮಾರಕ ಭವನದಲ್ಲಿ ಮಹಾತ್ಮ ಗಾಂಧೀಜಿ ಪ್ರತಿಮೆ ಪಕ್ಕದಲ್ಲಿ ನಿಜಶರಣ ಅಂಬಿಗರ ಚೌಡಯ್ಯ ಕಂಚಿನ ಪ್ರತಿಮೆ ಸ್ಥಾಪನೆ
- ಚಿಕ್ಕಮಗಳೂರು ನಗರಾಭಿವೃದ್ಧಿ ಪ್ರಾಧಿಕಾರ ಅಭಿವೃದ್ಧಿಪಡಿಸಿರುವ ಎ.ಬಿ. ವಾಜಪೇಯಿ ವಸತಿ ಬಡಾವಣೆಯಲ್ಲಿ ವಿದ್ಯುತ್ ಸಂಪರ್ಕ ಕಲ್ಪಿಸಲು 26.50 ಕೋಟಿ ವೆಚ್ಚದಲ್ಲಿ ವಿದ್ಯುತ್ ಉಪ ಕೇಂದ್ರ ಸ್ಥಾಪನೆ
- ಚಳ್ಳಕೆರೆ ನಗರಕ್ಕೆ ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸುವ ₹ 198 ಕೋಟಿ ಅಂದಾಜು ಮೊತ್ತದ ಯೋಜನೆಯನ್ನು ಕೆಯುಐಡಿಎಫ್‌ಸಿಯಿಂದ ಕೆಯುಐಡಬ್ಲ್ಯುಎಸ್‌ಡಿಬಿಗೆ ವಹಿಸಲು ಒಪ್ಪಿಗೆ
- ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಅಣ್ಣಿಗೇರಿ ಮತ್ತು ಕುಂದಗೋಳ ತಾಲ್ಲೂಕಿನ ಗ್ರಾಮಗಳಲ್ಲಿ ಒಟ್ಟು 29 ಕೆರೆಗಳಿಗೆ ನೀರು ತುಂಬಿಸಲು ಬೆಣ್ಣೆಹಳ್ಳದ ಉಪ ಹಳ್ಳವಾದ ದೊಡ್ಡ ಹಳ್ಳದಿಂದ ನೀರು ಎತ್ತಲು ₹ 220.60 ಕೋಟಿ ಮೊತ್ತದ ಯೋಜನೆ
- ಬೆಂಗಳೂರು ಎಚ್‌ಎಸ್‌ಆರ್ ಬಡಾವಣೆಯಲ್ಲಿ ನಾಸ್ಕಾಂ ಸಹಯೋಗದಲ್ಲಿ ಕಿಯೋನಿಕ್ಸ್ ಸೌಲಭ್ಯದಲ್ಲಿ ₹ 20 ಕೋಟಿ ವೆಚ್ಚದಲ್ಲಿ ಎಐ ಉತ್ಕೃಷ್ಟತಾ ಕೇಂದ್ರ ಸ್ಥಾಪನೆ
- ಕೊಪ್ಪಳ ಜಿಲ್ಲೆಯ ತಳಕಲ್‌ನಲ್ಲಿ ಬಹ ಕೌಶಲ್ಯಾಭಿವೃದ್ಧಿ ಕೇಂದ್ರದ ಎರಡನೇ ಹಂತದ ನಿರ್ಮಾಣ ಕಾಮಗಾರಿಯನ್ನು ಕೆಕೆಆರ್‌ಡಿಬಿ ಅನುದಾನದಲ್ಲಿ ₹ 66.75 ಕೋಟಿ ಮೊತ್ತದಲ್ಲಿ ಕೈಗೊಳ್ಳಲು ಅನುಮೋದನೆ
- ಅಲೆಮಾರಿ, ಅರೆ ಅಲೆಮಾರಿ ಸಮುದಾಯದ ಜನರಿಗೆ 1,200 ಚದರ ಅಡಿ ವಿಸ್ತೀರ್ಣದ ನಿವೇಶನದಲ್ಲಿ 600 ಚ.ಅಡಿ ವಿಸ್ತೀರ್ಣದಲ್ಲಿ ಮೂಲ ಸೌಕರ್ಯ ಒಳಗೊಂಡಂತೆ ಒಟ್ಟು ₹ 100 ಕೋಟಿ ಮೊತ್ತದಲ್ಲಿ ಮನೆ ನಿರ್ಮಾಣ

ಗೊಯೆಂಕಾ ಸಮೂಹದಿಂದ ₹10,500 ಕೋಟಿ ಹೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮರುಬಳಕೆ ಇಂಧನ ವಲಯದಲ್ಲಿ ಹೆಸರು ಮಾಡಿರುವ ಆರ್.ಪಿ.ಸಂಜೀವ್ ಗೊಯೆಂಕಾ ಉದ್ಯಮ ಸಮೂಹವು ವಿಜಯಪುರ ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ಮುಂದಿನ ಮೂರು ವರ್ಷಗಳಲ್ಲಿ ₹10,500 ಕೋಟಿ ಬಂಡವಾಳ ಹೂಡಿಕೆ ಮಾಡಲಿದೆ. ಇದಕ್ಕೆ ಸರ್ಕಾರದ ಕಡೆಯಿಂದ ಬೇಕಾದ ನೆರವು ನೀಡಲಾಗುವುದು ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ತಿಳಿಸಿದರು.

ದಾವೋಸ್‌ನಲ್ಲಿ ನಡೆಯುತ್ತಿರುವ ವಿಶ್ವ ಆರ್ಥಿಕ ವೇದಿಕೆಯ ಸಮಾವೇಶದಲ್ಲಿ ಪಾಲ್ಗೊಂಡಿರುವ ಅವರು ಗುರುವಾರ ಈ ಮಾಹಿತಿ ನೀಡಿದರು.

ಪವನ ವಿದ್ಯುತ್ ಕ್ಷೇತ್ರದಲ್ಲಿ ಅಗತ್ಯವಾಗಿರುವ ಟರ್ಬೈನ್ ಬ್ಲೇಡ್ ಉತ್ಪಾದನೆಯನ್ನು ಕುಷ್ಟಗಿಯಲ್ಲಿ ಈಗಾಗಲೇ ಆರಂಭಿಸಿರುವ ಐನಾಕ್ಸ್ ಜಿಎಫ್‌ಎಲ್ ಕಂಪನಿಯು ಮುಂಬರುವ ದಿನಗಳಲ್ಲಿ ಇದಕ್ಕೆ ಹತ್ತಿರದ ಪ್ರದೇಶದಲ್ಲೇ ಪವನ ವಿದ್ಯುತ್‌ಗೆ ಬೇಕಾದ ದೈತ್ಯ ಗೋಪುರಗಳ ಅಭಿವೃದ್ಧಿ ಘಟಕ ಆರಂಭಿಸಲು ಮುಂದಾಗಿದೆ. ಈ ಕಂಪನಿಯು ರಾಜ್ಯದಲ್ಲಿ ಈಗಾಗಲೇ ₹10 ಸಾವಿರ ಕೋಟಿ ಹೂಡಿಕೆ ಮಾಡಿದೆ ಎಂದು ಮಾಹಿತಿ ನೀಡಿದರು.

ರಾಮ್ಕಿ ಗ್ರೂಪ್, ಕೆಐಎಡಿಬಿಯ ಕೈಗಾರಿಕಾ ಪ್ರದೇಶಗಳಲ್ಲಿ ಸಾಮಾನ್ಯ ತ್ಯಾಜ್ಯ ಸಂಸ್ಕರಣಾ ಘಟಕಗಳನ್ನು (ಸಿಇಪಿಟಿ) ಸ್ಥಾಪಿಸಲು ಆಸಕ್ತಿ ತೋರಿಸಿದೆ. ರಾಜ್ಯದಲ್ಲಿ 'ಫಾರ್ಮಾ ಪಾರ್ಕ್' ಸ್ಥಾಪನೆ ಸಂಬಂಧ ಈ ಕಂಪನಿಯೊಂದಿಗೆ ಚರ್ಚಿಸಲಾಗಿದೆ. ಟೆಕ್ ಮಹೀಂದ್ರಾ ಕಂಪನಿ ಕೂಡ ರಾಜ್ಯದ 2ನೇ ಹಂತದ ನಗರಗಳಲ್ಲಿ ಹೂಡಿಕೆ ಮಾಡಲು ಬಯಸಿದೆ ಎಂದು ಅವರು ವಿವರಿಸಿದರು.

'ಸಿಂಗಪುರ ಪಾರ್ಕ್' ಸ್ಥಾಪಿಸುವ ಬಗ್ಗೆ ಆ ದೇಶದ 'ಸಿಂಗಪುರ ಆರ್ಥಿಕ ಅಭಿವೃದ್ಧಿ ಮಂಡಳಿ' ಪ್ರತಿನಿಧಿಗಳ ಜತೆ ಪ್ರಸ್ತಾಪಿಸಲಾಗಿದೆ. ಲೆನೊವೊ ಕಂಪನಿಯು ಸ್ಥಳೀಯ ಪೂರೈಕೆದಾರರು ಮತ್ತು ಉದ್ಯಮಿಗಳೊಂದಿಗೆ ಸಹಭಾಗಿತ್ವ ಹೊಂದುವ ಕುರಿತು ವಿಚಾರ ವಿನಿಮಯ ನಡೆಸಿದೆ ಎಂದು ಹೇಳಿದರು.

ಚುಟುಕು ಸುದ್ದಿ

ಜಾರ್ಖಂಡ್: 16 ನಕ್ಸಲರ ಹತ್ಯೆ

ಚಾಯಿಬಾಸಾ (ಪಿಟಿಐ): ಜಾರ್ಖಂಡ್‌ನ ಪಶ್ಚಿಮ ಸಿಂಹಭೂಮ್ ಜಿಲ್ಲೆಯಲ್ಲಿ ನಡೆಯುತ್ತಿರುವ ಬೃಹತ್ ನಕ್ಸಲ್ ನಿಗ್ರಹ ಕಾರ್ಯಾಚರಣೆಯಲ್ಲಿ ನಕ್ಸಲ್ ಸಂಘಟನೆಯ ಉನ್ನತ ನಾಯಕ ಸೇರಿದಂತೆ 16 ನಕ್ಸಲರು ಗುರುವಾರ ಹತ್ಯೆಯಾಗಿದ್ದಾರೆ.

ಸಿಆರ್‌ಪಿಎಫ್‌ನ 'ಕೋಬ್ರಾ' ಘಟಕದ 1500 ಸಿಬ್ಬಂದಿ ಮತ್ತು ಪೊಲೀಸರು ಸರಂಡಾ ಅರಣ್ಯದಲ್ಲಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ನಕ್ಸಲರಿಂದ ಗುಂಡಿನ ದಾಳಿ ನಡೆದಿದೆ. ಭದ್ರತಾ ಸಿಬ್ಬಂದಿಯು ಪ್ರತಿದಾಳಿ ನಡೆಸಿದ್ದಾರೆ.

16 ನಕ್ಸಲರ ಮೃತದೇಹ ಮತ್ತು ಅಪಾರ ಪ್ರಮಾಣದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ. ನಕ್ಸಲರ ಪ್ರಮುಖ ನಾಯಕ ಪತಿರಾಂ ಮಾಝಿ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದ್ದಾರೆ.

ನಿಯಮ ಮೀರಿದರೆ ಡಿಎಲ್ ಅಮಾನತು

5 ಅಥವಾ ಅದಕ್ಕಿಂತ ಹೆಚ್ಚಿನ ಉಲ್ಲಂಘನೆ ವಿರುದ್ಧ ಕ್ರಮ • ಜನವರಿ 20ರಿಂದಲೇ ಜಾರಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಸರ್ಕಾರವು ಮೋಟಾರು ವಾಹನಗಳ ನಿಯಮವನ್ನು ಕಠಿಣಗೊಳಿಸಿದೆ. ಒಂದು ವರ್ಷದಲ್ಲಿ ಐದು ಅಥವಾ ಐದಕ್ಕಿಂತ ಹೆಚ್ಚು ಬಾರಿ ಸಂಚಾರ ನಿಯಮ ಉಲ್ಲಂಘಿಸಿದರೆ ಚಾಲನಾ ಪರವಾನಗಿ ಅಮಾನತುಗೊಳ್ಳಲಿದೆ.

ನೂತನ ತಿದ್ದುಪಡಿ ನಿಯಮದ ಪ್ರಕಾರ, ಸಕ್ಷಮ ಪ್ರಾಧಿಕಾರವಾದ ಪ್ರಾದೇಶಿಕ ಸಾರಿಗೆ ಕಚೇರಿಗಳ (ಆರ್‌ಟಿಒ) ಅಧಿಕಾರಿಗಳು ಚಾಲನಾ ಪರವಾನಗಿಯ ಅಮಾನತು ಅವಧಿಯನ್ನು ನಿರ್ಧರಿಸಲಿದ್ದಾರೆ.

ಚಾಲನಾ ಪರವಾನಗಿಯನ್ನು ಅಮಾನತುಗೊಳಿಸಿ ಆದೇಶಿಸುವ ಮುನ್ನ ಚಾಲಕರ ಅಹವಾಲನ್ನೂ ಆಲಿಸಬೇಕು ಎಂದೂ ನೂತನ ನಿಯಮದಲ್ಲಿ ಹೇಳಲಾಗಿದೆ.

ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವಾಲಯವು ಮೋಟಾರು ವಾಹನಗಳ ನಿಯಮಗಳಿಗೆ ತಿದ್ದುಪಡಿ ಮಾಡಿ ಬುಧವಾರ ಸುತ್ತೋಲೆ ಹೊರಡಿಸಿದೆ. ನೂತನ ನಿಯಮಗಳು ಜನವರಿ 20ರಿಂದಲೇ ಅನುಷ್ಠಾನಗೊಳ್ಳಲಿವೆ. ಆದರೆ, ಜನವರಿ 1ರಿಂದ ಮಾಡಿರುವ ಸಂಚಾರ ನಿಯಮ ಉಲ್ಲಂಘನೆಯನ್ನು ಪರಿಗಣಿಸಲಾಗುತ್ತದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ಮುಖ್ಯಾಂಶಗಳು

- ರಸ್ತೆ ಸುರಕ್ಷತೆಗಾಗಿ ಕೇಂದ್ರದಿಂದ ಬಿಗಿ ನಿಯಮ
- ಜನವರಿ 1ರಿಂದಲೇ ನಿಯಮ ಉಲ್ಲಂಘನೆ ಪರಿಗಣನೆ

ಹಿಂದಿನ ವರ್ಷದಲ್ಲಿ ದಾಖಲಾದ/ಕಂಡುಬಂದ ಅಪರಾಧಗಳನ್ನು ಪರಿಗಣಿಸುವುದಿಲ್ಲ ಎಂದು ಸಚಿವಾಲಯ ಸ್ಪಷ್ಟಪಡಿಸಿದೆ. ಸಂಚಾರ ನಿಯಮಗಳನ್ನು ಪದೇಪದೇ ಉಲ್ಲಂಘನೆ ಮಾಡುವುದನ್ನು ತಡೆಯಲು ಹಾಗೂ ರಸ್ತೆ ಸುರಕ್ಷತೆಯನ್ನು ಸುಧಾರಿಸಲು ಈ ಹೊಸ ನಿಯಮಗಳನ್ನು ರೂಪಿಸಲಾಗಿದೆ ಎಂದೂ ಹೇಳಿದೆ.

ಏನೇನು ಬದಲಾವಣೆ?

- ಈವರೆಗೆ, ಸಾಮರ್ಥ್ಯಕ್ಕಿಂತ ಅಧಿಕ ಸರಕು ಸಾಗಣೆ, ಅಜಾಗರೂಕ ಚಾಲನೆ, ಪ್ರಯಾಣಿಕರ ಮೇಲೆ ಹಲ್ಲೆ ಸೇರಿ ಸಂಚಾರ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿ 24 ಅಧಿಸೂಚಿತ ಅಪರಾಧಗಳು ಕಂಡುಬಂದಾಗ ಚಾಲನಾ ಪರವಾನಗಿ ಅಮಾನತುಗೊಳಿಸುವಂತಹ ಶಿಸ್ತುಕ್ರಮ ಜರುಗಿಸಲು ಅವಕಾಶ ಇತ್ತು.
- ಇನ್ನು ಮುಂದೆ ಹೆಲ್ಮೆಟ್ ಧರಿಸದೇ ಇರುವುದು, ಸಿಗ್ನಲ್ ಜಂಪ್, ಸೀಟ್ ಬೆಲ್ಟ್ ಧರಿಸದೇ ಇರುವುದನ್ನೂ ಸಂಚಾರ ನಿಯಮ ಉಲ್ಲಂಘನೆ ಎಂದು ಪರಿಗಣಿಸಿ ಶಿಸ್ತುಕ್ರಮ ಜರುಗಿಸಲಾಗುತ್ತದೆ

ಸಮವಸ್ತ್ರದಲ್ಲಿರುವ ಪೊಲೀಸ್ ಅಧಿಕಾರಿ ಅಥವಾ ರಾಜ್ಯ ಸರ್ಕಾರದ ಯಾವುದೇ ನಿಯುಕ್ತ ಅಧಿಕಾರಿ ಚಲನ್ ನೀಡಬಹುದು. ಇ-ಚಲನ್ ಕೂಡ ನೀಡಬಹುದು ಎಂದು ನೂತನ ನಿಯಮದಲ್ಲಿ ತಿಳಿಸಲಾಗಿದೆ.

ಸಂಚಾರ ನಿಯಮ ಉಲ್ಲಂಘಿಸಿದವರು 45 ದಿನಗಳ ಒಳಗಾಗಿ ದಂಡ ಪಾವತಿಸಬಹುದು ಅಥವಾ ಉಲ್ಲಂಘನೆ ಆರೋಪವು ದೋಷಪೂರಿತವಾಗಿದೆ ಎಂದು ಅರ್ಜಿ ಸಲ್ಲಿಸಬಹುದು. 45 ದಿನಗಳ ಒಳಗಾಗಿ ಅರ್ಜಿ ಸಲ್ಲಿಸದಿದ್ದಲ್ಲಿ ನಿಯಮ ಉಲ್ಲಂಘನೆಯನ್ನು ಒಪ್ಪಿಕೊಳ್ಳಲಾಗಿದೆ ಎಂದು ಪರಿಗಣಿಸಲಾಗುತ್ತದೆ ಎಂದು ಸಚಿವಾಲಯ ತಿಳಿಸಿದೆ.

ಸೇನಾ ವಾಹನ ಅಪಘಾತ 10 ಯೋಧರ ಸಾವು

ಪ್ರಜಾವಾಣಿ ವಾರ್ತೆ/ಪಿಟಿಐ

ಶ್ರೀನಗರ: ಜಮ್ಮು-ಕಾಶ್ಮೀರದ ದೋಡಾ ಜಿಲ್ಲೆಯಲ್ಲಿ ಸೇನಾ ವಾಹನವೊಂದು ಆಳವಾದ ಕಂದಕಕ್ಕೆ ಉರುಳಿ ಬಿದ್ದ ಪರಿಣಾಮ 10 ಯೋಧರು ಮೃತಪಟ್ಟಿದ್ದು, 11 ಮಂದಿ ಗಾಯಗೊಂಡಿದ್ದಾರೆ.

ಭಯೋತ್ಪಾದನಾ ನಿಗ್ರಹ ಕಾರ್ಯಾಚರಣೆಗಾಗಿ ಭದ್ರವಾಡ್-ಛಂಬ ರಾಷ್ಟ್ರೀಯ ಹೆದ್ದಾರಿಯಲ್ಲಿ ತೆರಳುತ್ತಿದ್ದ ಗುಂಡು ನಿರೋಧಕ ಸೇನಾ ವಾಹನ 'ಕಾಸ್ಪೀರ್' ಅಪಘಾತಕ್ಕೀಡಾಗಿದೆ.

900 ಅಡಿ ಎತ್ತರದ ಖನ್ನಿ ಶಿಖರದಲ್ಲಿ ಭಾಗದಲ್ಲಿ ಚಲಿಸುತ್ತಿದ್ದ ವಾಹನವು ಅಲ್ಲಿಂದ 200 ಅಡಿ ಆಳದ ಕಂದಕಕ್ಕೆ ಉರುಳಿದೆ.

ಸೇನೆ ಮತ್ತು ಪೊಲೀಸರ ರಕ್ಷಣಾ ತಂಡ ಮತ್ತು ಸ್ಥಳೀಯ ಆಡಳಿತದ ತಂಡ ಸ್ಥಳಕ್ಕೆ ಆಗಮಿಸಿ ಆಳವಾದ ಕಂದಕದಲ್ಲಿ ರಕ್ಷಣಾ ಕಾರ್ಯಾಚರಣೆ ನಡೆಸಿದೆ. ನಾಲ್ವರು ಯೋಧರು ಸ್ಥಳದಲ್ಲೇ ಮೃತಪಟ್ಟಿದ್ದಾರೆ.

> **ಪ್ರಾಣ ತೆತ್ತ ಯೋಧರ ಸೇವೆ ಎಂದಿಗೂ ಸ್ಮರಣೀಯ. ಗಾಯಗೊಂಡವರು ಶೀಘ್ರದಲ್ಲಿ ಗುಣಮುಖರಾಗಲಿ ಎಂದು ಪ್ರಾರ್ಥಿಸುತ್ತೇನೆ**
> **ಮನೋಜ್ ಸಿನ್ಹಾ,** ಲೆಫ್ಟಿನೆಂಟ್ ಗವರ್ನರ್

ಬಳಿಕ ಗಂಭೀರವಾಗಿ ಗಾಯಗೊಂಡಿದ್ದ ಆರು ಮಂದಿ ಮೃತಪಟ್ಟರು. 10 ಯೋಧರನ್ನು ವಿಶೇಷ ಚಿಕಿತ್ಸೆಗಾಗಿ ಹೆಲಿಕಾಪ್ಟರ್ ಮೂಲಕ ಉಧಮ್‌ಪುರ ಕಮಾಂಡ್ ಆಸ್ಪತ್ರೆಗೆ ಕಳುಹಿಸಲಾಗಿದೆ. ಒಬ್ಬರಿಗೆ ಭದೇರ್‌ವಾಡ್ ಜಿಲ್ಲಾಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ ಅವರ ಆರೋಗ್ಯ ಸ್ಥಿರವಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಅಪಘಾತಕ್ಕೀಡಾದ ವಾಹನವು ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಅಪಾಯಕಾರಿ ಪ್ರದೇಶದಲ್ಲಿ ವಾಹನ ಸಂಚರಿಸುತ್ತಿತ್ತು ಮತ್ತು ಪ್ರತಿಕೂಲ ಹವಾಮಾನವು ಇತ್ತು ಎಂದು ಜಮ್ಮುವಿನಲ್ಲಿರುವ ಸೇನಾ ಘಟಕ ತಿಳಿಸಿದೆ.

ಎಸ್‌ಐಆರ್: ಮನಸ್ಸಿಗೆ ಬಂದಂತೆ ನಡೆಸುತ್ತಿಲ್ಲ– ಚುನಾವಣಾ ಆಯೋಗ

ಪ್ರಜಾವಾಣಿ ವಾರ್ತೆ

ನವದೆಹಲಿ: 'ಹಲವು ರಾಜ್ಯಗಳಲ್ಲಿ ಕೈಗೊಂಡಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ(ಎಸ್‌ಐಆರ್) ಕಾರ್ಯವನ್ನು ಮನಸ್ಸಿಗೆ ತೋಚಿದಂತೆ ನಡೆಸಲಾಗುತ್ತಿಲ್ಲ. ಈ ಪ್ರಕ್ರಿಯೆಯಿಂದ ತೊಂದರೆ ಎದುರಿಸುತ್ತಿರುವುದಾಗಿ ಹೇಳಿ ಈ ವರೆಗೆ ಯಾವೊಬ್ಬ ಮತದಾರನೂ ನ್ಯಾಯಾಲಯದ ಕದ ತಟ್ಟಿಲ್ಲ' ಎಂದು ಚುನಾವಣಾ ಆಯೋಗವು ಸುಪ್ರೀಂ ಕೋರ್ಟ್‌ಗೆ ಗುರುವಾರ ತಿಳಿಸಿದೆ.

'ಎಸ್‌ಐಆರ್ ನಡೆಸುತ್ತಿರುವ ವೇಳೆ ಕೆಲವೆಡೆ ತಪ್ಪುಗಳಾಗಿರಬಹುದು. ಆದರೆ, ಇಡೀ ಪ್ರಕ್ರಿಯೆ ನ್ಯಾಯಸಮ್ಮತವಾಗಿಯೇ ನಡೆಯುತ್ತಿದೆ' ಎಂದು ಆಯೋಗದ ಪರ ವಕೀಲ ರಾಕೇಶ್ ದ್ವಿವೇದಿ ಅವರು ಮುಖ್ಯನ್ಯಾಯಮೂರ್ತಿ ಸೂರ್ಯ ಕಾಂತ್ ನೇತೃತ್ವದ ಪೀಠಕ್ಕೆ ತಿಳಿಸಿದರು.

'ಎಸ್‌ಐಆರ್‌ಗೆ ಆಕ್ಷೇಪಿಸಿ ಅರ್ಜಿ ಸಲ್ಲಿಸಿರುವವರು ಯಾರು ಎಂಬುದನ್ನು ಗಮನಿಸಿ. ರಾಜಕೀಯ ಪಕ್ಷಗಳ ನಾಯಕರು, ಖಾಸಗಿ ವ್ಯಕ್ತಿಗಳು ಹಾಗೂ ಎನ್‌ಜಿಒಗಳು ಕೋರ್ಟ್‌ಗೆ ಅರ್ಜಿ ಸಲ್ಲಿಸಿವೆ. ತಾವು ಅನಾಮಧೇಯ ವ್ಯಕ್ತಿಗಳನ್ನು ಪ್ರತಿನಿಧಿಸುತ್ತಿದ್ದೇವೆ ಎನ್ನುವ ಮೂಲಕ ಇವರು ಕೋಲಾಹಲ ಸೃಷ್ಟಿಸುತ್ತಿದ್ದಾರೆ' ಎಂದೂ ದ್ವಿವೇದಿ ಹೇಳಿದರು.

ನ್ಯಾಯಮೂರ್ತಿ ಜಾಯ್‌ಮಾಲ್ಯ ಬಾಗ್ಚಿ ಅವರೂ ಈ ಪೀಠದಲ್ಲಿದ್ದಾರೆ.

ಭೋಜಶಾಲಾ: ಬಸಂತ ಪಂಚಮಿ ದಿನ ಪೂಜೆ ಮತ್ತು ನಮಾಜ್‌ಗೆ ಅವಕಾಶ

ಹಿಂದೂ, ಮುಸ್ಲಿಮರಿಗೆ ಪ್ರಾರ್ಥಿಸಲು ಸಮ್ಮತಿ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಮಧ್ಯಪ್ರದೇಶದ ಧಾರ್ ಜಿಲ್ಲೆಯ ಭೋಜಶಾಲಾ– ಕಮಲ್ ಮೌಲಾ ಮಸೀದಿಯಲ್ಲಿ ಬಸಂತ ಪಂಚಮಿ ದಿನವಾದ ಶುಕ್ರವಾರ (ಇದೇ 23) ಸೂರ್ಯೋದಯದಿಂದ ಸೂರ್ಯಾಸ್ತದವರೆಗೂ ಪ್ರಾರ್ಥನೆ ಸಲ್ಲಿಸಲು ಹಿಂದೂಗಳಿಗೆ ಸುಪ್ರೀಂ ಕೋರ್ಟ್ ಗುರುವಾರ ಅನುಮತಿ ನೀಡಿದೆ.

ಇದೇ ವೇಳೆ ಅಂದು ಮಧ್ಯಾಹ್ನ 1ರಿಂದ 3 ಗಂಟೆಯವರೆಗೆ ಮುಸ್ಲಿಮರಿಗೆ ನಮಾಜ್ ಮಾಡಲೂ ನ್ಯಾಯಾಲಯ ಸಮ್ಮತಿಸಿದೆ. ಎರಡೂ ಧರ್ಮದವರು ಪರಸ್ಪರ ಗೌರವ, ಸೌಹಾರ್ದದಿಂದ ಇರಬೇಕು ಮತ್ತು ಸ್ಥಳೀಯ ಆಡಳಿತಕ್ಕೆ ಸಹಕರಿಸಬೇಕು ಎಂದೂ ಅದು ಸೂಚಿಸಿದೆ.

ಈ ಕುರಿತು ವಿಚಾರಣೆ ನಡೆಸಿದ ಭಾರತದ ಮುಖ್ಯ ನ್ಯಾಯಮೂರ್ತಿ ಸೂರ್ಯ ಕಾಂತ್, ನ್ಯಾಯಮೂರ್ತಿಗಳಾದ ಜಾಯ್‌ಮಾಲ್ಯ ಬಾಗ್ಚಿ ಮತ್ತು ವಿಪುಲ್ ಎಂ. ಪಂಚೋಲಿ ಅವರನ್ನು ಒಳಗೊಂಡ ಪೀಠವು, ಅಂದು ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳುವಂತೆ ಜಿಲ್ಲಾಡಳಿತಕ್ಕೆ ನಿರ್ದೇಶನ ನೀಡಿದೆ.

ಪಟ್ಟಿ ಸಲ್ಲಿಸಲು ಸೂಚನೆ: ಅಂದು, ಈ ಮಸೀದಿಯಲ್ಲಿ ನಮಾಜ್ ಮಾಡಲು ಬರುವ ಮುಸ್ಲಿಂ ಸಮುದಾಯದ ವ್ಯಕ್ತಿಗಳ ಪಟ್ಟಿಯನ್ನು ಜಿಲ್ಲಾಡಳಿತಕ್ಕೆ ಸಲ್ಲಿಸುವಂತೆ ಪೀಠ ಸೂಚನೆ ನೀಡಿದೆ.

ಭೋಜಶಾಲಾ ಆವರಣದಲ್ಲಿ ಬಸಂತ ಪಂಚಮಿ ದಿನವಾದ ಶುಕ್ರವಾರ ಸರಸ್ವತಿ ಪೂಜೆ ಸೇರಿದಂತೆ ಧಾರ್ಮಿಕ ಚಟುವಟಿಕೆಗಳನ್ನು ನಡೆಸಲು ಅನುಮತಿ ನೀಡುವಂತೆ ಹಿಂದೂ ಗುಂಪು ಸುಪ್ರೀಂ ಕೋರ್ಟ್ ಮೊರೆ ಹೋಗಿತ್ತು. ಶುಕ್ರವಾರ ನಮಾಜ್‌ಗೆ ತೊಂದರೆ ಆಗದಂತೆ ನೋಡಿಕೊಳ್ಳುವಂತೆ ಮುಸ್ಲಿಂ ಗುಂಪು ಸಹ ಮನವಿ ಮಾಡಿತ್ತು.

ಹಿಂದೂ ಅರ್ಜಿದಾರರ ಪರ ವಾದ ಮಾಡಿದ ಹಿರಿಯ ವಕೀಲ ವಿಷ್ಣುಶಂಕರ್ ಜೈನ್, 'ಬಸಂತ ಪಂಚಮಿ ಶುಕ್ರವಾರವೇ ಬಂದಿರುವುದು ಕಾಕತಾಳೀಯ. ಅಂದು ಬೋಜಶಾಲಾದಲ್ಲಿ ಪೂಜೆ, ಪ್ರಾರ್ಥನೆ ಸಲ್ಲಿಸಲು ಹಿಂದೂಗಳಿಗೆ ಅವಕಾಶ ನೀಡಬೇಕು' ಎಂದು ಕೋರಿದರು.

ಮಸೀದಿ ಸಮಿತಿ ಪರ ವಾದಿಸಿದ ಹಿರಿಯ ವಕೀಲ ಸಲ್ಮಾನ್ ಖುರ್ಷಿದ್, 'ಶುಕ್ರವಾರ ಮಧ್ಯಾಹ್ನ 1ರಿಂದ 3 ಗಂಟೆಯವರೆಗೆ ನಮಾಜ್ ನಡೆಯಲಿದೆ. ಆ ವೇಳಾಪಟ್ಟಿಯನ್ನು ಬದಲಿಸಲಾಗದು' ಎಂದು ಅವರು ಪೀಠದ ಗಮನಕ್ಕೆ ತಂದರು.

ಉಳಿದಂತೆ ಪ್ರಸ್ತಾವವನ್ನು ಒಪ್ಪಿಕೊಂಡ ಖುರ್ಷಿದ್ ಅವರು, ನಮಾಜ್ ಮಾಡಲು ಎಷ್ಟು ಜನ ಬರಬಹುದು ಎಂಬುದರ ಪಟ್ಟಿಯನ್ನು ಶುಕ್ರವಾರ ಬೆಳಿಗ್ಗೆ ಜಿಲ್ಲಾಧಿಕಾರಿ ಜತೆ ಹಂಚಿಕೊಳ್ಳಲಾಗುವುದು ಎಂದರು.

11ನೇ ಶತಮಾನದ ಸ್ಮಾರಕ: ಭೋಜಶಾಲಾ 11ನೇ ಶತಮಾನದ ಐತಿಹಾಸಿಕ ಸ್ಮಾರಕವಾಗಿದ್ದು, ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆ (ಎಎಸ್‌ಐ) ಅದನ್ನು ಸಂರಕ್ಷಿತ ತಾಣ ಎಂದು ಗುರುತಿಸಿದೆ. ಈ ಸ್ಮಾರಕವು ವಾಗ್ದೇವಿಗೆ (ಸರಸ್ವತಿ ದೇವಿ) ಸಮರ್ಪಿತವಾದದ್ದು ಎಂದು ಹಿಂದೂಗಳು ನಂಬಿದ್ದರೆ, ಮುಸ್ಲಿಮರು ಅದನ್ನು ಕಮಲ್ ಮೌಲಾ ಮಸೀದಿ ಎಂದು ಪರಿಗಣಿಸಿದ್ದಾರೆ.

ಭೋಜಶಾಲಾ ಆವರಣದಲ್ಲಿ ಹಿಂದೂಗಳಿಗೆ ಮಂಗಳವಾರ ಪೂಜೆ ಸಲ್ಲಿಸಲು ಮತ್ತು ಮುಸ್ಲಿಂರಿಗೆ ಶುಕ್ರವಾರ ನಮಾಜ್ ಮಾಡಲು ವ್ಯವಸ್ಥೆ ಮಾಡಿ ಎಎಸ್‌ಐ 2003ರ ಏಪ್ರಿಲ್ 7ರಂದು ಆದೇಶಿಸಿದೆ.

ಭೋಜಶಾಲಾ ಯಾವ ಸಮುದಾಯಕ್ಕೆ ಸೇರಿದ್ದು ಎಂಬುದನ್ನು ತೀರ್ಮಾನಿಸಲು ಮಧ್ಯಪ್ರದೇಶ ಹೈಕೋರ್ಟ್ ನಿರ್ದೇಶನದ ಮೇರೆಗೆ ವೈಜ್ಞಾನಿಕ ಸಮೀಕ್ಷೆ ನಡೆಸಲಾಗಿದೆ. ಈ ಕುರಿತು ಹೈಕೋರ್ಟ್‌ನಲ್ಲಿ ಬಾಕಿಯಿರುವ ರಿಟ್ ಅರ್ಜಿಗಳನ್ನು ಎರಡು ವಾರಗಳೊಳಗೆ ಹಿರಿಯ ನ್ಯಾಯಮೂರ್ತಿ ನೇತೃತ್ವದ ವಿಭಾಗೀಯ ಪೀಠ ಕೈಗೆತ್ತಿಕೊಳ್ಳಬೇಕು ಎಂದೂ ಪೀಠ ನಿರ್ದೇಶಿಸಿದೆ.

ಜನಕಪುರಿ ಹಿಂಸಾಚಾರ ಪ್ರಕರಣ: ಸಜ್ಜನ ಕುಮಾರ್ ಖುಲಾಸೆ

ನವದೆಹಲಿ(ಪಿಟಿಐ): 1984ರಲ್ಲಿ ಸಿಖ್ ವಿರೋಧಿ ಗಲಭೆಗಳಿಗೆ ಸಂಬಂಧಿಸಿದ ಇಲ್ಲಿನ ಜನಕಪುರಿ ಪ್ರದೇಶದಲ್ಲಿ ನಡೆದಿದ್ದ ಹಿಂಸಾಚಾರ ಪ್ರಕರಣದಲ್ಲಿ ಕಾಂಗ್ರೆಸ್‌ನ ಹಿರಿಯ ಮುಖಂಡ ಸಜ್ಜನ ಕುಮಾರ್ ಅವರನ್ನು ದೆಹಲಿಯ ನ್ಯಾಯಾಲಯವೊಂದು ಖುಲಾಸೆಗೊಳಿಸಿ ಗುರುವಾರ ಆದೇಶಿಸಿದೆ.

'ಸಜ್ಜನ ಕುಮಾರ್ ವಿರುದ್ಧದ ಆರೋಪಗಳನ್ನು ಸಂಶಯಕ್ಕೆ ಎಡೆಯಿಲ್ಲದಂತೆ ಸಾಬೀತುಪಡಿಸುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ' ಎಂದು ಆದೇಶ ಪ್ರಕಟಿಸಿದ ವಿಶೇಷ ನ್ಯಾಯಾಧೀಶ ದಿಗ್ವಿನಯ ಸಿಂಗ್ ಹೇಳಿದರು.

'ಈ ಹಿಂಸಾಚಾರಗಳಲ್ಲಿ ಪ್ರಾಣ ಕಳೆದುಕೊಂಡವರ ಕುಟುಂಬಸ್ಥರು ಹಾಗೂ ಸಂತ್ರಸ್ತರು ಅನುಭವಿಸುತ್ತಿರುವ ನೋವು ನ್ಯಾಯಾಲಯಕ್ಕೆ ಅರ್ಥವಾಗುತ್ತದೆ. ಆದರೆ, ಈ ಪ್ರಕರಣ ಕುರಿತು ನೀಡುವ ತೀರ್ಪು ಯಾವುದೇ ಭಾವೋದ್ವೇಗಳಿಂದ ಮುಕ್ತ ವಾಗಿರುವುದು ಮುಖ್ಯ' ಎಂದು ನ್ಯಾಯಾಧೀಶ ಹೇಳಿದರು.

'ಸಾಕ್ಷ್ಯಾಧಾರಗಳ ಆಧಾರದ ಮೇಲಷ್ಟೆ ಆರೋಪಿಯು ತಪ್ಪಿತಸ್ಥ ಎಂಬುದಾಗಿ ತೀರ್ಮಾನಿಸಲು ಸಾಧ್ಯ. ದುರದೃಷ್ಟವಶಾತ್, ಪ್ರಾಸಿಕ್ಯೂಷನ್‌ನವರು ಪಾಟಿಸವಾಲಿಗೆ ಒಳಪಡಿಸಿದ ಬಹುತೇಕ ಸಾಕ್ಷ್ಯಗಳು ವದಂತಿಗಳೇ ಆಗಿದ್ದವು ಅಥವಾ ಮೂರು ದಶಕ ಕಳೆದರೂ ಆರೋಪಿಗಳನ್ನು ಗುರುತಿಸುವಲ್ಲಿ ಸಾಕ್ಷಿಗಳು ವಿಫಲರಾದರು' ಎಂದೂ ನ್ಯಾಯಾಧೀಶ ಹೇಳಿದರು.

'ಅಪರಾಧ ನಡೆದ ಸ್ಥಳದಲ್ಲಿ ಸಜ್ಜನ ಕುಮಾರ್ ಇದ್ದರು ಅಥವಾ ಅವರನ್ನು ಆ ಸ್ಥಳದಲ್ಲಿ ಬೇರೊಬ್ಬರು ನೋಡಿದ್ದರು ಎಂಬುದಕ್ಕೆ ಯಾವುದೇ ವಿಶ್ವಾಸಾರ್ಹ ಸಾಕ್ಷ್ಯ ಇಲ್ಲ. ಗುಂಪು ಹಲ್ಲೆ ಅಥವಾ ಹಿಂಸಾಚಾರಕ್ಕೆ ಅವರು ಪಿತೂರಿ ನಡೆಸಿದ್ದರು ಎಂಬುದನ್ನು ಸಾಬೀತು ಮಾಡುವ ಸಾಕ್ಷ್ಯಗಳೂ ಇಲ್ಲ' ಎಂದು ನ್ಯಾಯಾಲಯ ಪ್ರಕಟಿಸಿರುವ ಆದೇಶದಲ್ಲಿ ಹೇಳಲಾಗಿದೆ.

ಬೇರೆ ಪ್ರಕರಣವೊಂದಕ್ಕೆ ಸಂಬಂಧಿಸಿ ಸಜ್ಜನ ಕುಮಾರ್ ದೆಹಲಿಯ ಸರಸ್ವತಿ ವಿಹಾರ ಪ್ರದೇಶದ ಜೈಲಿನಲ್ಲಿದ್ದಾರೆ.

ಗುಂಡಿಕ್ಕಿ ಹತ್ಯೆ: ಮಣಿಪುರ ಉದ್ವಿಗ್ನ

ಇಂಫಾಲ್(ಪಿಟಿಐ): ಮೈತೇಯಿ ಸಮುದಾಯದ ವ್ಯಕ್ತಿಯನ್ನು ಶಂಕಿತ ಕುಕಿ ಉಗ್ರರು ಅಪಹರಿಸಿ ಹತ್ಯೆ ಮಾಡಿದ್ದು, ಮಣಿಪುರದಲ್ಲಿ ಹಿಂಸಾಚಾರ ಗುರುವಾರ ಭುಗಿಲೆದ್ದಿದೆ.

ಮಯಾಂಗ್ಲಂಬಮ್ ರಿಷಿಕಾಂತ ಸಿಂಗ್ ಹತ್ಯೆಯಾದ ವ್ಯಕ್ತಿ. 'ಚುರಾಚಾಂದಪುರ ಜಿಲ್ಲೆಯ ಟುಯಿಬಾಂಗ್ ಪ್ರದೇಶದಲ್ಲಿನ ಮನೆಯಿಂದ ಬುಧವಾರ ಸಂಜೆ ರಿಷಿಕಾಂತ ದಂಪತಿಯನ್ನು ಅಪಹರಿಸಿದ ಬಂಡುಕೋರರು ನಾಟ್ಜಾಂಗ್ ಕಡೆ ಕರೆದೊಯ್ದರು. ಅಲ್ಲಿ ಸಿಂಗ್‌ಗೆ ಗುಂಡಿಕ್ಕಿ ಹತ್ಯೆ ಮಾಡಿದ್ದಾರೆ. ನಂತರ ಆತನ ಪತ್ನಿಯನ್ನು ಬಿಡುಗಡೆ ಮಾಡಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ನರೇಗಾ ಸಮಾವೇಶದಲ್ಲಿ ಕಾರ್ಮಿಕರಿಗೆ ರಾಹುಲ್ ಗಾಂಧಿ ಕರೆ

'ರೈತರಂತೆ ನೀವೂ ಒಂದಾಗಿ ಹೋರಾಡಿ'

ರಾಹುಲ್ ಗಾಂಧಿ ಮತ್ತು ಮಲ್ಲಿಕಾರ್ಜುನ ಖರ್ಗೆ ಅವರು ಗುರುವಾರ ಸಮ್ಮೇಳನದಲ್ಲಿ ಭಾಗವಹಿಸಿ, ಪಿಕಾಸಿ ಹಿಡಿದು ಜನರತ್ತ ಕೈಬೀಸಿದರು –ಪಿಟಿಐ ಚಿತ್ರ

'ಹೊಸ ಕಾನೂನಿನ ಹೆಸರೇನದು...?'

- 'ಕೃಷಿ ಕಾನೂನುಗಳು ಸಂವಿಧಾನದ ಮೇಲಿನ ದಾಳಿಯಾಗಿತ್ತು. ಅದೇ ರೀತಿ ನೋಟು ರದ್ದತಿ ಮತ್ತು ತಪ್ಪು ಜಿಎಸ್‌ಟಿ ಕೂಡ. ಈಗ ಹೊಸ ಕಾನೂನಿನ ಹೆಸರೇನದು...? ನನಗೆ ಗೊತ್ತಿಲ್ಲ' ಎಂದು ರಾಹುಲ್ ಗಾಂಧಿ ಅವರು ಹೇಳುತ್ತಿದ್ದಂತೆಯೇ ಜನರು ಜಿ ರಾಮ್ ಜಿ ಎಂದು ಕೂಗಿದರು
- ಭಾರತವನ್ನು ಸ್ವಾತಂತ್ರ್ಯ ಪೂರ್ವದ ಕಾಲಕ್ಕೆ ತಳ್ಳಲು ಇವರು ಯತ್ನಿಸುತ್ತಿದ್ದಾರೆ. ಆ ಕಾಲದಲ್ಲಿ ರಾಜರೇ ಎಲ್ಲವನ್ನೂ ನಿರ್ಧರಿಸುತ್ತಿದ್ದರು. ತಮ್ಮ ಬಳಿಯೇ ಎಲ್ಲ ಸಂಪತ್ತನ್ನು ಇಟ್ಟುಕೊಂಡಿರುತ್ತಿದ್ದರು. ತಮಗೆ ಇಷ್ಟ ಬಂದ ರೀತಿಯಲ್ಲಿ ಸಂಪತ್ತು ಗಳಿಸುತ್ತಿದ್ದರು. ಇಂಥ ಯೋಜನೆಗಳು, ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಅವರು (ಕೇಂದ್ರ) ನಿಲ್ಲಿಸುವುದಿಲ್ಲ. ಯಾಕೆಂದರೆ, ಆಧುನಿಕ ಭಾರತದ ಸಂರಚನೆಯನ್ನು ಬದಲಾಯಿಸುವುದು ಅವರ ಉದ್ದೇಶ ಎಂದು ರಾಹುಲ್ ಗಾಂಧಿ ಹೇಳಿದರು.

ನವದೆಹಲಿ (ಪಿಟಿಐ): 'ಈ ಹಿಂದೆ ಮೂರು ಕರಾಳ ಕೃಷಿ ಕಾಯ್ದೆಗಳನ್ನು ಜಾರಿಗೊಳಿಸಿದಾಗ ಕೇಂದ್ರ ಸರ್ಕಾರಕ್ಕೆ ಇದ್ದ ಉದ್ದೇಶವೇ ಈಗ ನರೇಗಾವನ್ನು ಬದಲಿಸುವುದರ ಹಿಂದೆಯೂ ಇದೆ. ಅಂದಿನ ಆ ರೈತರ ಹೋರಾಟದಿಂದ ಪ್ರೇರಣೆ ಪಡೆದು, ನರೇಗಾವನ್ನು ವಾಪಸ್ ಪಡೆದುಕೊಳ್ಳಬೇಕು' ಎಂದು ಲೋಕಸಭೆ ವಿಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಕಾರ್ಮಿಕರಿಗೆ ಕರೆ ನೀಡಿದರು.

ಕಾಂಗ್ರೆಸ್‌ನ 'ರಚನಾತ್ಮಕ್ ಕಾಂಗ್ರೆಸ್' ವಿಭಾಗವು ಗುರುವಾರ ಇಲ್ಲಿ ಆಯೋಜಿಸಿದ್ದ 'ರಾಷ್ಟ್ರೀಯ ನರೇಗಾ ಕಾರ್ಮಿಕರ ಸಮಾವೇಶ'ದಲ್ಲಿ ಅವರು ಮಾತನಾಡಿದರು.

> **ಗ್ರಾಮ ಸ್ವರಾಜ್ಯ ಪರಿಕಲ್ಪನೆಯನ್ನು ಬಲಹೀನಗೊಳಿಸುವುದು ನರೇಗಾವನ್ನು ಬದಲಾಯಿಸಿರುವುದರ ಹಿಂದಿನ ಉದ್ದೇಶ. ಬಜೆಟ್ ಅಧಿವೇಶನದಲ್ಲಿ ಈ ಬಗ್ಗೆ ಹೋರಾಡುತ್ತೇವೆ.**
> **ಮಲ್ಲಿಕಾರ್ಜುನ ಖರ್ಗೆ,** ಕಾಂಗ್ರೆಸ್ ಅಧ್ಯಕ್ಷ

ದೇಶದ ವಿವಿಧೆಡೆಯಿಂದ ಬಂದಿದ್ದ ಕಾರ್ಮಿಕರು, ತಾವು ಕೆಲಸ ಮಾಡುವ ಜಮೀನುಗಳಿಂದ ಒಂದು ಮುಷ್ಟಿ ಮಣ್ಣು ತಂದಿದ್ದರು. ಸಮ್ಮೇಳನ ನಡೆದ ಜಾಗದಲ್ಲಿದ್ದ ಹೂವಿನ ಕುಂಡಗಳಿಗೆ ಆ ಮಣ್ಣನ್ನು ಹಾಕಲಾಯಿತು.

'ಮೂರು ಕರಾಳ ಕೃಷಿ ಕಾನೂನು ತರಲು ಮೋದಿ ಸರ್ಕಾರವು ಕೆಲವು ವರ್ಷಗಳ ಹಿಂದೆ ಪ್ರಯತ್ನಿಸಿತ್ತು. ಇದನ್ನು ರೈತರು ತಡೆದರು. ನನಗೆ ಇನ್ನೂ ನೆನಪಿದೆ. ಈ ಕಾನೂನು ಹಿಂಪಡೆಯುವಂತೆ ಸಂಸತ್ತಿನಲ್ಲಿ, ಬೀದಿಗಳಲ್ಲಿ ರೈತರೊಂದಿಗೆ ಸೇರಿಕೊಂಡು ನಾವೂ ಕೇಂದ್ರ ಸರ್ಕಾರದ ಮೇಲೆ ಒತ್ತಡ ಹಾಕಿದ್ದೆವು' ಎಂದರು.

'ಅವರನ್ನು ತಡೆಯಲು ಒಂದೇ ಮಾರ್ಗವಿದೆ. ರೈತರು ತೋರಿಸಿದ ದಾರಿ ನಮ್ಮ ಮುಂದಿದೆ. ನಾವು ಒಟ್ಟುಗೂಡಿ ದೃಢವಾಗಿ ನಿಲ್ಲಬೇಕು. ಅವರು (ಕೇಂದ್ರ) ಹೆದರುಪುಕ್ಕಲರು. ನನಗೆ ಅವರ ಬಗ್ಗೆ ತಿಳಿದಿದೆ. ನಾವು ಒಂದಾದರೆ ಯೋಜನೆಯ ಹೆಸರನ್ನು, ಯೋಜನೆ ಹೇಗಿರಬೇಕು ಎಂಬುದನ್ನು ನಾವೇ ನಿರ್ಧರಿಸಬಹುದು' ಎಂದರು.

'ಆದರೆ, ನಮ್ಮಲ್ಲಿ ಒಂದು ಸಮಸ್ಯೆ ಇದೆ. ಬಡವರು ಒಂದಾಗಿ ನಿಲ್ಲುವುದಿಲ್ಲ; ಈಗ ಒಂದಾಗಲೇ ಬೇಕಿದೆ. ಸಂವಿಧಾನ ಮತ್ತು ಭಾರತ ಎಂಬ ಸಿದ್ಧಾಂತದ ಮೇಲೆ ನಂಬಿಕೆ ಇರುವವರು ಒಗ್ಗೂಡುವ ಸಮಯವಿದು. ನರೇಗಾ ಚಳವಳಿಯು ಅವಕಾಶವಾಗಿ ಒದಗಿಬಂದಿದೆ. ಎಲ್ಲರೂ ಒಗ್ಗಟ್ಟಾದರೆ, ಮೋದಿ ಅವರು ನರೇಗಾ ವಾಪಸು ಜಾರಿ ಮಾಡುತ್ತಾರೆ' ಎಂದರು.

'ಪ್ರಶ್ನೆಯ ಧ್ವನಿ ಮೌನವಾಗಿಸುವ ಆಡಳಿತ'

ಕೋಯಿಕ್ಕೋಡ್: 'ಪ್ರಶ್ನಿಸುವರ ಧ್ವನಿಯನ್ನೇ ವ್ಯವಸ್ಥಿತವಾಗಿ ಮೌನವಾಗಿಸುವ ಆಡಳಿತವು ಕೇಂದ್ರದ ಲ್ಲಿದೆ' ಎಂದು ನಟ ಪ್ರಕಾಶ್‌ರಾಜ್ ಟೀಕಿಸಿದರು.

ಕೇರಳ ಸಾಹಿತ್ಯ ಉತ್ಸವ (ಕೆಎಫ್‌ಎಲ್)- 2026ರಲ್ಲಿ ಅವರು ಮಾತನಾಡಿದರು.

'ನನ್ನ ಸಮಯ ವ್ಯರ್ಥ ಮಾಡಲಿಕ್ಕಾಗಿಯೇ ನನ್ನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಆದರೆ ನಾನು ವಿಭಿನ್ನ ಎಂಬುದು ಅವರಿಗೆ ಗೊತ್ತಿಲ್ಲ. ನನ್ನನ್ನು ದೇಶದ್ರೋಹಿ, ಪೆರಿಯಾರಿಸ್ಟ್, ಹಿಂದೂ ವಿರೋಧಿ ಎನ್ನುತ್ತಾರೆ' ಎಂದು ಪ್ರಕಾಶ್‌ರಾಜ್ ಉತ್ತರಿಸಿದರು.

ಆಘಾತದಲ್ಲಿ ಸಂತ್ರಸ್ತರ ಕುಟುಂಬಸ್ಥರು

ಜನಕಪುರಿ ಹಿಂಸಾಚಾರ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ಸಜ್ಜನ ಕುಮಾರ್ ಅವರನ್ನು ಖುಲಾಸೆಗೊಳಿಸಿ ದೆಹಲಿಯ ನ್ಯಾಯಾಲಯೊಂದು ಆದೇಶ ಪ್ರಕಟಿಸುತ್ತಿದ್ದಂತೆಯೇ, ನ್ಯಾಯಕ್ಕಾಗಿ ದಶಕಗಳಿಂದ ಹೋರಾಟ ನಡೆಸುತ್ತಿದ್ದವರಲ್ಲಿ ನಿರಾಸೆ, ದುಃಖ ಮಡುಗಟ್ಟಿತ್ತು.

ಆದೇಶ ಹೊರಬಿದ್ದ ಬೆನ್ನಲ್ಲೇ, ಹಿಂಸಾಚಾರದ ವೇಳೆ ತಾವು ಕಂಡ ಭೀಕರ ದೃಶ್ಯಗಳನ್ನು, ತಮ್ಮ ಕಣ್ಣೆದುರೇ ತಮ್ಮವರನ್ನು ಕಳೆದುಕೊಂಡ ಹೃದಯವಿದ್ರಾವಕ ಕ್ಷಣಗಳನ್ನು ಅನೇಕರು ಹಂಚಿಕೊಂಡರು.

ಭಾರತ ತಂಡದ ಮಾಜಿ ಫುಟ್‌ಬಾಲ್ ತಾರೆ ಇಲ್ಯಾಸ್ ಪಾಷಾ ನಿಧನ

ಬೆಂಗಳೂರು: ಭಾರತ ಫುಟ್‌ಬಾಲ್ ತಂಡ ಮತ್ತು ಈಸ್ಟ್ ಬೆಂಗಾಲ್ ಕ್ಲಬ್‌ನ ಆಟಗಾರ ಇಲ್ಯಾಸ್ ಪಾಷಾ (61) ಅವರು ದೀರ್ಘಕಾಲದ ಅನಾರೋಗ್ಯದಿಂದಾಗಿ ನಗರದಲ್ಲಿ ಗುರುವಾರ ನಿಧನರಾದರು. ಕರ್ನಾಟಕ ಕಂಡ ಶ್ರೇಷ್ಠ ಫುಟ್‌ಬಾಲ್ ಆಟಗಾರರಲ್ಲಿ ಅವರು ಒಬ್ಬರಾಗಿದ್ದರು.



ಅವರಿಗೆ ಪತ್ನಿ, ಇಬ್ಬರು ಪುತ್ರಿಯರು, ಪುತ್ರರು ಇದ್ದಾರೆ. ಅವರ ನಿಧನಕ್ಕೆ, ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ ಸಂತಾಪ ವ್ಯಕ್ತಪಡಿಸಿದೆ.

ರಕ್ಷಣೆ ವಿಭಾಗದ (ವೈಟ್ ವಿಂಗ್ ಬ್ಯಾಕ್) ಆಟಗಾರರಾಗಿದ್ದ ಇಲ್ಯಾಸ್ ಪಂದ್ಯದ ಗತಿ ಗ್ರಹಿಸುವ ಸಾಮರ್ಥ್ಯದಿಂದ ಹೆಸರು ಪಡೆದಿದ್ದರು. 1987ರ ಜನವರಿ 27ರಂದು ಕೋಯಿಕ್ಕೋಡ್‌ನಲ್ಲಿ ಬಲ್ಗೇರಿಯಾ ವಿರುದ್ಧ ನೆಹರೂ ಕಪ್ ಟೂರ್ನಿಯಲ್ಲಿ ಆಡುವ ಮೂಲಕ ಭಾರತ ಸೀನಿಯರ್ ತಂಡಕ್ಕೆ ಪದಾರ್ಪಣೆ ಮಾಡಿದ್ದರು. ಎಂಟು ಅಂತರ ರಾಷ್ಟ್ರೀಯ ಪಂದ್ಯಗಳನ್ನು ಆಡಿದ್ದರು.

ವೈಯಾಲಿಕಾವಲ್‌ನಲ್ಲಿ ವಿನಾಯಕ ಫುಟ್‌ಬಾಲ್ ಕ್ಲಬ್‌ಗೆ ಆಡುವ ಮೂಲಕ ವೃತ್ತಿಜೀವನ ಆರಂಭಿಸಿದ ಅವರು, ನಂತರ ಉತ್ತಮ ಆಟದಿಂದಾಗಿ 1980ರ ದಶಕದ ಮಧ್ಯದಲ್ಲಿ ಇಂಡಿಯನ್ ಟೆಲಿಫೋನ್ ಇಂಡಸ್ಟ್ರೀಸ್‌ಗೆ (ಐಟಿಐ) ಸೇರ್ಪಡೆಯಾದರು. 1987 ರಿಂದ ಮೂರು ವರ್ಷ ಸಂತೋಷ್ ಟ್ರೋಫಿ ಟೂರ್ನಿಯಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸಿದ್ದರು. 1993 ಮತ್ತು 1995ರಲ್ಲಿ ಬಂಗಾಳ ತಂಡವನ್ನು ಪ್ರತಿನಿಧಿಸಿದ್ದರು. ಆ ಎರಡೂ ವರ್ಷ ಆ ತಂಡ ಚಾಂಪಿಯನ್ ಆಗಿತ್ತು.

ಅವರು 1993-94ರಲ್ಲಿ ಈಸ್ಟ್ ಬೆಂಗಾಲ್ ತಂಡಕ್ಕೆ ನಾಯಕರಾಗಿದ್ದರು. ಅವರ ಆಡುತ್ತಿದ್ದ ಅವಧಿಯಲ್ಲಿ ಈ ಕ್ಲಬ್ ಐದು ಬಾರಿ ಕೋಲ್ಕತ್ತ ಲೀಗ್‌ನಲ್ಲಿ ಚಾಂಪಿಯನ್ ಆಗಿತ್ತು. ನಾಲ್ಕು ಬಾರಿ ಡುರಾಂಡ್ ಕಪ್ ಜಯಿಸಿತ್ತು. ಎರಡು ಬಾರಿ ರೋವರ್ಸ್ ಕಪ್ ಗೆದ್ದ ತಂಡದಲ್ಲೂ ಆಡಿದ್ದರು. 1990ರಲ್ಲಿ ಈಸ್ಟ್ ಬೆಂಗಾಲ್ ತಂಡ ಮೂರು ಪ್ರಮುಖ ಪ್ರಶಸ್ತಿ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸಿದ್ದರು.

ವಿಶ್ವ ಒಳಾಂಗಣ ಅಥ್ಲೆಟಿಕ್ಸ್: ಭಾರತ ಬಿಡ್

ನವದೆಹಲಿ (ಪಿಟಿಐ): ಭಾರತವು 2028ರ ಎರಡು ಜಾಗತಿಕ ಅಥ್ಲೆಟಿಕ್ ಕೂಟಗಳ ಆತಿಥ್ಯಕ್ಕೆ ಉತ್ಸಾಹ ತೋರಿಸಿದ್ದು ಬಿಡ್ ಸಹ ಸಲ್ಲಿಸಿದೆ. ವಿಶ್ವ ಒಳಾಂಗಣ ಚಾಂಪಿಯನ್‌ಷಿಪ್‌ಅನ್ನು ಭುವನೇಶ್ವರದಲ್ಲಿ ಮತ್ತು 20 ವರ್ಷದೊಳಗಿನವರ ಚಾಂಪಿಯನ್‌ಷಿಪ್‌ಅನ್ನು ಅಹಮದಾಬಾದಿನಲ್ಲಿ ಆಯೋಜಿಸಲು ಭಾರತ ಅಥ್ಲೆಟಿಕ್ ಫೆಡರೇಷನ್ ಬಿಡ್ ಸಲ್ಲಿಸಿದೆ.

ಈ ಎರಡರ ಪೈಕಿ, 2028ರ ವಿಶ್ವ 20 ವರ್ಷದೊಳಗಿನವರ ಚಾಂಪಿಯನ್‌ಷಿಪ್ ಹಮ್ಮಿಕೊಳ್ಳಲು ಎಎಫ್‌ಐ ಈ ಹಿಂದೆಯೇ, 2024ರ ಕೊನೆಯಲ್ಲಿ ವಿಶ್ವ ಅಥ್ಲೆಟಿಕ್ಸ್ ಅಧ್ಯಕ್ಷ ಸೆಬಾಸ್ಟಿಯನ್ ಕೋ ಅವರ ಭೇಟಿ ಸಂದರ್ಭದಲ್ಲಿ ಬಿಡ್ ಸಲ್ಲಿಸಿತ್ತು. ಹೊಸ ಬೆಳವಣಿಗೆಯಲ್ಲಿ ವಿಶ್ವ ಒಳಾಂಗಣ ಚಾಂಪಿಯನ್‌ಷಿಪ್‌ನ ಆತಿಥ್ಯಕ್ಕೂ ಆಸಕ್ತಿ ವಹಿಸಿದೆ.

ಗೆಲುವಿನ ಓಟದತ್ತ ಭಾರತದ ಚಿತ್ತ

ಎರಡನೇ ಟಿ20 ಇಂದು: ಲಯಕ್ಕೆ ಮರಳುವ ಪ್ರಯತ್ನದಲ್ಲಿ ಸಂಜು ಸ್ಯಾಮ್ಸನ್

ರಾಯಪುರ (ಪಿಟಿಐ): ಆರಂಭಿಕ ಬ್ಯಾಟರ್ ಅಭಿಷೇಕ್ ಶರ್ಮಾ ಅವರ ಅಬ್ಬರದ ಬ್ಯಾಟಿಂಗ್ ಬಲದಿಂದ ಭಾರತ ತಂಡವು ನ್ಯೂಜಿಲೆಂಡ್ ಎದುರಿನ ಟಿ20 ಕ್ರಿಕೆಟ್ ಸರಣಿಯ ಮೊದಲ ಪಂದ್ಯದಲ್ಲಿ ಭರ್ಜರಿ ಜಯ ಸಾಧಿಸಿದೆ. ಶುಕ್ರವಾರ ನಡೆಯಲಿರುವ ಸರಣಿಯ ಎರಡನೇ ಪಂದ್ಯದಲ್ಲಿಯೂ ಗೆಲುವಿನ ಓಟ ಮುಂದುವರಿಸುವ ಛಲದಲ್ಲಿ ಆತಿಥೇಯ ಬಳಗವಿದೆ.

ಕಳೆದ ಕೆಲವು ತಿಂಗಳಿಂದ ರನ್‌ಗಳ ಬರ ಎದುರಿಸುತ್ತಿರುವ ನಾಯಕ ಸೂರ್ಯಕುಮಾರ್ ಯಾದವ್ ಬುಧವಾರದ ಪಂದ್ಯದಲ್ಲಿ ಲಯ ಕಂಡುಕೊಂಡಿದ್ದರು. ರಿಂಕು ಸಿಂಗ್ ಕೂಡ ಅಮೋಘ ಆಟವಾಡಿದ್ದರು. ಸಂಜು ಅವರ ಬ್ಯಾಟ್‌ನಿಂದ ರನ್‌ಗಳು ಹರಿಯಲಿಲ್ಲ. ಅಷ್ಟೇ ಅಲ್ಲ ಅವರು ಸುಲಭವಾಗಿ ವಿಕೆಟ್ ಒಪ್ಪಿಸುತ್ತಿರುವುದು ಚಿಂತೆಯ ವಿಷಯವಾಗಿದೆ. ಆದರೆ ಅವರ ಕೀಪಿಂಗ್ ಚೆನ್ನಾಗಿತ್ತು. ಆದ್ದರಿಂದ ಅವರಿಗೆ ಇನ್ನೊಂದು ಅವಕಾಶ ಸಿಗಲಿದೆ. ಮೊದಲ ಪಂದ್ಯದಲ್ಲಿ ಶ್ರೇಯಸ್ ಅಯ್ಯರ್ ಅವರ ಬದಲಿಗೆ ಸ್ಥಾನ ಪಡೆದಿದ್ದ ಇಶಾನ್ ಕಿಶನ್ ಕೂಡ ತಮ್ಮ ಲಯಕ್ಕೆ ಮರಳಬೇಕಿದೆ. ಅವರು ಮೂರನೇ ಕ್ರಮಾಂಕದಲ್ಲಿ ಆಡಿದ್ದರು.

ಮುಂಬರುವ ಟಿ20 ವಿಶ್ವಕಪ್ ಟೂರ್ನಿಯ ಪೂರ್ವಾಭ್ಯಾಸದ ಕಣವೆಂದೇ ಈ ಸರಣಿ ಬಿಂಬಿತವಾಗಿದೆ. ಆದ್ದರಿಂದ ಎಲ್ಲ ಆಟಗಾರರಿಗೂ ಲಯ ಸಾಧಿಸಲು ಉತ್ತಮ ಅವಕಾಶವೂ ಆಗಿದೆ.

ಅಭಿಷೇಕ್ ಅವರ ಆಕ್ರಮಣಕಾರಿ ಶೈಲಿಯ ಬ್ಯಾಟಿಂಗ್ ಈಗ ಎದುರಾಳಿ ಬೌಲರ್‌ಗಳಿಗೆ ಕಠಿಣ ಸವಾಲಾಗಿದೆ. ಆದ್ದರಿಂದ ಮೊದಲು ಅವರನ್ನು ಕಟ್ಟಿಹಾಕುವತ್ತಲೇ ಮಿಚೆಲ್ ಸ್ಯಾಂಟನರ್ ಪಡೆಯು ವಿಶೇಷ ತಂತ್ರಗಾರಿಕೆ ಹೆಣೆಯುವುದು ಬಹುತೇಕ ಖಚಿತ. ಅವರು ಬೇಗ ಔಟಾದರೆ ಉಳಿದ ಬ್ಯಾಟರ್‌ಗಳ ಮೇಲೆ ಒತ್ತಡ ಹೆಚ್ಚಲಿದೆ.

ಬೌಲಿಂಗ್ ವಿಭಾಗದಲ್ಲಿ ಅರ್ಷದೀಪ್ ಸಿಂಗ್ ಪವರ್‌ಪ್ಲೇ ಅವಧಿಯಲ್ಲಿ ವಿಕೆಟ್ ಗಳಿಸುವ ತಮ್ಮ ಸಾಮರ್ಥ್ಯವನ್ನು ನಾಗ್ಪುರ ಪಂದ್ಯದಲ್ಲಿ ತೋರಿಸಿದ್ದರು. ವರುಣ್ ಚಕ್ರವರ್ತಿ ಕೂಡ ತಮ್ಮ ಮೋಡಿ ಮೆರೆದಿದ್ದರು. ಅವರೊಂದಿಗೆ ಜಸ್‌ಪ್ರೀತ್ ಬೂಮ್ರಾ ಮತ್ತು ಹಾರ್ದಿಕ್ ಪಾಂಡ್ಯ ತಮ್ಮ ಸಾಮರ್ಥ್ಯಕ್ಕೆ ತಕ್ಕಂತೆ ಬೌಲಿಂಗ್ ಮಾಡುವುದು ಮುಖ್ಯವಾಗಲಿದೆ.


ನ್ಯೂಜಿಲೆಂಡ್ ತಂಡದ ನಾಯಕ ಮಿಚೆಲ್ ಸ್ಯಾಂಟನರ್ ಹಾಗೂ ಭಾರತ ತಂಡದ ನಾಯಕ ಸೂರ್ಯಕುಮಾರ್ ಯಾದವ್ ಪಿಟಿಐ ಚಿತ್ರ

ನ್ಯೂಜಿಲೆಂಡ್ ತಂಡದ ಡ್ಯಾರಿಲ್ ಮಿಚೆಲ್, ಗ್ಲೆನ್ ಫಿಲಿಪ್ಸ್, ಡೆವೊನ್ ಕಾನ್ವೆ ಮತ್ತು ರಚಿನ್ ರವೀಂದ್ರ ಅವರು ರನ್‌ಗಳ ಹೊಳೆ ಹರಿಸಬಲ್ಲ ಸಮರ್ಥರು. ಅವರನ್ನು ನಿಯಂತ್ರಿಸುವುದು ಭಾರತದ ಬೌಲರ್‌ಗಳ ಮುಂದಿರುವ ಪ್ರಮುಖ ಸವಾಲು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ರಣಜಿ ಟ್ರೋಫಿ: ಶುಭಂ, ರಜತ್ ಉಪಯುಕ್ತ ಕಾಣಿಕೆ • ವೈಶಾಖ ತಿರುಗೇಟು

ವೆಂಕಟೇಶ್ ಬ್ಯಾಟಿಂಗ್ ಸೊಗಸು

• ಗಿರೀಶ ದೊಡ್ಡಮನಿ

ಬೆಂಗಳೂರು: ಮಧ್ಯಪ್ರದೇಶ ತಂಡದ ಬ್ಯಾಟರ್‌ಗಳು ಗುರುವಾರ ಇಲ್ಲಿ ಆರಂಭವಾದ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಪಂದ್ಯದ ಮೊದಲ ದಿನದಾಟದ ಬಹುತೇಕ ಅವಧಿಯಲ್ಲಿ ಹಿಡಿತ ಸಾಧಿಸಿದರು. ಆದರೆ ಸಂಜೆಯ ಹೊತ್ತಿಗೆ ಆ ಹಿಡಿತವನ್ನು ಸಡಿಲಗೊಳಿಸುವಲ್ಲಿ ಕರ್ನಾಟಕ ಬೌಲರ್‌ಗಳು ಸಫಲರಾದರು.

ಆಲೂರಿನ ಕೆಎಸ್‌ಸಿಎ ಮೈದಾನ (1)ದಲ್ಲಿ ಆರಂಭವಾದ ರಣಜಿ ಟ್ರೋಫಿ ಎಲೀಟ್ ಬಿ ಗುಂಪಿನ ಪಂದ್ಯದಲ್ಲಿ ದಿನದ ಮೊದಲ 65 ಓವರ್‌ಗಳಲ್ಲಿ ಕೇವಲ 2 ವಿಕೆಟ್ ಕಳೆದುಕೊಂಡಿದ್ದ ಪ್ರವಾಸಿ ಬಳಗವು ದೊಡ್ಡ ಮೊತ್ತ ಕಲೆ ಹಾಕುವ ಲಕ್ಷಣಗಳಿದ್ದವು. ಆದರೆ ದಿನದಾಟದ ಅಂತಿಮ 25 ಓವರ್‌ಗಳಲ್ಲಿ ಮೂರು ವಿಕೆಟ್‌ಗಳನ್ನು ಉರುಳಿಸುವಲ್ಲಿ ಕರ್ನಾಟಕದ ವೇಗಿ ವೈಶಾಖ ವಿಜಯಕುಮಾರ್ (51ಕ್ಕೆ2) ಹಾಗೂ ಅನುಭವಿ ಸ್ಪಿನ್ನರ್ ಶ್ರೇಯಸ್ ಗೋಪಾಲ್ (53ಕ್ಕೆ2) ಸಫಲರಾದರು. ಇದರಿಂದಾಗಿ ಮಧ್ಯಪ್ರದೇಶ ತಂಡವು ದಿನದಾಟದ ಮುಕ್ತಾಯಕ್ಕೆ 90 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 244 ರನ್ ಗಳಿಸಿತು.

ವಿಶ್ವಾಸಭರಿತ ಬ್ಯಾಟಿಂಗ್ ಪ್ರದರ್ಶಿಸಿದ ವೆಂಕಟೇಶ್ ಅಯ್ಯರ್ (87; 135ಎ), ಶುಭಂ ಶರ್ಮಾ (33; 151 ಎ) ಮತ್ತು ರಜತ್ ಪಾಟೀದಾರ್ (30) ಅವರನ್ನು ಪೆವಿಲಿಯನ್‌ಗೆ ಕಳಿಸುವಲ್ಲಿ ಬೌಲರ್‌ಗಳು ಯಶಸ್ವಿಯಾದರು. ಅಷ್ಟರ ಮಟ್ಟಿಗೆ ಕರ್ನಾಟಕವು ನಿರಾಳವಾಯಿತು. ಋತುವಿನಲ್ಲಿ ಈ ಮೂವರೂ ಉತ್ತಮ ಲಯದಲ್ಲಿದ್ದಾರೆ. ಇಲ್ಲಿಯೂ ತಮ್ಮ ಸಾಮರ್ಥ್ಯ ಮೆರೆದರು.

176 ನಿಮಿಷ ಕ್ರೀಸ್‌ನಲ್ಲಿದ್ದ ಅಯ್ಯರ್ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ 15ನೇ ಅರ್ಧಶತಕ ದಾಖಲಿಸಿದರು. ಬ್ಯಾಕ್‌ಫುಟ್ ಪಂಚ್, ಫ್ಲಿಕ್, ಡ್ರೈವ್‌ಗಳ ಮೂಲಕ ರನ್ ಗಳಿಸಿದರು. ದಿನದಾಟದ ಅಂತ್ಯಕ್ಕೆ ಇನ್ನೂ ಏಳು ಓವರ್‌ಗಳು ಬಾಕಿ ಇರುವಾಗಲೇ ವೈಶಾಖ ಎಸೆತವನ್ನು ಹುಕ್ ಮಾಡಿದ ವೆಂಕಟೇಶ್ ಅವರ ಕ್ಯಾಚ್ ಡೀಪ್ ಫೈನ್ ಲೆಗ್‌ನಲ್ಲಿದ್ದ ವಿದ್ವತ್ ಕಾವೇರಪ್ಪ ಕೈಸೇರಿತು. ಚಹಾ ವಿರಾಮಕ್ಕೂ ಮುನ್ನ ವೈಶಾಖ ಅವರು ಹಿಮಾಂಶು ಮಂತ್ರಿ ಅವರ ವಿಕೆಟ್ ಕೂಡ ಗಳಿಸಿದ್ದರು.

ವೆಂಕಟೇಶ್ ಅಯ್ಯರ್ ಚಿತ್ರ: ಪ್ರಶಾಂತ್ ಎಚ್‌.ಜಿ.

ಈಚೆಗೆ ನಡೆದಿದ್ದ ವಿಜಯ್ ಹಜಾರೆ ಟ್ರೋಫಿ ಟೂರ್ನಿಯ ಸೆಮಿಫೈನಲ್ ಪಂದ್ಯದಲ್ಲಿ ಕಂಕಷನ್ (ತಲೆಗೆ ಚೆಂಡು ಬಡಿದು ಗಾಯದ ಸಾಧ್ಯತೆ) ನಿಂದಾಗಿ ಮೈದಾನ ತೊರೆದಿದ್ದ ವೈಶಾಖ ಈ ಪಂದ್ಯಕ್ಕೆ ಫಿಟ್ ಆಗಿ ಮರಳಿದ್ದಾರೆ.

ಸ್ಪಿನ್ನರ್ ಶ್ರೇಯಸ್ ಅವರು 66ನೇ ಓವರ್‌ನಲ್ಲಿ ಶುಭಂ ಶರ್ಮಾ ಮತ್ತು 86ನೇ ಓವರ್‌ನಲ್ಲಿ ರಜತ್ ವಿಕೆಟ್ ಅನ್ನೂ ತಮ್ಮ ದಾಗಿಸಿಕೊಂಡರು. ಶ್ರೇಯಸ್ ಹಾಕಿದ ಎಸೆತಕ್ಕೆ ಸರಿಯಾದ ದಿಕ್ಕು ತೋರಿಸುವಲ್ಲಿ ವಿಫಲರಾದ ರಜತ್ ಶಾರ್ಟ್ ಕವರ್‌ನಲ್ಲಿದ್ದ ಅನೀಶ್ ಕೈಗೆ ಕ್ಯಾಚ್ ಆದರು.

ಶಿಖರ್‌ಗೆ ವಿಕೆಟ್: ಪ್ರಥಮ ವಿಕೆಟ್ ಜೊತೆಯಾಟದಲ್ಲಿ ಹಿಮಾಂಶು ಮಂತ್ರಿ (39; 114ಎ, 4X4) ಮತ್ತು ಯಶ್ ದುಬೆ (29; 57ಎ, 4X6) 53 ರನ್ ಸೇರಿಸಿ ಉತ್ತಮ ಆರಂಭ ನೀಡಿದರು. ದುಬೆ, 19ನೇ ಓವರ್‌ನಲ್ಲಿ ಸ್ಪಿನ್ನರ್ ಶಿಖರ್ ಶೆಟ್ಟಿ ಎಸೆತವನ್ನು ರಕ್ಷಣಾತ್ಮಕವಾಗಿ ಆಡುವ ಬದಲಿಗೆ ದೊಡ್ಡ ಹೊಡೆತಕ್ಕೆ ಕೈಹಾಕಿದರು. ಮಿಡ್ ಆನ್ ಫೀಲ್ಡರ್ ವಿದ್ಯಾಧರ್ ಪಾಟೀಲ ಕ್ಯಾಚ್ ಪಡೆದರು.

ಅಂಪೈರ್ ವೈಟ್: ಈ ಪಂದ್ಯದಲ್ಲಿ ಇಂಗ್ಲೆಂಡ್‌ನ ರಾಬ್ ವೈಟ್ ಅವರು ಫೀಲ್ಡ್ ಅಂಪೈರ್ ಆಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಭಾರತ ಮತ್ತು ಇಂಗ್ಲೆಂಡ್ ಕ್ರಿಕೆಟ್ ಮಂಡಳಿಗಳ ವಿನಿಮಯ ಕಾರ್ಯಕ್ರಮದಡಿಯಲ್ಲಿ ದೇಶಿ ಟೂರ್ನಿಗಳಲ್ಲಿ ವಿದೇಶಿ ಅಂಪೈರ್‌ಗಳಿಗೆ ಅವಕಾಶ ನೀಡುವ ಸಂಪ್ರದಾಯವಿದೆ ಎಂದು ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸ್ಕೋರು: ಮಧ್ಯಪ್ರದೇಶ: 90 ಓವರ್‌ಗಳಲ್ಲಿ 5ಕ್ಕೆ244 (ವೆಂಕಟೇಶ್ ಅಯ್ಯರ್ 87, ಹಿಮಾಂಶು ಮಂತ್ರಿ 39, ಶುಭಂ ಶರ್ಮಾ 33, ರಜತ್ ಪಾಟೀದಾರ್ 30; ವೈಶಾಖ ವಿಜಯಕುಮಾರ್ 51ಕ್ಕೆ2, ಶ್ರೇಯಸ್ ಗೋಪಾಲ್ 53ಕ್ಕೆ2) ವಿರುದ್ಧ: ಕರ್ನಾಟಕ.

ಶ್ರೀಜಿತ್‌ಗೆ ಗಾಯ: ಮಯಂಕ್ ಅಸ್ವಸ್ಥ

ಊಟದ ವಿರಾಮದ ನಂತರದ ಅವಧಿಯಲ್ಲಿ ಕರ್ನಾಟಕವು ಹೆಚ್ಚು ಒತ್ತಡ ಅನುಭವಿಸಬೇಕಾಯಿತು. ವಿಕೆಟ್‌ಕೀಪರ್ ಕೆ.ಎಲ್. ಶ್ರೀಜಿತ್ ಅವರಿಗೆ ಚೆಂಡನ್ನು ತಡೆಯುವ ಪ್ರಯತ್ನದಲ್ಲಿ ಬಲಗೈ ಬೆರಳಿಗೆ ಗಾಯವಾಯಿತು. 36ನೇ ಓವರ್‌ನಲ್ಲಿ ತುಸು ಅಸ್ವಸ್ಥರಾದ ನಾಯಕ ಮಯಂಕ್ ಅಗರವಾಲ್ ಪೆವಿಲಿಯನ್‌ಗೆ ಮರಳಿ ಚಿಕಿತ್ಸೆ ಪಡೆದರು. ಇಬ್ಬರೂ ಆಟಗಾರರು ಮತ್ತೆ ಕಣಕ್ಕಿಳಿಯಲಿಲ್ಲ. ಶ್ರೀಜಿತ್ ಬದಲಿಗೆ ಕೃತಿಕ್ ಕೃಷ್ಣ ಕೀಪಿಂಗ್ ನಿಭಾಯಿಸಿದರು.

ಭಾರತದಲ್ಲಿ ಆಡಲ್ಲ: ಬಾಂಗ್ಲಾದೇಶ

ಢಾಕಾ (ಪಿಟಿಐ): ಫೆಬ್ರುವರಿ 7ರಂದು ಆರಂಭವಾಗುವ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯಗಳನ್ನು ಆಡಲು ಭಾರತಕ್ಕೆ ತನ್ನ ತಂಡವನ್ನು ಕಳುಹಿಸಲು ಬಾಂಗ್ಲಾದೇಶ ಗುರುವಾರ ನಿರಾಕರಿಸಿದೆ.

ಭಾರತದಲ್ಲಿ ನಿಗದಿಯಾಗಿರುವ ಪಂದ್ಯಗಳನ್ನು ಶ್ರೀಲಂಕಾಕ್ಕೆ ಸ್ಥಳಾಂತರಿಸಬೇಕೆಂದು ಬಿಸಿಬಿಯ ಬೇಡಿಕೆಯನ್ನು ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿಯು (ಐಸಿಸಿ) ಬುಧವಾರ ತಿರಸ್ಕರಿಸಿತ್ತು. ಅಷ್ಟೇ ಅಲ್ಲ, ಅಂತಿಮ ನಿರ್ಧಾರಕ್ಕೆ ಬರಲು ಬಿಸಿಬಿಗೆ ವಿಧಿಸಿದ್ದ ಬುಧವಾರದ ಗಡುವನ್ನು ಮತ್ತೊಂದು ದಿನಕ್ಕೆ (ಗುರುವಾರದವರೆಗೆ) ವಿಸ್ತರಿಸಿತ್ತು.

ಬಾಂಗ್ಲಾದೇಶ ತಳೆದಿರುವ ಬಿಗಿಪಟ್ಟಿನ ಕಾರಣ ಈಗ ಆ ತಂಡ ಟೂರ್ನಿಯಿಂದ ಹೊರಬೀಳುವ ಸಾಧ್ಯತೆ ದಟ್ಟವಾಗಿದೆ. ಆ ಸ್ಥಾನದಲ್ಲಿ, ಸ್ಕಾಟ್ಲೆಂಡ್ ತಂಡಕ್ಕೆ ಅವಕಾಶ ನೀಡುವ ಸಾಧ್ಯತೆಯಿದೆ. ಕ್ರಮಾಂಕದಲ್ಲಿ ಸ್ಕಾಟ್ಲೆಂಡ್ ತಂಡವು, ಬಾಂಗ್ಲಾದೇಶದ ನಂತರದ ಸ್ಥಾನ ಹೊಂದಿದೆ.

ಬಾಂಗ್ಲಾದೇಶ ತಂಡದ ಆಟಗಾರರ ಜೊತೆ ಸಭೆ ನಡೆಸಿದ ನಂತರ ದೇಶದ ಕ್ರೀಡಾ ಸಲಹೆಗಾರ ಆಸಿಫ್ ನಝ್ರುಲ್ ಅವರು ಈ ಕಠಿಣ ನಿಲುವು ತೆಗೆದುಕೊಂಡರು. ಭದ್ರತೆಗೆ ಸಂಬಂಧಿಸಿ ಐಸಿಸಿ ನಡೆಸಿರುವ ಮೌಲ್ಯಮಾಪನ ತಮ್ಮ ದೇಶಕ್ಕೆ ಸಮ್ಮತಾರ್ಹವಲ್ಲ ಎಂದೂ ಹೇಳಿದರು.

ಐಸಿಸಿ
ಪುರುಷರ ಟಿ20 ವಿಶ್ವಕಪ್ 2026

‘ನಮ್ಮ ದೇಶದ ಕ್ರಿಕೆಟಿಗರು ವಿಶ್ವಕಪ್‌ನಲ್ಲಿ ಆಡಲು ಸಾಕಷ್ಟು ಶ್ರಮ ಹಾಕಿದ್ದಾರೆ. ಆದರೆ ಭಾರತದಲ್ಲಿ ಆಡುವುದಕ್ಕೆ ನಮಗಿರುವ ಭದ್ರತಾ ಕಳವಳ ಈಗಲೂ ಬದಲಾಗಿಲ್ಲ’ ಎಂದು ನಝ್ರುಲ್ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

‘ನಮ್ಮ ತಂಡ, ಪತ್ರಕರ್ತರು ಮತ್ತು ಪ್ರೇಕ್ಷಕರ ಸುರಕ್ಷತೆಯನ್ನು ಅವರು (ಭಾರತ) ಖಾತರಿಪಡಿಸಬಲ್ಲರು ಎಂಬ ಬಗ್ಗೆ ನಮಗೆ ಮನವರಿಕೆಯಾಗಿಲ್ಲ. ಆದರೆ ನಾವು ಇನ್ನೂ ವಿಶ್ವಾಸ ಕಳೆದುಕೊಂಡಿಲ್ಲ. ನಮ್ಮ ತಂಡ ಸಜ್ಜಾಗಿದೆ. ಸುರಕ್ಷತೆಗೆ ಸಂಬಂಧಿಸಿದ ನಮ್ಮ ಪ್ರಾಮಾಣಿಕ ಕಳಕಳಿಯನ್ನು ಪರಿಗಣಿಸಿ ಶ್ರೀಲಂಕಾದಲ್ಲಿ ಆಡಲು ಅವಕಾಶ ನೀಡುವ ಮೂಲಕ ಐಸಿಸಿ ನ್ಯಾಯ ಒದಗಿಸುತ್ತದೆ ಎಂಬ ನಿರೀಕ್ಷೆ ನಮಗೆ ಇದೆ’ ಎಂದು ಅವರು ಹೇಳಿದರು.

ಈಗ ನಿಗದಿಯಾಗಿರುವ ವೇಳಾಪಟ್ಟಿಯ ಪ್ರಕಾರ ಬಾಂಗ್ಲಾದೇಶ ತಂಡವು ಭಾರತದಲ್ಲಿ ನಾಲ್ಕು ಪಂದ್ಯಗಳನ್ನು (ಕೋಲ್ಕತ್ತದಲ್ಲಿ ಮೂರು ಮತ್ತು ಮುಂಬೈನಲ್ಲಿ ಒಂದು) ಆಡಬೇಕಾಗಿದೆ.

ಐಪಿಎಲ್‌ನಿಂದ ಮುಸ್ತಫಿಝುರ್ ರೆಹಮಾನ್ ಅವರನ್ನು ಕೋಲ್ಕತ್ತ ನೈಟ್ ರೈಡರ್ಸ್ ತಂಡ ಕೈಬಿಟ್ಟ ನಂತರ ಬಾಂಗ್ಲಾ ತಂಡವು, ಸುರಕ್ಷತೆಯ ಕಾರಣ ನೀಡಿ ಭಾರತದಲ್ಲಿ ಆಡಲು ಕ್ಯಾತೆ ತೆಗೆದಿದೆ.

‘ಆರ್‌ಸಿಬಿ’ ಖರೀದಿಗೆ ಬಿಡ್: ಅದಾರ್

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ಫ್ರಾಂಚೈಸಿಯ ಖರೀದಿಗೆ ಬಿಡ್ ಸಲ್ಲಿಸುವುದಾಗಿ ಸೀರಂ ಇನ್‌ಸ್ಟಿಟ್ಯೂಟ್ ಆಫ್ ಇಂಡಿಯಾ ಸಂಸ್ಥೆಯ ಸಿಇಒ ಅದಾರ್ ಪೂನಾವಾಲಾ ಗುರುವಾರ ತಿಳಿಸಿದ್ದಾರೆ. ಈ ಬೆಳವಣಿಗೆಯಿಂದ, ಹಾಲಿ ಚಾಂಪಿಯನ್ ‘ಆರ್‌ಸಿಬಿ’ಯ ಮಾರಾಟ ಕುರಿತಾದ ಊಹಾಪೋಹಗಳು ಮತ್ತೆ ಗರಿಗೆದರಿವೆ.

‘ಐಪಿಎಲ್‌ನ ಅತ್ಯುತ್ತಮ ತಂಡಗಳಲ್ಲಿ ಒಂದಾಗಿರುವ ಆರ್‌ಸಿಬಿ ಫ್ರಾಂಚೈಸಿಯ ಖರೀದಿಗೆ ಮುಂದಿನ ಕೆಲವು ತಿಂಗಳಲ್ಲಿ ಪ್ರಬಲ ಮತ್ತು ಸ್ಪರ್ಧಾತ್ಮಕ ಬಿಡ್ ಸಲ್ಲಿಸಲಿದ್ದೇನೆ’ ಎಂದು ಪೂನಾವಾಲಾ ‘ಎಕ್ಸ್’ನಲ್ಲಿ ಬುಧವಾರ ಬರೆದುಕೊಂಡಿದ್ದಾರೆ.

ಕೊಕ್ಕೊ: ಬೆಂಗಳೂರು ನಗರ ಚಾಂಪಿಯನ್ ರಾಜ್ಯ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ತೆರೆ

ತುಮಕೂರು: ನಗರದಲ್ಲಿ ಕಳೆದ ಒಂದು ವಾರದಿಂದ ನಡೆಯುತ್ತಿದ್ದ ರಾಜ್ಯ ಒಲಿಂಪಿಕ್ಸ್ ಕ್ರೀಡಾಕೂಟಕ್ಕೆ ಗುರುವಾರ ಸಂಜೆ ತೆರೆ ಬಿತ್ತು. ಕೊನೆಯ ದಿನ ನಡೆದ ಕೊಕ್ಕೊ ಪಂದ್ಯಾವಳಿಯ ಪುರುಷರ ವಿಭಾಗದಲ್ಲಿ ಬೆಂಗಳೂರು ನಗರ, ಮಹಿಳೆಯರ ವಿಭಾಗದಲ್ಲಿ ಮೈಸೂರು ತಂಡ ಚಿನ್ನದ ಪದಕ ಪಡೆದವು.

ನಗರದ ಜೂನಿಯರ್ ಕಾಲೇಜು ಮೈದಾನದಲ್ಲಿ ನಡೆದ ಅಂತಿಮ ಪಂದ್ಯದಲ್ಲಿ ಬೆಂಗಳೂರು ನಗರ ತಂಡ 18-15 ಅಂಕಗಳಿಂದ ದಕ್ಷಿಣ ಕನ್ನಡ ತಂಡವನ್ನು ಸೋಲಿಸಿತು.

ಮಹಿಳೆಯರ ಅಂತಿಮ ಪಂದ್ಯದಲ್ಲಿ ಮೈಸೂರು ತಂಡವು ಇನ್ನಿಂಗ್ಸ್ ಹಾಗೂ 3 ಪಾಯಿಂಟ್ಸ್‌ಗಳಿಂದ ಬೆಂಗಳೂರು ನಗರ ತಂಡದ ವಿರುದ್ಧ ಗೆಲುವು ದಾಖಲಿಸಿತು. ಹ್ಯಾಂಡ್‌ಬಾಲ್ ಸ್ಪರ್ಧೆಯಲ್ಲಿ ಬೆಂಗಳೂರು ಗ್ರಾಮಾಂತರ, ತುಮಕೂರು ತಂಡಗಳು ಪ್ರಶಸ್ತಿ ಗೆದ್ದುಕೊಂಡವು.

ವಿಜಯಪುರದಲ್ಲಿ ಮುಂದಿನ ರಾಜ್ಯ ಒಲಿಂಪಿಕ್ಸ್: ಒಲಿಂಪಿಕ್ಸ್ ಕ್ರೀಡಾಕೂಟ ಮುಂದಿನ ಬಾರಿ ವಿಜಯಪುರ ಹಾಗೂ ಬಾಗಲಕೋಟೆಯಲ್ಲಿ ನಡೆಯಲಿದೆ ಎಂದು ಕರ್ನಾಟಕ ಒಲಿಂಪಿಕ್ ಸಂಸ್ಥೆ ಅಧ್ಯಕ್ಷ ಕೆ.ಗೋವಿಂದರಾಜ್ ತಿಳಿಸಿದರು.

ರಾಜ್ಯ ಒಲಿಂಪಿಕ್ಸ್ ಕ್ರೀಡಾಕೂಟದ ಕೊಕ್ಕೊ ಸ್ಪರ್ಧೆಯಲ್ಲಿ ಪ್ರಶಸ್ತಿ ಗೆದ್ದ ಬೆಂಗಳೂರು ನಗರ ತಂಡ. (ಎಡದಿಂದ) ಕುಳಿತವರು– ಯೋಗೇಶ್, ನಂದನ್, ಜಶ್ವಂತ್, ವಿಶಾಲ್, ದಯಾನಂದ್, ಮನೋಜ್. ನಿಂತವರು– ಹರ್ಷ, ಶ್ರೀನಿವಾಸ್, ಅಶೋಕ್, ವಿಜಯ್, ಸುನಿಲ್, ದಿಲೀಪ್ ಕುಮಾರ್ (ಕೋಚ್), ಶಶಿಕುಮಾರ್, ರೋಹಿತ್, ಅಮಿನ್, ಸೊಬೇಶ್ ಹಾಜರಿದ್ದರು

ಕ್ವಾರ್ಟರ್‌ಫೈನಲ್‌ಗೆ ಲಕ್ಷ್ಯ ಸೇನ್, ಸಿಂಧು

ಜಕಾರ್ತಾ (ಪಿಟಿಐ): ಭಾರತದ ಅಗ್ರ ಶಟ್ಲರ್‌ಗಳಾದ ಪಿ.ವಿ.ಸಿಂಧು ಮತ್ತು ಲಕ್ಷ್ಯ ಸೇನ್ ಅವರು ಗುರುವಾರ ತಮ್ಮ ಎದುರಾಳಿಗಳ ವಿರುದ್ಧ ನೇರ ಆಟಗಳ ಗೆಲುವಿನೊಡನೆ ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 500 ಬ್ಯಾಡ್ಮಿಂಟನ್ ಟೂರ್ನಿಯ ಸಿಂಗಲ್ಸ್ ಕ್ವಾರ್ಟರ್ ಫೈನಲ್‌ಗೆ ದಾಪುಗಾಲಿಟ್ಟರು.

ಪುರುಷರ ಸಿಂಗಲ್ಸ್ ಎರಡನೇ ಸುತ್ತಿನಲ್ಲಿ ಲಕ್ಷ್ಯ 21-10, 21-11 ರಿಂದ ಹಾಂಗ್‌ಕಾಂಗ್‌ನ ಜೇಸನ್ ಗುನವಾನ್ ಅವರನ್ನು ಪರಾಭವಗೊಳಿಸಿದರು.

ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಸಿಂಧು ಎರಡನೇ ಸುತ್ತಿನ ಪಂದ್ಯದಲ್ಲಿ 21-19, 21-18 ರಿಂದ ಡೆನ್ಮಾರ್ಕ್‌ನ ಲಿನ್ ಹೊಯ್ಮಾರ್ಕ್ ಜೇರ್‌ಫೆಲ್ಟ್ ಅವರನ್ನು ಸೋಲಿಸಿದರು. .

ಆದರೆ, ಕಿದಂಬಿ ಶ್ರೀಕಾಂತ್ ಅವರ ಸವಾಲು ಅಂತ್ಯಗೊಂಡಿತು. ಅವರು 11-21, 10-21 ರಲ್ಲಿ ತೈವಾನ್‌ನ ಚೌ ಟಿಯೆನ್ ಚೆನ್ ವಿರುದ್ಧ ಸೋತರು. ಮಹಿಳಾ ಸಿಂಗಲ್ಸ್‌ನಲ್ಲಿ ಅನ್ಮೋಲ್ ಖಾರ್ಬ್ ಅವರೂ ಹೊರಬಿದ್ದರು.

ಗೆಲುವಿನ ಹಳಿಗೆ ಮರಳಿದ ಜೈಂಟ್ಸ್

ವಡೋದರ (ಪಿಟಿಐ): ಸೋಫಿ ಡಿವೈನ್ ಅವರ ಅಜೇಯ ಅರ್ಧಶತಕ ಹಾಗೂ ಎಡಗೈ ಸ್ಪಿನ್ನರ್ ರಾಜೇಶ್ವರಿ ಗಾಯಕವಾಡ್ (16ಕ್ಕೆ3) ಅವರ ಪರಿಣಾಮಕಾರಿ ಬೌಲಿಂಗ್ ನೆರವಿನಿಂದ ಗುಜರಾತ್ ಜೈಂಟ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಗುರುವಾರ 45 ರನ್‌ಗಳಿಂದ ಯುಪಿ ವಾರಿಯರ್ಸ್ ವಿರುದ್ಧ ಗೆಲುವು ಸಾಧಿಸಿತು.

ಬೌಲರ್‌ಗಳಿಗೆ ಹೆಚ್ಚು ನೆರವು ನೀಡುತ್ತಿದ್ದ ಪಿಚ್‌ನಲ್ಲಿ ಅನುಭವಿ ಆಲ್‌ರೌಂಡರ್ ಸೋಫಿ ಅವರು 42 ಎಸೆತಗಳಲ್ಲಿ ಔಟಾಗದೇ 50 ರನ್ ಬಾರಿಸಿ ಜೈಂಟ್ಸ್ ತಂಡಕ್ಕೆ ಆಸರೆಯಾದರು. ಅವರ ಆಟದ ಬಲದಿಂದ ಆ್ಯಷ್ಲೆ ಗಾರ್ಡನರ್ ಬಳಗವು 20 ಓವರ್‌ಗಳಲ್ಲಿ 8 ವಿಕೆಟ್‌ಗೆ 153 ರನ್ ಗಳಿಸಿತು.

ಮಹಿಳಾ ಪ್ರೀಮಿಯರ್ ಲೀಗ್

ಸವಾಲಿನ ಗುರಿ ಬೆನ್ನಟ್ಟಿದ ವಾರಿಯರ್ಸ್ ತಂಡವು ಜೈಂಟ್ಸ್ ತಂಡದ ಸಂಘಟಿತ ಬೌಲಿಂಗ್ ಎದುರು 17.3 ಓವರ್‌ಗಳಲ್ಲಿ 108 ರನ್‌ಗಳಿಗೆ ಕುಸಿಯಿತು. ರಾಜೇಶ್ವರಿ ಮೂರು ವಿಕೆಟ್ ಕಿತ್ತರೆ, ರೇಣುಕಾ ಸಿಂಗ್ ಠಾಕೂರ್ ಹಾಗೂ ಸೋಫಿ ಡಿವೈನ್ ಅವರು ತಲಾ ಎರಡು ವಿಕೆಟ್ ಪಡೆದರು.

ಇದಕ್ಕೆ ಮೊದಲು, ಟಾಸ್ ಸೋತು ಬ್ಯಾಟಿಂಗ್‌ಗೆ ಇಳಿದ ಗಾರ್ಡನರ್ ಬಳಗವು ನಿಯಮಿತವಾಗಿ ವಿಕೆಟ್ ಕಳೆದುಕೊಂಡು ಕಡಿಮೆ ಮೊತ್ತಕ್ಕೆ ಕುಸಿಯುವ ಅಪಾಯದಲ್ಲಿತ್ತು. ಈ ವೇಳೆ, ಸಂದರ್ಭಕ್ಕನುಗುಣವಾಗಿ ಬ್ಯಾಟ್ ಬೀಸಿದ ಸೋಫಿ, ತಂಡ 150ರ ಗಡಿ ದಾಟಲು ನೆರವಾದರು. ಕ್ರಾಂತಿ ಗೌಡ್ ಹಾಗೂ ಸೋಫಿ ಎಕ್ಲೆಸ್ಟೋನ್ ತಲಾ 2 ವಿಕೆಟ್ ಪಡೆದರು.

ಸಂಕ್ಷಿಪ್ತ ಸ್ಕೋರು: ಗುಜರಾತ್ ಜೈಂಟ್ಸ್: 20 ಓವರುಗಳಲ್ಲಿ 8ಕ್ಕೆ 153 (ಬೆತ್ ಮೂನಿ 38, ಸೋಫಿ ಡಿವೈನ್ ಔಟಾಗದೇ 50; ಕ್ರಾಂತಿ ಗೌಡ್ 18ಕ್ಕೆ2, ಸೋಫಿ ಎಕ್ಲೆಸ್ಟೋನ್ 22ಕ್ಕೆ2). ಯುಪಿ ವಾರಿಯರ್ಸ್: 17.3 ಓವರ್‌ಗಳಲ್ಲಿ 108 (ಫೋಬಿ ಲಿಚ್‌ಫೀಲ್ಡ್ 32, ಕ್ಲೊಯೆ ಟ್ರಯಾನ್ ಔಟಾಗದೇ 30; ರಾಜೇಶ್ವರಿ ಗಾಯಕವಾಡ್ 16ಕ್ಕೆ3, ರೇಣುಕಾ ಸಿಂಗ್ ಠಾಕೂರ್ 20ಕ್ಕೆ2, ಸೋಫಿ ಡಿವೈನ್ 16ಕ್ಕೆ2). **ಫಲಿತಾಂಶ:** ಗುಜರಾತ್ ಜೈಂಟ್ಸ್ ತಂಡಕ್ಕೆ 45 ರನ್‌ಗಳ ಜಯ. **ಪಂದ್ಯದ ಆಟಗಾರ್ತಿ:** ರಾಜೇಶ್ವರಿ ಗಾಯಕವಾಡ್.

ಜೊಕೊವಿಚ್, ಸಿನ್ನರ್ ಗೆಲುವಿನ ಓಟ

ಮೆಲ್ಬರ್ನ್ (ಎಎಫ್‌ಪಿ): ನೊವಾಕ್ ಜೊಕೊವಿಚ್ ಮತ್ತು ಯಾನಿಕ್ ಸಿನ್ನರ್ ಅವರು ಎದುರಾಳಿಗಳ ವಿರುದ್ಧ ನಿರಾಯಾಸ ಜಯಗಳಿಸಿ ಮೂರನೇ ಸುತ್ತಿಗೆ ಲಗ್ಗೆಯಿಟ್ಟರು. ಆದರೆ ಆಸ್ಟ್ರೇಲಿಯಾ ಓಪನ್‌ನಲ್ಲಿ ಗುರುವಾರ ಗಮನಸೆಳೆದಿದ್ದು 40 ವರ್ಷ ವಯಸ್ಸಿನ ಸ್ಟಾನ್ ವಾವ್ರಿಂಕಾ ಅವರ ಆಟ. ಅರ್ಹತಾ ಸುತ್ತಿನಿಂದ ಬಂದ ಎದುರಾಳಿಯ ವಿರುದ್ಧ ನಾಲ್ಕೂವರೆ ಗಂಟೆಗೂ ಹೆಚ್ಚುಕಾಲ ಬೆವರುಹರಿಸಿ ಗೆದ್ದ ಸ್ವಿಜರ್ಲೆಂಡ್‌ನ ಆಟಗಾರ ಗ್ರ್ಯಾನ್‌ಸ್ಲಾಮ್ ಇತಿಹಾಸದಲ್ಲಿ ಹೆಸರು ದಾಖಲಿಸಿದರು.


ವಾವ್ರಿಂಕಾ

ಮೆಲ್ಬರ್ನ್ ಪಾರ್ಕ್‌ನಲ್ಲಿ ಟೂರ್ನಿಯ ಐದನೇ ದಿನ ಎಳೆಬಿಸಿಲಿನ ವಾತಾವರಣ ವಿದ್ದು ಹಾಲಿ ಚಾಂಪಿಯನ್ ಮ್ಯಾಡಿಸನ್ ಕೀಸ್, ಎರಡನೇ ಶ್ರೇಯಾಂಕದ ಇಗಾ ಶ್ವಾಂಟೆಕ್ ಮತ್ತು ಅನುಭವಿ ನವೊಮಿ ಒಸಾಕಾ ಅವರೂ ಗೆಲುವಿನ ಓಟ ಮುಂದುವರಿಸಿದರು.

ರಾಡ್ ಲೇವರ್ ಅರೇನಾದಲ್ಲಿ ನೊವಾಕ್ ಜೊಕೊವಿಚ್ ಅವರು 6-3, 6-2, 6-2 ರಿಂದ 141ನೇ ಕ್ರಮಾಂಕದ ಕ್ವಾಲಿಫೈಯರ್ ಫ್ರಾನ್ಸಿಸ್ಕೊ ಮಿಸ್ಟ್ರೆಲ್ಲಿ (ಇಟಲಿ) ಅವರನ್ನು ಮಣಿಸಿದರು. 38 ವರ್ಷ ವಯಸ್ಸಿನ ಜೊಕೊವಿಚ್ ಇಲ್ಲಿ 10 ಬಾರಿ ಚಾಂಪಿಯನ್ ಆಗಿದ್ದು ಇತಿಹಾಸ ಸ್ಥಾಪಿಸಿದ್ದಾರೆ.

ಎರಡು ಬಾರಿಯ ಚಾಂಪಿಯನ್ ಸಿನ್ನರ್ (ಇಟಲಿ) ಅವರು ಹೆಚ್ಚು ಸಮಯ ತೆಗೆದುಕೊಳ್ಳದೇ ಆಸ್ಟ್ರೇಲಿಯಾದ ಜೇಮ್ಸ್ ಡಕ್ವರ್ಥ್ ಅವರನ್ನು 6-1, 6-4, 6-2 ರಿಂದ ಸುಲಭವಾಗಿ ಹಿಮ್ಮೆಟ್ಟಿಸಿದರು.

ವಾವ್ರಿಂಕಾ ಸಾಹಸ: ಅನುಭವಿ ವಾವ್ರಿಂಕಾ, ತಮ್ಮ ವಿದಾಯದ ಆಸ್ಟ್ರೇಲಿಯಾ ಓಪನ್‌ನಲ್ಲಿ ಮ್ಯಾರಥಾನ್ ಪಂದ್ಯ ಆಡಿದರು. 4 ಗಂಟೆ 33 ನಿಮಿಷ ಆಡಿ 4-6, 6-3, 3-6, 7-5, 7-6 (10-3) ರಿಂದ ಫ್ರಾನ್ಸ್‌ನ ಕ್ವಾಲಿಫೈಯರ್ ಆರ್ಥರ್ ಜಿಯಾ ಅವರನ್ನು ಸೋಲಿಸಿದರು.

1978ರಲ್ಲಿ ಕೆನ್ ರೋಸ್‌ವಾಲ್ ಅವರ ನಂತರ ಆಸ್ಟ್ರೇಲಿಯನ್ ಓಪನ್‌ನಲ್ಲಿ ಮೂರನೇ ಸುತ್ತು ತಲುಪಿದ 40 ವರ್ಷ ಮೇಲ್ಪಟ್ಟ ಮೊದಲ ಆಟಗಾರ ಎಂಬ ದಾಖಲೆ ವಾವ್ರಿಂಕಾ ಅವರದಾಯಿತು. ವಾವ್ರಿಂಕಾ ಮುಂದಿನ ಸುತ್ತಿನಲ್ಲಿ ಒಂಬತ್ತನೇ ಶ್ರೇಯಾಂಕದ ಟೇಲರ್ ಫ್ರಿಟ್ಝ್ (ಅಮೆರಿಕ) ಅವರನ್ನು ಎದುರಿಸಲಿದ್ದಾರೆ.

ಕೀಸ್ ಮುನ್ನಡೆ: ಹಾಲಿ ಚಾಂಪಿಯನ್, ಅಮೆರಿಕದ ಮ್ಯಾಡಿಸನ್ ಕೀಸ್ ಅವರು 6-1, 7-5 ರಿಂದ ಸ್ವದೇಶದ ಆಶ್ಲಿನ್ ಕ್ರುಜರ್ ಅವರನ್ನು ಸೋಲಿಸಿದರು. 2025ರ ಫೈನಲ್‌ನಲ್ಲಿ ಕೀಸ್ ಅವರು ಸಬಲೆಂಕಾ ಅವರಿಗೆ ಆಘಾತ ನೀಡಿದ್ದರು. ಮೊದಲ ಸೆಟ್ಟನ್ನು ನಿರಾಯಾಸವಾಗಿ ಗೆದ್ದಿದ್ದ 29 ವರ್ಷ ವಯಸ್ಸಿನ ಕೀಸ್, ಎರಡನೇ ಸೆಟ್‌ನಲ್ಲಿ 92ನೇ ಕ್ರಮಾಕದ ಆಶ್ಲಿನ್ ಎದುರು 2-5 ಹಿನ್ನಡೆಯಿಂದ ಚೇತರಿಸಿಕೊಂಡರು.

ಎರಡು ಬಾರಿಯ ಚಾಂಪಿಯನ್ ನವೊಮಿ ಒಸಾಕಾ (ಜಪಾನ್) 6-3, 4-6, 6-2 ರಿಂದ ರುಮೇನಿಯಾದ ಸೊರಾ ಸಿಸ್ಟಿರ್ಯಾ ಅವರನ್ನು ಸೋಲಿಸಿದರು.

ಯುಕಿ- ನಿಕೋಲ್ ಜೋಡಿಗೆ ಸೋಲು: ಭಾರತದ ಯುಕಿ ಭಾಂಬ್ರಿ ಮತ್ತು ಅಮೆರಿಕದ ಜೊತೆಗಾತಿ ನಿಕೋಲ್ ಮೆಲಿಚರ್ ಮಾರ್ಟಿನೆಜ್ ಅವರು ಮಿಶ್ರ ಡಬಲ್ಸ್‌ನ ಮೊದಲ ಸುತ್ತಿನಲ್ಲಿ 4-6, 5-7 (3-7) ರಿಂದ ಚೀನಾದ ಟಿಮ್ ಪುಟ್ಝ್-ಝಾಂಗ್ ಶುವಾಯಿ ಜೋಡಿ ವಿರುದ್ಧ ಸೋತರು.